ಮಾನವಿಕ ಕರ್ಣಾಟಕ

ಸಂಪುಟ ೨೨, ಸಂಚಿಕೆ ೨, ೩, ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ, ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨೨; ಸಂಚಿಕೆ ೨, ೩, ೪

೮೬-೮೮

೧೯೯೨ರ ಸಂಯುಕ್ತ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೨

MANAVIKA KARNATAKA, Kannada Quarterly of the University of Mysore, Mysore-6, Volume 22, Numbers 2, 3 & 4, 1992, Edited by the committee :

ಪ್ರಕಾಶಕರು

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಡಾ. ಮೃತ್ಯುಂಜಯ ಕುಳೇನೂರ್
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ಪ್ರಕಾಶಕರ ಪ್ರಸ್ತಾವನೆ

ಹಲವಾರು ಅಡೆತಡೆಗಳ ಮಧ್ಯದಲ್ಲಿಯೂ ಸಂಪುಟ ಇಪ್ಪತ್ತೆರಡನ್ನು ನಿಮ್ಮ ಕೈಗಿಡಲು ಸಂತೋಷವಾಗುತ್ತಿದೆ. ಹಿಂದಿನ ಸಂಪುಟಗಳನ್ನು ಬೇಗ ಹೊರತಂದು, ಆಯಾ ಸಂಪುಟಗಳನ್ನು ಆಯಾ ವರ್ಷದಲ್ಲಿಯೇ ತರುವಂತೆ ವ್ಯವಸ್ಥೆಗೊಳಿಸುವ ದೃಷ್ಟಿಯಿಂದ ೨೨ನೇ ಸಂಪುಟದ ೨, ೩, ೪ನೇ ಸಂಚಿಕೆಗಳನ್ನು ಸಂಯುಕ್ತ ಸಂಪುಟವಾಗಿ ಹೊರತಂದಿದೆ. ಪತ್ರಿಕೆಯನ್ನು ವರ್ತಮಾನದೊಂದಿಗೆ ಸರಿತೂಗಿಸುವ ದೃಷ್ಟಿಯಿಂದ ಈ ರೀತಿ ಸಂಯುಕ್ತ ಸಂಪುಟಗಳನ್ನು ತರುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಚಂದಾದಾರರು ಸಹಕರಿಸಬೇಕೆಂದು ಮತ್ತೊಮ್ಮೆ ಕೋರುವೆ.

ಈ ಹಿಂದಿನ ಸಂಚಿಕೆಯಲ್ಲಿ ಬರೆದಂತೆ ಸಂಪಾದಕ ಮಂಡಲಿಯ ಬದಲಾಗಿ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡ ಸಮಿತಿ ಮುಂದುವರಿದಿದೆ.

ಅಧ್ಯಕ್ಷರು : ಡಾ. ಜಿ. ಎಸ್. ಕುಂದರಗಿ

ಸದಸ್ಯರು : ಡಾ. ಓ. ಅನಂತರಾಮಯ್ಯ
ಶ್ರೀ ಕೃಷ್ಣೇಗೌಡ
ಡಾ. ಅಂಬಳಿಕೆ ಹಿರಿಯಣ್ಣ
ಡಾ. ಸೋಮಶೇಖರ ಗೌಡ
ಡಾ. ಎಚ್. ಎಂ. ರಾಜಶೇಖರ

ಈ ಸಂಪುಟದ ಕಾರ್ಯವನ್ನು ನಿರ್ವಹಿಸಿ ಕೊಟ್ಟ ಸಮಿತಿಗೆ ಮತ್ತು ಹತ್ತಾರು ಕೆಲಸಗಳ ನಡುವೆಯೂ ನಮ್ಮ ತ್ರೈಮಾಸಿಕಗಳ ಮುದ್ರಣಕಾರ್ಯವನ್ನು ನಿರ್ವಹಿಸಿ ಕೊಡುತ್ತಿರುವ ವಿಶ್ವವಿದ್ಯಾನಿಲಯದ ಅಚ್ಚುಕೂಟದ ಪ್ರಭಾರ ನಿರ್ದೇಶಕರಾದ ಶ್ರೀ ಬಿ. ಎಸ್. ಸಿದ್ದೇಗೌಡ ಹಾಗೂ ಅಚ್ಚುಕೂಟದ ಸಿಬ್ಬಂದಿಗೆ ನಮ್ಮ ನೆನಹುಗಳು. ನಮ್ಮವರೇ ಆದ ಪ್ರಸಾರಾಂಗದ ಪ್ರಭಾರ ಉಪನಿರ್ದೇಶಕರಾದ ಶ್ರೀ ಡಿ. ಕೆ. ಈರೇಗೌಡ ಮತ್ತು ಬಳಗದವರಿಗೆ ನಮ್ಮ ನೆನಹುಗಳು ಸಲ್ಲುತ್ತವೆ.

ಮಾನವಿಕ ಕರ್ಣಾಟಕ ಸಂಪುಟ ೨೨, ಸಂಚಿಕೆ ೧ರಲ್ಲಿ ಸಂಖ್ಯೆ ೮೨ ಎಂದಾಗಿದೆ. ಅದನ್ನು ೮೫ ಎಂದೂ, ಅಲ್ಲಿಯೇ ಜನವರಿ ೧೯೯೬ ಎಂದಿರುವುದನ್ನು ೧೯೯೨ ಎಂದೂ ಓದಿಕೊಳ್ಳಬೇಕಾಗಿ ವಿನಂತಿ. ಮುದ್ರಣಗೊಳ್ಳದೆ ಹಿಂದೆ ಬಿದ್ದ ಸಂಪುಟಗಳನ್ನು ೧೯೯೬ ರಲ್ಲಿ ಪ್ರಕಟವಾಗುತ್ತಿದೆ ಎಂಬುದನ್ನು ಗಮನಿಸಬೇಕು.

ಯಾವುದೇ ಒಂದು ಪತ್ರಿಕೆ ಜೀವಂತಿಕೆಯಿಂದ ಹೆಜ್ಜೆ ಹಾಕಬೇಕಾದರೆ ಓದುಗರ ಸಹಕಾರ ಅಗತ್ಯ. ಅದಕ್ಕಾಗಿ ಲೇಖನಗಳನ್ನು ಕಳುಹಿಸಿ. ಜೊತೆಗೆ ಚಂದಾಹಣ ಕಟ್ಟದಿದ್ದಲ್ಲಿ ದಯಮಾಡಿ ಕಳುಹಿಸಿಕೊಡಿ. ನಿಮ್ಮ ಚಂದಾದಾರಿಕೆಯನ್ನು ಮುಂದು ವರಿಸುವುದರ ಜೊತೆಗೆ ನಿಮ್ಮ ಸ್ನೇಹಿತರು ಮತ್ತು ಸಂಘ ಸಂಸ್ಥೆಗಳು ಚಂದಾದಾರ

ರಾಗಲು ಒತ್ತಾಯ ತರಬೇಕೆಂದೂ ಕೋರುವೆ. ಒಂದು ಪತ್ರಿಕೆಯ ಯಶಸ್ಸು ಓದುಗರ ಪ್ರೋತ್ಸಾಹದ ಮೇಲೆ ನಿಂತಿದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಸಂಚಿಕೆಗೆ ಲೇಖನಗಳನ್ನು ಕೊಟ್ಟು ಸಹಕರಿಸಿದ ಎಲ್ಲಾ ಲೇಖಕರನ್ನು ತುಂಬು ಹೃದಯದಿಂದ ಸ್ಮರಿಸುವೆ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕ

ಸಂಪಾದಕೀಯ

ಸಂಪುಟ ೨೨, ಸಂಚಿಕೆ ೨, ೩ ಮತ್ತು ೪ ಎಲ್ಲವನ್ನೂ ರೂಢಿಸಿ ಓದುಗರಿಗೆ ಸಮರ್ಪಿಸಲು ನಮಗೆ ಸಂತೋಷವೆನಿಸುತ್ತದೆ. ಜೀವನದರ್ಶನವು ತತ್ತ್ವಜ್ಞಾನಿಗೂ, ಸಾಹಿತಿಗೂ ಇಷ್ಟವಾದ ವಿಷಯವೇ. ಸಾಹಿತಿಯ ವಿಧಾನ ಕಲ್ಪಕತೆ. ತತ್ತ್ವಜ್ಞಾನಿಯ ವಿಧಾನ ವಿಶ್ಲೇಷಣೆ ಅಥವಾ ಸಮನ್ವಯ. ಉದ್ದಾಮ ಸಾಹಿತಿಗಳೂ, ಜ್ಞಾನಪೀಠ ಪ್ರಶಸ್ತಿ ವಿಜೇತರೂ ಆದ ಪ್ರೊ. ವಿ. ಕೃ. ಗೋಕಾಕರ ಸಾಹಿತ್ಯ ಕೃತಿಗಳಲ್ಲಿ ಕುಂದರಗಿಯವರು ಸಮನ್ವಯ ಸಿದ್ಧಾಂತವನ್ನು ಕಂಡಿದ್ದಾರೆ.

ತತ್ತ್ವ ನಿರೂಪಣೆಗೆ ಭಾಷೆಯ ಆವಶ್ಯಕತೆಯಿದೆ. ಭಾರತೀಯ ಭಾಷೆ ಮತ್ತು ಸಾಹಿತ್ಯದಲ್ಲಿ ಉರ್ದು ಭಾಷೆ ಮತ್ತು ಸಾಹಿತ್ಯಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಡಾ. ಕೆಂಪೇಗೌಡರು ಉರ್ದುವನ್ನು ಶಬ್ದವನ್ನಾಗಿ, ಭಾಷೆಯನ್ನಾಗಿ ಮತ್ತು ಸಾಹಿತ್ಯವನ್ನಾಗಿ ವಿವರಿಸಿ, ಭಾರತೀಯ ಇತಿಹಾಸದಲ್ಲಿ ಅದು ಹೊಂದಿದ ಬದಲಾವಣೆಗಳನ್ನು ತಮ್ಮ ಲೇಖನದಲ್ಲಿ ಹೃದ್ಯವಾಗಿ ವಿವರಿಸಿದ್ದಾರೆ. ಹಳೆಯ ಕಡತಗಳನ್ನು ತಿರುವಿ ಹಾಕುತ್ತಿದ್ದಾಗ ಅವರ ಲೇಖನ ದೊರೆತು ಅದನ್ನು ಈಗ ಓದುಗರಿಗೆ ಕೊಡುತ್ತಿದ್ದೇವೆ.

ಭಾಷೆಯು ವರ್ಗ, ವಲಯಗಳನ್ನು ದಾಟಿ-ಸಾಮಾಜಿಕ ಮತ್ತು ಪ್ರಾದೇಶಿಕ ಎಲ್ಲೆಯನ್ನು ಮೀರಿದಾಗ ಶಿಷ್ಟ ಭಾಷೆಯೆನಿಸಿಕೊಳ್ಳುತ್ತದೆ. ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಯಾವುದೇ ಭಾಷೆ ಆಧುನಿಕ ಅಗತ್ಯಗಳನ್ನು ಪೂರೈಸಿಕೊಂಡು ಶಿಷ್ಟೀಕರಣಗೊಳ್ಳುವುದು ಅಗತ್ಯವಾಗಿದೆ. ಈ ಅಂಶವನ್ನು ಡಾ. ಸೋಮಶೇಖರಗೌಡರು ತಮ್ಮ ಲೇಖನದಲ್ಲಿ ಪ್ರತಿಪಾದಿಸುತ್ತಾರೆ.

ಸಮಾಜದ ಬೆಳವಣಿಗೆಯಲ್ಲಿ ಅದರ ಭಾಷಾವಿಕಾಸದೊಂದಿಗೆ, ಸಂಸ್ಕೃತಿಯ ಲಕ್ಷಣಗಳನ್ನು ತಿಳಿದುಕೊಳ್ಳುವುದು ಅಷ್ಟೇ ಅವಶ್ಯವಾಗಿದೆ. ಒಂದು ನಾಡಿನ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಅದರ ಸುಪುತ್ರರ ಪಾತ್ರ ಹಿರಿಯದು. ಕನ್ನಡನಾಡಿನ ಸುಪುತ್ರರಲ್ಲಿ ಒಬ್ಬರಾದ ಹರ್ಡೀಕರ ಮಂಜಪ್ಪನವರು ಮಹಾತ್ಮಾ ಗಾಂಧಿಯವರ ಅನುಯಾಯಿಗಳಾಗಿ ರಾಷ್ಟ್ರೀಯ ಶಿಕ್ಷಣ, ಹರಿಜನೋದ್ಧಾರ ಇತ್ಯಾದಿ ಕ್ಷೇತ್ರಗಳಲ್ಲಿ ಸಾಕಷ್ಟು ಪರಿಶ್ರಮಿಸಿದರು. ಡಾ. ಕುಳೇನೂರರು ಈ ಸುಪುತ್ರನ ಜೀವನ ಮತ್ತು ಚಿಂತನವನ್ನು ತಮ್ಮ ಲೇಖನದಲ್ಲಿ ಕೊಟ್ಟಿದ್ದಾರೆ.

ಜೀವನದಲ್ಲಿ ಹಿರಿದಾದುದನ್ನು, ಉದಾತ್ತವಾದುದನ್ನು ರೂಢಿಸಿಕೊಳ್ಳುವುದೇ ಸಂಸ್ಕೃತಿ. ಸಮನ್ವಯ ಸಿದ್ಧಾಂತವು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಪರಧರ್ಮ ಸಹಿಷ್ಣುತೆ, ಹೊಯ್ಸಳ-ಚಾಳುಕ್ಯ ಶಿಲ್ಪ ಇತ್ಯಾದಿ—ಭಾರತೀಯ ಸಂಸ್ಕೃತಿಗೆ—ಕರ್ನಾಟಕವು ಇತ್ತ ಕೊಡುಗೆಗಳು. ಇದನ್ನು ವಿದ್ಯಾರ್ಥಿನಿಯೊಬ್ಬರು ಚೆನ್ನಾಗಿ ತಮ್ಮ ಲೇಖನದಲ್ಲಿ ತೋರಿಸಿಕೊಟ್ಟಿದ್ದಾರೆ.

ಮೋಕ್ಷ ಕಲ್ಪನೆಯು ಭಾರತೀಯರ ಪರಮ ಪುರುಷಾರ್ಥ. ಮೋಕ್ಷ ಸಾಧನೆಯಲ್ಲಿ ನಿಷ್ಕಾಮ ಕರ್ಮವು ನಮ್ಮ ಅಂತಃಕರಣವನ್ನು ಶುದ್ಧಗೊಳಿಸುತ್ತದೆ. ಕರ್ಮ ಸಿದ್ಧಾಂತವು ಹಣೆಯುಬರಹವಾಗದೆ, 'ನನ್ನ ಕರ್ಮಕ್ಕೆ ನಾನೇ ಹೊಣೆ' ಎಂದು ತೋರಿಸಿ ಕೊಡುತ್ತದೆ. ಇದನ್ನು ಡಾ. ಬಾಲರಾಜು ತಮ್ಮ ಲೇಖನದಲ್ಲಿ ಎತ್ತಿ ತೋರಿಸಿದ್ದಾರೆ.

ಕರಡುಪ್ರತಿ ತಿದ್ದಿದ ಡಾ. ರಾಜಶೇಖರ, ಡಾ. ಹಿರಿಯಣ್ಣ ಹಾಗೂ ಡಾ. ಸೋಮಶೇಖರಗೌಡರಿಗೆ ನನ್ನ ಧನ್ಯವಾದಗಳು.

ಈ ಸಂಚಿಕೆಯ ಪ್ರಕಟಣೆಗೆ ಸಹಕರಿಸಿದ ನಿರ್ದೇಶಕ, ಪ್ರಸಾರಾಂಗ ಇವರಿಗೂ ಮುದ್ರಣಾಲಯದಲ್ಲಿ ನೆರವಿತ್ತ ಡಾ. ಮೃತ್ಯುಂಜಯ ಕುಳೇನೂರ್, ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಇವರಿಗೂ ಕೃತಜ್ಞತೆಗಳು.

೪–೧೨–೧೯೯೬ ಜಿ. ಎನ್. ಕುಂದರಗಿ

ವಿಷಯ ಸೂಚಿ

ಲೇಖಕರ ಸೂಚಿ

೧.	ಜಿ. ಎನ್. ಕುಂದರಗಿ	....	ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ತತ್ತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ ಮೈಸೂರು–೬
೨.	ಡಾ. ಕೆ. ಕೆಂಪೇಗೌಡ	....	ಪ್ರಾಧ್ಯಾಪಕರು ಹಾಗೂ ನಿರ್ದೇಶಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು–೬
೩.	ಡಾ. ಸೋಮಶೇಖರಗೌಡ	....	ಪ್ರವಾಚಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು–೬
೪.	ಡಾ. ಮೃತ್ಯುಂಜಯ ಕುಳೀನೂರ್	....	ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮಾನಸಗಂಗೋತ್ರಿ, ಮೈಸೂರು–೬
೫.	ಪಿ. ಆರ್. ವೀರ (ಅಂತಿಮ ಎಂ.ಎ. ವಿದ್ಯಾರ್ಥಿನಿ, ಭಾಷಾವಿಜ್ಞಾನ)	....	೧೧೫೪/೨, ೯ನೇ ಮುಖ್ಯ ರಸ್ತೆ ವಿದ್ಯಾರಣ್ಯಪುರಂ, ಮೈಸೂರು–೮
೬.	ಡಾ. ಕೆ. ವೈ. ಬಾಲರಾಜು	....	ಎಸ್.ಜಿ.ಎಸ್. ನಿಲಯ, ಸಾವರ್ಕರ ನಗರ, ಕಾರ್ಪೊರೇಶನ್ ಆಫೀಸ್ ಎದುರು ಶಿವಮೊಗ್ಗ–೫೭೭೨೦೨

ಬಿ. ನಾಗಪ್ಪ, ಕೆ. ಆರ್. ನಳಿನಿ.

ಗ್ರಂಥ ಸೂಚಿ : ಪುಸ್ತಕ, ನಿಯತಕಾಲಿಕ ಲೇಖನ, ತಾಂತ್ರಿಕ ವರದಿ, ಮುಂತಾದವುಗಳ ಮಾಹಿತಿ ನಿರೂಪಣಾ ಮತ್ತು ನಿಯಂತ್ರಕ ಮಾಧ್ಯಮ

೧. ಗ್ರಂಥಸೂಚಿಯ ಮಹತ್ವ :

ಗ್ರಂಥಸೂಚಿಗಳನ್ನು ಮಾಹಿತಿ ಸೇತುವೆಗಳೆಂದು ಕರೆಯುವುದುಂಟು. ಅನೇಕರು ಅವುಗಳನ್ನು ಭೂಪಟಗಳಿಗೆ ಹೋಲಿಸುತ್ತಾರೆ. ಗೊಂದಲಮಯವಾದ ಪುಸ್ತಕ ಪ್ರಪಂಚದಲ್ಲಿ ಗ್ರಂಥಪಾಲರಿಗೆ ಮತ್ತು ಓದುಗರಿಗೆ ಅವು ಮಾರ್ಗದರ್ಶಿಗಳಾಗುತ್ತವೆ. ನಾವಿಕರಿಗೆ ದಿಕ್ಸೂಚಿ ಹೇಗೋ ಹಾಗೆ ಗ್ರಂಥಪಾಲರಿಗೆ ಗ್ರಂಥಸೂಚಿಗಳು ಅವಶ್ಯಕ ಸಾಧನಗಳಾಗಿವೆ. ಲಕ್ಷಾಂತರ ಪುಸ್ತಕ, ನಿಯತಕಾಲಿಕ ಹಾಗೂ ಇತರ ವಾಚನ ಸಾಮಾಗ್ರಿಗಳಿರುವ ಗ್ರಂಥಾಲಯಗಳಲ್ಲಿ ಗ್ರಂಥಸೂಚಿಗಳಿಲ್ಲದೆ ಕೆಲಸ ನಿರ್ವಹಿಸುವುದು ದುಸ್ಸಾಧ್ಯವೆಂದೇ ಹೇಳಬೇಕು. ಸಂಶೋಧಕರಿಗಂತೂ ಇವು ಅತ್ಯಂತ ಅವಶ್ಯಕವಾದ ಆಕರ ಗ್ರಂಥಗಳು. ತಮ್ಮ ವಿಷಯಗಳಲ್ಲಿ ಸಂಶೋಧನೆಗೆ ತೊಡಗುವ ಮುನ್ನ ಅವರಿಗೆ ಆ ವಿಷಯವಾಗಿ ಯಾವ ಗ್ರಂಥಗಳು ಹೊರಬಂದಿವೆ, ಯಾವ ಲೇಖನಗಳು ಯಾವ ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿವೆ ಎಂಬೆಲ್ಲಾ ಮಾಹಿತಿಯನ್ನು ಅವರು ಸಂಗ್ರಹಿಸಬೇಕಾಗುತ್ತದೆ. ಈ ಕೆಲಸಕ್ಕೆ ತಕ್ಷಣದ ಸಿದ್ಧನೆರವು ಬೇರೆಯಾವುದರಿಂದಲೂ ಸಿಗುವುದಿಲ್ಲ. ಅಲ್ಲದೆ ಗ್ರಂಥಸೂಚಿ ಕೊಡುವ ಚಿತ್ರ ಅತ್ಯಂತ ವಿಸ್ತಾರವೂ ವರ್ಣಮಯವೂ ಆದದ್ದು. ಬರವಣಿಗೆ ರೂಪಗೊಂಡಂದಿನಿಂದಲೂ ಮಾನವ ತತ್ವ, ಕಲೆ, ಸಾಹಿತ್ಯ, ಶಾಸ್ತ್ರ, ವಿಜ್ಞಾನ, ತಂತ್ರ ಮೊದಲಾದ ಅಸಂಖ್ಯ ಕ್ಷೇತ್ರದಲ್ಲಿ ಹೇಗೆ ಚಿಂತನೆ ನಡೆಸಿದ್ದಾನೆ, ಆ ಚಿಂತನೆಗೆ ಹೇಗೆ ಅಭಿವ್ಯಕ್ತಿ ನೀಡಿದ್ದಾನೆ, ಅವನ ಅಭಿರುಚಿಗಳು ಕಾಲದಿಂದ ಕಾಲಕ್ಕೆ ಹೇಗೆ ಬದಲಾಗಿವೆ, ಶೈಲಿ ಹೇಗೆ ರೂಪಾಂತರಗೊಳ್ಳುತ್ತಾ ಹೋಗಿದೆ, ಅವನ ಸಂಸ್ಕೃತಿಯ ಮೇಲೆ ಪರಿಣಾಮ ಏನಾಗಿದೆ ಎಂಬೆಲ್ಲಾ ವಿಚಾರಗಳನ್ನು ಅಧ್ಯಯನ ಮಾಡಲು ಗ್ರಂಥಸೂಚಿಯೇ ಆಧಾರ. ಗ್ರಂಥಸೂಚಿಗಳ ಮಹತ್ವವನ್ನು ಮನಗಣಬೇಕಾದರೆ

ಪ್ರಪಂಚದ ಪುಸ್ತಕೋತ್ಪಾದನೆಯ ಅಂಕಿ-ಅಂಶಗಳನ್ನೂ ನಾವು ಗಮನಿಸ ಬೇಕಾಗುತ್ತದೆ. ಪ್ರಪಂಚದ ವಾರ್ಷಿಕ ಉತ್ಪಾದನೆಯು ಐವತ್ತರ ದಶಕದಲ್ಲಿ ೨,೬೯,೦೦೦; ಅರವತ್ತರದಶಕದಲ್ಲಿ ೪,೨೬,೦೦೦; ಎಪ್ಪತ್ತರ ದಶಕದಲ್ಲಿ ೬,೪೨,೦೦೦ ಮತ್ತು ಎಂಭತ್ತರ ದಶಕದಲ್ಲಿ ೭,೦೦,೦೦೦ ಶೀರ್ಷಿಕೆಗಳಾಗಿದ್ದವು. ತೊಂಭತ್ತರ ದಶಕದಲ್ಲಿ ಅವು ೭,೫೦,೦೦೦ ಕ್ಕಿಂತ ಹೆಚ್ಚಾಗಬಹುದೆಂಬ ಅಂದಾಜಿದೆ. ಈ ಪ್ರಮಾಣದಲ್ಲಿ ಉತ್ಪಾದನೆಯಾದ ಪುಸ್ತಕಗಳಿಗೆ ಸೂಚಿಗಳು ಅತ್ಯಾವಶ್ಯಕವಲ್ಲವೆ ?

೨. ಗ್ರಂಥಸೂಚಿಯ ಅರ್ಥ

ಪುಸ್ತಕಗಳ ಬಗ್ಗೆ ಮಾಹಿತಿ ನೀಡುವ ಆಗರವನ್ನೇ ಗ್ರಂಥಸೂಚಿ ಎಂದು ಕರೆಯಲಾಗುತ್ತದೆ. ಪುಸ್ತಕಗಳ ಸರಳ ವಾಚನ ಪಟ್ಟಿಯಿಂದ ಹಿಡಿದು ಸಮಗ್ರ ಹಾಗೂ ವಿಶ್ವವ್ಯಾಪಿ ಸಂಕೀರ್ಣ ದಾಖಲೆಯವರೆಗೆ ಇದರ ವ್ಯಾಪ್ತಿ ಇರುತ್ತದೆ. ಯಾವುದೇ ಭಾಷೆಯಲ್ಲಿ ರಚಿತವಾಗಿರುವ ಎಲ್ಲಾ ಬಗೆಯ ಬರವಣಿಗೆಗಳನ್ನು ಕುರಿತ ಎಲ್ಲಾ ಅಂಶಗಳ ಶಾಸ್ತ್ರೀಯ ನಿರೂಪಣೆಯೇ ಗ್ರಂಥಸೂಚಿ. ಈ ನಿರೂಪಣೆಯು ಲೇಖಕ, ಕೃತಿ, ಕಾಗದ, ಶಾಯಿ, ಅಲಂಕಾರ, ಅಚ್ಚುಮೊಳೆಯ ಮಾದರಿ, ರಟ್ಟಿನ ಬಗೆ, ಈ ಯಾವುದನ್ನೇ ಕುರಿತದ್ದಾಗಿರಬಹುದು. ಕೊನೆಗೆ ಮುದ್ರಕರು ಉಪಯೋಗಿಸುವ ಸಂಕೇತಗಳು, ಕಾಗದ ತಯಾರಕರು ಹಾಕುವ ಜಲಚಿಹ್ನೆ ಕೂಡಾ ಆಗಬಹುದು; ಒಂದು ಕೃತಿಯ ಪ್ರಕಟನ ವರ್ಷ, ಸ್ಥಳ, ಆವೃತ್ತಿ, ಪುಟಸಂಖ್ಯೆ, ಆಕಾರ, ಇತ್ಯಾದಿ ಅಂಶಗಳೂ ಆಗಬಹುದು; ಸಂಶೋಧಕನಿಗೆ ಒಂದಿಲ್ಲ ಒಂದು ರೀತಿಯಲ್ಲಿ ಅಮೂಲ್ಯವೆನಿಸುವ ಈ ಅಂಶಗಳನ್ನು ಸಂಗ್ರಹಿಸಿ, ಶಾಸ್ತ್ರೀಯವಾಗಿ ವಿಭಾಗಿಸಿ, ವ್ಯವಸ್ಥೆಗೊಳಿಸಿ ಪ್ರಕಟಿಸುತ್ತದೆ ಗ್ರಂಥಸೂಚಿ. ಉದ್ದೇಶಕ್ಕೆ ತಕ್ಕಂತೆ ಒಂದೋ ಹಲವೋ ಅಂಶಗಳನ್ನೊಳಗೊಂಡು ಅದು ಬೇರೆ ಬೇರೆ ಬಗೆಯದಾಗುತ್ತದೆ; ಹಾಗೆಯೇ ಅದು ಒಂದು ವಿಷಯಕ್ಕೆ ಮಿತಗೊಂಡು 'ಏಕವಿಷಯ ಸೂಚಿ'ಯಾಗ ಬಹುದು. ಒಬ್ಬ ಲೇಖಕನ ಕೃತಿಗಳಿಗೆ ಸೀಮಿತಗೊಂಡು 'ಏಕಕರ್ತೃ ಸೂಚಿ' ಯಾಗಬಹುದು. ಕೃತಿಯ ಬಾಹ್ಯ ಅಂಶಗಳನ್ನು ಪಟ್ಟಿ ಮಾಡುವುದರ ಜೊತೆಗೆ ಅದರ ಸ್ಥೂಲವಾದ ವರ್ಣನೆಗೂ ತೊಡಗಿ 'ವರ್ಣನಾತ್ಮಕ ಸೂಚಿ'ಯಾಗಬಹುದು. ಹೀಗೆಯೇ 'ವ್ಯವಸ್ಥಾತ್ಮಕ ಸೂಚಿ' 'ಪಾಠ ನಿರ್ಣಯ ಸೂಚಿ' ಇತ್ಯಾದಿ ಪ್ರಭೇದಗಳೂ ಇವೆ. (೧)

೩. ಗ್ರಂಥಸೂಚಿಗಳ ಸಂಖ್ಯೆ

ಗ್ರಂಥಸೂಚಿಗಳು ಇಂದು ಅನಿವಾರ್ಯದ ಅಗತ್ಯಗಳಾಗಿದೆ. ಎಲ್ಲಾ ಪ್ರೌಢ ಭಾಷೆಗಳಲ್ಲಿ ಇವು ರಚಿತವಾಗಿವೆ. ಇಂಗ್ಲೀಷ್, ಫ್ರೆಂಚ್, ಜರ್ಮನ್ ಮೊದಲಾದ ವಿಶ್ವವ್ಯಾಪೀ ಭಾಷೆಗಳಲ್ಲಿ ಬಗೆಬಗೆಯ ಗ್ರಂಥಸೂಚಿಗಳು ಲಭ್ಯವಿದೆ. ಕನ್ನಡದಲ್ಲೂ

ಗ್ರಂಥಸೂಚಿ ರಚನೆಯ ಕೆಲಸವು ೧೯೬೭ರಿಂದ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ. ಇದನ್ನು ಕುರಿತ ಸಂಕ್ಷಿಪ್ತ ವಿವರವನ್ನು ಡಾ. ಅಸುಂಡಿಯವರು ತಮ್ಮ ಕನ್ನಡದಲ್ಲಿ ಸಂದರ್ಭ ಗ್ರಂಥಗಳು (೨) ಎಂಬ ಪುಸ್ತಕದಲ್ಲಿ ನೀಡಿದ್ದಾರೆ.

ಗ್ರಂಥಸೂಚಿಗಳಲ್ಲಿ ಅನೇಕ ಪ್ರಭೇದಗಳಿದ್ದು ಅವುಗಳ ಸಂಖ್ಯೆ ಹೇರಳವಾಗಿವೆಯೆಂದು ಗ್ರಂಥಾಲಯಶಾಸ್ತ್ರ ಸಾಹಿತ್ಯದಲ್ಲಿ ಅನೇಕರು ಬರೆದಿದ್ದಾರೆ; ಆದರೆ ಯಾರೂ ಅವುಗಳ ನಿಖರವಾದ ಸಂಖ್ಯೆಗಳನ್ನು ನಮೂದಿಸಿಲ್ಲ. ಕೆಲವರು ಕೇವಲ ಅಂದಾಜುಗಳನ್ನು ಮಾಡಿದ್ದಾರೆ. ೧೯೬೯ರಲ್ಲಿ ಸುಮಾರು ೧,೫೬,೬೦೦ ವಿವಿಧ ಬಗೆಯ ಗ್ರಂಥಸೂಚಿಗಳಿವೆಯೆಂಬುದು ಕಾಟ್ಜ (೩) ಅವರ ಅಂದಾಜು; ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬಂದಿರುವ ಪುಸ್ತಕ, ನಿಯತಕಾಲಿಕ ಹಾಗೂ ಇತರ ವಾಚನ ಸಾಮಗ್ರಿಗಳ ಸಂಖ್ಯೆಗಳನ್ನು ಗಮನಿಸಿದಾಗ ಕಾಟ್ಜ ಅವರ ಅಂದಾಜಿನ ಮೂರು ಪಟ್ಟು ಜಾಸ್ತಿ ಗ್ರಂಥಸೂಚಿಗಳು ಈವರೆಗೆ ರಚಿತವಾಗಿವೆ ಎಂದು ಹೇಳಬಹುದು.

೪. ಗ್ರಂಥಸೂಚಿಗಳ ಸೂಚಿ

ಗ್ರಂಥಸೂಚಿಗಳನ್ನೆಲ್ಲ ವ್ಯವಸ್ಥಿತವಾಗಿ ವಿಂಗಡಿಸಿ, ವಿವರಿಸಿ ಪಟ್ಟಿಮಾಡುವ ಸಾಹಸವನ್ನು ೧೯೩೯-೪೦ ರಲ್ಲಿ ಥಿಯೊಡೊರ್ ಬೆಸ್ಟರ್‌ಮನ್ (೪) ಮಾಡಿದರು. ಅವರ 'ಗ್ರಂಥಸೂಚಿಗಳ ವಿಶ್ವಗ್ರಂಥ ಸೂಚಿ'ಯು ೧೯೬೫-೬೭ ರಲ್ಲಿ ನಾಲ್ಕನೆಯ ಸಲ ಪರಿಷ್ಕರಣಗೊಂಡಿತು. ಐದು ಸಂಪುಟಗಳಲ್ಲಿರುವ ಈ ಮಹಾಕೃತಿಯಲ್ಲಿ ಅವರು ೧,೧೭,೧೮೭ ಗ್ರಂಥಸೂಚಿಗಳನ್ನು ೧೬,೦೦೦ ವಿಷಯ ಶೀರ್ಷಿಕೆಗಳ ಅಡಿಯಲ್ಲಿ ಪಟ್ಟಿ ಮಾಡಿದ್ದಾರೆ. ಅದರಲ್ಲಿ ೧೫ ನೆಯ ಶತಮಾನದಿಂದ ಹಿಡಿದು ೧೯೬೩ ರವರೆಗೆ ಪ್ರಕಟವಾದ ೫೦ ಭಾಷೆಗಳಲ್ಲಿ ಲಭ್ಯವಿರುವ ಗ್ರಂಥಸೂಚಿಗಳ ವಿವರಗಳಿವೆ. ಪುಸ್ತಕ, ನಿಯತಕಾಲಿಕ, ಹಸ್ತಪ್ರತಿ, ಸನ್ನದು ಹಾಗೂ ಇತರ ಬಗೆಯ ಗ್ರಂಥಸೂಚಿಗಳು ಇದರಲ್ಲಿ ಪಟ್ಟಿ ಮಾಡಲ್ಪಟ್ಟಿವೆ. ಐದನೆಯ ಸಂಪುಟದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಹಾಗೂ ನಿಖರವಾಗಿ ಸಂಪಾದಕ, ಸಂಕಲನಕಾರ, ಅನುವಾದಕ, ಶೀರ್ಷಿಕೆ, ಸನ್ನದು, ಪತ್ರಾಗಾರ ಮತ್ತು ಗ್ರಂಥಾಲಯ–ಇವೆಲ್ಲವುಗಳ ಅಕಾರಾದಿ ಸೂಚಿಗಳನ್ನು ಕೊಟ್ಟಿದ್ದಾರೆ.

ಗ್ರಂಥಸೂಚಿಗಳನ್ನು ವ್ಯವಸ್ಥಿತವಾಗಿ ಪಟ್ಟಿ ಮಾಡಿ ಪ್ರಕಟಿಸುವ ಯೋಜನೆಯನ್ನು ನ್ಯೂಯಾರ್ಕಿನ ಎಚ್. ಡಬ್ಲ್ಯೂ. ವಿಲ್ಸನ್ ಕಂಪನಿ ೧೯೩೭ ರಲ್ಲಿ ಹಮ್ಮಿಕೊಂಡು ತಪ್ಪದೆ ನಡೆಸಿಕೊಂಡು ಬರುತ್ತಿದೆ. ಬಿಬ್ಲಿಯೊಗ್ರಾಫಿಕ್ ಇಂಡೆಕ್ಸ್ ಎಂಬ ಅರೆವಾರ್ಷಿಕ ನಿಯತಕಾಲಿಕದ ಮೂಲಕ ಆ ಕೆಲಸ ನೆರವೇರುತ್ತಿದೆ. ವಾರ್ಷಿಕವಾಗಿ ಸಂಚಯಿತಗೊಳ್ಳುವ ಈ ನಿಯತಕಾಲಿಕವು ಪುಸ್ತಕ, ನಿಯತಕಾಲಿಕ ಮತ್ತು ಇತರ ವಾಚನ ಸಾಮಗ್ರಿಗಳಲ್ಲಿರುವ ಗ್ರಂಥಸೂಚಿಗಳನ್ನು ವಿಷಯಾನುಕ್ರಮವಾಗಿ ಪ್ರಕಟಿಸುತ್ತಿದೆ. ಐವತ್ತಕ್ಕಿಂತ ಜಾಸ್ತಿ ಉಲ್ಲೇಖನಗಳುಳ್ಳ ಗ್ರಂಥಸೂಚಿಗಳನ್ನು

ಸುಮಾರು ೨,೬೦೦ ನಿಯತಕಾಲಿಕ ಮತ್ತು ಪುಸ್ತಕಗಳಿಂದ ಆಯ್ದು ವರ್ಗೀಕರಿಸಿ ಬಿಬ್ಲಿಯೊಗ್ರಾಫಿಕ್ ಇಂಡೆಕ್ಸ್‌ನಲ್ಲಿ ಪಟ್ಟಿ ಮಾಡಲಾಗುತ್ತಿದೆ. ಜರ್ಮ್ಯಾನಿಕ್ ಮತ್ತು ರೊಮಾನಿಕ್ ಭಾಷಾ ಸಾಮಗ್ರಿಗಳಿಗೆ ವಿಶೇಷ ಒತ್ತು ನೀಡುವ ಈ ನಿಯತಕಾಲಿಕದಲ್ಲಿ ವರ್ಷಕ್ಕೆ ಸುಮಾರು ೧೦,೦೦೦ ಗ್ರಂಥ ಸೂಚಿಗಳನ್ನು ನಿಘಂಟು ವಿಧಾನದಲ್ಲಿ ಪಟ್ಟಿ ಮಾಡಲಾಗುತ್ತಿದೆ.

ಗ್ರಂಥಸೂಚಿಗಳನ್ನು ಕುರಿತ ಮಾಹಿತಿ ನಿಯಂತ್ರಣದಲ್ಲಿ ಯುನೆಸ್ಕೊ ನಿರ್ವಹಿಸಿದ ಪಾತ್ರವೂ ಉಲ್ಲೇಖನೀಯ. ತನ್ನ 'ಅಂತರ್‌ರಾಷ್ಟ್ರೀಯ ಗ್ರಂಥಸೂಚಿ ಸಲಹಾ ಸಮಿತಿ'ಯು ತಯಾರಿಸಿದ ವರದಿಗಳನ್ನು ಸಂಚಯಿಸಿ ವಿಶ್ವವ್ಯಾಪೀ ಗ್ರಂಥಸೂಚಿ ಸೇವೆಗಳು ಎಂಬ ಬಹು ಸಂಪುಟದ ಗ್ರಂಥದಲ್ಲಿ ಅವುಗಳನ್ನು ಪಟ್ಟಿ ಮಾಡಿದೆ. (ಸಂ. ೧ : ೧೯೫೦-೫೯; ಸಂ. ೨ : ೧೯೬೦-೬೪; ಸಂ. ೩ : ೧೯೬೫-೬೯; ಸಂ. ೪ : ೧೯೭೦-೭೪ ಮತ್ತು ಪುರವಣಿ ೧೯೮೦), ಇಂಗ್ಲಿಷ್ ಮತ್ತು ಫ್ರೆಂಚ್‌ನಲ್ಲಿ ಈ ಕೃತಿ ಲಭ್ಯವಿದೆ. ಯುನೆಸ್ಕೋದ 'ಬಿಬ್ಲಿಯೋಗ್ರಫಿ, ಡಾಕ್ಯುಮೆಂಟೇಷನ್, ಅಂಡ್ ಟರ್ಮಿನಾಲಜಿ' ಎಂಬ ದ್ವೈಮಾಸಿಕವು ಪ್ರಚಲಿತ ಕಾರ್ಯವನ್ನು ಮುಂದುವರಿಸಿ ಕೊಂಡು ಬರುತ್ತಿದೆ.

ಗ್ರಂಥಸೂಚಿಗಳ ಬಗ್ಗೆ ಮಾಹಿತಿಯನ್ನು ನೀಡಬಲ್ಲ ಆಕರ ಗ್ರಂಥಗಳು ಇನ್ನೂ ಅನೇಕವಿವೆ. ಸಾರ್ವತ್ರಿಕವಾಗಿ ಲಭ್ಯವಿರುವ ಹಾಗೂ ಮಾನ್ಯತೆ ಪಡೆದಿರುವ ಹಲವಾರು ಗ್ರಂಥಸೂಚಿಗಳ ಪಟ್ಟಿಗಳು ಈ ಆಕರ ಗ್ರಂಥಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಗ್ರಂಥಸೂಚಿಗಳನ್ನು ವರ್ಗೀಕರಿಸಿ ಇತರ ಮಾಹಿತಿ ಮೂಲಗಳ ಜೊತೆಗೆ ವ್ಯವಸ್ಥಿತವಾಗಿ ಪಟ್ಟಿ ಮಾಡಲಾಗಿದೆ. ಎಲ್ಲಾ ದೊಡ್ಡ ಗ್ರಂಥಾಲಯಗಳಲ್ಲಿ ಈ ಆಕರಗ್ರಂಥಗಳು ಓದುಗರ ಪರಾಮರ್ಶೆಗಾಗಿ ಇಡಲ್ಪಟ್ಟಿವೆ. ಇವುಗಳ ಪೈಕಿ (೧) ಕಾನ್‌ಸ್ಟನ್ಸ್ ವಿಂಚಲ್‌ರ 'ಗೈಡ್ ಟು ರೆಫೆರೆನ್ಸ್ ಬುಕ್ಸ್' (೨) ಆರ್ಥರ್ ವಾಲ್‌ಫೋರ್ಡ್ ಅವರ 'ಗೈಡ್ ಟು ರೆಫೆರೆನ್ಸ್ ಮೆಟೀರಿಯಲ್' (೩) ರಾಬರ್ಟ್ ಮರ್ಫಿಯ ಹೌ ಅ್ಯಂಡ್ ವೇರ್ ಟು ಲುಕ್ ಇಟ್ ಅಪ್, ಎಂಬ ಈ ಮೂರು ಗ್ರಂಥಗಳನ್ನು ಉದಾಹರಿಸಬಹುದು.

೫. ಪ್ರಚಲಿತ ಗ್ರಂಥಸೂಚಿಗಳು :

ಗ್ರಂಥಸೂಚಿಗಳನ್ನು ಸಾಮಾನ್ಯವಾಗಿ ಪ್ರಚಲಿತ ಹಾಗೂ ಪೂರ್ವಾನ್ವಯಿಕ ಗ್ರಂಥಸೂಚಿಗಳೆಂದು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಆಯಾಯ ತಿಂಗಳು ಅಥವಾ ವರ್ಷದಲ್ಲಿ ಪ್ರಕಟಗೊಳ್ಳುವ ಗ್ರಂಥಗಳನ್ನು ಪಟ್ಟಿ ಮಾಡಿ ಅವುಗಳನ್ನು ನಿಯತಕಾಲಿಕೆಗಳ ರೂಪದಲ್ಲಿ ಪ್ರಕಟಿಸುವುದು ವಾಡಿಕೆ. ರಾಷ್ಟ್ರೀಯ ಗ್ರಂಥಸೂಚಿಗಳು ಮತ್ತು ವಿಷಯ ಗ್ರಂಥಸೂಚಿಗಳು ಈ ಬಗೆಯವು. ಆಯಾ ದೇಶದಲ್ಲಿ ಪ್ರಕಟವಾದ ಪುಸ್ತಕಗಳ ಸಮಗ್ರ ಯಾದಿಗಳನ್ನು ಕಾಲ ಕಾಲಕ್ಕೆ ಪ್ರಕಟಿಸುತ್ತಿದ್ದರೆ

ಅವುಗಳನ್ನು ರಾಷ್ಟ್ರೀಯ ಗ್ರಂಥ ಸೂಚಿಗಳೆಂದು ಕರೆಯಲಾಗುತ್ತಿದೆ. ಈ ರೀತಿಯ ಪ್ರಕ್ರಿಯೆಯನ್ನು ಎಲ್ಲಾ ಮುಂದುವರಿದ ಹಾಗೂ ಬಹುತೇಕ ಅಭಿವೃದ್ಧಿಶೀಲ ದೇಶಗಳಲ್ಲಿ ನಾವು ಕಾಣಬಹುದು. ಪ್ರಪಂಚದ ಸುಮಾರು ಶೇ ೯೦ರಷ್ಟು ದೇಶಗಳಲ್ಲಿ ಇವು ಉತ್ಪಾದನೆಯಾಗುತ್ತಿವೆ. ರಾಷ್ಟ್ರೀಯ ಗ್ರಂಥಸೂಚಿಗಳು ಆಯಾ ದೇಶಗಳ ಪುಸ್ತಕೋತ್ಪಾದನೆಯ ಸಮಗ್ರ ಕೈಪಿಡಿಗಳಾಗಿರುತ್ತವೆ. ಇವುಗಳನ್ನು ಆಯಾದೇಶಗಳ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಹಿತ್ಯಕ ಬೆಳವಣಿಗೆಯ ಮಾನಕಗಳನ್ನಾಗಿ ಪರಿಗಣಿಸುವುದುಂಟು. ರಾಷ್ಟ್ರೀಯ ಗ್ರಂಥಸೂಚಿಗಳನ್ನು ಸಾಮಾನ್ಯವಾಗಿ ಆಯಾ ದೇಶಗಳ ರಾಷ್ಟ್ರೀಯ ಗ್ರಂಥಾಲಯ ಅಥವಾ ನಿಗಮಗಳು ಪ್ರಕಟಿಸುತ್ತವೆ. ಕೃತಿಸ್ವಾಮ್ಯ ರಕ್ಷಣೆಗಾಗಿ ರಾಷ್ಟ್ರೀಯ ಗ್ರಂಥಾಲಯಗಳಿಗೆ ಲೇಖಕರು ಇಲ್ಲವೆ ಪ್ರಕಾಶಕರಿಂದ ಸಲ್ಲಿಸಲ್ಪಟ್ಟ ಪುಸ್ತಕಗಳ ವ್ಯವಸ್ಥಿತ ಪಟ್ಟಿಗಳು ರಾಷ್ಟ್ರೀಯ ಗ್ರಂಥಸೂಚಿಗಳಾಗುತ್ತವೆ. ಇಂತಹ ಪಟ್ಟಿಗಳನ್ನು ನಿಯತಕಾಲಿಕವಾಗಿ ಪ್ರಕಟಿಸುತ್ತಿರುವ ಹಲವಾರು ದೇಶಗಳ ಪೈಕಿ ಇಂಗ್ಲೆಂಡ್, ಅಮೇರಿಕಾ ಮತ್ತು ಭಾರತಗಳನ್ನು ಉಲ್ಲೇಖಿಸಿ ಆ ಗ್ರಂಥಸೂಚಿಗಳ ವಿವರಗಳನ್ನು ನೀಡುತ್ತಿದ್ದೇವೆ.

ಅ. ಬ್ರಿಟಿಷ್ ನ್ಯಾಷನಲ್ ಬಿಬ್ಲಿಯೊಗ್ರಫಿ :

ಕೃತಿಸ್ವಾಮ್ಯ ಶಾಸನಕ್ಕೆ ಅನುಗುಣವಾಗಿ ಇಂಗ್ಲೆಂಡ್, ಸ್ಕಾಟ್‌ಲೆಂಡ್ ಮತ್ತು ವೇಲ್ಸ್ ಪ್ರಾಂತ್ಯಗಳಲ್ಲಿನ ಲೇಖಕರು ಅಥವಾ ಪ್ರಕಾಶಕರು ಬ್ರಿಟಿಷ್ ಲೈಬ್ರರಿಗೆ ಸಲ್ಲಿಸಿದ ಪುಸ್ತಕಗಳ ವ್ಯವಸ್ಥಿತ ಪಟ್ಟಿಯೇ ಬ್ರಿಟಿಷ್ ನ್ಯಾಷನಲ್ ಬಿಬ್ಲಿಯೊಗ್ರಫಿ. ಲಂಡನ್ನಿನಲ್ಲಿರುವ ಗ್ರಂಥಸೂಚಿ ಸೇವಾ ವಿಭಾಗವು ಈ ರಾಷ್ಟ್ರೀಯ ಸೂಚಿಯನ್ನು ೧೯೫೦ರಿಂದ ಸಾಪ್ತಾಹಿಕ ನಿಯತಕಾಲಿಕವಾಗಿ ಪ್ರಕಟಿಸುತ್ತಿದೆ. ಈ ಸಾಪ್ತಾಹಿಕ ಸಂಚಿಕೆಗಳನ್ನು ಚಾತುರ್ಮಾಸಿಕ ಹಾಗೂ ವಾರ್ಷಿಕ ಸಂಚಯಗಳನ್ನಾಗಿಯೂ ಪ್ರಕಟಿಸಲಾಗುತ್ತಿದೆ. ಈ ಮಾಹಿತಿಯನ್ನೆಲ್ಲಾ ಮ್ಯಾಗ್ನೆಟಿಕ್ ಟೇಪ್ ಮತ್ತು ಸಿ-ಡಿ ರೋಮ್‌ಗಳಲ್ಲಿ ಸಂಗ್ರಹಿಸಿ ಮಾರಾಟಕ್ಕೆ ಬಿಡಲಾಗುತ್ತಿದೆ. ವರ್ಷಕ್ಕೆ ಸರಾಸರಿ ಒಂದು ಲಕ್ಷ ಗ್ರಂಥಗಳು ಇದರಲ್ಲಿ ಸೂಚೀಕರಣಗೊಳ್ಳುತ್ತವೆ. ಜೊತೆಗೆ ಸುಮಾರು ಒಂದು ಸಾವಿರ ಬ್ರಿಟಿಷ್ ಪ್ರಕಾಶಕರ ವಿಳಾಸಗಳ ಸಮಗ್ರ ಪಟ್ಟಿಯನ್ನೂ ಈ ಸೂಚಿಯ ಜೊತೆಗೆ ಪೂರೈಸಲಾಗುತ್ತಿದೆ. ಸೂಚೀಕರಣಗೊಂಡ ಪುಸ್ತಕಗಳ ಅವಶ್ಯ ಮಾಹಿತಿ ಇರುವ ಕ್ಯಾಟಲಾಗ್ ಕಾರ್ಡುಗಳನ್ನೂ ಈ ವಿಭಾಗವು ತಯಾರಿಸಿ ಮಾರುತ್ತಿದೆ. ರಾಷ್ಟ್ರೀಯ ಗ್ರಂಥಸೂಚೀಕರಣದಂತಹ ಈ ಸರಕಾರಿ ಕೆಲಸವನ್ನು ಒಂದು ಲಾಭದಾಯಕ ಉದ್ದಿಮೆಯನ್ನಾಗಿ ಬೆಳೆಸಿರುವ ಮತ್ತು ಪ್ರಪಂಚದ ಅತ್ಯಂತ ಶ್ರೇಷ್ಠ ರಾಷ್ಟ್ರೀಯ ಗ್ರಂಥಸೂಚಿಯನ್ನಾಗಿ ಅಭಿವೃದ್ಧಿಪಡಿಸಿರುವ ಅದರ ನಿರ್ವಾಹಕ ಸಿಬ್ಬಂದಿವರ್ಗದವರು ಅಭಿನಂದನಾರ್ಹರು.

ಆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಗ್ರಂಥಸೂಚಿಗಳು :

ಬ್ರಿಟನ್ನಿನಲ್ಲಿರುವಂತೆ ಅಮೇರಿಕಾದಲ್ಲಿ ಯಾವುದೇ ಒಂದು ರಾಷ್ಟ್ರೀಯ ಗ್ರಂಥ ಸೂಚಿಯಿಲ್ಲ. ಆರ್ ಆರ್ ಬೌಕರ್ ಮತ್ತು ಎಚ್ ಡಬ್ಲ್ಯು ವಿಲ್ಸನ್ ಎಂಬ ಖಾಸಗಿ ಪುಸ್ತಕೋದ್ಯಮ ಸಂಸ್ಥೆಗಳು ತಮ್ಮ ಪ್ರಕಟಣೆಗಳ ಮೂಲಕ ಈ ಕೆಲಸವನ್ನು ಸುಮಾರು ನೂರು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. 'ಪಬ್ಲಿಷರ್ಸ್ ವೀಕ್ಲಿ' ಎಂಬ ನಿಯತಕಾಲಿಕವು ಅಮೆರಿಕಾದಲ್ಲಿ ಉತ್ಪಾದನೆಯಾದ ಹೊಸ ಪುಸ್ತಕಗಳ ಲೇಖಕರ ಸೂಚಿ. ಇದನ್ನು ಬೌಕರ ಕಂಪೆನಿಯು ೧೮೭೨ರಿಂದ ಪ್ರಕಟಿಸುತ್ತಾ ಬಂದಿದೆ. ಇದರ ಮಾಸಿಕ, ವಾರ್ಷಿಕ ಹಾಗೂ ಪಂಚವಾರ್ಷಿಕ ಸಂಚಯನಗಳನ್ನು 'ಅಮೆರಿಕನ್ ಬುಕ್ ಪಬ್ಲಿಷಿಂಗ್ ರೆಕಾರ್ಡ್' ಎಂಬ ಹೆಸರಿನಲ್ಲಿ ಈ ಕಂಪೆನಿಯವರೇ ಪ್ರಕಟಿಸುತ್ತಿದ್ದಾರೆ. ರಾಷ್ಟ್ರೀಯ ಗ್ರಂಥಸೂಚಿಯು ಮಾಡಬಹುದಾದ ಕೆಲಸವನ್ನು 'ಪಬ್ಲಿಷರ್ಸ್ ವೀಕ್ಲಿ' ಮತ್ತು ಅಮೆರಿಕನ್ ಬುಕ್ ಪಬ್ಲಿಷಿಂಗ್ ರೆಕಾರ್ಡ್'ಗಳು ಮಾಡುತ್ತಿವೆ. ಪ್ರತಿ ವರುಷ ೩೬,೦೦೦ ರಿಂದ ೪೦,೦೦೦ ಹೊಸ ಅಮೆರಿಕನ್ ಪುಸ್ತಕಗಳ ಮಾಹಿತಿಯನ್ನು ಶಾಸ್ತ್ರೀಯವಾಗಿ ವಿಂಗಡಿಸಿ ಈ ಎರಡು ನಿಯತಕಾಲಿಕಗಳಲ್ಲಿ ಬೌಕರ್ ಕಂಪನಿಯು ನೀಡುತ್ತಿದೆ.

ಇದೇ ಬಗೆಯ ಪ್ರಕ್ರಿಯೆಯನ್ನು ವಿಲ್ಸನ್ ಕಂಪನಿ ಕೂಡಾ ಮಾಡುತ್ತಿದೆ. 'ಕ್ಯೂಮುಲೆಟಿವ್ ಬುಕ್ ಇಂಡೆಕ್ಸ್' ಎಂಬ ತನ್ನ ಮಾಸಿಕದಲ್ಲಿ ಹಲವಾರು ದೇಶಗಳಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಗೊಳ್ಳುವ ಪುಸ್ತಕಗಳ ಸೂಚಿಗಳನ್ನು ೧೮೯೮ರಿಂದ ನೀಡುತ್ತಾ ಬಂದಿದೆ. ಈ ಮಾಸಿಕದ ಅರೆವಾರ್ಷಿಕ, ವಾರ್ಷಿಕ, ದ್ವೈವಾರ್ಷಿಕ ಹಾಗೂ ಚಾತುರ್ವಾರ್ಷಿಕ ಸಂಚಯಗಳನ್ನೂ ಈ ಸಂಸ್ಥೆ ಪ್ರಕಟಿಸುತ್ತಿದೆ. ಲೇಖಕ, ಸಹಲೇಖಕ, ಶೀರ್ಷಿಕೆ, ವಿಷಯ ಮತ್ತು ಗ್ರಂಥಮಾಲೆಗಳ ಅಡಿಯಲ್ಲಿ ಪುಸ್ತಕದ ಅತ್ಯಾವಶ್ಯಕ ಮಾಹಿತಿಯೆಲ್ಲಾ ಇದರಲ್ಲಿ ಸಿಗುತ್ತದೆ.

ಇ. ಭಾರತದ ರಾಷ್ಟ್ರೀಯ ಗ್ರಂಥಸೂಚಿ :

ಭಾರತದಲ್ಲಿ ೧೯೫೮ರಿಂದ ರಾಷ್ಟ್ರೀಯ ಗ್ರಂಥಸೂಚಿಯ ಪ್ರಕಟಣೆ ನಡೆದುಕೊಂಡು ಬರುತ್ತಿದೆ. ಕಲ್ಕತ್ತಾದಲ್ಲಿರುವ ಕೇಂದ್ರೀಯ ಪರಾಮರ್ಶನ ಗ್ರಂಥಾಲಯವು ಈ ಸೂಚಿಯನ್ನು ಪ್ರಕಟಿಸುತ್ತಿದೆ. ಡೆಲಿವರಿ ಆಫ್ ಬುಕ್ಸ್ ಆಕ್ಟ್ ೧೯೫೪ ಮತ್ತು ೧೯೫೬ರ ಆದೇಶದಂತೆ ಕೃತಿಸ್ವಾಮ್ಯವನ್ನು ಬಯಸಿ ರಾಷ್ಟ್ರೀಯ ಗ್ರಂಥಾಲಯಕ್ಕೆ ಸಲ್ಲಿಸಲಾಗುವ ಎಲ್ಲಾ ಪುಸ್ತಕಗಳ ಸಮಗ್ರ ಸೂಚಿಯನ್ನು ಮಾಸಿಕ ಕಂತುಗಳಲ್ಲಿ ನಿಯತಕಾಲಿಕವಾಗಿ ಪ್ರಕಟಿಸುವ ಯೋಜನೆ ಇದು. ಇಂಗ್ಲಿಷನ್ನೊಳಗೊಂಡು ಭಾರತದ ೧೭ ಭಾಷೆಗಳಲ್ಲಿನ ಕೃತಿಗಳ ಏಕೈಕ ಸೂಚಿ ಎಂಬ ದೊಡ್ಡ ಹೆಸರು ಇದಕ್ಕಿದೆ. ಇವರಲ್ಲಿ ಪ್ರಾದೇಶಿಕ ಭಾಷಾ ಪುಸ್ತಕ ಮಾಹಿತಿಯನ್ನು ಹಂಟೇರಿಯನ್ ವಿಧಾನದಲ್ಲಿ ಲಿಪ್ಯಂತರಗೊಳಿಸಿ ರೋಮನ್‌ಲಿಪಿಯಲ್ಲಿ ಪಟ್ಟಿ ಮಾಡ

ಲಾಗುತ್ತಿದೆ. ಮಾಸಿಕ ಸಂಚಿಕೆಗಳನ್ನು ಸಂಚಯಿಸಿದ ವಾರ್ಷಿಕ ಸಂಪುಟಗಳೂ ಪ್ರಕಟವಾಗುತ್ತಿವೆ. ಕಳೆದ ಮೂವತ್ತೈದು ವರ್ಷಗಳಲ್ಲಿ ಇವು ಯಾವೂ ಸಕಾಲಕ್ಕೆ ಪ್ರಕಟಗೊಂಡ ದಾಖಲೆಗಳು ನಮ್ಮಲ್ಲಿಲ್ಲ. ಜಿಗುಪ್ಸೆ ಬರಿಸುವಷ್ಟು ವಿಳಂಬ ಇಲ್ಲಿದೆ. ಸಾಲದ್ದಕ್ಕೆ ಇವುಗಳಲ್ಲಿ ದಾಖಲಿಸಲ್ಪಡುವ ಗ್ರಂಥಗಳ ಸಂಖ್ಯೆಯು ದೇಶದ ಒಟ್ಟು ಪುಸ್ತಕೋತ್ಪತ್ತಿಯ ಶೇ. ೫೦-೬೦ ರಷ್ಟು ಮಾತ್ರ. ಈ ರಾಷ್ಟ್ರೀಯ ಗ್ರಂಥ ಸೂಚಿಯಲ್ಲಿ ಕನ್ನಡ ಪುಸ್ತಕಗಳೂ ಸೇರ್ಪಡೆಯಾಗುತ್ತವೆ. ಹೀಗೆ ದಾಖಲಾದ ಕನ್ನಡ ಪುಸ್ತಕಗಳ ಸಂಖ್ಯೆ ಸುಮಾರು ೫೪೦ ಮಾತ್ರ. ಸದ್ಯಕ್ಕೆ ಕನ್ನಡದಲ್ಲಿ ಪ್ರತಿ ವರುಷ ಸುಮಾರು ೧೪೦೦ ಪುಸ್ತಕಗಳು ಪ್ರಕಟಗೊಳ್ಳುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಅಂದರೆ, ಕನ್ನಡ ಪುಸ್ತಕಗಳ ಒಟ್ಟು ಉತ್ಪಾದನೆಯಲ್ಲಿ ಕೇವಲ ಶೇ.೪೨ ರಷ್ಟು ಮಾತ್ರ ಈ ರಾಷ್ಟ್ರೀಯ ಗ್ರಂಥಸೂಚಿಯಲ್ಲಿ ದಾಖಲಾಗುತ್ತವೆ, ಉಳಿದ ಶೇ. ೫೮ ರಷ್ಟು ಕನ್ನಡ ಪುಸ್ತಕಗಳು ಇಂಡಿಯನ್ ನ್ಯಾಷನಲ್ ಬಿಬ್ಲಿಯೋಗ್ರಫಿಗೆ ಸಿಕ್ಕದೆ ಹೊರಗೆ ಉಳಿಯುತ್ತವೆ (೫)

೬. ಪೂರ್ವಾನ್ವಯಿಕ ಸೂಚಿಗಳು :

ಆಯಾ ವಾರ, ತಿಂಗಳು ಮತ್ತು ವಾರ್ಷಿಕ ಸಂಚಿಕೆಗಳನ್ನು ಪ್ರಚಲಿತ ಸೂಚಿಗಳನ್ನಾಗಿ ಪರಿಗಣಿಸಿ ಅವುಗಳ ಹಿಂದಿನ ಸಂಚಿಕೆ ಹಾಗೂ ಸಂಪುಟಗಳನ್ನು ಪೂರ್ವಾನ್ವಯಿಕ ಸೂಚಿಗಳನ್ನಾಗಿ ಬಳಸಬಹುದು. ಈ ಪೂರ್ವಾನ್ವಯಿಕ ಸೂಚಿಗಳ ಬೃಹತ್ ಸಂಪುಟಗಳನ್ನು ನಾವು ಎಲ್ಲಾ ಗ್ರಂಥಾಲಯದಲ್ಲಿ ಕಾಣಬಹುದು. ಇವು ಅನೇಕ ದೇಶ, ಭಾಷೆ, ವಿಷಯ ಮತ್ತು ಪ್ರಾಕಾರಗಳಿಗೆ ವಿಸ್ತರಿಸುತ್ತದೆ. ಅಂತಹ ಪೂರ್ವಾನ್ವಯಿಕ ಪಟ್ಟಿಗಳ ಪೈಕಿ ಪ್ರಮುಖವಾದವುಗಳ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ನೀಡುತ್ತಿದ್ದೇವೆ.

ಅ. ಬುಕ್ಸ್ ಇನ್ ಪ್ರಿಂಟ್ :

ಆರ್. ಆರ್. ಬೌಕರ್ ಕಂಪನಿಯವರು ೧೯೪೮ರಿಂದ ಪ್ರಕಟಿಸುತ್ತಿರುವ ಲೇಖಕ ಶೀರ್ಷಿಕೆ ಮತ್ತು ಗ್ರಂಥಮಾಲೆಯ ವಾಣಿಜ್ಯೋದ್ದೇಶದ ವಾರ್ಷಿಕ ಗ್ರಂಥಪಟ್ಟಿಯೇ ಬುಕ್ಸ್ ಇನ್ ಪ್ರಿಂಟ್. ಕಳೆದ ವರ್ಷ ಮತ್ತು ಅದಕ್ಕಿಂತ ಹಿಂದಿನ ಪ್ರಕಟಣೆಗಳು ಇದರಲ್ಲಿ ಸೇರ್ಪಡೆಯಾಗಿರುತ್ತವೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಗ್ರಂಥಗಳ ಪಟ್ಟಿಯು ಮಾತ್ರ ಇದರಲ್ಲಿ ದೊರೆಯುತ್ತದೆ ಇದರ ೧೯೯೨-೯೩ರ ೪೪ನೆಯ ಆವೃತ್ತಿಯು ೧೦ ಸಂಪುಟಗಳಲ್ಲಿ ಹೊರಬಂದಿದೆ. ೪೦,೦೦೦ ಅಮೇರಿಕನ್ ಪ್ರಕಾಶಕರು ಈವರೆಗೆ ಹೊರ ತಂದಿರುವ ೧೦,೦೦,೦೦೦ ಶೀರ್ಷಿಕೆಗಳು ಇದರಲ್ಲಿ ಸೂಚೀಕರಿಸಲ್ಪಟ್ಟಿವೆ. ಇವುಗಳ ಪೈಕಿ ೧,೪೫,೦೦೦ ಹೊಸ ಪುಸ್ತಕ ಮತ್ತು ೩,೪೦,೦೦೦ ಪುಸ್ತಕಗಳ ಪರಿಷ್ಕರಣ ಮಾಹಿತಿ ಇಲ್ಲಿ ದೊರೆಯುತ್ತದೆ. ಇದರಲ್ಲಿ

ಸೂಚೀಕರಣಗೊಂಡ ಬಹುತೇಕ ಪುಸ್ತಕಗಳ ಪ್ರಕಾಶಕರ ವಿಳಾಸಗಳನ್ನು ೭ನೆಯ ಸಂಪುಟದಲ್ಲಿ ಕೊಡಲಾಗಿದೆ.

ಸಬ್ಜಕ್ಟ್ ಗೈಡ್ ಟು ಬುಕ್ಸ್ ಇನ್‌ಪ್ರಿಂಟ್ ಎಂಬುದು ಬೌಕರ್ ಅವರ ಇನ್ನೊಂದು ವಾರ್ಷಿಕ ಪ್ರಕಟಣೆ. ಪ್ರತಿವರ್ಷ ಪರಿಷ್ಕೃತಗೊಳ್ಳುತ್ತದೆ. ೧೯೯೨-೯೩ರ ಆವೃತ್ತಿಯು ೫ ಸಂಪುಟಗಳಲ್ಲಿದೆ. ಇದರಲ್ಲಿ ೭,೫೦,೦೦೦ ಶೀರ್ಷಿಕೆಗಳನ್ನು ೬೬,೦೦೦ ವಿಷಯ ಶೀರ್ಷಿಕೆಗಳ ಅಡಿಯಲ್ಲಿ ಪಟ್ಟಿಮಾಡಲಾಗಿದೆ. ಇವುಗಳ ಪೈಕಿ ೮೦,೦೦೦ ಹೊಸ ಶೀರ್ಷಿಕೆಗಳ ಮತ್ತು ೩,೫೦,೦೦೦ ಪರಿಷ್ಕರಣ ಅಥವಾ ಪುನರ್ಮುದ್ರಣಗಳ ಮಾಹಿತಿ ಇದರಲ್ಲಿ ಸಿಗುತ್ತದೆ. ೧೯೯೧-೯೨ರ ಆವೃತ್ತಿಯಲ್ಲಿ ಸೇರ್ಪಡೆಯಾಗಿದ್ದ ಆದರೆ ಈಗ ಲಭ್ಯವಿಲ್ಲದ ಶೀರ್ಷಿಕೆಗಳನ್ನು ಕೈಬಿಡಲಾಗಿದೆ.

ಬೌಕರ್ ಕಂಪನಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಪೇಪರ್ ಬೌಂಡ್ ಬುಕ್ಸ್ ಇನ್ ಪ್ರಿಂಟ್' ಮತ್ತು ಬುಕ್ಸ್ ಔಟ್ ಆಫ್ ಪ್ರಿಂಟ್' ಎಂಬ ಎರಡು ಬೃಹತ್ ಸೂಚಿಗಳನ್ನು ಪ್ರಕಟಿಸುತ್ತಿದ್ದಾರೆ. ಎರಡನೆಯದರಲ್ಲಿ ೧೯೮೨ ರಿಂದ ಇತ್ತೀಚಿನ ವರೆಗೆ ಲಭ್ಯವಿರುವ ೫,೦೦,೦೦೦ಕ್ಕಿಂತ ಹೆಚ್ಚಿನ ಸಂಖ್ಯೆಯ ಶೀರ್ಷಿಕೆಗಳು ಸೂಚೀಕರಿಸಲ್ಪಟ್ಟಿವೆ. ಇದೇ ರೀತಿಯ ಇನ್ನೂ ೩೦ ಸೂಚಿಗಳನ್ನು ಈ ಸಂಸ್ಥೆಯು ಪ್ರಕಟಿಸುತ್ತಿದೆ.

ಬೌಕರ್ ಕಂಪನಿಯವರ ಎಲ್ಲಾ ಗ್ರಂಥಸೂಚಿಗಳು ಸಾಂಪ್ರದಾಯಿಕ ರೂಪ (ಪುಸ್ತಕ)ದಲ್ಲಷ್ಟೇ ಅಲ್ಲ ಅವು ಇತರ ಮಾಧ್ಯಮಗಳಾದ ಮೈಕ್ರೊಫಿಲ್ಮ್, ಮೈಕ್ರೊಫಿಷ್ (ಮೂಲದ ೪೨ ರಷ್ಟು ಮತ್ತು ೧೪೮ರಷ್ಟು ಚಿಕ್ಕದಾದ), ಮ್ಯಾಗ್ನೆಟಿಕ್ ಟೇಪು ಮತ್ತು ಸಿ ಡಿ ರೋಮ್‌ಗಳಲ್ಲಿ ಲಭ್ಯವಿದೆ, ಈ ಎಲ್ಲಾ ಗ್ರಂಥಸೂಚಿ ಮಾಹಿತಿಯನ್ನು ನೇರಸಂಪರ್ಕ (ಆನ್ ಲೈನ್)ದಿಂದಲೂ ಪಡೆಯಬಹುದು. ಬೌಕರ್ ಅವರ ಮಾಹಿತಿ ಉಗ್ರಾಣ (ಡೇಟಾ ಬೇಸ್)ದಲ್ಲಿ ಸುಮಾರು ೧೮.೨೯,೦೦೦ ಗ್ರಂಥಗಳ ಬಗ್ಗೆ ಅತ್ಯಾವಶ್ಯಕ ಮಾಹಿತಿ ಸಂಗ್ರಹವಾಗಿದೆ. ಕಂಪ್ಯೂಟರ್ ಅಳವಡಿಕೆಯಿಂದಾಗಿ ಈ ಮಾಹಿತಿಯನ್ನು ಸಹಾ ಪರಿಷ್ಕರಿಸಲು ಸಾಧ್ಯವಾಗಿದೆ. ಬೌಕರ್ ಮಾಹಿತಿ ಉಗ್ರಾಣವನ್ನು ನೇರವಾಗಿ ಸಂಪರ್ಕಿಸಲು ಸಾಧ್ಯವಾಗದಿದ್ದರೆ ಡಯಲಾಗ್ ಜಿ. ಆರ್ ಎಸ್. ಮೊದಲಾದ ವಾಣಿಜ್ಯ ಸಂಸ್ಥೆಗಳ ಮೂಲಕವೂ ಬೇಕಾದ ಮಾಹಿತಿಯನ್ನು ಪಡೆಯಬಹುದು.

(ಆ) ವಿಟ್ಟ್ಯಾಕರ್ಸ್ ಬುಕ್ಸ್ ಇನ್‌ಪ್ರಿಂಟ್

ಅಮೇರಿಕಾದ ಹೆಚ್. ಡಬ್ಲ್ಯು. ವಿಲ್ಸನ್ ಮತ್ತು ಆರ್. ಆರ್. ಬೌಕರ್ ಸಂಸ್ಥೆಗಳ ರೀತಿಯಲ್ಲಿಯೆ ಬ್ರಿಟನ್ನಿನಲ್ಲಿ ಜೆ. ವಿಟ್ಟ್ಯಾಕರ್ ಎಂಬ ಖಾಸಗಿ ಸಂಸ್ಥೆಯು ವಾಣಿಜ್ಯೋದ್ದೇಶದ ಈ ಗ್ರಂಥಸೂಚಿಯನ್ನು ೧೮೭೪ ರಿಂದ ಪ್ರಕಾಶಿಸುತ್ತಾ ಬಂದಿದೆ. ಇಂಗ್ಲೆಂಡ್, ಸ್ಕಾಟಲೆಂಡ್ ಮತ್ತು ವೇಲ್ಸ್‌ಗಳಿಗೆ ಮಾತ್ರ ಸೀಮಿತಗೊಂಡಿರುವ

ವಿಟ್ಯಾಕರ್ಸ್ ಬುಕ್ಸ್ ಇನ್ ಪ್ರಿಂಟ್ ಎಂಬ ವಾರ್ಷಿಕದಲ್ಲಿ ಸೂಚಿ ಮಾಹಿತಿಯನ್ನು ಲೇಖಕ, ಶೀರ್ಷಿಕೆ, ಗ್ರಂಥಮಾಲೆ ಮತ್ತು ವಿಷಯ ಲೇಖೆಗಳ ಅಡಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ಅಳವಡಿಸಲಾಗಿದೆ ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಳಿಸಿದ ಈ ಸೂಚೀಕರಣ ವ್ಯವಸ್ಥೆಯು ಶೀಘ್ರಗಾಮಿಯೂ, ಅವಲಂಬನಿಯವೂ ಆಗಿದೆ. ೧೯೯೩ರ ಆವೃತ್ತಿಯು ೧೦,೦೦೦ ಪುಟಗಳ ೪ ಸಂಪುಟಗಳಲ್ಲಿದೆ. ೨೧೨೭೪ ಬ್ರಿಟಿಷ್ ಪ್ರಕಾಶಕರ ೫,೭೩,೩೬೦ ಶೀರ್ಷಿಕೆಗಳು ಈ ಸಂಪುಟಗಳಲ್ಲಿ ದಾಖಲಾಗಿವೆ. ಸದಾ ಪರಿಷ್ಕರಣಗೊಳ್ಳುವ ಈ ಸೂಚಿಯಲ್ಲಿ ಲಭ್ಯವಿರುವ ಪುಸ್ತಕಗಳ ಮಾಹಿತಿಯನ್ನು ಮಾತ್ರ ಕೊಡಲಾಗುತ್ತಿದೆ.

ಗ್ರಂಥಸೂಚಿಯ ಜೊತೆಗೆ ಇನ್ನೂ ಅನೇಕ ಉಪಯುಕ್ತ ಮಾಹಿತಿಯು ಈ ಸಂಪುಟಗಳಲ್ಲಿ ಸಿಗುತ್ತದೆ. ಬ್ರಿಟನ್ನಿನಲ್ಲಿ ಉತ್ಪಾದನೆಯಾಗುವ ಪುಸ್ತಕಗಳ ವಾರ್ಷಿಕ ಸಂಖ್ಯೆ (ಸುಮಾರು ೬೦೦೦೦); ಪ್ರಕಾಶಕರ ವಿಳಾಸ ಪಟ್ಟಿ, ಪುಸ್ತಕಗಳ ಅಳತೆ (ಬ್ರಿಟಿಷ್ ಮತ್ತು ಮೆಟ್ರಿಕ್ ಪದ್ಧತಿ) ; ಬಿ. ಎನ್. ಬಿ ಎಸ್. ಬಗ್ಗೆ ವಿವರ ; ಬುಕ್ ಟ್ರಸ್ಟ್, ಬ್ರಿಟಿಷ್ ಕೌನ್ಸಿಲ್, ಬ್ರಿಟಿಷ್ ಲೈಬ್ರರಿ, ಮುಂತಾದುವುಗಳ ಬಗ್ಗೆ ಮಾಹಿತಿ, ನಿವೇದಿತ ಶೀರ್ಷಿಕೆಗಳು, ಗ್ರಂಥಸ್ವಾಮ್ಯ, ಮುದ್ರಣದ ಇತಿಹಾಸ, ಬುಕ್ ಕ್ಲಬ್ಬುಗಳು, ಹೆಸರಾಂತ ಗ್ರಂಥಮಾಲಾ ಪ್ರಕಾಶಕರು, ಮೊದಲಾದ ಉಪಯುಕ್ತ ಮಾಹಿತಿಗಳು ಇವರ ಪ್ರಾರಂಭಿಕ ಪುಟಗಳಲ್ಲಿ ಸಿಗುತ್ತವೆ. ಮೈಕ್ರೊಫಿಷ್ ಮತ್ತು ಸಿ. ಡಿ. ರೋಮ್ ಮಾಧ್ಯಮಗಳಲ್ಲಿಯೂ ವಿಟ್ಯಾಕರ್ಸ್ ಬುಕ್ಸ್ ಇನ್ ಪ್ರಿಂಟ್ ಲಭ್ಯವಿದೆ.

(ಇ) ಇಂಡಿಯನ್ ಬುಕ್ಸ್ ಇನ್ ಪ್ರಿಂಟ್

ಇಂಗ್ಲೀಷ್ ಭಾಷೆಯಲ್ಲಿದ್ದು ಭಾರತದಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಮಾತ್ರ ಇದರಲ್ಲಿ ಸೂಚೀಕರಿಸಲಾಗುತ್ತಿದೆ. ೧೯೬೭ ರಿಂದ ೧೯೯೨ರ ವರೆಗೆ ೧೪ ಸಲ ಪರಿಷ್ಕರಣಗೊಂಡಿವೆ. ಮೂರು ಸಂಪುಟಗಳ ಈ ಆಗರದಲ್ಲಿ ೧,೦೦,೦೦೦ ಶೀರ್ಷಿಕೆಗಳು ೩,೨೫,೦೦೦ ಲೇಖೆಗಳಡಿಯಲ್ಲಿ ನಮೂದುಗೊಂಡಿವೆ. ಮೊದಲ ಸಂಪುಟದಲ್ಲಿ ಲೇಖಕರ ಮತ್ತು ಎರಡನೆಯದರಲ್ಲಿ ಶೀರ್ಷಿಕೆಗಳ ಅಕಾರಾದಿ ಸೂಚಿಗಳಿವೆ. ಮೂರನೆಯ ಸಂಪುಟದಲ್ಲಿ ಸೂಚಿಗಳನ್ನು ವರ್ಗೀಕರಿಸಿ ಅಳವಡಿಸಲಾಗಿದೆ. ಸುಮಾರು ೨,೬೦೦ ಭಾರತೀಯ ಪ್ರಕಾಶಕರ ವಿಳಾಸಗಳನ್ನು ಈ ಸಂಪುಟದ ಕೊನೆಯ ಭಾಗದಲ್ಲಿ ಕೊಡಲಾಗಿದೆ.

ಇಂಥಸೊಂದು ಉಪಯುಕ್ತ ಹಾಗೂ ಕಾಲಕಾಲಕ್ಕೆ ಪರಿಷ್ಕರಣಗೊಳ್ಳುತ್ತಿರುವ ಗ್ರಂಥಸೂಚಿಯನ್ನು ಪ್ರಕಟಿಸುತ್ತಿರುವ ಇದರ ಸಂಪಾದಕರು ಮತ್ತು ಪ್ರಕಾಶಕರು ಪ್ರಶಂಸನೀಯರು. ಇದಕ್ಕೆ ಸಂಸಮಾನವಾದ ಗ್ರಂಥಸೂಚಿಯನ್ನು ಭಾರತದಲ್ಲಿ ಈವರೆಗೆ ಯಾವ ಸಂಘ-ಸಂಸ್ಥೆಗಳಾಗಲಿ, ಗ್ರಂಥಾಲಯಗಳಾಗಲಿ ಪ್ರಕಟಿಸಿಲ್ಲ. ಈ

ಮೂರು ಸಂಪುಟಗಳಲ್ಲಿರುವ ಗ್ರಂಥ ಮಾಹಿತಿಗಳು ಪ್ರಚಲಿತವೂ, ನಿಖರವೂ ಅವಲಂಬನೀಯವೂ ಆಗಿದೆ.

(ಈ) ನ್ಯಾಷನಲ್ ಬಿಬ್ಲಿಯೊಗ್ರಫಿ ಆಫ್ ಇಂಡಿಯನ್ ಲಿಟರೇಚರ್

೧೯೦೧ ರಿಂದ ೧೯೫೩ರ ಅವಧಿಯಲ್ಲಿ ಭಾರತದಲ್ಲಿ ಪ್ರಕಟಗೊಂಡ ೧೫ ಪ್ರಾದೇಶಿಕ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿನ ಪುಸ್ತಕಗಳ ಮಾಹಿತಿಯನ್ನು ೪ ಸಂಪುಟಗಳಲ್ಲಿ ಒದಗಿಸಲಾಗಿದೆ. ಇದರಲ್ಲಿ ಒಟ್ಟು ೬೦,೦೦೦ ನಮೂದುಗಳಿವೆ. ಶೀರ್ಷಿಕೆ, ಲೇಖಕ, ಪ್ರಕಾಶಕ ಮೊದಲಾದ ಹೆಸರುಗಳನ್ನು ರೋಮನ್ ಲಿಪಿಯಲ್ಲಿ ಕೊಡಲಾಗಿದೆ. ಪುಸ್ತಕಗಳ ವಸ್ತು ಪರಿಚಯಗಳನ್ನು ಸಂಕ್ಷಿಪ್ತವಾಗಿ ಇಂಗ್ಲೀಷಿನಲ್ಲಿ ನೀಡಲಾಗಿದೆ. ಮಾನವಿಕಗಳ ಪರಿವಿಡಿಯಲ್ಲಿ ಬರುವ ಹಾಗೂ ಸಾಹಿತ್ಯಕ ಮೌಲ್ಯವನ್ನು ಹೊಂದಿರುವ ಪುಸ್ತಕಗಳ ಬಗ್ಗೆ ಮಾಹಿತಿಗಳು ಈ ಸೂಚಿಯಲ್ಲಿ ದೊರೆಯುತ್ತವೆ. ಇಲ್ಲಿ ಸೇರ್ಪಡೆಯಾಗಿರುವ ಕನ್ನಡ ಪುಸ್ತಕಗಳ ಸಂಖ್ಯೆ ೨,೩೫೬. ದೆಹಲಿಯಲ್ಲಿರುವ ಭಾರತೀಯ ಸಾಹಿತ್ಯ ಅಕಾಡೆಮಿ-ಯವರು ಈ ೪ ಸಂಪುಟಗಳನ್ನು ೧೯೬೨-೭೪ರ ಅವಧಿಯಲ್ಲಿ ಪ್ರಕಟಿಸಿದರು.

೬. ನಿಯತಕಾಲಿಕ ಸೂಚಿಗಳು :

ಪೂರ್ಣ ಹಾಗೂ ಸಾಂಪ್ರದಾಯಿಕ ಪುಸ್ತಕಗಳಿಗೆ ಸೂಚಿಗಳಿರುವಂತೆ ನಿಯತ ಕಾಲಿಕೆಗಳಿಗೂ ಅವುಗಳ ಪರಿವಿಡಿಗಳಿಗೂ ಸೂಚಿಗಳಿವೆ. ಅನೇಕ ಸಂಘ ಸಂಸ್ಥೆಗಳು ನಿಯತಕಾಲಿಕ ಸಾಹಿತ್ಯಕ್ಕೆ ಸೂಚಿಗಳನ್ನು ತಯಾರಿಸಿ ಪ್ರಕಟಿಸುತ್ತಾ ಬಂದಿವೆ. ಅಮೆರಿಕಾದ ಆರ್. ಆರ್. ಬೌಕರ್ ಮತ್ತು ಎಚ್ ಡಬ್ಲ್ಯು ವಿಲ್ಸನ್ ಕಂಪನಿಗಳು ಈ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿವೆ. ಬೌಕರ್ ಕಂಪನಿಯು ಪ್ರಕಟಿಸುತ್ತಿರುವ 'ಉಲ್ರಿಚ್ ಇಂಟರ್ ನ್ಯಾಷನಲ್ ಪೀರಿಯಾಡಿಕಲ್ಸ್ ಡೈರೆಕ್ಟರಿ'ಯು ಅತ್ಯಂತ ಉಪಯುಕ್ತ ಹಾಗೂ ಜನಪ್ರಿಯ ಪ್ರಚಲಿತ ನಿಯತ ಕಾಲಿಕೆಗಳ ಸೂಚಿಯಾಗಿದೆ. ೧೯೭೨-೭೩ರ ಆವೃತ್ತಿಯು ೩೧ನೆಯ ಪರಿಷ್ಕರಣವಾಗಿದ್ದು ೩ ಸಂಪುಟಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ೧,೨೦,೦೦೦ ನಿಯತ ಕಾಲಿಕೆಗಳು ಪಟ್ಟಿ ಮಾಡಲ್ಪಟ್ಟಿವೆ ಅವುಗಳ ಪೈಕಿ ೮,೬೦೦ ಹೊಚ್ಚ ಹೊಸ ನಿಯತಕಾಲಿಕೆಗಳು. ಅಮಾನತುಗೊಂಡ ಇಲ್ಲವೆ ನಿಂತು ಹೋದ ಸುಮಾರು ೬,೧೦೦ ನಿಯತಕಾಲಿಕಗಳನ್ನು ಪ್ರತ್ಯೇಕವಾದ ಪಟ್ಟಿ ತೋರಿಸುತ್ತದೆ. ಹಿಂದಿನ ಆವೃತ್ತಿಯಲ್ಲಿನ ನಿಯತಕಾಲಿಕಗಳ ಪೈಕಿ ೨,೫೦೦ ಶೀರ್ಷಿಕೆಗಳು ಬದಲಾವಣೆಗೊಂಡಿರುವುದನ್ನು ಮತ್ತು ೬೭,೦೦೦ ಇತರ ಪರಿಷ್ಕರಣಗಳನ್ನು ಪ್ರಸಕ್ತ ಸಂಪುಟಗಳು ತೋರಿಸುತ್ತವೆ. ೨೦೦ ದೇಶಗಳಲ್ಲಿ ಹರಡಿರುವ ಸುಮಾರು ೬೫,೦೦೦ ಪ್ರಕಾಶಕರ

ವಿಳಾಸಗಳು ಇದರಲ್ಲಿ ಲಭ್ಯವಿದೆ. ೬೦ ವರ್ಷಗಳಿಂದ ಈ ಬಗೆಯ ಸೇವೆಯನ್ನು ಕೊಡುತ್ತಾ ಬಂದಿರುವ ಈ ನಿಯತಕಾಲಿಕ ಸೂಚಿಯು ಇತ್ತೀಚೆಗೆ ಮ್ಯಾಗ್ನೆಟಿಕ್ ಟೇಪು, ಮೈಕ್ರೋಫಿಷ್, ಸಿ ಡಿ ರೋಮ್ ಮತ್ತು ಆನ್ ಲೈನ್ ಮಾಧ್ಯಮ ಗಳಲ್ಲಿಯೂ ಲಭ್ಯವಿದೆ.

ಉಲ್ರಿಚ್‌ನಷ್ಟು ಜನಪ್ರಿಯವಲ್ಲದಿದ್ದರೂ ಸಾಕಷ್ಟು ಉಪಯುಕ್ತವೆನಿಸಿರುವ ಅನೇಕ ಪ್ರಚಲಿತ ನಿಯತಕಾಲಿಕ ಸೂಚಿಗಳಿವೆ. ಅವುಗಳ ಪೈಕಿ ಜೆನ್ಸ್ ಗೈಡ್ ಟು ನ್ಯೂಸ್ ಪೇಪರ್ಸ್ ಆ್ಯಂಡ್ ಪೀರಿಯಾಡಿಕಲ್ಸ್ ಆಫ್ ದಿ ವರ್ಲ್ಡ್ (೧೮೪೬), ವಿಲ್ಲಿಂಗ್ಸ್ ಪ್ರೆಸ್ ಗೈಡ್ (೧೮೭೪), ವುಡ್‌ವರ್ತ್ಸ್ ಗೈಡ್ ಟು ಕರೆಂಟ್ ಬ್ರಿಟಿಷ್ ಪಿರಿಯಾಡಿಕಲ್ಸ್ (೧೯೭೦), ಎಯರ್ ಡೈರೆಕ್ಟರಿ ಆಫ್ ಪಬ್ಲಿಕೇಷನ್ಸ್ (೧೮೮೦) ಮತ್ತು ಆಕ್ಸ್‌ಬ್ರಿಜ್ ಅವರ ಸ್ಟ್ಯಾಂಡರ್ಡ್ ಪೀರಿಯಾಡಿಕಲ್ ಡೈರೆಕ್ಟರಿ (೧೯೬೪) ಪ್ರಮುಖವಾದವುಗಳು.

೮. ನಿಯತಕಾಲಿಕೆಗಳ ಪರಿವಿಡಿ ಸೂಚಿಗಳು :

ಉಲ್ರಿಜ್ ಡೈರೆಕ್ಟರಿಯ ಇತ್ತೀಚಿನ ಆವೃತ್ತಿಯಲ್ಲಿ ಸುಮಾರು ೧,೩೦,೦೦೦ ನಿಯತಕಾಲಿಕಗಳು ನಮೂದಾಗಿವೆ. ಅದರ ವ್ಯಾಪ್ತಿಗೆ ಸಿಲುಕದೆ ಇರುವ ನಿಯತ ಕಾಲಿಕಗಳ ಸಂಖ್ಯೆಯು ಅದಕ್ಕಿಂತ ಜಾಸ್ತಿ ಇರಬಹುದೆಂಬುದು ನಮ್ಮ ಅಂದಾಜು. ಇಷ್ಟು ದೊಡ್ಡ ಪ್ರಮಾಣದ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ಲೇಖನಗಳ ಸಮಗ್ರ ಹಾಗೂ ಪ್ರಚಲಿತ ಸೂಚಿಯನ್ನು ತಯಾರಿಸಿ ಪ್ರಕಟಿಸುವುದು ದುಸ್ಸಾಧ್ಯ. ಆದ್ದರಿಂದ ಅನೇಕ ವಿದ್ವತ್ ಸಂಘ–ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ನಿಯತಕಾಲಿಕೆಗಳ ಸೂಚಿಗಳನ್ನು ತಯಾರಿಸಿ ಪ್ರಕಟಿಸುತ್ತಿವೆ. ವೈದ್ಯ ಶಾಸ್ತ್ರ, ತಂತ್ರಜ್ಞಾನ, ಜೀವವಿಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಮಾಜ ಶಾಸ್ತ್ರ, ಮನೋವಿಜ್ಞಾನ ಮೊದಲಾದ ವಿಷಯಗಳಲ್ಲಿರುವ ನಿಯತಕಾಲಿಕ ಸಾಹಿತ್ಯಕ್ಕೆ ಸೂಚಿಗಳು ಪ್ರಕಟವಾಗುತ್ತಿವೆ. ಇವುಗಳನ್ನು ಸಾಮಾನ್ಯವಾಗಿ ಸೂಚೀಕರಣ ನಿಯತಕಾಲಿಕಗಳು (ಇಂಡೆಕ್ಸಿಂಗ್ ಪೀರಿಯಾಡಿಕಲ್ಸ್) ಮತ್ತು ಸಂಕ್ಷೇಪೀಕರಣ ನಿಯತಕಾಲಿಕಗಳು (ಅಬೆಸ್ಟ್ರಾಕ್ಟಿಂಗ್ ಪೀರಿಯಾಡಿಕಲ್ಸ್) ಎಂದು ಎರಡು ಬಗೆಯಾಗಿ ವಿಂಗಡಿಸಲಾಗುತ್ತಿದೆ.

(ಅ) ಸಾಮಾನ್ಯ ಸೂಚಿಗಳು :

ನಿಯತಕಾಲಿಕಗಳ ಸೂಚಿಯನ್ನು ತಯಾರಿಸುವ ವ್ಯವಸ್ಥಿತ ಕಾರ್ಯವನ್ನು ನಡೆಸಿದವರು ಅಮೆರಿಕಾದ ಡಬ್ಲ್ಯು ಎಫ್ ಪೂಲೆ ಮತ್ತು ಅವನ ಅನುಯಾಯಿಗಳು. ಪೂಲ್ಸ್ ಇಂಡೆಕ್ಸ್ ಟು ಪೀರಿಯಾಡಿಕಲ್ಸ್ ಲಿಟರೇಚರ್ ಎಂಬ ತಮ್ಮ ಬೃಹತ್ ಸೂಚಿ ಯಲ್ಲಿ ೧೮೮೩–೬೧ರ ಅವಧಿಯ ೪೭೯ ಬ್ರಿಟಿಷ್ ಮತ್ತು ಅಮೆರಿಕನ್ ನಿಯತಕಾಲಿಕ

ಗಳಲ್ಲಿನ ೫,೯೦,೦೦೦ ಲೇಖನಗಳ ವಿಷಯ ಮತ್ತು ಲೇಖಕರ ಸೂಚಿಗಳನ್ನು ಒದಗಿಸಲಾಗಿದೆ. ಇದೇ ಬಗೆಯ ಕೆಲಸವನ್ನು ನ್ಯೂಯಾರ್ಕಿನ ವಿಲ್ಸನ್ ಕಂಪನಿಯವರು ರೀಡರ್ಸ್ ಗೈಡ್ ಟು ಪೀರಿಯಾಡಿಕಲ್ಸ್ ಲಿಟರೇಚರ್ ಎಂಬ ತಮ್ಮ ಪಾಕ್ಷಿಕದಲ್ಲಿ ಅತ್ಯಂತ ಜನಪ್ರಿಯ ನಿಯತಕಾಲಿಕ ಲೇಖನಗಳಿಗೆ ಸೂಚಿಗಳನ್ನು ೧೯೦೦ ರಿಂದ ಪ್ರಕಟಿಸುತ್ತಿದ್ದಾರೆ. ಈ ಕಂಪನಿ ಹ್ಯೂಮಾನಿಟೀಸ್ ಇಂಡೆಕ್ಸ್, ಸೋಷಲ್ ಸೈನ್ಸ್ ಇಂಡೆಕ್ಸ್, ಲೈಬ್ರರಿ ಲಿಟರೇಚರ್, ಎಜುಕೇಷನ್ ಇಂಡೆಕ್ಸ್ ಮುಂತಾದ ೨೩ ವಿಷಯಗಳಲ್ಲಿ ಸೂಚಿಗಳನ್ನು ಮತ್ತು ಸಂಕ್ಷೇಪಗಳನ್ನು ವಿವಿಧ ರೀತಿಯ ನಿಯತಕಾಲಿಕಗಳ ರೂಪದಲ್ಲಿ ಪ್ರಕಟಿಸುತ್ತಿದೆ.

(ಆ) ವೈದ್ಯಕೀಯ ಕ್ಷೇತ್ರ :

ಅಮೇರಿಕದ ರಾಷ್ಟ್ರೀಯ ವೈದ್ಯಕೀಯ ಗ್ರಂಥಾಲಯವು 'ಇಂಡೆಕ್ಸ್ ಮೆಡಿಕಸ್' ಎಂಬ ತನ್ನ ಮಾಸಿಕದಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ನಿಯತಕಾಲಿಕ ಸಾಹಿತ್ಯಕ್ಕೆ ಸೂಚಿಗಳನ್ನು ೧೮೮೦ ರಿಂದ ಒದಗಿಸುತ್ತಾ ಬಂದಿದೆ. ೧೮೮೦ ರಿಂದ ೧೯೫೦ರ ವರೆಗೆ ಪ್ರಕಟವಾದ ಅದರ ಇಂಡೆಕ್ಸ್ ಕ್ಯಾಟಲಾಗ್ ಎಂಬ ಗ್ರಂಥಸೂಚಿಯಲ್ಲಿ ೩೧,೦೦,೦೦೦ ನಮೂದುಗಳಿವೆ. ಇದರಲ್ಲಿ ಪುಸ್ತಕ, ನಿಯತಕಾಲಿಕ ಲೇಖನ, ಪ್ರೌಢ ಪ್ರಬಂಧ, ಸಂಶೋಧನಾ ವರದಿ, ಮೊದಲಾದವು ಪಟ್ಟಿ ಮಾಡಲ್ಪಟ್ಟಿವೆ. ಇಂತಹ ಕೆಲಸವು ಬೇರಾವ ಕ್ಷೇತ್ರದಲ್ಲಿಯೂ ನಡೆದಿಲ್ಲ. ಇಂಡೆಕ್ಸ್ ಕ್ಯಾಟಲಾಗ್ ೧೯೫೦ ರಿಂದ ಪ್ರಕಟವಾಗುತ್ತಿಲ್ಲ. ಆದರೆ ಇಂಡೆಕ್ಸ್ ಮೆಡಿಕಸ್ ಈಗಲೂ ಪ್ರಕಟವಾಗುತ್ತಿದೆ. ಅದರ ವ್ಯಾಪ್ತಿ ಮತ್ತು ಕಾರ್ಯ ಕ್ಷಮತೆಗಳು ೧೯೬೪ ರಿಂದ ಬಹುಪಟ್ಟು ದ್ವಿಗುಣಗೊಂಡಿವೆ. ಈಗ ಇಂಡೆಕ್ಸ್ ಮೆಡಿಕಸ್‌ನಲ್ಲಿ ೭೧ ದೇಶಗಳ ೪೧ ಭಾಷೆಗಳಲ್ಲಿನ ಸುಮಾರು ೨,೫೦೦ ನಿಯತಕಾಲಿಕಗಳು ಸೂಚೀಕರಿಸಲ್ಪಡುತ್ತಿವೆ. ಅದರ ಕಂಪ್ಯೂಟರ್ ನಿಯಂತ್ರಿತ ಮಾಹಿತಿ ಉಗ್ರಾಣದಲ್ಲಿ ಸುಮಾರು ೩,೨೦೦ ನಿಯತಕಾಲಿಕೆಗಳ ಸಂಚಿಕೆಗಳಿಗೆ ಸಮಗ್ರ ಸೂಚಿ ಲಭ್ಯವಿದೆ. ಈ ಮಾಹಿತಿ ಉಗ್ರಾಣದಲ್ಲಿ ಈಗ ೫ ದಶಲಕ್ಷಕ್ಕಿಂತ ಹೆಚ್ಚಿನ ಉಲ್ಲೇಖಗಳು ಸಂಗ್ರಹಿಸಲ್ಪಟ್ಟಿವೆ. ಪ್ರತಿ ವರುಷ ಇದಕ್ಕೆ ೨ ಲಕ್ಷ ಉಲ್ಲೇಖಗಳು ಸೇರ್ಪಡೆಯಾಗುತ್ತಿವೆ. ಇದಕ್ಕೆ ಸಮಾನಾಂತರವಾಗಿ ೧೯೪೭ ರಿಂದ ಎಕ್ಸರಪ್ಟಾ ಮೆಡಿಕಾ ಪ್ರತಿಷ್ಠಾನ (ಆಮ್‌ಸ್ಟರ್ ಡ್ಯಾಮ್)ವು ವೈದ್ಯಕೀಯ ಸಾಹಿತ್ಯ ಸೂಚಿ ನಿಯಂತ್ರಣದಲ್ಲಿ ಉಪಯುಕ್ತ ಕೆಲಸ ಮಾಡುತ್ತಿದೆ. ಸುಮಾರು ೩,೫೦೦ ನಿಯತಕಾಲಿಕೆಗಳ ಲೇಖನಗಳಿಗೆ ಸಂಕ್ಷೇಪಗಳನ್ನು ತಯಾರಿಸಿ, ೪೮ ವಿವಿಧ ವಿಷಯಗಳ ಪಟ್ಟಿಗಳನ್ನು ಪ್ರಕಟಿಸುತ್ತಿದೆ. ಪ್ರತಿ ವರುಷ ಸುಮಾರು ೨,೫೦,೦೦೦ ಸಂಕ್ಷೇಪಗಳು ಈ ಪಟ್ಟಿಯಲ್ಲಿ ದೊರೆಯುತ್ತವೆ. ಇತ್ತೀಚೆಗೆ ಇದೂ ಕಂಪ್ಯೂಟರೀಕರಣಗೊಂಡಿದ್ದು ಸಂಕ್ಷೇಪಗಳು ಹಲವಾರು ಮಾಧ್ಯಮಗಳಲ್ಲಿ ದೊರೆಯುತ್ತಿವೆ.

(ಇ) ಜೀವ ವಿಜ್ಞಾನ :

ಫಿಲಡೆಲ್ಫಿಯಾದಲ್ಲಿರುವ ಬಯೊಸಿಸ್ ಎಂಬ ಸಂಸ್ಥೆಯು ಜೈವಿಕ ವಿಜ್ಞಾನ ಮಾಹಿತಿ ನಿಯಂತ್ರಣದಲ್ಲಿ ೧೯೨೬ ರಿಂದ ಅದ್ಭುತ ಕೆಲಸ ಮಾಡುತ್ತಿದೆ. ಬಯಾಲಾಜಿಕಲ್ ಅಬ್‌ಸ್ಟ್ರಾಕ್ಟ್ ಎಂಬ ತನ್ನ ಪಾಕ್ಷಿಕದಲ್ಲಿ ೮,೯೦೦ಕ್ಕೂ ಹೆಚ್ಚಿನ ನಿಯತಕಾಲಿಕಗಳ (ಸುಮಾರು ೨೭,೦೦೦ ಸಂಚಿಕೆಗಳು) ಲೇಖನಗಳಿಗೆ ಸಂಕ್ಷೇಪಗಳನ್ನು ಪ್ರಕಟಿಸುತ್ತಿದೆ. ೧೦೭ ದೇಶಗಳಲ್ಲಿನ ೬,೩೦೦ ಪ್ರಕಾಶಕರ ೫೦ ಭಾಷೆಗಳಲ್ಲಿನ ನಿಯತಕಾಲಿಕಗಳು ಇದರ ವ್ಯಾಪ್ತಿಗೊಳಪಡುತ್ತದೆ. ಪ್ರತಿ ವರುಷ ಸುಮಾರು ೫,೩೨,೦೦೦ ಸಂಕ್ಷೇಪಗಳನ್ನು ಈ ಸಂಸ್ಥೆಯು ತಯಾರಿಸಿ ಪ್ರಕಟಿಸುತ್ತಿದೆ. ಇದರ ಬಯೊ ರಿಸರ್ಚ್ ಇಂಡೆಕ್ಸ್ ಎಂಬ ಸೂಚಿಯಲ್ಲಿ ಪ್ರತಿ ವರುಷ ಸುಮಾರು ೧,೨೦,೦೦೦ ಉಲ್ಲೇಖಗಳು ಸೇರ್ಪಡೆಯಾಗುತ್ತವೆ. ಇವು ಜೈವಿಕ ಸಂಶೋಧನಾ ಸೂಚಿಗಳಾಗಿದ್ದು ಬಯಲಾಜಿಕಲ್ ಅಬಿಸ್ಟ್ರಾಕ್ಟ್‌ನಲ್ಲಿ ಕಾಣಬರುವುದಿಲ್ಲ. ಇದು ಕೂಡಾ ಕಂಪ್ಯೂಟರೀಕರಣಗೊಂಡಿದ್ದು ಇದರ ಸೇವೆಗಳು ಮತ್ತು ಉತ್ಪಾದನೆಗಳು ಹಲವಾರು ಮಾಧ್ಯಮಗಳಲ್ಲಿ ಲಭ್ಯವಿದೆ.

(ಈ) ಕೃಷಿ ವಿಜ್ಞಾನ :

ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯ ಆಶ್ರಯದಲ್ಲಿ ವಿಯನ್ನಾದಲ್ಲಿ ಸ್ಥಾಪಿಸಲಾದ ಆಗ್ರಿಸ್ ಎಂಬ ಮಾಹಿತಿ ಸಂಸ್ಕರಣ, ಶೇಖರಣ ಮತ್ತು ವಿತರಣಾ ಕೇಂದ್ರವು ೧೯೭೦ ರಿಂದ ಕೆಲಸ ಮಾಡುತ್ತಿದೆ. ಪುಸ್ತಕ, ನಿಯತಕಾಲಿಕ, ಸಂಶೋಧನಾ ವರದಿ ಮೊದಲಾದ ಎಲ್ಲಾ ಮಾಧ್ಯಮಗಳಲ್ಲಿ ಪ್ರಕಟವಾಗುವ ಮಾಹಿತಿಯನ್ನು ಸಂಗ್ರಹಿಸಿ ಪ್ರತಿ ತಿಂಗಳು ಅಗ್ರಿಂಡೆಕ್ಸ್ (ಮುದ್ರಿತ ಸೂಚಿ) ಮತ್ತು ಅಗ್ರಿಸ್ ಮ್ಯಾಗ್ನೆಟಿಕ್ ಟೇಪ್ ಎಂಬ ಮಾಧ್ಯಮಗಳಲ್ಲಿ ಒದಗಿಸುತ್ತಿದೆ. ಕೃಷಿಗೆ ಸಂಬಂಧಿಸಿದ ೬೧೭ ವಿವಿಧ ಫಸಲು ಮತ್ತು ಸಾಮಾಗ್ರಿಗಳ ವರ್ಗೀಕೃತ ಮಾಹಿತಿ ಸೂಚಿಗಳು ಇವುಗಳಲ್ಲಿ ಅಡಕವಾಗಿರುತ್ತವೆ. ಈ ಯೋಜನೆಯಲ್ಲಿ ೧೧೭ ಸದಸ್ಯ ರಾಷ್ಟ್ರಗಳು ಮತ್ತು ಅಂತರ್‌ರಾಷ್ಟ್ರೀಯ ಸಂಘ–ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡಿವೆ. ಈ ಉಗ್ರಾಣದಲ್ಲಿ ಶೇಖರಣಗೊಂಡ ಮಾಹಿತಿ ಅಂಶಗಳ ಸಂಖ್ಯೆ ೧೩,೦೦,೦೦೦ವನ್ನು ದಾಟಿದೆ. ಇದಕ್ಕೆ ಪ್ರತಿ ವರುಷ ಸುಮಾರು ೧,೨೦,೦೦೦ರಷ್ಟು ಅಂಶಗಳು ಸೇರ್ಪಡೆಯಾಗುತ್ತಿವೆ.

(ಉ) ತಂತ್ರಜ್ಞಾನ ಮತ್ತು ಭೌತವಿಜ್ಞಾನ:

ಲಂಡನ್ನಿನಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಎಲೆಕ್ಟ್ರಿಕಲ್ ಎಂಜನಿಯರ್ಸ್ ಸಂಸ್ಥೆಯು ೧೮೯೮ ರಿಂದ ಭೌತವಿಜ್ಞಾನ ಮತ್ತು ಎಲೆಕ್ಟ್ರಿಕಲ್ ಎಂಜನಿಯರಿಂಗ್ ವಿಷಯದಲ್ಲಿ ಸಂಕ್ಷೇಪಗಳನ್ನು ಪ್ರಕಟಿಸುತ್ತಿದೆ. ಇತ್ತೀಚೆಗೆ ವಿದ್ಯುನ್ಮಾನ ಮತ್ತು

ಕಂಪ್ಯೂಟರ್ ತಂತ್ರಜ್ಞಾನಗಳಿಗೆ ವಿಸ್ತರಿಸಿದ ಇದು ಇನ್‌ಸ್ಪೆಕ್ (ಇನ್‌ಫಾರ್ಮೇಷನ್ ಫಾರ್ ದಿ ಫಿಸಿಕ್ಸ್ ಅ್ಯಂಡ್ ಎಂಜನಿಯರಿಂಗ್ ಕಮ್ಯೂನಿಟೀಸ್) ಎಂಬ ಹೆಸರು ಪಡೆದಿದೆ. ३,೦೦೦ ನಿಯತಕಾಲಿಕ, ೧,೦೦೦ ಪುಸ್ತಕ ಹಾಗೂ ಇತರ ಮಾಹಿತಿ ಮೂಲಗಳಿಗೆ ತಯಾರಿಸಲಾದ ಸಂಕ್ಷೇಪಗಳು ಈ ಸಂಸ್ಥೆಯ ನಿಯತಕಾಲಿಕಗಳಲ್ಲಿ ಪ್ರಕಟಗೊಳ್ಳುತ್ತದೆ. ಈ ಸಂಕ್ಷೇಪಗಳು ಅವು ತಯಾರಾದ ಹಾಗೆಯೆ ಸಂಸ್ಥೆಯ ಮಾಹಿತಿ ಉಗ್ರಾಣಕ್ಕೆ ಸೇರ್ಪಡೆಯಾಗುತ್ತವೆ. ಸುಮಾರು ೪೦,೦೦,೦೦೦ ಸಂಕ್ಷೇಪಗಳು ಈವರೆಗೆ ಇಲ್ಲಿ ಸಂಗ್ರಹವಾಗಿವೆ. ಪ್ರತಿ ವರುಷ ೨,೦೦,೦೦೦ ಕ್ಕಿಂತ ಹೆಚ್ಚಿನ ಸಂಕ್ಷೇಪಗಳು ಈ ಉಗ್ರಾಣವನ್ನು ಸೇರುತ್ತವೆ. ಇದು ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಂಡಿರುವುದರಿಂದ ಅನೇಕ ಬಗೆಯ ನವೀನ ಹಾಗೂ ಶೀಘ್ರ ಸೇವೆಗಳನ್ನು ನೀಡುತ್ತಿದೆ.

(ಊ) ರಸಾಯನ ವಿಜ್ಞಾನ :

೧೯೦೭ ರಿಂದ ಕೆಮಿಕಲ್ ಅಬೆಸ್ಟ್ರಾಕ್ಟ್ ಎಂಬ ಸಾಪ್ತಾಹಿಕ ನಿಯತಕಾಲಿಕವನ್ನು ಅಮೆರಿಕದ ರಸಾಯನಶಾಸ್ತ್ರ ಸಂಘದವರು ಪ್ರಕಟಿಸುತ್ತಾ ಬಂದಿದ್ದಾರೆ. ಇಡೀ ಜಗತ್ತಿನ ರಸಾಯನಶಾಸ್ತ್ರದ ಸಾಹಿತ್ಯಕ್ಕೆ ಕೆಮಿಕಲ್ ಅಬ್‌ಸ್ಟ್ರಾಕ್ಟ್ಸ್ ಒಂದು ಬೀಗದಕೈ ಇದ್ದ ಹಾಗೆ. ೧೨,೦೦೦ ಕ್ಕಿಂತ ಹೆಚ್ಚಿನ ಸಂಖ್ಯೆಯ ಇಯತಕಾಲಿಕ, ಪುಸ್ತಕ, ಸಂಶೋಧನಾ ವರದಿ, ಮುಂತಾದವುಗಳ ಸಂಕ್ಷಿಪ್ತ ರೂಪಗಳು ಈ ವಾರ ಪತ್ರಿಕೆಯಲ್ಲಿ ದಾಖಲಾಗುತ್ತವೆ. ಪ್ರತಿ ವಾರದ ಸಂಚಿಕೆಯಲ್ಲಿ ಸುಮಾರು ೯,೦೦೦ ಸಂಕ್ಷೇಪಗಳಿದ್ದು ಅವುಗಳ ವಾರ್ಷಿಕ ಮೊತ್ತವು ೫,೦೦,೦೦೦ದ ಸಮೀಪಕ್ಕೆ ಬರುತ್ತದೆ. ಅಂದರೆ, ಪ್ರತಿ ಎರಡು ವರ್ಷಕ್ಕೆ 'ಒಂದು ದಶಲಕ್ಷ ಸಂಕ್ಷೇಪಗಳು ಈ ಮಾಹಿತಿ ಉಗ್ರಾಣಕ್ಕೆ ಸೇರ್ಪಡೆಯಾಗುತ್ತಿವೆ. ಈಗ ಅಲ್ಲಿ ಸುಮಾರು ೧೬ ದಶಲಕ್ಷ ಸಂಕ್ಷೇಪಗಳಿವೆ. ಇದರ ಮಾಹಿತಿ ಉಗ್ರಾಣದಿಂದ ಸಿ ಎ ಕಂಡೆನ್ಸೇಟ್ಸ್, ಸಿ ಎ ಸಬ್ಜೆಕ್ಟ್ ಅಲರ್ಟ್, ಕೆಮಿಕಲ್–ಬಯಾಲಾಜಿಕಲ್ ಆ್ಯಕ್ಟಿವಿಟೀಸ್ ಮೊದಲಾದ ಮಾಹಿತಿ ಆಗರಗಳು ನಿಯತಕಾಲಿಕಗಳ ರೂಪದಲ್ಲಿ ಸಾಂಪ್ರದಾಯಿಕ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ದೊರಕುತ್ತವೆ.

(ಎ) ಇತರ ವಿಷಯಗಳು

ನಿಯತಕಾಲಿಕ ಸಾಹಿತ್ಯಕ್ಕೆ ಸೂಚಿಯನ್ನು ತಯಾರಿಸಿ ಆ ಸಾಹಿತ್ಯದ ಮಾಹಿತಿ ನಿಯಂತ್ರಣವನ್ನು ಸಾಧಿಸಲು ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಘ–ಸಂಸ್ಥೆಗಳು ಮಗ್ನವಾಗಿವೆ. ರಷ್ಯ, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ. ಅಲ್ಲಿನ ಸ್ಥಳೀಯ ಪ್ರಕಟಣೆಗಳ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಸೂಚೀಕರಣ ಮತ್ತು ಸಂಕ್ಷೇಪೀಕರಣದ ಕೆಲಸಗಳು ವ್ಯವಸ್ಥಿತವಾಗಿ

ಬಹಳ ಕಾಲದಿಂದ ನಡೆದುಕೊಂಡು ಬಂದಿವೆ. ಭಾರತದಲ್ಲೂ ಆ ಬಗೆಯ ಕೆಲಸವನ್ನು ಇನ್ಸ್‌ಡಾಕ್ ಸಂಸ್ಥೆಯು ಮಾಡುತ್ತಿದೆ. ಅದು ಇಂಡಿಯನ್ ಸೈನ್ಸ್ ಅಬ್‌ಸ್ಟ್ರಾಕ್ಟ್ಸ್ ಎಂಬ ಮಾಸಿಕದಲ್ಲಿ ಸಂಕ್ಷೇಪಗಳನ್ನು ಪ್ರಕಟಿಸುತ್ತಿದೆ. ಅದು ವೈಜ್ಞಾನಿಕ ನಿಯತಕಾಲಿಕಗಳ ಸಂಯುಕ್ತ ಸೂಚಿಗಳನ್ನು ತಯಾರಿಸಿ ಅರವತ್ತು ಮತ್ತು ಎಪ್ಪತ್ತರ ದಶಕಗಳಲ್ಲಿ ಪ್ರಕಟಿಸಿತ್ತು. ಇತ್ತೀಚೆಗೆ ಅವುಗಳ ಪರಿಷ್ಕರಣದ ಕೆಲಸವನ್ನು ಕೈಗೆತ್ತಿಕೊಂಡಿದೆ. ಇಂಥವೇ ಕಾರ್ಯವನ್ನು ರಾಷ್ಟ್ರೀಯ ಸಾಮಾಜಿಕ ಶಾಸ್ತ್ರಗಳ ಪ್ರಲೇಖನಾ ಕೇಂದ್ರವೂ ಮಾಡುತ್ತಿದೆ. ಅದು ತನ್ನ ವಿಷಯಗಳಿಗೆ ಸಂಬಂಧಿಸಿದ ನಿಯತಕಾಲಿಕಗಳ ಸಂಯುಕ್ತ ಸೂಚಿಗಳನ್ನು ತಯಾರಿಸಿದೆ. ಅಮೆರಿಕಾದ **'ನ್ಯಾಷನಲ್ ಯೂನಿಯನ್ ಕ್ಯಾಟಲಾಗ್'** ಮತ್ತು ಬ್ರಿಟನ್ನಿನ **'ಬ್ರಿಟಿಷ್ ಯೂನಿಯನ್ ಕ್ಯಾಟಲಾಗ್ ಆಫ್ ಪೀರಿಯಾಡಿಕಲ್ಸ್'** ಜಗದ್ವಿಖ್ಯಾತವಾಗಿವೆ. ಸಂಯುಕ್ತ ಸೂಚಿಗಳು ಗ್ರಂಥ ಮಾಹಿತಿ ನಿಯಂತ್ರಣದಲ್ಲಿ ಮತ್ತು ಅಂತರ್ ಗ್ರಂಥಾಲಯ ಎರವಲು ಕಾರ್ಯದಲ್ಲಿ ಅತ್ಯುಪಯುಕ್ತ ಪಾತ್ರವನ್ನು ವಹಿಸುತ್ತವೆ.

೮. ಜಗದ್ವ್ಯಾಪಿ ಗ್ರಂಥಸೂಚಿ ನಿಯಂತ್ರಣ

ಪ್ರಪಂಚದ ವಿವಿಧ ದೇಶಗಳಲ್ಲಿ ವಿವಿಧ ಭಾಷೆಗಳಲ್ಲಿ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾದ ಎಲ್ಲಾ ಗ್ರಂಥಗಳ ವಿವರಣಾಂಶಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿಗೆಯಾಗುವ ಮಾದರಿಯಲ್ಲಿ ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡುವ ಯೋಜನೆಗೆ ಗ್ರಂಥಸೂಚಿಗಳ ಜಗದ್ವ್ಯಾಪಿ ನಿಯಂತ್ರಣ ಎಂದು ಹೆಸರು. ಎಲ್ಲಾ ದೇಶಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಮತ್ತು ಗ್ರಂಥಮಾಹಿತಿ ವಿವರಣೆಯನ್ನು ಪ್ರಮಾಣೀಕರಿಸುವುದರಿಂದ ಇದನ್ನು ಸಾಧಿಸಬಹುದಾಗಿದೆ. ಆಗ ಇದು ಎಲ್ಲಾ ಕಾಲ, ದೇಶ, ಮತ್ತು ಭಾಷೆಗಳ ಎಲ್ಲೆಗಳನ್ನು ಮೀರಿದ, ಆದರೆ ಎಲ್ಲವನ್ನೂ ಒಳಗೊಂಡ ಗ್ರಂಥಸೂಚಿಯ ಏಕೈಕ ಉಗ್ರಾಣವಾಗುತ್ತದೆ (೬).

ವಿಶ್ವದ ಮೂಲೆ ಮೂಲೆಗಳಲ್ಲಿ ಪ್ರಕಟವಾಗುವ ಎಲ್ಲಾ ಗ್ರಂಥಗಳ ಮಾಹಿತಿಯನ್ನು ಕಲೆ ಹಾಕಿ, ಸಂಸ್ಕರಿಸಿ, ಸೂಚಿಯನ್ನು ತಯಾರಿಸಿ, ಹಲವಾರು ಸಂಪುಟಗಳಲ್ಲಿ ಪ್ರಕಟಿಸುತ್ತಾ ಹೋಗುವ ಅನೇಕ ಪ್ರಯತ್ನಗಳು ಬಹಳ ಹಿಂದೆಯೇ ನಡೆದವು. ಅವುಗಳ ಬೃಹತ್‌ಗಾತ್ರದ ಪರಿಣಾಮದಿಂದಾಗಿ ಅವು ಅನತಿ ಕಾಲದಲ್ಲಿಯೇ ಸಮಾಧಿಗೊಂಡವು. ಪರಿಶ್ರಮದ ಕೊರತೆ, ಬಂಡವಾಳದ ಮಿತಿ, ಸಂಪನ್ಮೂಲಗಳ ಅಭಾವ. ಭಾಷೆಗಳ ಪರಿಮಿತ ಜ್ಞಾನ, ಮೊದಲಾದವುಗಳ ದೆಸೆಯಿಂದಾಗಿ, ಈ ಯೋಜನೆಗಳು ಅಲ್ಪಾಯುಷಿಗಳಾದವು. ವಿವಿಧ ದೇಶ ಮತ್ತು ಭಾಷೆಗಳಲ್ಲಿ ಸದಾ ಹೆಚ್ಚುತ್ತಿರುವ ಪ್ರಕಟಿತ ಗ್ರಂಥಗಳ ಅಗಾಧ ಪ್ರಮಾಣಗಳೂ ಈ ಯೋಜನೆಗಳ ವೈಫಲ್ಯಕ್ಕೆ ಕಾರಣೀಭೂತವಾದವು.

ಜಗದ್ವ್ಯಾಪಿ ಗ್ರಂಥಸೂಚಿಯನ್ನು ತಯಾರಿಸುವ ಮೊದಲ ಪ್ರಯತ್ನ ನಡೆದದ್ದು ಜರ್ಮನಿಯಲ್ಲಿ. ಮುದ್ರಣ ಕಲೆಯನ್ನು ಜಗತ್ತಿಗೆ ನೀಡಿದ ಜರ್ಮನಿಯೇ ಇದನ್ನು ನೀಡಿದ್ದು ಸ್ಮರಣೀಯ ವಿಷಯ. ಜೂರಿಚ್‌ನ ಕಾನ್ರಾಡ್ ಗೆಸ್ನರ್ ಎಂಬ ಮಹತ್ವಾಕಾಂಕ್ಷಿ ವಿದ್ವಾಂಸನು ೧೫೪೫ರಲ್ಲಿ **ಬಿಬ್ಲಿಯೊಥೆಕಾ ಯೂನಿವರ್ಸಲಿಸ್** ಎಂಬ ಬೃಹತ್ ಗ್ರಂಥಸೂಚಿಯನ್ನು ಪ್ರಕಟಿಸಿದನು. ಲ್ಯಾಟಿನ್, ಗ್ರೀಕ್ ಮತ್ತು ಹೀಬ್ರೂ ಭಾಷೆಗಳಲ್ಲಿದ್ದ ಸುಮಾರು ೧೨,೦೦೦ ಪುಸ್ತಕಗಳು ಇದರಲ್ಲಿ ಪಟ್ಟಿ ಮಾಡಲ್ಪಟ್ಟಿವೆ. ಮೂರು ವರ್ಷಗಳನಂತರ ಅದಕ್ಕೆ ಪುರವಣಿಯಾಗಿ ೩,೦೦೦ ಪುಸ್ತಕಗಳ ಪಟ್ಟಿಯನ್ನೂ ಗೆಸ್ನರ್ ಪ್ರಕಟಿಸಿದನು. ಈ ಸೂಚಿಯಲ್ಲಿ ಅವನು ಅನುಸರಿಸಿದ ವರ್ಗೀಕರಣ ವಿಧಾನ, ಉಲ್ಲೇಖಗಳ ಜೋಡಣೆ, ಮಾಹಿತಿ ಅಡಕ ಪುಸ್ತಕ ಮತ್ತು ಲೇಖಕರ ಬಗ್ಗೆ ವಿವರಣೆ, ಇವೇ ಮೊದಲಾದವು ನೂರಾರು ವರ್ಷಗಳ ವರೆಗೆ ಇತರ ಸೂಚೀಕಾರರಿಗೆ ಮಾದರಿಯಾಗಿದ್ದವು ಇಂದಿಗೂ ಕಾನ್ರಾಡ್ ಗೆಸ್ನರ್‌ನನ್ನು ವ್ಯವಸ್ಥಿತ ಸೂಚೀಕರಣದ ಮಾರ್ಗದರ್ಶಿ ಎಂದೂ, ವಿಶ್ವವ್ಯಾಪಿ ಗ್ರಂಥಸೂಚಿಯ ಪಿತಾಮಹನೆಂದೂ ಗ್ರಂಥಪಾಲರು ಮತ್ತು ಸೂಚೀಕಾರರು ಸ್ಮರಿಸುತ್ತಾರೆ.

೧೫೪೫ರಿಂದ ೧೮೬೦ರ ವರೆಗಿನ ಅವಧಿಯಲ್ಲಿ ವಿಶ್ವವ್ಯಾಪಿ ಗ್ರಂಥಸೂಚಿ ರಚನೆಗೆ ಕೈಹಾಕಿದವರ ಸಂಖ್ಯೆ ಬೆರಳೆಣಿಕೆಗೆ ಸಿಗುವಂತಾದ್ದು. ಜರ್ಮನಿಯ ಗೊಟ್ಲಿಯಬ್ ಜಾರ್ಜ್ (೧೭೪೩-೫೮), ಫ್ರೆಡರಿಕ್ ಅಡಾಲ್ಫ್ ಎಬರ್ಟ್ (೧೮೨೧), ಲುಡ್ವಿಗ್ ಹೆಯಿನ್ (೧೮೨೬-೩೮) ಜೊಹಾನ್‌ಗ್ರ್ಯಾಸ್ಸೆ (೧೮೫೯-೬೯), ಮತ್ತು ಫ್ರಾನ್ಸಿನ ಜೇಕ್ಸ್ ಚಾರ್ಲ್ಸ್ ಬ್ರುನೆಟ್ (೧೮೬೦-೮೦) ಪ್ರಮುಖರು. ೧೯ನೆಯ ಶತಕದ ಅಂತ್ಯದಲ್ಲಿ ಜಗದ್ವ್ಯಾಪಿ ಗ್ರಂಥ ಸೂಚಿಯನ್ನು ತಯಾರಿಸುವ ದೊಡ್ಡ ಪ್ರಯತ್ನವೊಂದು ಬೆಲ್ಜಿಯಂ ದೇಶದ ಬ್ರಸ್ಸೆಲ್ಸ್‌ನಲ್ಲಿ ಪ್ರಾರಂಭವಾಯಿತು. ವ್ಯಕ್ತಿಗತ ಪ್ರಯತ್ನಗಳಲ್ಲಿ ಇದೇ ಕೊನೆಯದೂ, ಅತ್ಯಂತ ದೊಡ್ಡದೂ, ಅಂತರರಾಷ್ಟ್ರೀಯ ವ್ಯಾಪ್ತಿಯುಳ್ಳದ್ದೂ ಆಗಿದೆ. ಅನಂತರ ನಡೆದ ಪ್ರಯತ್ನಗಳೆಲ್ಲಾ ಸಾಂಸ್ಥಿಕ ಪ್ರಯತ್ನಗಳಾಗಿವೆ. ಬ್ರಸ್ಸೆಲ್ಸ್‌ನ ಪಾಲ್ ಅಟ್ಲೆಟ್ ಮತ್ತು ಹೆನ್ರಿಲಾ ಫೋಂಟೇನ್ ಎಂಬ ಇಬ್ಬರು ವಕೀಲರು ಗ್ರಂಥಸೂಚಿ ನಿಯಂತ್ರಣದಲ್ಲಿ ಆಸಕ್ತಿ ತಾಳಿ ಆ ಮಹಾಕಾರ್ಯವನ್ನು ನಿರ್ವಹಿಸಲು 'ಅಂತರ್‌ರಾಷ್ಟ್ರೀಯ ಗ್ರಂಥಸೂಚಿ ಸಂಸ್ಥೆ'ಯನ್ನು ಸ್ಥಾಪಿಸಿದರು. ಗ್ರಂಥಮಾಹಿತಿಗೇ ಮೀಸಲಾದ ನಿಯತಕಾಲಿಕವನ್ನು ಪ್ರಕಟಿಸುವದು, ಗ್ರಂಥ ಮಾಹಿತಿ ವಿನಿಮಯವನ್ನು ನಿರ್ವಹಿಸುವದು, ಲಭ್ಯವಿರುವ ಗ್ರಂಥಸೂಚಿಗಳ ಸಂಯುಕ್ತ ಸೂಚಿಯನ್ನು ಸಂಕಲಿಸುವದು, ವಿಚಾರಸಂಕಿರಣ ಮತ್ತು ಕಮ್ಮಟಗಳನ್ನು ಏರ್ಪಡಿಸುವದು ಈ ಸಂಸ್ಥೆಯ ಇತರ ಧ್ಯೇಯೋದ್ದೇಶಗಳಾಗಿದ್ದವು. ೧೮೯೫ರಿಂದ ೧೯೧೮ರ ವರೆಗೆ ಗ್ರಂಥಮಾಹಿತಿ ಸಂಗ್ರಹಣೆ ಕೆಲಸ ನಿರಾತಂಕವಾಗಿ ಸಾಗಿತು. ಲಭ್ಯವಾದ ಮಾಹಿತಿಯನ್ನು ಕಾರ್ಡುಗಳಲ್ಲಿ ಸಂಗ್ರಹಿಸಿ ವರ್ಗೀಕರಿಸಿ

ಜೋಡಿಸಲಾಯಿತು. ಹೀಗೆ ತಯಾರಿಸಿದ ಕಾರ್ಡುಗಳ ಸಂಖ್ಯೆ ಸುಮಾರು ೧,೪೦,೦೦,೦೦೦ ಎಂಬ ಅಂದಾಜಿದೆ. ಮೊದಲ ಮಹಾಯುದ್ಧದ ದೆಶೆಯಿಂದಾಗಿ ಈ ಸಂಸ್ಥೆ ಕಾರ್ಯಕಲಾಪಗಳು ಸ್ಥಗಿತಗೊಂಡವು. ಆದರೆ, ೧೯೩೪ರಲ್ಲಿ ಪುನಶ್ಚೇತನಗೊಂಡ ಇದಕ್ಕೆ 'ಅಂತರರಾಷ್ಟ್ರೀಯ ಪ್ರಲೇಖನಾ ಸಂಸ್ಥೆ' ಎಂಬ ಹೆಸರನ್ನಿಡಲಾಯಿತು. ಅನಂತರ ಇದು ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯತ್ವ ಪಡೆಯುತ್ತಾ ಬಂದಿದ್ದು ಅವೆಲ್ಲವುಗಳ ಮಾತೃಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ತನ್ನ ಮೂಲೋದ್ದೇಶವಾದ ಸಾರ್ವತ್ರಿಕ ಗ್ರಂಥಮಾಹಿತಿ ಸಂಗ್ರಹಣೆ ಮತ್ತು ಗ್ರಂಥಸೂಚಿ ಪ್ರಕಟಣೆಯನ್ನು ನಿಲ್ಲಿಸಿ ಕೇವಲ ಪ್ರಲೇಖನಾ ಸಂಸ್ಥೆಯಾಗಿ ಅಸ್ತಿತ್ವದಲ್ಲಿದೆ.

ಪ್ರಪಂಚದ ವಿವಿಧ ದೇಶ ಮತ್ತು ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿರುವ ಗ್ರಂಥಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಜೊತೆಗೆ ಗ್ರಂಥಮಾಹಿತಿ ನಿಯಂತ್ರಣ ಸಮಸ್ಯೆಗಳೂ ಜಟಿಲಗೊಳ್ಳುತ್ತಿರುವ ಇತ್ತೀಚಿನ ವರ್ಷಗಳಲ್ಲಿ ಯಾವುದೇ ಒಂದು ಸಂಘ ಅಥವಾ ಸಂಸ್ಥೆಯಿಂದ ಕೇಂದ್ರೀಕೃತ ಕೆಲಸ ಅಸಾಧ್ಯವಾಗಿ ಪರಿಣಮಿಸಿ, ಈ ಕೆಲಸವನ್ನು ವಿಕೇಂದ್ರೀಕರಿಸುವತ್ತ ಎಲ್ಲರ ಗಮನ ಹರಿಯತೊಡಗಿತು. ಏಕಸ್ವಾಮ್ಯಕ್ಕೆ ಬದಲಾಗಿ ಈ ಕೆಲಸವನ್ನು ಸಹಕಾರದ ಆಧಾರದಲ್ಲಿ ನಡೆಸುವುದು ಸೂಕ್ತವೆಂಬುದು ಇದಕ್ಕೆ ಇನ್ನೊಂದು ಪರಿಹಾರ. ಈ ದಿಸೆಯಲ್ಲಿ ಯುನೆಸ್ಕೊ ಚಿಂತನೆ ನಡೆಸಿ ಕಾರ್ಯಪ್ರವೃತ್ತವಾಗಿದೆ. ಸಾರ್ವತ್ರಿಕ ಗ್ರಂಥಮಾಹಿತಿ ನಿಯಂತ್ರಣದ ಪೊದಲ ಹೆಜ್ಜೆಯಾಗಿ ಅದರ ಅವಶ್ಯಕತೆಯನ್ನು ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಮನದಟ್ಟು ಮಾಡುವತ್ತ ಯುನೆಸ್ಕೊ ಗಮನ ಹರಿಸಿದೆ. ರಾಷ್ಟ್ರೀಯ ಗ್ರಂಥಾಲಯ ಮತ್ತು ಗ್ರಂಥಸೂಚಿ ನಿಗಮ ಅಧಿಕಾರಿಗಳ ಹಲವಾರು ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆ. ವಿಶ್ವವ್ಯಾಪ್ತಿ ಗ್ರಂಥಸೂಚಿ ನಿಯಂತ್ರಣವು ರಾಷ್ಟ್ರೀಯ ಗ್ರಂಥಾಲಯ ಮತ್ತು ಗ್ರಂಥಸೂಚಿ ನಿಗಮಗಳಿಂದ ಹೊಮ್ಮಿ ಬರಬೇಕೇ ಹೊರತು ಅಂತರರಾಷ್ಟ್ರೀಯ ಸಂಸ್ಥೆಯೊಂದರಿಂದ ಅಲ್ಲ ಎಂಬುದನ್ನು ಆ ಅಧಿಕಾರಿಗಳಿಗೆ ಮನದಟ್ಟು ಮಾಡುವಲ್ಲಿ ಯುನೆಸ್ಕೊ ಸಫಲವಾಗಿದೆ. ಅವರ ಸಮಾಜ ಶಾಸ್ತ್ರಗಳ ಅಂತರರಾಷ್ಟ್ರೀಯ ಪ್ರಲೇಖನ ಸಮಿತಿಯು ೧೯೫೧ರಿಂದ '**ಇಂಟರ್‌-ನ್ಯಾಷನಲ್ ಬಿಬ್ಲಿಯೊಗ್ರಫಿ ಆಫ್ ದಿ ಸೋಷಿಯಲ್ ಸೈನ್ಸಸ್**' ಎಂಬ ಸರಣಿಯಲ್ಲಿ ನಾಲ್ಕು ವಾರ್ಷಿಕ ಗ್ರಂಥಸೂಚಿಗಳನ್ನು ತಯಾರಿಸುತ್ತಿದೆ. ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮತ್ತು ಮಾನವಶಾಸ್ತ್ರಗಳಲ್ಲಿ ಈ ಕೆಲಸವು ಅತ್ಯಂತ ವ್ಯವಸ್ಥಿತವಾಗಿ ನಡೆದುಬರುತ್ತಿದೆ.

ಯುನೆಸ್ಕೊೀದ ಈ ಕಾರ್ಯಗಳಿಗೆ ಪೂರಕವಾಗಿ ಮತ್ತು ಅವುಗಳಿಗೆ ನಿರ್ದಿಷ್ಟ ರೂಪ ಮತ್ತು ಚಾಲನೆಯನ್ನು ನೀಡಿದ ಇಫ್ಲಾ (ಗ್ರಂಥಾಲಯಗಳ ಅಂತರರಾಷ್ಟ್ರೀಯ ಮಹಾಸಂಘವು) ಇಲ್ಲಿ ಉಲ್ಲೇಖನೀಯ. ೧೯೭೧ರಲ್ಲಿ ಇದು ವಿಶ್ವವ್ಯಾಪಿ ಗ್ರಂಥ

ಸೂಚಿ ನಿಯಂತ್ರಣ ಯೋಜನೆಯನ್ನು ತನ್ನ ಅಸ್ತಿತ್ವದ ಮುಖ್ಯ ಧ್ಯೇಯವನ್ನಾಗಿ ಅಳವಡಿಸಿಕೊಂಡಿತು. ಈ ಯೋಜನೆಗೆ ಅತ್ಯಾವಶ್ಯಕವಾದ ಭೂಮಿಕೆಯನ್ನು ರಚಿಸುವ ಕೆಲಸ ಮಾಡಿತು. ಗ್ರಂಥಸೂಚಿಯು ಹೊಂದಿರಲೇಬೇಕಾದ ಅತ್ಯಾವಶ್ಯಕ ಮಾಹಿತಿಗಳ ಪರಿವಿಡಿ, ಭೌತಿಕ ರೂಪ, ಅನುಸಂಸಬೇಕಾದ ವಿಧಾನ ಇತ್ಯಾದಿಗಳ ಅಂತರ್ರಾಷ್ಟ್ರೀಯ ಪ್ರಮಾಣೀಕೃತ ಗ್ರಂಥಮಾಹಿತಿ ವಿವರಣೆ (ಐ ಎಸ್ ಬಿ ಡಿ) ಯ ಹಲವಾರು ಅವತರಣಿಕೆಗಳನ್ನು ಪ್ರಕಟಿಸಿ, ರಾಷ್ಟ್ರೀಯ ಹಾಗೂ ವಿಷಯ ಗ್ರಂಥಸೂಚಿಗಳನ್ನು ರಚಿಸುವವರೆಲ್ಲಾ ಈ ಪ್ರಮಾಣೀಕೃತ ಗ್ರಂಥಮಾಹಿತಿ ವಿವರಣೆ ಯನ್ನು ಅನುಸರಿಸಲೇಬೇಕೆಂದು ಒತ್ತಾಯಿಸಿದೆ. ಎಲ್ಲಾ ದೇಶಗಳಲ್ಲಿ ಇವುಗಳನ್ನು ಅನುಸರಿಸಿದರೆ ಗ್ರಂಥಮಾಹಿತಿಯನ್ನು ದೇಶ, ಭಾಷೆ, ಮತ್ತು ಗ್ರಂಥಮಾಧ್ಯಮಗಳ ಎಲ್ಲೆಗಳನ್ನು ಮೀರಿ ಅವುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಬಹುದು. ಇಷ್ಟಲ್ಲದ ಇನ್ನೊಂದು ಬೃಹತ್ ಯೋಜನೆಯಾದ 'ಸಾರ್ವತ್ರಿಕ ಪುಸ್ತಕ ಲಭ್ಯತೆ'ಗೆ ಇದು ಪರಿಣಾಮಕಾರಿಯಾದ ಸಾಧನವಾಗಬಲ್ಲದು. ಎಲ್ಲಾ ರಾಷ್ಟ್ರೀಯ ಗ್ರಂಥಾಲಯಗಳು ಮತ್ತು ಗ್ರಂಥಸೂಚಿ ನಿಗಮಗಳು ತಮ್ಮ ತಮ್ಮ ದೇಶಗಳಲ್ಲಿ ಪ್ರಕಟಗೊಳ್ಳುವ ಪುಸ್ತಕಗಳಿಗೆ ಮತ್ತು ಎಲ್ಲಾ ವಿಷಯ ಸಂಘ ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಸಾಹಿತ್ಯಕ್ಕೆ ಸೂಚಿಗಳನ್ನು ತಯಾರಿಸುವುದೇ ಸಾರ್ವತ್ರಿಕ ಗ್ರಂಥಮಾಹಿತಿ ನಿಯಂತ್ರಣವನ್ನು ಸಾಧಿಸುವ ಮಾರ್ಗ.

ಆಧಾರ ಗ್ರಂಥಗಳು :

೧. ಪ್ರಭುಶಂಕರ, 'ಮುನ್ನುಡಿ' **ಕನ್ನಡ ಗ್ರಂಥಸೂಚಿ,** ಮೈಸೂರು, ಪ್ರಸಾರಾಂಗ, ಮೈ.ವಿ.ವಿ , ೧೯೭೧ ಸಂ , ಪು. ೯.

೨. ಅಸುಂಡಿ, ಅಶೋಕ್ ಯು. **ಕನ್ನಡದಲ್ಲಿ ಸಂದರ್ಭ ಗ್ರಂಥಗಳು,** ಬೆಂಗಳೂರು : ಎನ್ ಎ ಪ್ರಕಾಶನ, ೧೯೯೨.

೩. ಕಾಟ್ಜ್, ವಿಲಿಯಂ ಎ. **ಇಂಟ್ರೊಡಕ್ಷನ್ ಟು ರೆಫರೆನ್ಸ್ ವರ್ಕ್,** ನ್ಯೂಯಾರ್ಕ್, ಮೆಗ್ರಾಹಿಲ್, ೧೯೬೯, ಸಂ. ೨, ಪು. ೩೫.

೪. ಬೆಸ್ಟರ್‌ಮನ್, ಥಿಯೊಡೊರ್, **ಎ ವರ್ಲ್ಡ್ ಬಿಬ್ಲಿಯೊಗ್ರಫಿ ಆಫ್ ಬಿಬ್ಲಿಯೋಗ್ರಫೀಸ್,** ೪ನೇ ಪರಿಷ್ಕರಣ, ಜಿನಿವಾ : ಸೊಜೈಟಾಸ್ ಬಿಬ್ಲಿಯೊಗ್ರಾಫಿಕಾ, ೧೯೬೫-೬೬. ಸಂ ೫

೫. ನಾಗಪ್ಪ, ಬಿ. **ಕನ್ನಡ ಪುಸ್ತಕಗಳ ಮಾಹಿತಿ ನಿಯಂತ್ರಣ** (ಮೈಸೂರು ನಗರ ಕೇಂದ್ರ ಗ್ರಂಥಾಲಯ ಅಮೃತೋತ್ಸವ ವಿಚಾರ ಸಂಕಿರಣದಲ್ಲಿ ದಿ. ೨೩-೧೨-೯೦ ರಂದು ಮಂಡಿಸಿದ ಪ್ರಬಂಧ).

೬. ನಾಗಪ್ಪ, ಬಿ. ಮತ್ತು ನಳಿನಿ ಕೆ. ಆರ್. 'ಸಾರ್ವತ್ರಿಕ ಗ್ರಂಥಮಾಹಿತಿ ನಿಯಂತ್ರಣ' **ಗ್ರಂಥಲೋಕ,** ಸಂ. ೧೪(೯), ಸೆಪ್ಟೆಂಬರ್ ೧೯೯೦, ಪು. ೧-೬.

ಜಿ. ಎನ್. ಕುಂದರಗಿ

ಗೋಕಾಕರ ಸಾಹಿತ್ಯದಲ್ಲಿ ತತ್ತ್ವಜ್ಞಾನ

[ಕುಂದರಗಿಯವರ ದೃಷ್ಟಿಯಲ್ಲಿ ಜೀವನ ಜಿಜ್ಞಾಸೆಯು ತತ್ತ್ವಜ್ಞಾನದ ಬಹು ಮುಖ್ಯ ಅಂಶವು. ಅದರ ಕೇಂದ್ರ ಬಿಂದು 'ವ್ಯಕ್ತಿ'. ವ್ಯಕ್ತಿ-ಸಮಷ್ಟಿಗಳ ಸಮನ್ವಯ ವನ್ನು ಸಾಧಿಸುವ ಕವಿ ದಾರ್ಶನಿಕ ಗೋಕಾಕರ ಸಾಹಿತ್ಯ ಕೃತಿಗಳಲ್ಲಿ ಆಂತರಿಕ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಗಳ ಸಮನ್ವಯವಿದೆ. ಜೀವನದ ಪೂರ್ಣಯೋಗ ದರ್ಶನವನ್ನು ಮಾಡಿಸುವುದೇ ಅವರ ಸಾಹಿತ್ಯದ ಗುರಿ—ಸಂ.]

ಜೀವನ ಜಿಜ್ಞಾಸೆಯು ತತ್ತ್ವಜ್ಞಾನದ ಬಹು ಮುಖ್ಯ ಅಂಶವಾಗಿದೆ. ಶ್ರೀ ಗೋಕಾಕರ ಸಾಹಿತ್ಯ ಕೃತಿಗಳಿಗೆ ಜೀವನ ಜಿಜ್ಞಾಸೆಯೇ ಸ್ಥಾಯಿಭಾವ. ಅವರ ಎಲ್ಲ ಕಾವ್ಯಗಳಿಗೆ ಅದೇ ಮುಖ್ಯ ವಿಷಯ.

ಜೀವನ ಜಿಜ್ಞಾಸೆಗೆ ಕೇಂದ್ರ ಬಿಂದು 'ವ್ಯಕ್ತಿ'. ವ್ಯಕ್ತಿ ಸಮುದಾಯವೇ ಮಾನವ ಸಮಷ್ಟಿ. ವ್ಯಕ್ತಿ ವಿಕಾಸ ಮತ್ತು ಮಾನವ ಸಮಷ್ಟಿಯ ವಿಕಾಸಗಳನ್ನು ಚಿಂತಿಸುವುದೇ ಜೀವನ ಜಿಜ್ಞಾಸೆ. ವ್ಯಕ್ತಿ ಮತ್ತು ಮಾನವ ಸಮಷ್ಟಿಗಳ ವಿಕಾಸವನ್ನು ಸಮತೂಕದಿಂದ ತೂಗಿಸುವ ಜೀವನದ ಉಯ್ಯಾಲೆಯೇ ಸರಸ ಜೀವನ, ಸಾರ್ಥಕ ಜೀವನ. ಒಂದರ ಭಾರವು ಹೆಚ್ಚಾಗಿ, ಇನ್ನೊಂದು ತತ್ತರಿಸಿದಂತಾಗುವುದೇ ವಿರಸ ಜೀವನ. ಆದುದರಿಂದ ಜೀವನ ಜಿಜ್ಞಾಸೆಯನ್ನು ಕೈಕೊಂಡ ಕವಿ ದಾರ್ಶನಿಕ. ಮಾನವ ಸಮಷ್ಟಿಯ ಹಿತಕ್ಕನುಗುಣವಾದ ವ್ಯಕ್ತಿಚಿತ್ರಗಳನ್ನೂ, ವ್ಯಕ್ತಿ—ವಿಕಾಸವನ್ನು ಹತ್ತಿಕ್ಕದ ಮಾನವ ಸಮಷ್ಟಿಯ ಚಿತ್ರವನ್ನೂ ನಿರೂಪಿಸುವದು ಅಗತ್ಯ. ಈ ನಿರೂಪಣೆ ಯನ್ನು ಗೋಕಾಕರ ಕೃತಿಗಳಲ್ಲಿ ವಿಪುಲವಾಗಿ ಕಾಣುತ್ತೇವೆ. 'ತನ್ನ ಯುಗದ ಜೀವನದ ಹಿರಿಮೆಯನ್ನು ರೂಪಿಸುವ ವ್ಯಕ್ತಿಗಳನ್ನು ನಿರ್ಮಿಸಿ ಆ ವ್ಯಕ್ತಿಗಳ ವ್ಯಕ್ತಿತ್ವ ವನ್ನು ಸ್ಮರಣೀಯವಾಗುವಂತೆ ಚಿತ್ರಿಸಿ ಪೋಷಿಸುವುದು ಮಹಾಕಾವ್ಯವು ಸಾಧಿಸ ಬೇಕಾದ ಒಂದು ಕಾರ್ಯ'[1] ಎಂದು ಅವರೇ ಒಂಪೆಡೆಗೆ ಹೇಳಿದ್ದಾರೆ.

---

1 ಸಂ: ನಾಯಕ, ಹಾ. ಮಾ., ಸಿಂಧುವಳ್ಳಿ ಅನಂತಮೂರ್ತಿ, ವಿನಾಯಕ ವಾಙ್ಮಯ ಪು. ೨೮೭.

II

ಕ್ರಿ.ಶ. 1938ರ ಮೊದಲು ವಿನಾಯಕರು ಆತ್ಮವಿಕಸನವನ್ನೇ ದೃಷ್ಟಿಯಲ್ಲಿಟ್ಟು ಕೊಂಡು ಕಾವ್ಯರಚಿಸಿದರು. ಅವರ ಕಲೋಪಾಸಕ[1] ಕವನ ಸಂಗ್ರಹದಲ್ಲಿ ವಿಶ್ವಾನುಭವ ವನ್ನೆಲ್ಲ ಆತ್ಮ ಮುಕ್ತಿಗಾಗಿ ಬಳಸಿಕೊಳ್ಳುವ ಸಾಧನೆಯೇ ಮುಖ್ಯವಾಗಿರುವ ಜೀವನ ದೃಷಿಯಿದೆ. ಸೌಂದರ್ಯೋಪಾಸನೆಯು ಆತ್ಮೋದ್ಧಾರದ ಅನಿವಾರ್ಯ ಸಾಧನೆ ಯೆಂಬ ಅರಿವನ್ನು ಗೋಕಾಕರು ಸ್ವಪ್ನದಲ್ಲಿ ಪಡೆದರು. ಅದನ್ನೆಲ್ಲ ಅವರು ಕಲೋಪಾಸಕದಲ್ಲಿ ಚಿತ್ರಿಸಿದ್ದಾರೆ.

"Imagination is the body of thought
Be it for thee to find its harness out."

"ಆದ್ಯಭಾವನೆಯು ವಾಹನವೇ ಕಲ್ಪನಾಶಕ್ತಿ; ಈ ಕಲ್ಪನಾಶಕ್ತಿಯೆಂಬ ಕುದುರೆ ಯನ್ನೇರಲೆಂದು ಪಲ್ಲಣವನ್ನು ಶಬ್ದ ಸಾಮಗ್ರಿಯನ್ನು ದೊರಕಿಸು"[2] ಎಂಬ ಸಂದೇಶ ಅವರಿಗೆ ಕೇಳಿದೆ.

ಈ ಸಂದೇಶದ ಅರ್ಥವನ್ನು ಅವರೇ ಹೀಗೆ ಕೊಟ್ಟಿದ್ದಾರೆ: "ಕಲ್ಪನೆಯು ಕಾಮನಬಿಲ್ಲು ಸವೆದಾಗ ಮಾತ್ರ ಸತ್ಯ ಪ್ರಕಾಶವು ದೊರೆಕೀತು; ಕಲ್ಪನೆಯನ್ನು ಸವೆಸುವದೆಂದರೆ ಅದನ್ನು ಕಲೋಪಾಸನೆಯಲ್ಲಿ ಯೋಜಿಸಲೇಬೇಕು. ಹೀಗಾಗಿ ಕಲೋಪಾಸಕನ ಜೀವನಸಕ್ಕೂ ಆಂತರಿಕ ಪ್ರಗತಿಯಲ್ಲಿ ಒಂದು ಸ್ಥಾನವಿದೆ."[3]

ಕಲೋಪಾಸನೆಯು ದ್ವಾರ ಜೀವನಾನುಭವ ಪ್ರಕಾಶನ 'ಶುದ್ಧಕಲೆ;' ಇದು ರಸಯೋಗ ಅಥವಾ ಸೌಂದರ್ಯಯೋಗ.

ಸೌಂದರ್ಯಾನುಭವವೆಂದರೆ ಪ್ರಕೃತಿ-ಪ್ರಪಂಚದ ಇಲ್ಲವೇ ಮಾನವ ಲೋಕದ ಕಣ್ಣಿಗೆ ಕಾಣುವ ಅಂದಚೆಂದ-ಎಂಬ ಸಂಕುಚಿತ ದೃಷ್ಟಿಯಲ್ಲ. "ಚೆಲುವು ಅನಂತ ವಾಗಿದೆ. ಅವುಗಳನ್ನು ಕಣ್ಣಿಟ್ಟು ನೋಡುವ ನೋಟಗಳಿಗೂ ಲೆಕ್ಕವಿಲ್ಲ"....ಪ್ರತಿ ಜೀವಿಯು ಪ್ರಜ್ಞೆಯಾಗಿ ವೈವಿಧ್ಯಮಯವಾದ ಸೃಷ್ಟಿಯ ವಸ್ತುಗಳಲ್ಲಿ ಸಾಮರಸ್ಯವನ್ನು ಕಂಡುಕೊಂಡು ಅದನ್ನು ಅನುಭವಿಸಿದಾಗ ಆ ಜೀವಿಯ "ಅಂತರಂಗದ ಕದವು ತೆರೆಯು ವುದು. ಆಗ ಚೆಲುವು ಸಂಚರಿಸುವ ನಾಲ್ಕು ಲೋಕಗಳಲ್ಲಿಯೂ ಚೆಲುವಿಗಾಗಿ ಶೋಧವು ನಡೆಯುವುದು. ಪ್ರೀತಿ, ಸ್ನೇಹ, ಪ್ರಕೃತಿ-ಪ್ರೇಮ, ಧ್ಯಾನ-ಇವೆಲ್ಲ ಚೆಲುವನ್ನು ಪಡೆಯುವ ಸಾಧನಗಳೂ ಅಹುದು, ಕ್ಷೇತ್ರಗಳೂ ಅಹುದು."[4]

---

1 ವಿ. ಕೃ. ಗೋಕಾಕ: ಕಲೋಪಾಸಕ (ಕವನ ಸಂಗ್ರಹ) ಸಾಹಿತ್ಯ ಪ್ರಕಟನ ಮಂದಿರ, ಧಾರವಾಡ 1934 ಪು. 126.

2 ಸಂ: ನಾಯಕ ಮತ್ತು ಮೂರ್ತಿ: ವಿನಾಯಕ ವಾಙ್ಮಯ ಪು. 223-4

3 ಕಲೋಪಾಸಕದ ಮುನ್ನುಡಿಯಿಂದ

4 ಚೆಲುವಿನ ನಿಲುವು, ಮೊದಲು ಮೊತು ಪು. 3

"ಜೀವಿಗೆ ರಸಾನುಭವವನ್ನು ಪಡೆಯಲು ನೂರಾರು ಹಾದಿಗಳಿವೆ. ಅದನ್ನು ದೊರಕಿಸಿಕೊಡಲು ನೂರಾರು ತರದ ವಸ್ತುಗಳಿವೆ. ಜಾಗ್ರತ, ಸ್ವಪ್ನ, ಸುಷುಪ್ತಿ, ಸಮಾಧಿ - ಇವು ಅವನ ಅನುಭವ ಲೋಕಗಳು. ಈ ಲೋಕಗಳಲ್ಲಿರುವಂಥವೆಲ್ಲ ಅವನ ಅನುಭವದ ವಸ್ತುಗಳು. ಆಯಾಲೋಕದ ವಸ್ತುಗಳಲ್ಲಿ ರಸಾನುಭವವನ್ನು ಪಡೆಯಲು ಅವನಿಗೆ ಅಂಥ ದೃಷ್ಟಿ ಬೇಕು....ಒಂದೊಂದು ತರಹದ ದೃಷ್ಟಿಯು ಒಂದೊಂದು ತರಹದ ವಸ್ತುವನ್ನ ದೃಷ್ಟಿಸುವುದು. ವಸ್ತು-ದೃಷ್ಟಿಗಳ ಸಾಮರಸ್ಯ ದಲ್ಲಿಯೇ ಈ ರಸದ ಜನನವಿದೆ. ರಸಾನುಭವದಲ್ಲಿಯೇ ಆನಂದದ ಸ್ಥಾನ ವಿದೆ...."[1]

ಜೀವನದಲ್ಲಿ ಅತೃಪ್ತವಾದ ಗಂಗಾಪ್ರಸಾದನೆಂಬ ಭಾವುಕ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ನೆನೆದು ಲೇಖಕರು ಹೀಗೆ ವ್ಯಾಖ್ಯಾನ ನೀಯುತ್ತಾರೆ: "ಆತ್ಮಹತ್ಯೆಗೆ ಅವರು ಮಾಡಿದ ಪ್ರಯತ್ನಗಳಾದರೊ ಜೀವನದಲ್ಲಿ ಸಾಮರಸ್ಯವಿರದ ಮೂಲಕ ಬಂದ ಅಸಮಾಧಾನದ ಕ್ರೂರಲೀಲೆಯೆಂದೇ ನಾನು ಭಾವಿಸುತ್ತೇನೆ. ಅವನ ಜೀವನ ದೃಷ್ಟಿಯಲ್ಲಿಯೇ ಒಂದು ದೋಷವಿದ್ದಿರಬೇಕು."[2]

ಚೆಲವು ಮತ್ತು ಸೌಂದರ್ಯ ತತ್ತ್ವಗಳನ್ನು ಗಾಢವಾಗಿ ಚಿಂತಿಸಿದ ಕವಿಗಳಲ್ಲಿ ವಿನಾಯಕರು ಪ್ರಮುಖರು. ಕಾವ್ಯಾನಂದದ ಮೂಲ ಸೌಂದರ್ಯ ಪಯಣ[3] ಸಂಕಲನದ ''ಚೆಲವು', ಚೆಲುವಿಕೆಗೆ', 'ಸೂರ್ಯಚಂದ್ರ,' 'ನಾನೊಂದು ನವಿಲ ಕಂಡೆ,' ಈ ಕವನಗಳು ಸೌಂದರ್ಯದರ್ಶನದ ಹೊಳವುಗಳೇ ಆಗಿವೆ.

ಸೌಂದರ್ಯ, ಗೆಳೆತನ ಇವುಗಳ ಆಳವಾದ ಅನುಭವವೇ ತ್ರಿವಿಕ್ರಮರ ಆಕಾಶ ಗಂಗೆ[4]ಯು ಪ್ರೇರಣೆಯಾಗಿದೆ. ಆತ್ಮ ಶೋಧನೆಯೇ ಆಲೋಚನೆಯ ಅಂತರಂಗವೆಂದು 'ತ್ರಿವಿಕ್ರಮದ' ಮುಖಾಂತರ ಗೋಕಾಕರು ಹೇಳುತ್ತಾರೆ.

ವಿನಾಯಕರು ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಣಯದ ಸೊಬಗನ್ನು ಕಂಡಿದ್ದಾರೆ. ಅದರ ಹಿಂದಿರುವ ಸೌಂದರ್ಯ ತತ್ತ್ವವನ್ನು ಗ್ರಹಿಸಿದ್ದಾರೆ. ವಿವೇಕದ ರಕ್ಷಣೆಯೂ ಅವರಿಗಿದೆ.

'ಸ್ತ್ರೀರೂಪ' ಎಂಬ ಭಾಗ ಆಕಾಶಗಂಗೆಯಲ್ಲಿದೆ. ದೀಪಾವಳಿಯ ರಿಂಗಣ ಗುಣಿತದ ಕನ್ನೆಯರಲ್ಲಿ ಒಬ್ಬಳು ಕವಿಯ ಮನಸ್ಸನ್ನು ಆಕರ್ಷಿಸುತ್ತಾಳೆ. ಅವರ ನೆನಹಿನಲ್ಲಿ ಚಿರಂತನ ಸೌಂದರ್ಯದ ಪ್ರತಿಮೆಯೊಂದನ್ನು ಸ್ಥಾಪಿಸುತ್ತಾಳೆ. ಮುಂದೆ ಆಕೆಯು ಲಗ್ನವಾಯಿತ್ತು. ಕವಿಯ ಲಗ್ನವಾಯಿತು. ಇಲ್ಲಿಗೇ ಆ ಸಂದರ್ಭ ಮುಕ್ತಾಯ ವಾಗುತ್ತದೆ.

1 ಅದೇ. ಪು. 14–15, –19
2 ಅದೇ. ಪು 20–22
3 ವಿ. ಕೃ. ಗೋಕಾಕ–ಪಯಣ 1937
4 ವಿ. ಕೃ. ಗೋಕಾಕ: ತ್ರಿವಿಕ್ರಮರ ಆಕಾಶಗಂಗೆ (ಸಾಧನ ಮುದ್ರಣಾಲಯ, ಧಾರವಾಡ 1945 ಪು. iv+118)

ಕಾಮವು ಮಾನವನ ಎದೆಯಲ್ಲಿ ಅಡಗಿದ ಶತ್ರು. ಮನುಷ್ಯ ಈ ಶತ್ರುವನ್ನು ಗೆಲ್ಲಲೇಬೇಕು. ದ್ಯಾವಾಪೃಥಿವಿ[1]ಯ ಇಕ್ಷ್ವು ಶಚೀದೇವಿಯ ರುಚಿರ, ಶುಚಿ, ಮಧುರ ರೂಪ ನೋಡಿ 'ನಾ ಪುರುಷ, ನೀನೆ ಶಕ್ತಿ ಓ ಚೆಲುವೆಯೆ' ಎಂದು ಕುಣಿದಾಡುತ್ತಾನೆ. ಮುಂದೆ ತನ್ನ ದುರಂತದ ಅರಿವಾಗುತ್ತದೆ. ಪಶ್ಚಾತ್ತಾಪದಗ್ಧವಾಗಿ ಇಂದ್ರನಿಗೆ ಶರಣು ಹೋಗುತ್ತಾನೆ.[2]

ಭಾರತಸಿಂಧು ರಶ್ಮಿ[3]ಯಲ್ಲಿ ಬರುವ ವಿಶ್ವರಥ ವಿಶ್ವಾಮಿತ್ರನಾಗುವ ಪೂರ್ವದಲ್ಲಿ ಧ್ಯಾನದಲ್ಲಿ ನಗ್ನಸುಂದರಿಯೊರ್ವಳ ದರ್ಶನದಿಂದ ವಿಚಲಿತನಾಗುತ್ತಾನೆ. ಅವನ ಕಾಮಮೋಹವನ್ನು ನಿವಾರಿಸಲು ಇಂದ್ರ ಮೇನಕೆಯನ್ನು ಕಳಿಸುತ್ತಾನೆ. ಈ ವಿಘ್ನದ ಆಳವನ್ನು ಕಂಡು ಬಿಡೋಣವೆಂದು ವಿಶ್ವರಥ ಅವಳನ್ನು ಸ್ವೀಕರಿಸುತ್ತಾನೆ. ಪ್ರೇಮದ ವಿವಿಧ ಮುಖಗಳನ್ನು ವಿವರಿಸುತ್ತ 'ಸತಿಯು ಪ್ರಿಯತಮ ಭಾವ ಅವಳ ತಾಯ್ತನದಲ್ಲಿ ಗಂಡುಗೆ ತಾಯಾಗಬಲ್ಲ ಹೆಂಡತಿ ದೇವಿ' ಎನ್ನುತ್ತಾನೆ. ಅಪ್ಸರೆ ನಾಗಕನ್ನಿಕೆಯಾಗಿ ತೆರಳುತ್ತಾಳೆ. ವಿಶ್ವರಥ ಗಾಯತ್ರೀ ಮಂತ್ರದ ದ್ರಷ್ಟಾರನಾಗುತ್ತಾನೆ. ವಿಶ್ವಾಮಿತ್ರನಾಗುತ್ತಾನೆ.

ಪ್ರತಿಯೊಬ್ಬರ ಜೀವಮಾನದಲ್ಲಿ ಮೈತ್ರಿಯ ಪಾಲೂ ಸಹಗಮನಾರ್ಹವಾದದು. ವಿನಾಯಕರು ಕಾಲೇಜಿನ ವ್ಯಾಸಂಗಕಾಲದಲ್ಲಿ ತಮ್ಮ ಸ್ನೇಹ ಹೇಗೆ ಹಿರಿಮೆಯನ್ನು ಸಾಧಿಸಿತೆಂಬುದನ್ನು ಅಂದವಾಗಿ ಪ್ರಸ್ತಾಪಿಸಿದ್ದಾರೆ.

"ಹೊಸ ಹುಟ್ಟಿಗಿಂತು ಗುರುವಾದ ನನ್ನಯ ಗೆಳೆಯ
ಹೊಸ ಬಾಳ ಬೆಳಕ ನೀಡಿದನೆನ್ನ ಕಂಗಳಿಗೆ
* * * *
ಸೌಂದರ್ಯಯೋಗದಲ್ಲಿ ನಾನು ಮುಂದಡಿಯಿಡಲು
ಪ್ರೇಮಯೋಗದ ಪಥದೊಳವನು ಮುಂಬರಿಯುವನು
ಭಿನ್ನವಿರುವವೆ ಹೇಳು ಸೌಂದರ್ಯ ಪ್ರೇಮಗಳು ?"[4]

ಬದುಕಿನ ಪರಮ ಮೌಲ್ಯಗಳಲ್ಲಿ ಈ ಸಖ್ಯಯೋಗವೂ ಒಂದು ಎಂದು ಕವಿಯ ಶ್ರದ್ಧೆ. ಅದು ದ್ವೈತ ಅದ್ವೈತವಾಗುವ ಅಧ್ಯಾತ್ಮ ಮೌಲ್ಯವುಳ್ಳದ್ದು. ಬಾಳಿನ ಭಾಗ್ಯ, ಬುವಿಯ ಸಿಂಗಾರ.

---

1. ವಿನಾಯಕ: ದ್ಯಾವಾ ಪೃಥವಿ (ಪರಾಗ ಪ್ರಕಾಶನ-ಧಾರವಾಡ) 1957.

2 ಡಾ. ಜಿ. ಎನ್ ಕುಂಪರಗಿ: "ದ್ಯಾವಾ ಪೃಥವೀ"–೧ ಆವಿಷ್ಕರಣ ಪು. 239-49

3 ವಿ. ಕೃ. ಗೋಕಾಕ: ಭಾರತ ಸಿಂಧು ರಶ್ಮಿ ಜ್ಞಾನಪೀಠ ಪ್ರಶಸ್ತಿ ಗ್ರಂಥ

4 ತ್ರಿವಿಕ್ರಮರ ಆಕಾಶಗಂಗೆ ಪು. 80–81

ಬಾಳುವೆಯೆಂದರೆ ಒಂದು ಪ್ರಯೋಗ. ಗೆಳೆಯರೆಂದರೆ ಸಪ್ರಯೋಗಿಕವಾಗಿ ಜೀವನವಲ್ಲಿ ತತ್ತ್ವವನ್ನು ಕಂಡು ಹಿಡಿಯಲು ಯತ್ನಿಸುವ ಸಾಧಕರು. ಇಂಥವರ ಭಟ್ಟಿಯಲ್ಲಿ ಒಬ್ಬರ ಬೆಳಕು ಇನ್ನೊಬ್ಬರ ಕತ್ತಲೆಯನ್ನು ಚೆದರಿಸುವದು.'

ಆಕಾಶಗಂಗೆಯಲ್ಲಿ 'ಗೆಳೆತನದ ಗೆಲವು' ಎಂಬ ಭಾಗವಿದೆ. ಅಲ್ಲಿ ಕವಿ ಸಖ್ಯ ಯೋಗದ ವಿಶ್ಲೇಷಣೆಯನ್ನು ಹೀಗೆ ಮಾಡುತ್ತಾನೆ: 'ಪ್ರೀತಿ'ಯಲ್ಲಿ ಕಾಮದ ಆಲಂಬನೆಯಿದೆ. ನಿಜಪ್ರೀತಿ ಸ್ವಯಂಭು. ನಮ್ಮ ಪ್ರೀತಿಯ ವಸ್ತುವಾದ ವ್ಯಕ್ತಿಯಲ್ಲಿ ಆತ್ಮಜ್ಞಾನವನ್ನು ಹುಟ್ಟಿಸಲು ನಾವು ಸಮರ್ಥರಾಗುವೆವು. "ಗೆಳೆತನದ ರತಿಯಲ್ಲಿ ಚ್ಯುತಿಯಿಲ್ಲ". ಪ್ರಪಂಚದ ಭಯಾನಕ ಅರಣ್ಯದಲಿ ನಮ್ಮ ಸತ್ತ್ವದ ಸ್ವಮಂತರ ವನ್ನು ಕಾಯುವ ಕೈದೀವಟಿಗೆಯೇ ಗೆಳೆತನವು.

ಸ್ನೇಹದ ರವಿಕಿರಣ ಸೋಂಕಿದರೆ ಸಾಕು ಮುದುಡಿದ "ಮನತುಟ್ಮಲ" ದಳದಳವಾಗಿ ಅರಳುತ್ತದೆ. "ರನ್ನ ಚೆನ್ನದ ಜ್ಯೋತಿದ್ವಾರ" ತೆರೆಯುತ್ತದೆ. ಜೀವನದ ಮುಚ್ಚುಮರೆಗಳೆಲ್ಲ ಬಿಚ್ಚಿಕಳೆಯುತ್ತವೆ. ಬದುಕು ಕ್ಷಣಿಕವೇ ಇರಬಹುದು. ಕ್ಷಣದ ಕನಸೇ ಆಗಿದ್ದೀತು. ಆದರೆ ಸಖ್ಯದಿಂದ ಬಾಳು ಸಾರ್ಥಕವಾಗುತ್ತದೆ.

ಗೆಳೆತನದಲ್ಲಿ ದೇಶ-ಕಾಲ-ರೂಢಿಗಳ ಅಡ್ಡಿಯಿಲ್ಲ, ಪ್ರೇಮಕ್ಕೆ ಕುಲವೇ ಇಲ್ಲ. ವಿಶ್ವದೊಡನೆ ಸಮರಸವಾಗುವ ಸಾಧನೆಯನ್ನು ಸಖ್ಯಯೋಗ ದೊರಕಿಸಿಕೊಡುತ್ತದೆ. 'ಗೆಳೆಯರ ಗುಂಪಿ'ನ ಗೆಳೆಯರು ಈ ಗಂಭೀರ ಸಖ್ಯಯೋಗದ ಆರಾಧಕರು.

ಮಾನವನ ಬದುಕು ಪೂರ್ಣವಾಗಲು ಅವರಿವರ ಸಖ್ಯ ಹೇಗೆ ಅಗತ್ಯವೋ ಹಾಗೆಯೇ ಪ್ರಕೃತಿಯ ಲಾಲನೆ ಪಾಲನೆಗಳು ಅಗತ್ಯ. ಪ್ರಕೃತಿಯ ಪ್ರೇರಣೆ-ಪೋಷಣೆಗಳು ಭಾವುಕನನ್ನು ಎಚ್ಚರಿಸಿ, ಆಶ್ಚರ್ಯಗೊಳಿಸಿ, ಅದ್ವಿತೀಯವಾದ ಆನಂದ ವನ್ನು ಊಡಬಲ್ಲವು :

"ಬಯಲು ಭ್ರಾಂತಿಯ ಬಿಟ್ಟು ಮುಂದೆ ಬಾ ಓ ಮನವೆ!
ನಿನ್ನ ಗುರಿ ಸ್ವಾನಂದ; ಆಗು ನೀ ಚಿದ್ಘನವೆ!"[1]

ಜೀವನದ ಈ ಹಲಕೆಲವು ನಲಿವುಗಳನ್ನು ಸವಿದು ದಿನದಿನಕ್ಕೂ ವಿಕಾಸಗೊಂಡ ವಿನಾಯಕರ ಆಶೆ-ಆಕಾಂಕ್ಷೆಗಳು ಆತ್ಮ-ಶೋಧನೆಯಿಂದ ಆಧ್ಯಾತ್ಮಿಕದತ್ತ ಸಾಗಲೆಳಸು ತ್ತವೆ. ಹೃತ್ಕಮಲದ ಸಂಕೋಚ ವಿಕಾಸಗಳನ್ನು ಅರಿತ ಮನಸ್ಸಿಗೆ ಆ ವ್ಯಾಪಾರದ ರಹಸ್ಯವೇನು ಎಂದು ಜಿಜ್ಞಾಸೆ ಮೊಳೆಯುವುದು :

"ನನ್ನಾತ್ಮವೊಂದು ಕಮಲದಂತೆ-
ಮತ್ತರಳುವದು, ಮತ್ತೆ ಮುರುಟುವದು,
ನನ್ನಾತ್ಮ ನೀರಲರಂತೆ!
ಅದು ಮುರುಟಿದಾಗ ಬಾಡಿದೆಯೆಂದು

1 ಅದೇ., ಪು. 160

ದೇವನನ್ನು ಕಾಡಿದೆ;
ತಂದಿ ಹೋಯಿತೆಂದು ಮನದಿ ನೊಂದೆ,
ಆದರೆ ನೀರಲರಂತೆ ಮತ್ತರಳಿ ಮತ್ತೆ ಮುರುಟಿ
ಸದಾ ಸರ್ವದಾ ಸುಖಿಸುತ್ತಿಹುದು ನನ್ನಾತ್ಮ"[1]

ಲೇಖಕರ ಈ ಆತ್ಮಪ್ರಜ್ಞೆ ಆತ್ಮೋನ್ನತಿಯತ್ತ ಸಾಗಲೆಳಸಿ ಸುತ್ತ ಮುತ್ತಲಿನ ಅಡ್ಡಿ-ಆತಂಕಗಳಿಂದ ಬಿಡುಗಡೆಗಾಗಿ ಹಂಬಲಿಸುವದು. ಧ್ಯೇಯಸಾಧನೆಗಾಗಿ ಯಾವ ಮಾರ್ಗವನ್ನು ಅನುಸರಿಸಬೇಕೆಂಬ ಹೊಯ್ದಾಟ ಹೃದಯದಲ್ಲಿದ್ದು ಬಡಿಯುವದು. ಸಂಸಾರ ತ್ಯಾಗ, ಪರಿವಾರ ವಿಮೋಚನೆಗಳಿಂದ ಇದು ಸಾಧ್ಯವಾದೀತೆ? ಎಂಬ ಪ್ರಶ್ನೆ ಕಾಡುವದು. ಏಕಾಂತದಿಂದ ಈ ಸಮಸ್ಯೆ ಪರಿಹಾರವಾಗಬಲ್ಲುದೆ? ಎಂದು ಪ್ರಕೃತಿಯ ಮಡಿಲಲ್ಲಿ ಪರವಶರಾದಾಗ ಅವರಿಗೆ ಆದ ಅರಿವು ಪ್ರಶಂಸನೀಯವಾದುದು :

" ಹೂಮರಳುವದು ತಾಳು, ನೀ ದಾರಿ ಕಾಯುತಿರು
ಜೀವ ಗುರಿಯನು ಸಾಧಿಸುವದು ದಿಟವು
ಒಂದು ದಿನ ಚಿತ್ಪ್ರಕಾಶಕನು ಬೆಳಕುಮಳೆಗರೆಯೆ...."[2]

ಈ ನಿರ್ಧಾರವೇ ಅವರ ಬದುಕಿನ ಬೆಳಕಾಯಿತು, ಜೀವನಕ್ಕೆ ನೂತನ ದರ್ಶನ ವಾಯಿತು. ಯೋಗಮಾರ್ಗದ ಅಗತ್ಯತೆ ತಲೆದೋರಿತು. 'ಕ್ರಿಯಾಶಕ್ತಿ'ಯ ಕೊರತೆ ತುಂಬಿಕೊಳ್ಳಲು 'ತಪಸ್' ಅವಶ್ಯವಾಯಿತು. ಸ್ವಯಂಪ್ರಜ್ಞೆಯು ಪ್ರಾದುರ್ಭಾವವಾಯಿತು. ಈಶ ಕರುಣೆಯ ದ್ಯೋತಕವಾಗಿ ಆಕಾಶಗಂಗೆಯನ್ನು ಆಹ್ವಾನಿಸುವರು :

ಪಾವನ ಗಂಗೆ
ಅಮೃತ ತರಂಗೆ
ವ್ಯೋಮಾಂತರಂಗೆ
ನೆಲತಿಳಿಯೆ ![3]

III

" 1938 ರ ಮೇಲೆ ಸ್ಥಾಯಿಯಾಗಿ ನಿಂತ ಸಾಮಾಜಿಕ ಪ್ರಜ್ಞೆ ' ಇಜ್ಜೋಡು ' ದಲ್ಲಿ ಕಾಣಿಸಿಕೊಂಡಿತ್ತು—31–36 ರಲ್ಲಿ. ಆದರೆ ಅದು ಸ್ಥಾಯಿಯಾಗಿ ಹೊಸರೂಪ ತಳೆದಿದ್ದು ಅಭ್ಯುದಯದ ಮೊದಲಿನ 7–8 ಕವಿತೆ ಹಾಗೂ ಸಮುದ್ರ ಗೀತಗಳಲ್ಲಿ ".[4]

---

1 ಅದೇ ಪು. 160   2 *Ibid* ಪು. 161   3 *Ibid*

4 ಗೋಕಾಕರು ಕುಂದರಗಿಯವರಿಗೆ ಬರೆದ ಪತ್ರ (ದಿ. 7–11–72) ಪು. 1

ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕೆ ಹೋದ ಸಮಯದಲ್ಲಿ ಮಾನವ ಜೀವನದ ರಾಜಕೀಯ ಹಾಗೂ ಸಾಮಾಜಿಕ ವಿರಾಡ್ ಸ್ವರೂಪವು ಅವರಿಗೆ ಪ್ರತ್ಯಕ್ಷವಾಗುತ್ತದೆ. ಅಲ್ಲಿ ಅವರ ವ್ಯಕ್ತಿತ್ತ್ವವೇ ತುಂಡುತುಂಡಾಗಿ ಕತ್ತರಿಸಿ ಹೋಗುವಂತೆ ಅನಿಸುತ್ತದೆ. ಅಪಾರ ಮಾನವ ಸಮುದ್ರದಲ್ಲಿ ವ್ಯಕ್ತಿಯೊಂದು ಬೆಲೆಯಿಲ್ಲದ ಅಣುವಾಗಿ, ಹುಡಿಯಾಗಿ ಕಾಣುತ್ತಾನೆ. ಭೀಕರವಾದ ರಾಜಕೀಯ, ಸಾಮಾಜಿಕ ವಿಸಮತೆಯ ಎದುರಿಗೆ ಕವಿಯ ಕನಸು, ಸೌಂದರ್ಯ ಚಿಂತನ, ಅನುಭಾವ, ಸಾಧನಗಳಿಗೆ ಏನು ಸ್ಥಾನವಿದೆ?

ತಮ್ಮ ಸಮುದ್ರದಾಚೆಯಿಂದ ಎಂಬ ಪ್ರವಾಸ ಗ್ರಂಥದಲ್ಲಿ ಆಂಗ್ಲರಿಂದ ನಡೆಯುತ್ತಿದ್ದ ಹಿಂದುಸ್ತಾನದ ಶೋಷಣೆಯ ಚಿತ್ರವನ್ನು ಕವಿ ಹೀಗೆ ಕೊಡುತ್ತಾರೆ:

"........'ಪಿ-ಎಂಡ್ ಓ' ಎಂಬ ಆಂಗ್ಲ ಕಂಪನಿಯೊಂದಿದೆ. ಲಂಡನ್ನಿನಲ್ಲಿ ಪಿಕ್ಯಾಡಿಲಿ ಓಣಿಯ ಹತ್ತಿರ ಅದರ ದೊಡ್ಡ ಕಟ್ಟಡವಿದೆ. ಹಿಂದುಸ್ತಾನದ ದುಡ್ಡೇ ಈ ಭವ್ಯ ಮಂದಿರದ ತಳಹದಿ ಎಂಬುದರಲ್ಲಿ ಸಂಶಯವಿಲ್ಲ........"[1].

ವಿನಾಯಕರಿಗೆ ಪ್ರತಿಯೊಂದು ಸಂಗತಿಯಲ್ಲಿಯೂ ಆಳರಸನ ದಬ್ಬಾಳಿಕೆ ಎದ್ದು ಕಾಣುತ್ತದೆ:

"....ಒಬ್ಬ ಆಂಗ್ಲನು ಒಂಬತ್ತು ಮಂದಿ ಭಾರತೀಯರನ್ನು ಆಳುವನೆಂಬ ಮಾತು ಇಲ್ಲಿಯ ಕೂಲಿಯಾಳಿಗೂ ಗೊತ್ತಿದೆ...."[೨].

ಭರತಖಂಡದ ರಾಜಾಧಿರಾಜರಿಗೂ ವಿಲಾಯತಿಯ ಕೂಲಿಯಾಳುಗಳು 'ದೊರೆಯಾಗಿದ್ದ ಕಾಲವೊಂದಿತ್ತು'. ಆಂಗ್ಲ ಇಲ್ಲಿದ್ದಷ್ಟು ದಿನವೂ ದೇಶವನ್ನು ಕೊಳ್ಳೆ ಹೊಡೆದ. ಕೊಳ್ಳೆಯ ಹಣದಿಂದ ಇಂಗ್ಲೆಂಡಿನ ಮಹಾಸೌಧಗಳು ವಿರಾಜಿಸಿದವು. ಕಾರ್ಖಾನೆಗಳು ಕೊಬ್ಬಿದವು. ಶ್ರೀಮಂತರು ಹಿಗ್ಗಿದರು. ವಿಜ್ಞಾನ ವಿಜೃಂಭಿಸಿತು,

ಆರ್ಥಿಕ ಶೋಷಣೆಯೊಂದಿಗೆ ಸಾಂಸ್ಕೃತಿಕ ಗುಲಾಮಗಿರಿಯೂ ಇದೆ. ಒಂದೆರಡು ವರ್ಷದ ಕೂಸಿನ ಮನಸ್ಸಿನ ಮೇಲೆ ಭಾರತೀಯರ ಬಗ್ಗೆ ತಾತ್ಸಾರ ಭಾವನೆಯನ್ನು ಬಿತ್ತಿ ಬೆಳೆಸುತ್ತಾರೆ ಆಂಗ್ಲರು. ಮಕ್ಕಳು ಭಾರತೀಯರನ್ನು 'Nigger' ಎಂದು ಎಂದು ಕರೆಯಲು ಹೇಳಿಕೊಡುತ್ತಾರೆ. ಹುಡುಗರಿಗೆ ನಿಗ್ರೊ ಗೊಂಬೆಗಳನ್ನು ತಯಾರಿಸಿ, ಸಂತೆ, ಜಾತ್ರೆಗಳಲ್ಲಿ ಅಂಗಡಿ ಮುಂಗಟ್ಟುಗಳಲ್ಲಿ ಮಾರುತ್ತಾರೆ. ಇಂಗ್ಲೆಂಡಿನ ಸಾಮಾನ್ಯ ಜನರಿಗೆ ಹಿಂದುಸ್ತಾನ ಕರಿಯ ಜನರ ನಾಡು.

ಯಾಂತ್ರಿಕತೆಯ ಪರಿಣಾಮವಾಗಿ ಬೆಳೆದ ಅನ್ಯಾಯ, ಕ್ರೌರ್ಯ ಕಂಡು ಕವಿಗೆ ಆಘಾತವಾಗುತ್ತದೆ. "ಹಡಗದ ಯಂತ್ರಗಳ ವಿಕಾರವಾದ ಅಂಗಾಂಗಗಳು, ನೃತ್ಯಶಾಲೆಯ ಸ್ವಚ್ಛಂದ ಜೀವನ, ಹಡಗಕ್ಕೆ ಕಲ್ಲಿದ್ದಲಿಯನ್ನು ಉಣಿಸುವ, ಬಿಳಿಯರ

1 ವಿ. ಕೃ. ಗೋಕಾಕ; ಸಮುದ್ರದಾಚೆಯಿಂದ (ಪ್ರವಾಸ ಸಾಹಿತ್ಯ) ಮನೋಹರ ಗ್ರಂಥಮಾಲೆ, ಧಾರವಾಡ, 1938.

2 ಅದೇ.

ದಾಸ್ಯದಲ್ಲಿ ಮೈಮುರಿಯುವಂತೆ ದುಡಿಯುವ ಕರಿಯರ ಕೀಳುಬಾಳುವೆ. ಯಂತ್ರ ಯುಗದ ಪರಿಣಾಮವಾಗಿ ಬೆಳೆದ ಅನ್ಯಾಯ ಅನೀತಿಗಳೆಲ್ಲ ಬಂದು ಸೇರಿದ ಹಾಗೆ”[1] ಹಡಗು ‘ಚಿಗರೆಯೊಂದು ಮೆದ್ದ ಹೆಬ್ಬಾವಿನಂತೆ’ ಮಾನವತೆಯ ಮೌಲ್ಯಗಳನ್ನೆಲ್ಲ ನುಂಗಿದ ಆಘಾತವನ್ನು ಕವಿ ಅನುಭವಿಸುತ್ತಾನೆ.

ಕ್ರಿ.ಶ. 1958ರಲ್ಲಿ ಕವಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಭೆಟ್ಟಿ ಕೊಟ್ಟರು. ಅಮೇರಿಕದ ಸಿರಿವಂತಿಕೆಯನ್ನೂ, ರಸವಂತಿಕೆಯನ್ನೂ ಗಮನಿಸುವದರ ಜೊತೆಗೆ ಅಲ್ಲಿಯ ಜೀವನದ ಕೃತ್ರಿಮತೆಯನ್ನೂ, ಯಾಂತ್ರಿಕತೆಯನ್ನೂ—ನಿಗ್ರೋಜನರ ದಾರುಣತೆಯನ್ನೂ ನೋಡಿದರು. ಅವರ ‘ಇಂದಿಲ್ಲ ನಾಳೆ’[2] ಗ್ರಂಥದಲ್ಲಿ ಈ ಚಿತ್ರ ಚೆನ್ನಾಗಿ ಬಂದಿದೆ.

ವಾಶಿಂಗ್ಟನ್ನಿನ ವೈಭವ, ವಿಜೃಂಭಣೆಗಳನ್ನು ಕಂಡ ಕವಿಯಲ್ಲಿ ಅನೇಕ ವಿಚಾರ ತರಂಗಗಳು ಏಳುತ್ತವೆ.

“ಪ್ರಕೃತಿಗಿಲ್ಲಿ ಪೂರ್ಣ ಪ್ರಭುವಾಗಿದ್ದಾನೆ ಮಾನವ
ತನ್ನಕ್ಕರೆಯ ಮಕ್ಕಳೊಡನೆ
ಟೇನಿಸ್ ಆಡುವಳಿಲ್ಲಿ ಲಕ್ಷ್ಮೀದೇವಿ ;

....

ಬಡತನದ ಭೂತವನ್ನೊಯ್ದು
ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಸಿದ್ದಾರೆ
ಗೃಹಕೃತ್ಯಗಳಿಗೆಲ್ಲ ಯಂತ್ರಭೃತ್ಯರನ್ನು ಹೂಡಿ
ಗೃಹಿಣಿ ದೇಶಕ್ಕಾಗಿ ದುಡಿಯುತ್ತಿದ್ದಾಳೆ”[3]

ನಿಗ್ರೋ ಜನರ ದಾರುಣ ಜೀವನವನ್ನು ಕಂಡಾಗ ಕವಿಯ ಕಣ್ಣು ತೇವವಾಗುತ್ತದೆ:

“ಇದು ಕತ್ತಲೆಯೆಂದು ಅದು ದೀಪವಾಯಿತ್ತು

....

ಹುಣಿಸೆಕಾಯಿಯಂತೆ ಮನುಷ್ಯರನ್ನು ಮಾರುವದುಂಟೆ ?”[4]

ಯಾಂತ್ರಿಕ ಪಿಶಾಚ ಬೆನ್ನು ಹತ್ತಿದ ಅಮೇರಿಕದ ಜೀವನದಲ್ಲಿ ಏಕಾಂತವಿಲ್ಲ. ‘ಬಡತನದ ಭೂತ ನಮ್ಮ ಜನತೆಯನ್ನು ತೊಳಲಾಡಿಸುತ್ತಿದ್ದರೆ, ಶ್ರೀಮಂತ ಯಾಂತ್ರಿಕ ಪಿಶಾಚಿ ಈ ದೇಶಕ್ಕೆ ಗಂಟುಬಿದ್ದಿತ್ತು ?

---

1 ಅದೇ, 2 ವಿ. ಕೃ. ಗೋಕಾಕ: ಇಂದಿಲ್ಲ ನಾಳೆ (ಚಂಪೂ ಕಾವ್ಯ) ಓರಿಯೆಂಟ ಲಾಂಗಮನ್ಸ, ಮುಂಬಯಿ, 1965, ಪು xvi+275.

3 ಪು. 21-23—*Ibid.*, 4 *Ibid* ಪು. 24-25

ಅಮೇರಿಕಾ ದೇಶದ ಮಹಿಳೆಯ ಜೀವನದ ಯಾಂತ್ರಿಕತೆಯನ್ನು ಕಂಡು ಕವಿಗೆ ತುಂಬ ಯಾತನೆಯಾಗುತ್ತದೆ:

"ನಸುಕಿನಲಿ ತೆರಳಿ ಸಂಜೆಗೆ ಮನೆಗೆ ಬರುವನಕ
ಮನೆ ಬಾಗಿಲಕ್ಕೆ ಕೀಲಿ
....
ಮೆರೆದಿಹೆ ವಿಲಾಸಿ, ಭೋಗಿ"[1]

ಫೋರ್ಡ ಕಂಪನಿಯಲ್ಲಿಯ ಕಾರು ತಯಾರಿಕೆಯನ್ನು ವಿವರವಾಗಿ ವರ್ಣಿಸಿ:

"ಇದುವೆ ವಿಶ್ವಾಮಿತ್ರ ಸೃಷ್ಟಿ.........
ವರುಷಕೊಂದು ನಮೂನೆಯುನ್ಮತ್ತ ಸ್ಪರ್ಧೆಯಿದು..........
ಕಾರುಸೃಷ್ಟಿಯಿದೆಲ್ಲ ವಿಷಮತೆಯ ಬೇರು"[2]

ದ್ಯಾವಾ ಪೃಥಿವೀಯ 'ಇಳಾಗೀತ'ದಲ್ಲಿಯೂ ಯಂತ್ರ ನಾಗರಿಕತೆಯಿಂದುಂಟಾದ ವಿಷಮಾವಸ್ಥೆಯನ್ನು ಮುಂಬಯಿ ನಗರದ ಪ್ರತಿಮೆಯ ಮೂಲಕ ಪರಿಣಾಮಕಾರಿಯಾಗಿ ವಿಡಂಬನಾತ್ಮಕವಾಗಿ ಅವರು ಅಭಿವ್ಯಕ್ತಗೊಳಿಸಿದ್ದಾರೆ:

"ಎಡಬಲ ಗೊಂಬೆಯ ಮಹಡಿಯ ಮನೆ; ನಡುವೆ
....
ಕೋಣೆಗೊಂದು ಕಾಮಾರ್ಥದ ದಾಂಪತ್ಯ:
ಕಲಿಯ ಪಾರು ಪತ್ಯ!
....
ಇಂದಿನ ನಾಗರಿಕತೆಯಬ್ಬರ, ಹೊಯ್ದಾಟ,
ಬರಿ ರಬ್ಬರಿನಾಟ!"[3]

ವಿಜ್ಞಾನ, ಔದ್ಯೋಗೀಕರಣ ಸಂಪತ್ತು-ಸಮೃದ್ಧಿಯನ್ನು ತಂದರೂ, ಯಾಂತ್ರಿಕತೆಯ ನಾಗರಿಕತೆ ತರುವ ಕೃತ್ರಿಮತೆ, ಒತ್ತಡ, ಸಾರ್ವತ್ರಿಕವಾಗಿ ಹರಡಿದ ಕಾಮಲೋಲುಪತೆ, ವಿಲಾಸಪ್ರಿಯತೆ. ಇವುಗಳಿಂದ ಮನುಷ್ಯನ ಮಾನವೀಯತೆಗೆ ಭಂಗ ಬರುತ್ತದೆಯೆನ್ನುತ್ತಾರೆ ವಿನಾಯಕರು.

ಗೋಖಾಕರ ಯುಗಾಂತರ[4] ಎಂಬ ನಾಟಕದಲ್ಲಿ ಮೃಣಾಲಿನಿಯೆಂಬ ಪಾತ್ರ

---

1 ಅದೇ, ಪು. 167

2 ಅದೇ, ಪು. 150-51

3 ವಿ. ಕೃ. ಗೋಕಾಕ: ದ್ಯಾವಾಪೃಥಿವೀ (ಕವನ ಸಂಗ್ರಹ) (ಪರಾಗ ಪ್ರಕಾಶನ, ಧಾರವಾಡ) 1957 ಪು. vi+84 ಪು. 64-65

4 ಮನೋಹರ ಗ್ರಂಥಮಾಲೆ, ಧಾರವಾಡ 1947 ಪು. 8+87

ಬರುತ್ತವೆ. ಆಕೆಯ ಸರಸಾಡಿಗಳಲ್ಲಿ ಕಮ್ಯುನಿಸಂ ತುಂಬಿದೆ. ಪ್ರೇಮ, ಮದುವೆ ಮೊದಲಾದ ಭಾವಗಳಿಗೆ ಆಕೆಯಲ್ಲಿ ಸ್ಥಾನವಿಲ್ಲ. ಅವೆಲ್ಲ ಬಂಡವಾಳ ಶಾಹಿಯ ಕುರುಹುಗಳೆಂದು ಆಕೆ ನಂಬಿದ್ದಾಳೆ. 'ಧರ್ಮ ಒಂದು ದೊಡ್ಡ ಒಳಸಂಚು, ದೇವರೆಂದರೆ ಬರಿ ಕಲ್ಲು' ಎನ್ನುವಳು ಆಕೆ. ಕಮ್ಯುನಿಸ್ಟ್ ತತ್ವ, ಪ್ರಚಾರವೊಂದೇ ಆಕೆಯ ಗುರಿ.

ಆದರೆ ವಿನಾಯಕರ ದೃಷ್ಟಿಯಲ್ಲಿ ಮೃಣಾಲಿನಿ ಮಾನವೀಯ ಭಾವಗಳನ್ನು ಕಳೆದುಕೊಂಡಿದ್ದಾಳೆ. ಕೇವಲ ಮಾರ್ಕ್ಸವಾದದ ತತ್ವದಿಂದ ಸಮಾಜದ ಹಿತ ಸಿದ್ಧಿಸದು. ಅವುಗಳ ಜೊತೆಗೆ ಮಾನವೀಯ ಭಾವನೆಗಳು ಒಡಗೂಡಬೇಕು. ಕರುಣೆ, ಆನಂದಗಳೇ ಜೀವನದ ಮೂಲಸಾಮಗ್ರಿಗಳೆಂದು ಕೋಸಲೇಂದ್ರನ ಮುಖಾಂತರ ಆಕೆಗೆ ಮನವರಿಕೆ ಮಾಡಿಕೊಡುತ್ತಾರೆ ಲೇಖಕರು.

ತ್ರಿಶಂಕುವಿನ ಪ್ರಜ್ಞಾಪ್ರಭಾತ[1]ದಲ್ಲಿ ತ್ರಿಶಂಕು ನವ್ಯನಾಗರಿಕತೆಯ ಪ್ರತಿನಿಧಿ. ಸದೇಹಿಯಾಗಿ ಸ್ವರ್ಗಕ್ಕೆ ಹೋಗಲು ಅವನು ಪ್ರಯತ್ನಿಸುತ್ತಾನೆ. ಪುರುಷಸಾಹಸಕ್ಕೆ ಎಣೆಯಿಲ್ಲನೆಂದು ವಿಶ್ವಾಮಿತ್ರರು ತಮ್ಮ ಶಿಷ್ಯನಿಗಾಗಿ ತಪೋಧಾರೆಯೆರೆಯುತ್ತಾರೆ. ತ್ರಿಶಂಕುವು ಸ್ಮೃತಿ, ಮೀಮಾಂಸೆ, ಕಲ್ಪಕತೆ,–ಈ ಲೋಕಗಳಲ್ಲಿ ತಿರುಗಾಡುತ್ತಾನೆ. ಸ್ಮೃತಿಲೋಕದ ಪಿಶಾಚ ಮೌನ ಅವನನ್ನು ಹಿಡಿಸದು. ಮೀಮಾಂಸಾ ಲೋಕದಲ್ಲಿ ಕರುಣೆ, ಆನಂದಗಳು ದೊರೆಯವು. ಕಲ್ಪಕತೆಯ ಲೋಕ ಬರಿ ಗೊಂಬೆಯಾಟವಾಗಿ ಕಾಣಿಸುತ್ತದೆ. ಜಳಲಿದ, ಗಾಸಿಗೊಂಡ ಸತ್ಯವ್ರತನಿಗಾವ ಮೋಕ್ಷ?' ಎಂದು ಪಶ್ಚಾತ್ತಾಪದಿಂದ ಪರಿತಪಿಸುತ್ತಾನೆ. ದೇವಿಯ ಅನುಗ್ರಹವಾಗಿ ನಕ್ಷತ್ರಲೋಕದಲ್ಲಿ ಅವನು ತಪಕ್ಕೆ ನಿಲ್ಲುತ್ತಾನೆ.

ಒಂದು ಕಡೆಗೆ ವಿಜ್ಞಾನದ ಸಿದ್ಧಿ, ಇನ್ನೊಂದೆಡೆ ಮಾರ್ಕ್ಸನ ಕಮ್ಯುನಿಸಂ ಇವು ವಿನಾಯಕರ ಜೀವನ ಮೌಲ್ಯ ಹಾಗೂ ವ್ಯಕ್ತಿತ್ವಗಳ ಮೇಲೆ ಭಯಂಕರ ಆಘಾತವನ್ನುಂಟು ಮಾಡುತ್ತವೆ. ದೇವರು, ಧರ್ಮ, ಕಲ್ಪನಾ ವಿಲಾಸ ಇವೆಲ್ಲವು ಗಳನ್ನು ಹೀಯಾಳಿಸಿದರೂ ಹೇಡಿಯಂತೆ ದುಃಸ್ಥಿತಿಗೆ ತಲೆಬಾಗುವುದು ಪಾಶ್ಚಿಮಾತ್ಯ ರಲ್ಲಿಲ್ಲ. ವಿಜ್ಞಾನ ಸಮತಾವಾದದ ಮುಖ್ಯಾಂಶವೆಂದರೆ ವಸ್ತುಸ್ಥಿತಿಯ ಧೀರ ಸ್ವೀಕಾರ ಹಾಗೂ ಪರಿಸ್ಥಿತಿ ಗೆಲ್ಲುವ ವೀರಪ್ರವೃತ್ತಿ. ವಿನಾಯಕರು ಈ ಕೆಳಗಿನ ಎರಡು ಜೀವನ ದೃಷ್ಟಿಗಳನ್ನು ಸಮನ್ವಯಗೊಳಿಸುತ್ತಾರೆ. (1) ವ್ಯಕ್ತಿತ್ವವನ್ನು ಕಾಯ್ದು ಬೆಳೆಸುವ ಹಂಬಲ (2) ವಾಸ್ತವ ಪ್ರಪಂಚದ ಸ್ವೀಕಾರ ಹಾಗೂ ಪರಿವರ್ತನೆಗೆ ಅಗತ್ಯವಾದ ಧೀರ ಮನೋಭಾವ. ವಿಕಾಸಶೀಲವಾದ ದೈವೀಜೀವನದ ದರ್ಶನವನ್ನು ಅವರು ಶ್ರೀ ಅರವಿಂದರ ಮೂಲಕ ಪಡೆಯುತ್ತಾರೆ.

---

1 ಸುದರ್ಶನ ಪ್ರಕಾಶನ, ತಿಪಟೂರು, 1965 ಪು. 84

IV

ಏಕಾಂತ ಮತ್ತು ಲೋಕಾಂತಗಳಲ್ಲಿ (Socialism and Mysticism) ಸಮನ್ವಯವನ್ನು ಸಾಧಿಸುವಲ್ಲಿ ಗೋಕಾಕರು ಶ್ರೀ ಅರವಿಂದರಿಂದ ಸಾಕಷ್ಟು ಸ್ಫೂರ್ತಿಯನ್ನು ಪಡೆದಿದ್ದಾರೆ. ಈ ಸ್ಫೂರ್ತಿಯ ಫಲ ಅವರ ಬಾಳದೇಗುಲದಲ್ಲಿ, ಸಮರಸವೇ ಜೀವನ ಮತ್ತು ಭಾರತ ಸಿಂಧು ರಶ್ಮಿ.

ಅರವಿಂದರದು ವಿಶಾಲವಾದ ಪೂರ್ಣದೃಷ್ಟಿ. ಅನ್ನವು ಪ್ರಾಣವನ್ನು ಪ್ರಕಟಿಸುವಂತೆ, ಪ್ರಾಣವು ಮನವನ್ನು ಪ್ರಕಟಿಸುವದು. ಅತಿಮಾನಸದಲ್ಲಿ ಸಚ್ಚಿದಾನಂದವು ಮಾನವನನ್ನು ಕೂಡಿಕೊಳ್ಳುವದು. ಮನುಷ್ಯ ಪ್ರಯತ್ನ ಏರುತ್ತಾ ಹೋದಂತೆ ದೈವೀಕರುಣೆ ಕೆಳಗಿಳಿದು ಬರುವದು. ಈ ಆರೋಹಣ ಅವರೋಹಣಗಳಲ್ಲಿಯೇ ವಿಶ್ವದ ಗೂಢ ಅಡಗಿದೆ.

ಪ್ರಾಚೀನ ಭಾರತದ ಆಧ್ಯಾತ್ಮಿಕ ಸತ್ವಗಳು ಮತಧರ್ಮದ ಸಂಕುಚಿತತನದ ಬೇಲಿಗಳನ್ನು ಕಡಿದು ಹಾಕಬೇಕು. ಸಂಪೂರ್ಣ ಸ್ವಾತಂತ್ರ್ಯದಿಂದ, ಪ್ರಾಮಾಣಿಕತೆಯಿಂದ, ನಮ್ಮ ಮೂಲ ಸನಾತನ ತತ್ವಗಳಿಗೆ ಹೊಸ ವಿಜ್ಞಾನದ ಕ್ಷಕಿರಣಗಳನ್ನು ಚೆಲ್ಲಬೇಕು. ಪಾಶ್ಚಿಮಾತ್ಯ ವಿಜ್ಞಾನ, ಭಾರತದ ಆಧ್ಯಾತ್ಮಿಕತೆ ಸಮರಸವಾಗಿ ಬೆರೆಯಬೇಕು.

ಅರವಿಂದರ ಈ ವಿಶಾಲವಾದ, ಪೂರ್ಣದೃಷ್ಟಿಯು ವಿನಾಯಕರ ಕಾವ್ಯದ ತಳಹದಿ. ಇಹವನ್ನೇ ನಂದನವನವನ್ನಾಗಿ ಮಾಡುವ ತವಕ.

ಬಾಳದೇಗುಲದ ಆರಂಭದಲ್ಲಿ ಕವಿ ಹೇಳುತ್ತಾನೆ:

> "ನಂಬದಿರು ಒಂದೆ ಧರ್ಮವ ಒಂದೆ ಮಾರ್ಗವನು!
> ಇಂಬುಗೊಡದಿರು ಯಾವುದೊಂದೆ ಶೃತಿಗೆ
> ತೆಕ್ಕೆ ಬೀಳಾಗಸಕೆ ಎಲ್ಲ ದರ್ಶನಗಳಿಗೆ
> ನೆಲವೆ ಒರೆಗಲ್ಲೆಂಬ ಶ್ರದ್ಧೆ ಬರಲಿ!"[1]

ಗುಂಪು ೨ ರಲ್ಲಿ 'ಕನ್ನಡದ ಜನಮನದಲ್ಲಿ ಜಗವೇ ಪಡಿಮೂಡಬೇಕು' ಎಂದು ಕನ್ನಡಿಗನೆಂದರೆ, 'ಭಾರತಕ್ಕಾಗಿ ಅಸುಮೀಸಲೆಂದು 'ಆರ್ಯಪುತ್ರ' ಸಾರುತ್ತಾನೆ. 'ಸದಸ್ಯ' ಎನ್ನುವ ಕವನವು ಕಣ್ಣಮುಂದೆ ನಡೆಯುತ್ತಿರುವ ಸಾವಿರ ಅನ್ಯಾಯಗಳಿಗೆ ಕನ್ನಡಿ ಹಿಡಿಯುವಂತಿದೆ.

ಗುಂಪು 3ರಲ್ಲಿ 'ಸತ್ಯಾಗ್ರಹಿ' 'ಕರ್ಮಯೋಗಿ' ಎಂಬ ಕವನಗಳಿವೆ. ಗುಂಪು 4ರಲ್ಲಿ 'ಸನಾತನಿ—ವಿನೂತನಿ'ಯೆಂಬ ಕವನವಿದೆ:

---

1 'ಬಾಳದೇಗುಲದಲ್ಲಿ ಅಡಿಯಿಡುವ ಎಳೆಯನಿಗೆ'—ಎಂಬ ಕವನ

"ಓ! ಸನಾತನಿ! ಹೋಗು ಪಡುವಣದಿ ಹುಟ್ಟು
ಆಗ ತಿಳಿವುದು ನಿನಗೆ ತಿಳಿವಿನಾ ಗುಟ್ಟು
ಓ! ವಿನೂತನಿ! ಮತ್ತೆ ಮೂಡಣಕೆ ತೆರಳು
ಆಗ ಹೊಳೆವುದು ಕರ್ಮಕಾಂಡದಾ ತಿರುಳು"[1]

ಎಂದು ಕವಿ ಅನ್ನುತ್ತಾರೆ.

ವಿನಾಯಕರು ನವನಾಗರಿಕತೆಯ ಹೊದಿಕೆಯ ಕೆಳಗೆ ಅಡಗಿರುವ ಅಗ್ನಿ ಪರ್ವತದ ದರ್ಶನ ಪಡೆದಿದ್ದಾರೆ. ಅವರ ಸಂದೇಶ ಹೀಗಿದೆ:

"ಸಮಷ್ಟಿಮಾನವನ ವ್ಯಕ್ತಿತ್ವವನ್ನು ಯಂತ್ರವ್ಯೂಹ ನಿರ್ಣಯಿಸಬಹುದು. ಆದರೆ ವ್ಯಕ್ತಿಯ ವ್ಯಕ್ತಿತ್ವದ ಬಗೆಯೇನು? ಯಾವ ಯಂತ್ರಗಳಿಗೂ ಉಪಲಬ್ಧವಲ್ಲ. ಆದರೆ ಭಾರತೀಯ ಯೋಗಶಾಸ್ತ್ರ ವ್ಯಕ್ತಿಯ ವ್ಯಕ್ತಿತ್ವದ ನೆಲೆಯನ್ನು ನಿರ್ಣಯಿಸ ಬಲ್ಲದು. ಈ ಎರಡು ವಿಧಾನಗಳ ಸಮನ್ವಯದಲ್ಲಿಯೇ ಮನುಕುಲದ ಭವಿಷ್ಯತ್ ಇದೆ. ಮತ್ತು ಮುಕ್ತಿಯಿದೆ.[2]

'ಮುಕ್ತಜೀವಿಗಳು' ಕೊನೆಯ ಕವನ. ಇವರು ಲೋಕಕಲ್ಯಾಣಕ್ಕಾಗಿ ಬಾಳಿದವರು, ಆತ್ಮ ಕಲ್ಯಾಣವನ್ನು ಸಾಧಿಸಿದವರು. ಇವರ ಕೃಪೆಯಿಂದ ಕವಿ 'ಶಿರವು ಸಾಸಿರದಳದ ಕಮಲವಾಗರಳುತ್ತ ಜ್ಞಾನರವಿ ಮೂಡಬಹುದು' ಎಂಬ ನಂಬಿಕೆ ತಳೆದಿದ್ದಾರೆ.

ಸಮರಸವೇ ಜೀವನ[3] ಬೃಹತ್ ಕಾದಂಬರಿ. ಅದರ ಕಥೆಯ ರಂಗಭೂಮಿ ದೇಶವಿದೇಶಗಳ ಅನೇಕ ಸ್ಥಳಗಳನ್ನು, ಜನಗಳನ್ನು ಅನುಭವಗಳನ್ನು ಒಳಗೊಂಡಿದೆ. ಇಲ್ಲಿಯ ಜೀವನ ದೃಷ್ಟಿ ವಿಶಾಲವಾಗಿದೆ, ಕ್ಷೇತ್ರ ಬಾಹುಳ್ಯವಿದೆ, ಪಾತ್ರ ವೈವಿಧ್ಯವಿದೆ. ವಿವಕ್ಷೆ ಸೂಕ್ಷ್ಮವಾದ ಸಂವಿಧಾನ ಕೌಶಲ್ಯವಿದೆ, ಜೀವನಾನುಭವವಿದೆ ಮತ್ತು ದರ್ಶನ ಇದೆ. F. H. Bradley ತನ್ನ Appearance & Reality ಎಂಬ ಪ್ರಸಿದ್ಧವಾದ ತಾತ್ವಿಕ ಗ್ರಂಥದಲ್ಲಿ ಪರಮ ಸತ್ಯವೆನ್ನುವದು ಪೂರ್ಣವಾಗಿರಬೇಕು, ವಿಶಾಲವಾಗಿರ ಬೇಕು ಮತ್ತು ಆಂತರಿಕ ಸುಸಂಬಂಧತೆಯನ್ನು ಹೊಂದಿರಬೇಕು ಎನ್ನುತ್ತಾನೆ. ಗೋಕಾಕರ ಜೀವನ ದರ್ಶನವೂ ಇದೇ ಮಾದರಿಯದು.

ಕಥೆ ಧಾರವಾಡ ಪ್ರಾಂತದ ಮೊಗ್ಗಾವಿಯಿಂದ ಪ್ರಾರಂಭವಾಗುತ್ತದೆ. ಮೊದಲು ಸಮೀಪದ ಊರು ಕೇರಿಗಳಿಗೆ ನಮ್ಮನ್ನು ಕರೆದೊಯ್ಯುತ್ತದೆ. ಆನಂತರ

---

1 ಬಾಳವೇಗುಲವಲ್ಲಿ 'ಸನಾತನಿ ವಿನೂತನಿ' ಎಂಬ ನಂಬಿಕೆ ತಳೆದಿದ್ದಾರೆ.

2 ಅದೇ

3 ವಿ ಕೃ. ಗೋಕಾಕ: ಸಮರಸವೇ ಜೀವನ (ಕಾದಂಬರಿ ಒಂದೇ ಸಂಪುಟದಲ್ಲಿ) (ಉಷಾ ಸಾಹಿತ್ಯ ಮಾಲೆ, ಮೈಸೂರು) 1967 ಪು. xlix 1226

ಇಂಗ್ಲೆಂಡಿಗೆ ನಮ್ಮನ್ನು ಕರೆದೊಯ್ದು ಲೋಕ ಪರ್ಯಟನ ಮಾಡಿಸುತ್ತದೆ. ಮತ್ತೆ ಸ್ವದೇಶಕ್ಕೆ ನಾವು ಮರಳುತ್ತೇವೆ. ನಮ್ಮ ಅನುಭವ ಕ್ರಮಕ್ರಮವಾಗಿ ಬೆಳೆಯುತ್ತದೆ.

ಕಾಲು ಶತಮಾನದ ಜೀವನ ಇಲ್ಲಿದೆ. ಕಾದಂಬರಿಯ ಜಗತ್ತು ಸ್ಥಾಯಿಯಾಗಿರದೆ, ಪರಿವರ್ತನಶೀಲವಾಗಿದೆ. ಅಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ವಲಯಗಳಲ್ಲಿ ಸಾಕಷ್ಟು ಬದಲಾವಣೆಗಳಿವೆ.

ಸನ್ನಿವೇಶಗಳ ವೈವಿಧ್ಯದೊಂದಿಗೆ ಪಾತ್ರ ವೈವಿಧ್ಯವಿದೆ. ಯಾರೊಬ್ಬರೂ ಇನ್ನೊಬ್ಬರಂತಿಲ್ಲ. ಪ್ರತಿಪಾತ್ರಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ, ತನ್ನತನವಿದೆ. ಕಾದಂಬರಿಯ ನಾಯಕ ನರಹರಿ ಭಾರತದಲ್ಲಿಯೇ ಇದ್ದು,ಆಧ್ಯಾತ್ಮಿಕ ನೆರಗನ್ನು ಸೂಚಿಸುವವ. ಅವನಿಗೆ ತಕ್ಕಂತೆ ಕುಸುಮಾ. ವಿಷ್ಣು, ಶೀಮಾ ಇಂಗ್ಲೆಂಡಿಗೆ ಹೋಗಿ ಬಂದರೂ ಅವರಿಬ್ಬರಲ್ಲಿ ಭಿನ್ನತೆಯಿದೆ, – ಪ್ರಮೀಳೆ ಮತ್ತು ಸುಶೀಲೆಯರಲ್ಲಿ ಭಿನ್ನತೆಯಿದ್ದಂತೆ. ಭಾರತೀಯರೇ ಆದ ಶ್ರೀ ಪರಾಂಜಪೆ, ಪ್ರೊ. ಪಟವರ್ಧನ, ವಿದೇಶಿಯರೇ ಆದ ಜೇಮ್ಸ್ ದಂಪತಿಗಳು, ಹಯಗ್ರೀವಾಚಾರ್ಯರು, ಮೋಡರ್ ದಂಪತಿಗಳು, ತಂಡುಲಧ್ವಂಸ ಸಮಾಜದ ಭೀಮು ನಮ್ಮ ಮನ ಸೆಳೆಯುತ್ತಾರೆ.

ಸಮರಸವೇ ಜೀವನ ಎಂಬ ಕಾದಂಬರಿಯ ಶಿರೋನಾಮೆಯೇ ಗೋಕಾಕರ ಜೀವನ ದರ್ಶನದ ಬೀಜಮಂತ್ರವನ್ನು ಸಾರುತ್ತದೆ. ಜೀವನದಲ್ಲಿ ಏರುಪೇರುಗಳು, ಕಷ್ಟಸುಖಗಳು, ಸ್ನೇಹ-ವೈಷಮ್ಯಗಳು ಜೊತೆಜೊತೆಯಾಗಿ ಬರುವವು. ಸಮರಸವೇ, ಸಮನ್ವಯವೇ ಸೌಖ್ಯದ, ವಿಕಸನ ಶೀಲದ ಮೂಲ. ಈ ಸಾಮರಸ್ಯ ಅನೇಕ ರೂಪಗಳನ್ನು ತಾಳುತ್ತದೆ. ವ್ಯಕ್ತಿ ವ್ಯಕ್ತಿಯ ನಡುವಣ ಪ್ರೀತಿ; ಪ್ರಾಂತ-ಪ್ರಾಂತಗಳ, ದೇಶ-ದೇಶಗಳ ಮಧ್ಯೆ ಬೆಳೆಯಬೇಕಾದ ಪ್ರೀತಿ; ಇಷ್ಟೇ ಅಲ್ಲ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಇರಬೇಕಾದ ಸ್ನೇಹ ಮತ್ತು ಪ್ರೀತಿ. ಇತರರೊಡನೆ ಹೊಂದಿಕೊಂಡು ಹೋಗುವದೇ ಮಾನವನ ಲೌಕಿಕ ಜೀವನದಲ್ಲಿ, ಸೌಖ್ಯದ ಆರಕ ಮೂಲಮಂತ್ರ. ಇಡೀ ಜಗತ್ತಿನ ಸುಖ-ಶಾಂತಿಗಳ ರಹಸ್ಯ ಈ ಸಾಮರಸ್ಯ ಸೂತ್ರದಲ್ಲಿದೆ.

ಭಾರತ ಸಿಂಧು ರಶ್ಮಿ ಗೋಕಾಕರ ಎಲ್ಲ ಕೃತಿಗಳಿಗೆ ಹೆಡೆಮಣಿ. ವೈದಿಕ ಯುಗದ ಕಥಾನಕ ಇಲ್ಲಿದೆ. ವೈದಿಕ ಸಾಹಿತ್ಯ, ಪುರಾಣಗಳು ಮತ್ತು ಇತಿಹಾಸಗಳ ಅಧ್ಯಯನದ ಮೂಲಕ ಲೇಖಕರು ವೈದಿಕ ಪರಂಪರೆಯ ಆಳಕ್ಕೆ ಇಳಿದಿದ್ದಾರೆ. ಆ ಯುಗ ಸಂಕೀರ್ಣವಾದುದು. ಆಗಿನ ಸಾಮಾಜಿಕ, ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ವಿಶ್ವರಥ (ವಿಶ್ವಾಮಿತ್ರರ ಮೊದಲ ಹೆಸರು) ಪಾರಮಾರ್ಥಿಕ ಸಮಸ್ಯೆಯನ್ನು ಎದುರಿಸುತ್ತಾನೆ. ಆ ಯುಗದ ಪರಿವರ್ತನೆಯ ಕಾಲದಲ್ಲಿ ಆತ ವಹಿಸಿದ ಪಾತ್ರ ಮಹತ್ವವಾದುದು. ಇಲ್ಲಿ ಗೋಕಾಕರು ಸತ್ಯದ ಯುಗದ ಸಂಕೀರ್ಣತೆಯನ್ನು ಧ್ವನಿಸುತ್ತಾರೆ.

ಆಧುನಿಕ ಮಾನವ ಅನಾಥ ಪ್ರಜ್ಞೆಯುಳ್ಳವನು. ಪೌರಾಣಿಕ ಪ್ರತೀಕವಾಗಿ ತ್ರಿಶಂಕು ಪ್ರಜ್ಞೆಯನ್ನು ವಿನಾಯಕರು ಚಿತ್ರಿಸಿದ್ದಾರೆ. ಸುದೀರ್ಘ ಜೀವನದ

ಚಿಂತನೆಯ ಸಾರವಿಲ್ಲಿದೆ. ಭಾರತ ಸಿಂಧು ರಶ್ಮಿ ಮಹಾಕಾವ್ಯವಾಗಿ ರೂಪು ತಳೆದಿದೆ.

ವಿಶ್ವರಥ ಸಂದಿನೀಗ್ರಹಣ ಮಾಡಲು ಪ್ರಯತ್ನಿಸುತ್ತಾನೆ. ವಿಫುಲನಾಗುತ್ತಾನೆ.

"ನಿಷ್ಕಾಮ ಪ್ರಜ್ಞೆಗೆ ಮಾತ್ರ ಸರ್ವಶಕ್ತತೆ ಸಾಧ್ಯ
ಸಾತ್ವಿಕ ಆಕಾಂಕ್ಷೆಯೊಂದೆನ್ನ ಮನ ಕೊಂಡಿಹುದು
'ಸಾತ್ವಿಕ' ಎಂದರೇನು? ಆಕಾಂಕ್ಷೆ ಎಂಬುದು ಸತ್ಯ !
ಬೇಕು ದೀರ್ಘ ತಪಶ್ಚರಣ ಸಫಲ ವಿರಲಾಕಾಂಕ್ಷೆ"[1]

ರಾಜಪಿತನಾದ ವಿಶ್ವಾಮಿತ್ರ ಸಾತ್ವಿಕ ಬ್ರಹ್ಮರ್ಷಿಯಾಗಲು ಹವಣಿಸುತ್ತಾನೆ. ತಪಶ್ಚರ್ಯೆಕ್ಕೆ ಸಿದ್ಧನಾಗುತ್ತಾನೆ.

ಆದರೆ ಮೇನಕೆಯನ್ನು ಕಂಡು ಕಾಮದ ಆಳಕ್ಕೆ ಇಳಿಯುತ್ತಾನೆ. 'ಸತಿಯು ಪ್ರಿಯತಮ ಭಾವ ಅವಳ ತಾಯ್ತನವಲ್ಲಿ ; ಗಂಡನಿಗೆ ತಾಯಾಗಬಲ್ಲ ಹೆಂಡತಿ ದೇವಿ' ಎನ್ನುತ್ತಾನೆ. ಗಾಯತ್ರೀ ಮಂತ್ರದ ದೃಷ್ಟಾರನಾಗುತ್ತಾನೆ. ಅದಿತಿ ಮಾತೆಯ ದರ್ಶನ ಪಡೆಯುತ್ತಾನೆ.

ಸುದಾಸನ ಅಶ್ವಮೇಧ ಯಾಗಕ್ಕೆ ಕಾರಣಾಂತರಗಳಿಂದ ವಿಶ್ವಾಮಿತ್ರರೇ ಅಧ್ವರ್ಯುನಾಗುತ್ತಾರೆ. ಯಜ್ಞದ ಕೊನೆಯ ಭಾಗದಲ್ಲಿ ಅಶ್ವಶಯ್ಯ, ಅಶ್ವಕೂಟ ಸಂದರ್ಭಗಳು ಬಂದಾಗ ವಿಶ್ವಾಮಿತ್ರರೇ ಸುದೇವಿಯನ್ನು ಅಂಥಕೃತ್ಯಕ್ಕೆ ಅಣಿಗೊಳಿಸುತ್ತಾರೆ:

"ಇದೊಂದು ಪಳಬಳಕೆ
ಪ್ರಾಕ್ತನ, ಪುರಾತನ ಯುಗದಿಂದೆಮಗೆ
ಬಂದ ಸಂಕೇತ ವಿಧಿ . . . . . .
. . . .
ಸೋಲಿಸುವುದು ಲೇಸು, ಎದುರಿಸುತಿಂಥ ಘಟನೆಯನು
ಲಕ್ಷಜನ ಸ್ತೋತ್ರಮಾನನು ನಿರಾಶೆಗೊಳಿಸುವದೇಕೆ ?"[2]

ತ್ರಿಶಂಕುವನ್ನು ಸ್ವರ್ಗಕ್ಕೇರಿಸುವ ಘೋರ ನಿರ್ಧಾರವನ್ನು ವಿಶ್ವಾಮಿತ್ರರು ತೆಗೆದುಕೊಳ್ಳುತ್ತಾರೆ;

ಸಾಹಸವ ಕೈಗೊಳುವೆ ಸ್ನೇಹ ಋಣ ನಿಗಳೆಂದು[3] ಶುನಃಶೇಪ ವಿಶ್ವಾಮಿತ್ರರನ್ನು ಭೇಟಿಯಾದಾಗ ಅವನಿಗೆ ಇತ್ತ ಸಲಹೆ ಹೀಗಿವೆ:

"ನೀನು
ಅರಿತಯಾಜ್ಞಕನಾಗು ! . . .
. . . . . .
ಆಹ್ವಾನಿತರು ಮೊದಲು ವರುಣನೇನು ? . . ."[4]

---

1 ಸಂ.ರಾ. ಪು. ೪೯೨

2 ಸಂ. ೨ ಪು. ೩೫೫

3 ಸಂ. ೨. ಪು. ೫೦೫

4 ಸಂ. ೨ ಪು. ೬೨೨

ಸತ್ಯರಥೆಯು ಸಾವಿನಿಂದ ಸತ್ಯವ್ರತನಿಗೆ ಅನಾಥ ಪ್ರಜ್ಞೆ ಮೂಡುವದು. ಹೆಂಡತಿಯ ಕೊನೆಯ ಆಸೆಯಂತೆ ಸದೇಹ ಸ್ವರ್ಗದ ಬಯಕೆ ಆತನಲ್ಲಿ ಕಾಣಿಸಿ ಕೊಳ್ಳುವದು. ಸದೇಹ ಸ್ವರ್ಗ ಸಾಧ್ಯವಿಲ್ಲವೆಂದು ವಿಶ್ವಾಮಿತ್ರರಿಗೂ ಗೊತ್ತಿದೆ. ಸಾಂಪ್ರದಾಯಿಕ ಕಥೆಯಲ್ಲಂತೂ ವಸಿಷ್ಠರು ತ್ರಿಶಂಕುವಿಗೆ ಶಾಪ ಕೊಡುತ್ತಾರೆ. ಆತ ಹೊಲೆಯನಾಗುತ್ತಾನೆ. ಆದರೆ ವಿಶ್ವಾಮಿತ್ರರಿಗೆ ಸ್ನೇಹಋಣವಿದೆ. ತಾವಿಲ್ಲದ ಸಮಯದಲ್ಲಿ ಕಷ್ಟಕಾಲದಲ್ಲಿ ಅವರ ಹೆಂಡತಿ ಮಕ್ಕಳನ್ನು ತ್ರಿಶಂಕು ಕಾಪಾಡಿರುತ್ತಾನೆ. ವಿಶ್ವಾಮಿತ್ರರು ತ್ರಿವಿಕ್ರಮ ತ್ರಿಪದವನ್ನು ಇಡುತ್ತಾರೆ. ತ್ರಿಶಂಕು ಸ್ಮೃತಿ, ಬುದ್ಧಿ-ಕಲ್ಪಕತೆಗಳೆಂಬ ಲೋಕಗಳಲ್ಲಿ ಸಂಚರಿಸುತ್ತ ಅವನ್ನೇ ಸ್ವರ್ಗವೆಂದು ಭ್ರಮಿಸುತ್ತಾನೆ. ಆನಂತರ ಸ್ವರ್ಗಕ್ಕಿಂತ ಹುಲ್ಲಿನ ಎಸಳೇ ಮೇಲೆಂದು ಸತ್ಯವ್ರತ ಭೂಮಿಯತ್ತ ಹೊರಳುತ್ತಾನೆ, ವಿಶ್ವಾಮಿತ್ರರು ಅವನ ವಿಕಲ್ಪವನ್ನು ಗಮನಿಸಿ ಮೇಲಕ್ಕೆತ್ತುತ್ತಾರೆ. ಅತೋಭ್ರಷ್ಟ, ತತೋಭ್ರಷ್ಟ ಎಂಬ ತ್ರಿಶಂಕುಪ್ರಜ್ಞೆ ಕಾಡುತ್ತದೆ. ಭೂಮಿಯ ಆಕರ್ಷಣೆ ಒಂದು ಕಡೆಗೆ, ವಿಶ್ವಾಮಿತ್ರರ ಊರ್ಧ್ವಗಮನ ದೃಷ್ಟಿ ಇನ್ನೊಂದು ಕಡೆಗೆ ಇವೆರಡರ ನಡುವೆ ಸಿಕ್ಕಿ ಬಳಲುವ ಸತ್ಯವ್ರತನಿಗೆ ಸರಸ್ವತೀ ದರ್ಶನವಾಗುತ್ತದೆ. ಅಂತಃಸ್ಫುರಣ ಉಕ್ಕುತ್ತದೆ. ಇಳಾದೇವಿಯ ದನಿ ಕೇಳುತ್ತದೆ:

ಉದ್ಧಣಿಸಿ ಬಂದಿರುವಿ! ಮತ್ತೆ ಧರೆಗಿಳಿವ ಮುನ್ನ
ಮುಗಿಸು ತಪವನು ರುತ್ಮ ಜನ್ಮ ನಕ್ಷತ್ರದಲಿ
ದೇವ ಮಾನವಗಿಹುದು ಭೂಮಿ ಕಲ್ಯಾಣಕ್ಷೇತ್ರ
ಮೊದಲು ಮಾಗಿರಲಿ ತಪ ಋತತಿರನ ರಕ್ಷೆಯಲಿ"[1]

ಇತ್ತ ನೆಲದ ಮೇಲೂ ಇರದ, ಅತ್ತ ಮುಗಿಲಿಗೂ ಸೇರದ ಸ್ಥಿತಿ ತ್ರಿಶಂಕು ಸ್ಥಿತಿ, ತ್ರಿಶಂಕುಪ್ರಜ್ಞೆ. ಇದು ಆಧುನಿಕ ಚಿಂತಕರನ್ನು ಸಾಕಷ್ಟು ಕಾಡಿದೆ. C.D Broad ತಮ್ಮ Five Types of Ethical Theories ನಲ್ಲಿ ಹೀಗೆ ಬರೆಯುತ್ತಾರೆ: "ನೈತಿಕ ಸಮಸ್ಯೆ ತುಂಬ ಸಂಕೀರ್ಣ. ಅದಕ್ಕೆ ಇಂತಹದೇ ಪರಿಹಾರವೆಂದು ಸೂಚಿಸುವುದು ಕಠಿಣ. ಮನುಷ್ಯನ ಸ್ಥಿತಿ ತುಂಬ ವಿಚಿತ್ರ. ಕುದುರೆಗಳ ಪಾಗದಲ್ಲಿ ಅವನಿಗೆ ಸಮಾಧಾನವಿಲ್ಲ. ಅಥವಾ ಅಲಂಕೃತ ಸಾಧನ Drawing Roomನಲ್ಲಿ ಅವನು ಸುಖಿಯಲ್ಲ........[2]

ಆಧುನಿಕ ಮಾನವನ ಅನಾಥ ಪ್ರಜ್ಞೆಯ ಸಮಸ್ಯೆ ಇಲ್ಲಿ ಪುರಾಣ[3] ಪ್ರತೀಕವನ್ನು ತಾಳುತ್ತದೆ. "ಐಂದ್ರಯಿಕ ಜೀವನವಲ್ಲ, ಅಂತಃಸ್ಫುರಣ (Intvition) ದಿಂದ ಮಾತ್ರ ಈ ಸಮಸ್ಯೆಗೆ ಪರಿಹಾರವೆಂದು ಸತ್ಯವ್ರತನಿಗೆ ಹೊಳೆಯು

---

1 ಸಂ ೨ ಪು. ೫೪೫

2 London, Kegan Paul, 1930

3 ಪ್ರಸ್ತಾವನೆ

ತ್ತದೆ. ಆಧುನಿಕ ಮಾನವನೂ ತ್ರಿಶಂಕುಪ್ರಜ್ಞೆಯೊಳಗಿಂದ ಹೀಗೆಯೆ ಹೊರಬೀಳ ಬೇಕಾಗುತ್ತದೆ''[3] ಎಂದು ವಿನಾಯಕರು ಸೂಚಿಸುತ್ತಾರೆ.

V

ಉಪಸಂಹಾರ

ಗೋಕಾಕರ ಜೀವನ ಜಿಜ್ಞಾಸೆಯು ಯಾವುದೇ ಒಂದು ಪರಿಮಿತಿಗೆ ಕಟ್ಟು ಬಿದ್ದಿಲ್ಲ. ಜೀವನದ ಪೂರ್ಣಯೋಗ ದರ್ಶನವನ್ನು ಮಾಡಿಸುವದೇ ಅವರ ಜಿಜ್ಞಾಸೆಯ ಗುರಿ. 'ಒಂದೊಂದು ತಂತಿಯನು ಹಿಡಿದವರುಂಟು, ನನ್ನಿರವು ಬೇರೆ ದಶದಿಶೆಗಳನೂ ಆಳಿವೆನು........'

ಸಮಗ್ರತೆಯ ಸ್ವೀಕಾರವು ಕಲಸುಮೇಲೋಗರವಲ್ಲ. ಸಮಗ್ರತೆಯಲ್ಲಿ ಒಂದು ಕೇಂದ್ರ ಸತ್ತ್ವವು ವಿಕಾಸಗೊಳ್ಳುತ್ತಿರುತ್ತದೆ. ಮಾನವ ಪ್ರಪಂಚದಲ್ಲಿ ಅತಿಮಾನಸ ಜ್ಞಾನವು ಅರಳಲಿದೆ. ಈ ದಿವ್ಯಜೀವನದ ಅಭಿವ್ಯಕ್ತಿಯು ಕವಿಯ ಕನಸು ಮಾತ್ರ ವಾಗಿರದೆ ಋಷಿದರ್ಶನವೂ ಆಗಿದೆ. ಜೀವನದ ವಿಕೃತಿಯನ್ನೆಲ್ಲ ಸುಕೃತಿಯನ್ನಾಗಿ ಮಾಡುವ ಸಾಹಿತ್ಯ ನಿರ್ಮಿತಿಯಲ್ಲಿ ಗೋಕಾಕರಿಗೆ ವಿಶ್ವಾಸವಿದೆ ಸತ್ಯ, ಸೌಂದರ್ಯ, ಕಲ್ಯಾಣ, ಶಕ್ತಿ ಮತ್ತು ಪ್ರೀತಿ–ಈ ಪಂಚದೈವತಗಳ ಪಂಚಾರತಿಯನ್ನು ಅವರು ಎತ್ತಿದ್ದಾರೆ.

ಈ ಕವಿಯಲ್ಲಿ ಮೆಚ್ಚತಕ್ಕ ಮುಖ್ಯವಾತು ಬಾಳಿನ ಮರ್ತ್ಯದ ವಿಷಯವಾಗಿ ಆತನಿಟ್ಟ ವಿಶ್ವಾಸ: ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು ?

ಕವಿಯ ರೀತಿ ಭಕ್ತನದು, ನುಡಿ ಭಾಗವತನ ಪ್ರಾರ್ಥನೆಯ ರೂಪದ್ದು :

> ಬದುಕಿಸಿದೆ ನೀನೆನ್ನ ಯಾವ ಬದುಕೇನೆನಗೆ?
> ನಿನ್ನಾಣತಿಯೆ ನನ್ನ ಜೀವಿತದ ಗುರಿಯು

---

3 ಪ್ರಸ್ತಾವನೆ

डಾ. ಕೆ. ಕೆಂಪೇಗೌಡ

ಭಾರತೀಯ ಭಾಷೆ ಮತ್ತು ಸಾಹಿತ್ಯದಲ್ಲಿ ಉರ್ದು ಭಾಷೆ ಮತ್ತು ಸಾಹಿತ್ಯ :

[ಭಾರತೀಯ ಭಾಷೆ ಮತ್ತು ಸಾಹಿತ್ಯದಲ್ಲಿ ಉರ್ದು ಭಾಷೆ ಮತ್ತು ಸಾಹಿತ್ಯಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಲೇಖಕರು ಉರ್ದುವನ್ನು ಶಬ್ದವನ್ನಾಗಿ, ಭಾಷೆಯನ್ನಾಗಿ ಮತ್ತು ಸಾಹಿತ್ಯವನ್ನಾಗಿ ವಿವರಿಸಿದ್ದಾರೆ. ಭಾರತವನ್ನಾಳಿದ ಮುಸ್ಲಿಮರ, ಮೊಗಲರ ಮತ್ತು ಇಂಗ್ಲೀಷರ ಕಾಲದಲ್ಲಿ ಈ ಭಾಷೆ ಹೊಂದಿದ ಬದಲಾವಣೆಗಳನ್ನು ಆಕರ್ಷಕವಾಗಿ ಅವರು ನಮ್ಮೆದುರು ಇಟ್ಟಿದ್ದಾರೆ. ಹೆಸರಾಂತ ಲೇಖಕ ಮುನ್ಷಿ ಪ್ರೇಮಚಂದ ಹಿಂದಿ ಮತ್ತು ಉರ್ದು–ಎರಡೂ ಭಾಷೆಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿದರು.—ಸಂ]

ಆಧುನಿಕ ಭಾರತೀಯ ಆರ್ಯ ಭಾಷೆಗಳಲ್ಲಿ ಉರ್ದು ಭಾಷೆ ಬಹಳ ಮುಖ್ಯವಾದದ್ದು. ಇದು ಪ್ರಾಚೀನ ಇತಿಹಾಸವನ್ನು, ಸಮೃದ್ಧವಾದ ಸಾಹಿತ್ಯವನ್ನು ಪಡೆದುಕೊಂಡಿದೆ. ಇದು ದೆಹಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಶೌರಸೇನಿ ಅಪಭ್ರಂಶದಿಂದ ವಿಕಾಸಗೊಂಡಿದ್ದು. ಈ ಭಾಷೆ ಸುಮಾರು 12ನೆಯ ಶತಮಾನದಲ್ಲಿ ರೂಪುಗೊಂಡಿರಬಹುದೆಂದು ಕೆಲವರ ಅಭಿಪ್ರಾಯ. ಉರ್ದು ಜಮ್ಮು ಮತ್ತು ಕಾಶ್ಮೀರಗಳಲ್ಲಿ ಆಡಳಿತ ಭಾಷೆಯಾಗಿದ್ದರೆ, ಪಾಕಿಸ್ತಾನದಲ್ಲಿ ಇದು ರಾಷ್ಟ್ರಭಾಷೆಯಾಗಿದೆ. ಭಾರತದಲ್ಲಿ ಸುಮಾರು ನಾಲ್ಕು ಕೋಟಿಗೂ ಹೆಚ್ಚು ಜನರು ಉರ್ದು ಭಾಷೆ ಆಡುವವರಿದ್ದಾರೆ, ಪಾಕಿಸ್ತಾನದಲ್ಲಿ ಸುಮಾರು ಮೂರು ಕೋಟಿ ಜನರು ಉರ್ದು ಭಾಷೆ ಆಡುವವರಿದ್ದಾರೆ. ಭಾರತದ ಸಂವಿಧಾನ ಮಾನ್ಯ ಮಾಡಿರುವ ಹದಿನಾಲ್ಕು ರಾಷ್ಟ್ರ ಭಾಷೆಗಳಲ್ಲಿ ಉರ್ದು ಭಾಷೆಯೂ ಕೂಡ ಸೇರಿದೆ. ಉರ್ದು ಸಾಕಷ್ಟು ಪ್ರಾಚೀನತಮ ಭಾಷೆಯಾಗಿದ್ದರೂ, ಇದರ ವ್ಯಾಕರಣ, ವಾಕ್ಯ ರಚನೆ ಮುಂತಾದುವುಗಳು ಹಿಂದಿ ಭಾಷೆಯನ್ನು ಹೆಚ್ಚು ಹೋಲುತ್ತವೆ. ಹಿಂದಿ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚು, ಉರ್ದು ಭಾಷೆಯಲ್ಲಿ ಪರ್ಷಿಯನ್ ಮತ್ತು ಅರಬಿಕ್ ಭಾಷೆಗಳ ಶಬ್ದಗಳು ಹೆಚ್ಚು.

ಉರ್ದು ದೆಹಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಬ್ರಜಿ, ಹರ‍್ಯಾನಿ ಪಂಜಾಬಿ, ಮಾರವಾಡಿ ಮುಂತಾದ ಭಾಷೆಗಳ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದು ಅವುಗಳಿಂದ ಅನೇಕ ಶಬ್ದಗಳನ್ನು ಸ್ವೀಕಾರ ಮಾಡಿಕೊಂಡಿದೆ. ಅನಂತರ ಇದು ಪರ್ಷಿಯನ್, ಅರಬಿಕ್, ತುರ್ಕಿ ಭಾಷೆಗಳ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದು ಅವುಗಳಿಂದಲೂ ಅನೇಕ ಶಬ್ದಗಳನ್ನು ಸ್ವೀಕಾರ ಮಾಡಿಕೊಂಡಿದೆ. ಉರ್ದು ಅನೇಕ ಪ್ರಾಕೃತ ಶಬ್ದಗಳನ್ನು ಮೊದಲಿನಿಂದಲೂ ಉಳಿಸಿಕೊಂಡು ಬಂದಿದೆ. ಪರ್ಷಿಯನ್, ಅರಬಿಕ್, ತುರ್ಕಿ ಮುಂತಾದ ಭಾಷೆಗಳನ್ನು ಆಡುತ್ತಿದ್ದ ಮುಸ್ಲಿಮ್ ವಲಸೆಗಾರರು ಆಫ್‌ಘಾನಿಸ್ಥಾನದಿಂದ ಬಂದು ಲಾಹೋರಿನಲ್ಲಿ ನೆಲಸಿದರು. ಮತ್ತೆ ಇವರು ಕಾಲಾನಂತರ ಲಾಹೋರಿನ ಕಡೆಯಿಂದ ದೆಹಲಿಯ ಕಡೆಗೆ ವಲಸೆ ಬಂದು ನೆಲಸಿದರು. ಇಂತಹ ಆಲೆಮಾರಿಗಳ, ವಲಸೆಗಾರರ, ಸೂಫಿಗಳ, ವ್ಯಾಪಾರಿಗಳ ಸಂಪರ್ಕದಿಂದ ಉರ್ದು ಭಾಷೆ ರೂಪುಗೊಂಡಿತು.

ಉರ್ದು ಎಂಬ ಶಬ್ದ ತುರ್ಕಿ ಭಾಷೆಯಿಂದ ಬಂದದ್ದು, ಇದಕ್ಕೆ ತುರ್ಕಿ ಭಾಷೆಯಲ್ಲಿ ಅಲೆಮಾರಿಗಳು, ವಲಸೆಗಾರರು, ದಾಳಿಕೋರರು, ಯುದ್ಧ ಪ್ರಿಯರು, ಎಂಬ ಅರ್ಥವಿದ್ದಿತು. ಚೀನಿ ಭಾಷೆಯಲ್ಲಿ ಬರ್ದೋಸ್ ಅಥವಾ ಬರ್ದೊ ಎಂಬ ಶಬ್ದ ಯುದ್ಧ ಪ್ರಿಯರು, ದಾಳಿಕೋರರು, ದರೋಡೆಕೋರರು, ವಲಸೆಗಾರರು, ಅಲೆಮಾರಿಗಳು ಎಂಬರ್ಥದಲ್ಲಿ ದೊರೆಯುತ್ತದೆ. ಇದು ಹೂವಾಂಗ್ ಹೋ ಎಂಬುದರ ತದ್ಭವ ರೂಪವೆಂದು ಕೆಲವರ ಅಭಿಪ್ರಾಯ. ಸುಮಾರು ನಾಲ್ಕನೇ ಶತಮಾನದಲ್ಲಿ ತುರ್ಕಿ ಭಾಷೆಯಲ್ಲಿ ಬರ್ದೋ ಎಂಬ ಶಬ್ದ ದೊರೆಯುತ್ತದೆ. ಈ ಶಬ್ದ ತುರ್ಕಿ ಭಾಷೆಯಿಂದ ಬಾಬರನ ಕಾಲದಲ್ಲಿ ಭಾರತಕ್ಕೆ ಬಂದಿರಬಹುದೆಂದು ಕೆಲವರು ಊಹಿಸಿದರೆ, ಮತ್ತೆ ಕೆಲವರು ಈ ಶಬ್ದ ಬಾಬರನಿಗಿಂತಲೂ ಹಿಂದೆಯೇ ಭಾರತಕ್ಕೆ ಬಂದಿರಬಹುದೆಂದು ಊಹಿಸಿದ್ದಾರೆ. ಭಾರತಕ್ಕೂ ತುರ್ಕಿಗೂ ಬಾಬರನಿಗಿಂತಲೂ ಹಿಂದೆ ನಿಕಟವಾದ ಸಂಪರ್ಕವಿದ್ದಿತು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಈ ಶಬ್ದ ಪೋಲಿಷ್ ಭಾಷೆಯಲ್ಲಿ ಹೊರ್ದೋ ಎಂದೂ, ಜರ್ಮನ್ ಭಾಷೆಯಲ್ಲಿ ಹೊರ್ದೋ ಎಂದೂ, ಫ್ರೆಂಚ್ ಭಾಷೆಯಲ್ಲಿ ಹೊರ್ದ್ ಎಂದೂ, ಇಂಗ್ಲಿಷ್ ಭಾಷೆಯಲ್ಲಿ ಹೊರ್ದ್ ಎಂದೂ, ರಷ್ಯನ್ ಭಾಷೆಯಲ್ಲಿ ಬರ್ದು ಎಂದೂ, ತುರ್ಕಿ ಭಾಷೆಯಲ್ಲಿ ಬರ್ದೋ ಎಂದೂ ಭಾರತೀಯ ಭಾಷೆಗಳಲ್ಲಿ ಉರ್ದು ಎಂದೂ ಬೇರೆ ಬೇರೆ ರೂಪಗಳಲ್ಲಿ, ಬೇರೆ ಬೇರೆ ಅರ್ಥದಲ್ಲಿ ದೊರೆಯುತ್ತದೆ. ಉರ್ದು ಎಂಬುದಕ್ಕೆ ಭಾರತದಲ್ಲಿ ಸೈನಿಕರ ನೆಲೆ, ರಾಜ ಸೈನಿಕರ ಶಿಬಿರ, ಸೈನಿಕರ ಬಜಾರು ಎಂಬರ್ಥವಿದ್ದರೆ, ಇಂಗ್ಲಿಷಿನ ಹೊರ್ದ ಎಂಬ ಶಬ್ದಕ್ಕೆ ವಲಸೆಗಾರರು, ಅಲೆಮಾರಿಗಳು ಎಂಬರ್ಥವಿದೆ. ತುರ್ಕಿಯ ಬರ್ದೋ ಎಂಬ ಶಬ್ದ >ಬರ್ದು ಎಂದಾಗಿ ಅದೇ ಉಚ್ಚಾರದಲ್ಲಿ>ಉರ್ದು ಎಂದು ಬದಲಾಗಿರಬಹುದೆಂದು ಹೆಚ್ಚು ಜನರ ಅಭಿಪ್ರಾಯ. ಇದು ಮೂಲತಃ ಚೀಣಿ ಭಾಷೆಯಿಂದ

ಮಂಗೋಲಿಯನ್ ಮತ್ತು ತುರ್ಕಿ ಭಾಷೆಗಳಿಗೆ ಬಂದು ಅನಂತರ ತುರ್ಕಿಯಿಂದ ಭಾರತಕ್ಕೆ ಬಂದಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೊಘಲರ ಕಾಲದಲ್ಲಿ ರಾಜ ಸೈನಿಕರಿಗೆ ಅಗತ್ಯವಾಗಿ ಬೇಕಾಗುವ ಸಾಮಾನು ಗಳನ್ನು ಕೊಳ್ಳಲು ಕೆಲವು ಸೈನಿಕ ಬಜಾರುಗಳು ಇರುತ್ತಿದ್ದವು. ಅಂತಹ ಬಜಾರು ಗಳನ್ನು ಉರ್ದು ಬಜಾರು ಎಂದು ಕರೆಯುತ್ತಿದ್ದರು. ಇಂತಹ ಉರ್ದು ಬಜಾರುಗಳು ದೆಹಲಿ, ಗೋರಖ್‌ಪುರ, ಗಾಜಿಪುರ, ಮುಂತಾದ ಕಡೆಗಳಲ್ಲಿ ಇದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಇದೇ ರೀತಿ ಬಾಬರನ ಕೆಲವು ನಾಣ್ಯಗಳ ಮೇಲೆ ಉರ್ದು ಎಂದು ಮುದ್ರಿಸಲಾಗಿದೆ. ಹಾಗೆಯೇ ಅಕ್ಬರನ ಕೆಲವು ನಾಣ್ಯಗಳ ಮೇಲೆ ಉರ್ದು–ಎ–ಜಫರ್ ಕರೀನ್ ಎಂದು ಮುದ್ರಿಸಿರುವ ಕೆಲವು ನಾಣ್ಯಗಳು ದೊರೆಯುತ್ತವೆ. ಉರ್ದು–ಎ–ಜಫರ್ ಕರೀನ್ ಎಂದರೆ ವಿಜಯಿಯಾದ, ವಿಜಯಶ್ರೀ ಯಾದ ಎಂಬರ್ಥವಿದೆ. ಇದು ಅವರ ವಿಜಯವನ್ನು ಸಾರುವ ಫಲಕ ಎಂದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಇದು ನಾಣ್ಯಗಳನ್ನು ಟಂಕಿಸುತ್ತಿದ್ದ ಟಂಕಸಾಲೆಯ ಹೆಸರು ಉರ್ದು ಎಂದಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಈ ದಿಸೆಯಲ್ಲಿ ಯಾವುದನ್ನೂ ಖಚಿತವಾಗಿ ಹೇಳಲು ಬರುವುದಿಲ್ಲ. ಜಹಾಂಗೀರನು ದಕ್ಷಿಣ ಭಾರತಕ್ಕೆ ಬಂದಾಗ ರಸ್ತೆಯ ಮಧ್ಯದಲ್ಲಿ ಕೆಲವು ನಾಣ್ಯಗಳನ್ನು ಮುದ್ರಿಸಿದನು. ಈ ನಾಣ್ಯಗಳ ಮೇಲೆ ಉರ್ದು ದರ್ ರಾಹೆ ದಖನ್ ಎಂದು ಮುದ್ರಿಸಲಾಗಿದೆ. ಶಹಜಹಾನನೂ ಕೂಡ ಅಕ್ಬರನಂತೆಯೇ ಕೆಲವು ನಾಣ್ಯಗಳನ್ನು ಮುದ್ರಿಸಿದನು. ಆ ನಾಣ್ಯಗಳ ಮೇಲೆ ಉರ್ದು–ಎ–ಜಫರ್ ಕರೀನ್ ಎಂದು ಮುದ್ರಿಸಲಾಗಿದೆ. ಈ ದೊರೆಯುವ ಮುದ್ರಿಕೆಗಳನ್ನು ಗಮನಿಸಿದರೆ ಬಾಬರನ ಕಾಲದಲ್ಲಿ ಉರ್ದು ಎಂಬ ಶಬ್ದ ಸೈನಿಕರ ನೆಲೆ, ಸೈನಿಕರ ಶಿಬಿರ, ಸೈನಿಕರ ಬಜಾರು ಎಂಬರ್ಥ ಹೊಂದಿದ್ದು ಕಾಲಾ ನಂತರ ಶಹಜಹಾನನ ಕಾಲದ ಹೊತ್ತಿಗೆ ಅದು ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆ ಎಂಬರ್ಥವನ್ನು ಪಡೆದಿರಬಹುದೆಂದು ಇವುಗಳಿಂದ ಊಹಿಸಬಹುದಾಗಿದೆ.

ಬಾಬರನ ಕಾಲದಲ್ಲಿ ರಾಜನ ಸೈನಿಕರು ದಿಲ್ಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಖಡಿ ಬೋಲಿ ಭಾಷೆಯನ್ನು ತಮ್ಮ ಭಾಷೆಯನ್ನಾಗಿ ಬಳಸಿಕೊಂಡರು. ಈ ಖಡಿ ಬೋಲಿ ಭಾಷೆ ಪಂಜಾಬಿ, ಹರ್‍ಯಾನಿ, ಮಾರವಾಡಿ, ಸಿಂಧಿ ಭಾಷೆಗಳ ಪ್ರಭಾವಕ್ಕೆ ಹೆಚ್ಚು ಒಳಗಾಗಿ ಅವುಗಳಿಂದ ಅನೇಕ ಶಬ್ದಗಳನ್ನು ಸ್ವೀಕಾರ ಮಾಡಿ ಕೊಂಡಿದ್ದಿತು. ದೆಹಲಿಯಿಂದ ಆಗ್ರಾಕ್ಕೆ ರಾಜಧಾನಿಯನ್ನು ಬದಲಾಯಿಸಿದ ಮೇಲೆ ಆ ಸೈನಿಕ ನೆಲೆಗಳನ್ನು ಬದಲಾಯಿಸಲಾಯಿತು. ಆಗ ಸೈನಿಕರ ಖಡಿ ಬೋಲಿ ಭಾಷೆಯ ಮೇಲೆ ಬ್ರಜ ಭಾಷೆಯ ಪ್ರಭಾವ ಉಂಟಾಯಿತು. ಇದೇ ರೀತಿ ಮುಘಲರ ಕಾಲದಲ್ಲಿ ಪರ್ಷಿಯನ್, ಅರಬಿಕ್, ತುರ್ಕಿ ಮುಂತಾದ ಭಾಷೆಗಳ ಪ್ರಭಾವ ಈ ಖಡಿ ಬೋಲಿ ಭಾಷೆಯ ಮೇಲೆ ಉಂಟಾಗಿ ಅವುಗಳಿಂದ ಅನೇಕ ಶಬ್ದಗಳನ್ನು ಸ್ವೀಕಾರ ಮಾಡಿ ಕೊಂಡಿತು. ಮೂಲತಃ ವ್ಯಾಕರಣ ಖಡಿ ಬೋಲಿಯಾದರೂ ಈ ಬೇರೆ ಬೇರೆ

ಶಬ್ದಗಳ ಸ್ವೀಕರಣದಿಂದ ಖಡಿ ಬೋಲಿಯು ಬೇರೊಂದು ರೂಪ ರೂಪುಗೊಂಡಿತು. ಶಹಜಹಾನನು ತನ್ನ ರಾಜಧಾನಿಯನ್ನು ಮತ್ತೆ ಆಗ್ರಾದಿಂದ ದೆಹಲಿಗೆ ಬದಲಾಯಿಸಿದನು. ಇದರಿಂದ ಸೈನಿಕ ನೆಲೆಗಳು ಬದಲಾದವು. ಶಹಜಹಾನನು ದೆಹಲಿಯಲ್ಲಿ ಕೆಂಪು ಕಲ್ಲಿನಲ್ಲಿ ಕೋಟೆಯೊಂದನ್ನು ಕಟ್ಟಿಸಿದನು. ಇದಕ್ಕೆ ಲಾಲ್‌ಕಿಲಾ ಎಂಬ ಹೆಸರನ್ನು ಇಟ್ಟನು. ಇದು ಕೆಂಪು ಕಲ್ಲಿನ ಕೋಟೆಯಾದ ಕಾರಣ ಲಾಲ್ ಕಿಲಾ ಎಂಬ ಹೆಸರನ್ನು ಪಡೆಯಿತು. ಈ ಹೆಸರು ಹೆಚ್ಚು ಪ್ರಚಾರಕ್ಕೆ ಬಂದಿತು. ಆ ಕೋಟೆಯ ಸುತ್ತಮುತ್ತಲ ಪ್ರದೇಶ ಸುಂದರವಾಗಿದ್ದ ಕಾರಣ ಆ ಸ್ಥಳವನ್ನು ಕೆಲವರು ಉರ್ದು ಎಂದು ಕರೆದರು. ಮತ್ತೆ ಕೆಲವರು ಆ ಸ್ಥಳವನ್ನು ಉರ್ದು–ಎ–ಮುಅಲ್ಲ ಎಂದು ಕರೆದುಕೊಂಡರು. ಮುಅಲ್ಲ ಎಂಬ ಶಬ್ದ ಅರಬ್ಬಿ ಶಬ್ದ. ಇದಕ್ಕೆ ಸುಂದರವಾದ, ದೊಡ್ಡದಾದ, ಶ್ರೇಷ್ಠವಾದ ಎಂಬರ್ಥವಿದೆ. ಈ ಹೆಸರು ಕಾಲಾನಂತರ ಹೆಚ್ಚು ಪ್ರಚಾರಕ್ಕೆ ಬಂದಿತು. ಆ ಕ್ಷೇತ್ರದಲ್ಲಿ ಕೋಟೆ ಇದ್ದ ಕಾರಣ ಕೆಲವರು ಕಿಲಾ ಮುಅಲ್ಲ ಎಂತಲೂ ಕರೆದರು. ಸೈನಿಕರ ನೆಲೆಬದಲಾಗದೆ ಅದೇ ಸ್ಥಳದಲ್ಲಿ ಸ್ಥಿರವಾಗಿ ಉಳಿದು ಅವರು ಮೊದಲಿನಿಂದಲೂ ಆಡುತ್ತಿದ್ದ ಭಾಷೆಯನ್ನು ಆಡತೊಡಗಿದುದರಿಂದ ಆ ಕ್ಷೇತ್ರದಲ್ಲಿ ಆ ಭಾಷೆಯೇ ಹೆಚ್ಚು ಬಳಕೆಗೆ ಬಂದಿತು. ಅವರ ಭಾಷೆಯನ್ನು ಕೆಲವು ಮುಸಲ್ಮಾನರು ಜಿ ಬಾನ್–ಎ–ಉರ್ದು ಎಂದು ಕರೆದರು. ಆ ಮುಅಲ್ಲರಲ್ಲಿ ಆ ಭಾಷೆ ಬಳಕೆಯಲ್ಲಿದ್ದುದರಿಂದ ಅದನ್ನು ಜಿ ಬಾನ್ ಎ ಉರ್ದು-ಎ-ಮುಅಲ್ಲ ಎಂತಲೂ ಕರೆದುಕೊಳ್ಳಲಾಯಿತು ಕಾಲಾನಂತರ ಆ ಕ್ಷೇತ್ರದ ಭಾಷೆಯನ್ನು ಉರ್ದು ಎಂದು ಹೆಸರಿಸಿಕೊಳ್ಳಲಾಯಿತು. ಶಹಜಹಾನನು ವಾಸಿಸುತ್ತಿದ್ದ ಸ್ಥಳವನ್ನು ಶಹಜಹಾನಾಬಾದ್ ಎಂದೂ, ಶಹಜಹಾನಾಬಾದ್‌ನಲ್ಲಿ ಬಳಕೆಯಲ್ಲಿದ್ದ ಭಾಷೆಯನ್ನು ಶಹಜಹಾನಿ ಉರ್ದು ಎಂದು ಕರೆದುಕೊಳ್ಳಲಾಯಿತು. ಇದೇ ಮುಂದೆ ಉರ್ದು ಭಾಷೆ ಎಂಬ ಹೆಸರನ್ನು ಪಡೆದುಕೊಂಡಿತು. ಉರ್ದು–ಎ–ಮುಅಲ್ಲ ಈ ಉರ್ದುವಿನೊಡನೆ ನಿಕಟವಾದ ಸಂಬಂಧವನ್ನು ಪಡೆದುಕೊಂಡಿತು. ಈ ದಿಸೆಯಲ್ಲಿ ಖಚಿತವಾದ ಯಾವ ಆಧಾರಗಳು ದೊರೆಯುವುದಿಲ್ಲ. ಶಹಜಹಾನನ ಕಾಲದಲ್ಲಿ ಉರ್ದು ಸ್ಥಳನಾಮವಾಗಿದ್ದರೂ ಅಲ್ಲಿನ ಭಾಷೆಗೂ ಅದೇ ಹೆಸರು ಬಳಕೆಗೆ ಬಂದಿತು. ಆದರೆ ಉರ್ದು–ಎ–ಮುಅಲ್ಲ ಎಂಬ ಶಬ್ದ ದೊಡ್ಡದಾಗಿದ್ದ ಕಾರಣ ಅದರ ಮುಅಲ್ಲ ಎಂಬ ಶಬ್ದ ಕಾಲಕ್ರಮೇಣ ಬಿದ್ದುಹೋಗಿ ಉರ್ದು ಎಂಬ ಶಬ್ದ ಮಾತ್ರ ಉಳಿಯಿತು. ಉರ್ದು ಎಂಬ ಶಶ್ದವನ್ನು ಭಾಷೆ ಎಂಬರ್ಥದಲ್ಲಿ ಕರೆಯುತ್ತಿದ್ದ ಜಬಾನ್–ಎ–ಉರ್ದು ಎಂಬ ಶಬ್ದದ ಜಬಾನ್ ಎಂಬ ರೂಪ ಕಾಲಕ್ರಮೇಣ ಬಿದ್ದುಹೋಗಿ ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ ಉಳಿಯಿತು. ಹೀಗೆ ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು.

1207ರಲ್ಲಿ ಕುತುಬ್ ದೀನ್ ಐಬಕ್ ಎಂಬಾತನು ದಿಲ್ಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ ಅವನ ಸೈನಿಕರು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಭಾಷೆಯನ್ನು ಬಳಸಲಾರಂಬಿಸಿದರು. ಬಾಬರನ ಆಗಮನದಿಂದ

ಸ್ಥಿರತೆ ಕಡಿಮೆಯಾಗಿ ಅವರ ಭಾಷೆ ವಿಕಾಸಗೊಳ್ಳಲು ಅವಕಾಶವೇನೂ ದೊರೆಯಲಿಲ್ಲ. ಬಾಬರ್ ಮತ್ತು ಶಹಜಹಾನರ ನಡುವಿನಕಾಲದಲ್ಲಿ ಆ ಭಾಷೆ ಬೆಳಕಿಗೆ ಬಂದಿತು. ಅದರಲ್ಲಿ ಸಾಹಿತ್ಯ ರಚನೆಯೂ ಆರಂಭವಾಗಿದ್ದಿತು. ಆ ಸಮಯದಲ್ಲಿ ಹಿಂದೂಗಳೂ ಬಳಸುತ್ತಿದ್ದ ಹಿಂದಿ ಮತ್ತು ಉರ್ದು ಮಿಶ್ರಿತ ರೂಪವನ್ನು ಕೆಲವರು ಹಿಂದವಿ ಎಂದು ಕರೆದರೆ, ಪರ್ಷಿಯನ್, ಅರಬಿಕ್, ತುರ್ಕಿ ಮತ್ತು ಉರ್ದು ಮಿಶ್ರಿತ ರೂಪವನ್ನು ರೆಖ್ತ ಎಂದು ಕರೆದು ಕೊಂಡರು. ರೆಖ್ತವನ್ನು ಸಾಹಿತ್ಯ ರಚನೆಗೂ ಬಳಸಿಕೊಳ್ಳಲಾಯಿತು. ಹಿಂದಿ ಉರ್ದು ಮಿಶ್ರಿತರೂಪದಲ್ಲಿ ಹಿಂದಿ ಭಾಷೆಯ ಪ್ರಭಾವ ಹೆಚ್ಚಾಗಿದ್ದರೆ, ಪರ್ಷಿಯನ್, ಅರಬಿಕ್, ತುರ್ಕಿ ಮತ್ತು ಉರ್ದು ಮಿಶ್ರಿತರೂಪದಲ್ಲಿ ಪರ್ಷಿಯನ್, ಅರಬಿಕ್, ತುರ್ಕಿ ಭಾಷೆಗಳ ಪ್ರಭಾವ ಹೆಚ್ಚಾಗಿದೆ.

ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ ಯಾವಕಾಲದಲ್ಲಿ ಬಳಕೆಗೆ ಬಂದಿತು ಎಂಬ ವಿಚಾರದ ಬಗ್ಗೆ ವಿದ್ವಾಂಸರಲ್ಲಿ ಬೇರೆ ಬೇರೆ ಅಭಿಪ್ರಾಯ ಭೇದಗಳಿವೆ. ಮೌಲಾನ್ ಸೈಯದ್ ಸುಲೆಮಾನ್‌ನದವಿ ಎಂಬಾತನು ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ ಸುಮಾರು 19ನೇ ಶತಮಾನದಲ್ಲಿ ಬಳಕೆಗೆ ಬಂದಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಗ್ರಾಹಮ್ ಬೆಲ್ ಮತ್ತು ಮತ್ತು ತಾರಾ ಚಂದ್ ಎಂಬುವರು ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ 18ನೇ ಶತಮಾನದಲ್ಲಿ ಬಳಕೆಗೆ ಬಂದಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು ಇದು ಭಾಷೆ ಎಂಬರ್ಥದಲ್ಲಿ ಸುಮಾರು 17ನೇ ಶತಮಾನದಲ್ಲಿ ಬಳಕೆಗೆ ಬಂದಿರಬಹುದೆಂದು ಊಹಿಸಿದ್ದಾರೆ. ಇದು ಉರ್ದು ಭಾಷೆ ಮತ್ತು ಸಾಹಿತ್ಯದ ಇತಿಹಾಸದಲ್ಲಿ ಸ್ಪಷ್ಟವಾಗಿ ಗೋಚರವಾಗುವುದು.

1700ಕ್ಕಿಂತಲೂ ಹಿಂದೆಯೇ ಜಬಾನ್–ಎ–ಉರ್ದು ಎಂಬ ಶಬ್ದ ಪ್ರಯೋಗ ಬೆಳಕಿಗೆ ಬಂದಿತು. ಅಂತೆಯೇ 1740ರಲ್ಲಿ ಜಬಾನ್–ಎ–ಉರ್ದು–ಎ–ಮು ಅಲ್ಲ ಎಂಬ ಶಬ್ದ ಪ್ರಯೋಗಕಾಣಿಸಿಕೊಂಡಿತು. ಈ ಪದ ಪ್ರಯೋಗ 1740ರ ಮ ಅಸಿರುಲ್ ಉಮರಾ ಎಂಬುದರಲ್ಲಿ ದೊರೆಯುತ್ತದೆ. ಉರ್ದು ಭಾಷೆಯನ್ನು ಮೊದ ಮೊದಲು ಹಿಂದಿ ಎಂದೇ ಭಾವಿಸಲಾಗುತ್ತಿದ್ದಿತು. ಉರ್ದು ಎಂಬ ಶಬ್ದ ಅನಂತರ ಪ್ರಚಾರಕ್ಕೆ ಬಂದು ಹಿಂದಿ ಮತ್ತು ಉರ್ದು ಭಾಷೆಗಳು ಬೇರೆ ಬೇರೆಯಾಗಿ ಕಂಡು ಬಂದವು. ಅರ್ಜು ಎಂಬ ಕವಿ 1680ರಲ್ಲಿ ತನ್ನ ಎರಡು ಗ್ರಂಥಗಳಲ್ಲಿ ಉರ್ದು ಎಂಬ ಶಬ್ದವನ್ನು ಬೇರೆ ಬೇರೆ ಕಡೆಗಳಲ್ಲಿ ಬಳಸಿದ್ದಾನೆ. 1752ಕ್ಕೆ ಸ್ವಲ್ಪ ಹಿಂದೆ ಮೀರ್ ಎಂಬ ಕವಿ 1680ರಲ್ಲಿ ತನ್ನ ಗ್ರಂಥದಲ್ಲಿ ಉರ್ದು ಎಂಬ ಶಬ್ದವನ್ನು ಬಳಸಿರುವುದು ಕಂಡುಬರುತ್ತದೆ. ಆದರೆ ಉರ್ದು ಎಂಬ ಶಬ್ದ ಭಾಷೆ ಎಂಬರ್ಥದಲ್ಲಿ ಬಳಕೆಗೆ ಬಂದದ್ದು ಇತ್ತೀಚಿಗೆ ಮಾತ್ರ. ಉರ್ದು ಎಂಬ ಭಾಷೆಗೆ, ಹಿಂದಿ, ಹಿಂದವಿ, ರೆಖ್ತ, ಹಿಂದುಸ್ತಾನಿ, ದಖಿನಿ, ಎಂಬ ಬೇರೆ ಬೇರೆ ಹೆಸರುಗಳಿವೆಯಾದರೂ ಅವು ಬೇರೆ ಬೇರೆ ಕಾಲದ ಬೇರೆ ಬೇರೆ ಗ್ರಂಥಗಳಲ್ಲಿ ದೊರೆಯುತ್ತವೆ. 18ನೇ ಶತಮಾನದಿಂದ 19ನೇ ಶತಮಾನದ ಮಧ್ಯ ಭಾಗದವರೆಗೆ ಉರ್ದು ಭಾಷೆಯನ್ನು ರೆಖ್ತ ಎಂದೇ ಕರೆಯುತ್ತಿದ್ದರು. ಹಿಂದಿ

ಮತ್ತು ಉರ್ದು ಮಿಶ್ರಿತರೂಪವನ್ನು ಹಿಂದುಸ್ತಾನಿ ಎಂದು ಕೇಳಿದರು. 17ನೇ ಶತಮಾನದಲ್ಲಿ ಉರ್ದು ಭಾಷೆಯನ್ನು ಹಿಂದಿ ಎಂದೇ ಕರೆಯಲಾಯಿತು. ಇದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ. 19ನೇ ಶತಮಾನದ ಕೊನೆಯವರೆಗೂ ಉರ್ದು ಭಾಷೆಯನ್ನು ಹಿಂದಿ ಎಂದು ಕರೆದು ಕೊಂಡಿರುವ ಅನೇಕ ಕವಿಗಳಿದ್ದಾ.ರೆ ಉರ್ದುವಿನ ಮೀರ್, ಗಾಲಿಬ್ ಮುಂತಾದ ಕವಿಗಳು ತಮ್ಮ ಗ್ರಂಥದಲ್ಲಿ ಉರ್ದುಭಾಷೆಯನ್ನು ಹಿಂದಿ ಎಂದೇ ಕರೆದು ಕೊಂಡಿದ್ದಾರೆ. ಉರ್ದುವಿಗೆ ಈ ಹೆಸರೇ ಬಹಳ ಕಾಲ ಪ್ರಚಾರದಲ್ಲಿದ್ದು ಅನಂತರ ಉರ್ದು ಮತ್ತು ಹಿಂದಿ ಮಿಶ್ರಿತರೂಪವನ್ನು ಹಿಂದವಿ ಎಂದು ಕರೆದುಕೊಂಡರು ಎಂದು ತೋರುತ್ತದೆ.

ಉರ್ದು ಭಾಷೆಯ ಉಗಮದ ಬಗ್ಗೆ ವಿದ್ವಾಂಸರಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಹೊರಬಂದವು. ಉರ್ದುಭಾಷೆಯಲ್ಲಿ ಕಂಡುಬರುವ ಪರ್ಶಿಯನ್ ಮತ್ತು ಅರಬಿಕ್ ಶಬ್ದಗಳನ್ನು ಆಧರಿಸಿ ಇದು ಪಾರ್ಸಿ ಅರಬಿಕ್ ಭಾಷೆಗಳಿಂದ ವಿಕಾಸಗೊಂಡಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರೆ, ಉರ್ದು ಭಾಷೆಯ ವ್ಯಾಕರಣವನ್ನು ಆಧರಿಸಿ ಉರ್ದು ಬ್ರಜಿಭಾಷೆಯಿಂದ ವಿಕಾಸಗೊಂಡಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉರ್ದು ಮತ್ತು ಬ್ರಜಿಭಾಷೆಯ ವ್ಯಾಕರಣಗಳು ಪರಸ್ಪರ ಒಂದನ್ನೊಂದು ಹೋಲುತ್ತವೆ. ಉರ್ದು ಭಾಷೆಯಲ್ಲಿ ಕಂಡುಬರುವ ಪಂಜಾಬಿ, ಹರ್ಯಾನಿ, ಸಿಂಧಿ ಮುಂತಾದ ಭಾಷೆಗಳ ಬೇರೆ ಬೇರೆ ಭಾಷಿಕಾಂಶಗಳನ್ನು ಆಧರಿಸಿ ಉರ್ದು ಭಾಷೆ ಪಂಜಾಬಿ ಇಲ್ಲವೇ ಹರ್ಯಾನಿ ಅಥವಾ ಸಿಂಧಿ ಭಾಷೆಯಿಂದ ವಿಕಾಸಗೊಂಡಿರಬಹುದೆಂದು ಕೆಲವರ ಅಭಿಪ್ರಾಯವಾದರೆ, ಇನ್ನೂ ಕೆಲವರು ಉರ್ದು ದಕ್ಷಿಣದ ಯಾವುದೋ ಒಂದು ರೂಪದಿಂದ ವಿಕಾಸಗೊಂಡಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಕಾರಣದಿಂದಲೇ ಉರ್ದು ಭಾಷೆಯನ್ನು ದಖಿನಿ ಎಂದು ಕರೆಯಲು ಕಾರಣವಿರಬಹುದೆಂದು ಅವರ ಊಹೆ. ಉರ್ದು ವಾಸ್ತವವಾಗಿ ಶೌರಸೇನಿ ಅಪಭ್ರಂಶದಿಂದ ವಿಕಾಸಗೊಂಡಿದ್ದು. ಖಡಿಬೋಲಿ ಭಾಷೆಯಂತೆಯೇ ಉರ್ದು ಭಾಷೆಯೂ ಕೂಡ ದೆಹಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದೆ. ಈ ಕಾರಣದಿಂದ ಕೆಲವರು ಉರ್ದು ಖಡಿಬೋಲಿ ಭಾಷೆಯಿಂದಲೇ ವಿಕಾಸಗೊಂಡಿರಬಹುದೆಂದು ಭಾವಿಸಲು ಸಾಧ್ಯವಾಗಿದೆ. ಉರ್ದು ಮತ್ತು ಖಡಿಬೋಲಿ ವ್ಯಾಕರಣಗಳು ಪರಸ್ಪರ ಒಂದನ್ನೊಂದು ಹೋಲುತ್ತವೆ. ಈ ದೃಷ್ಟಿಯಿಂದ ಹಿಂದಿ ಮತ್ತು ಉರ್ದು ಭಾಷೆಗಳು ಮೂಲತಃ ಒಂದೇ ಭಾಷೆಯಿಂದ ವಿಕಾಸಗೊಂಡಿರಬಹುದೆಂದು ಊಹಿಸಿದ್ದಾರೆ. ಪ್ರಾಚೀನ ಹಿಂದಿ ಮತ್ತು ಉರ್ದು ಭಾಷೆಗಳು ಅವಧಿಯಿಂದಲೋ ಅಥವಾ ಬ್ರಜಭಾಷೆಯಿಂದಲೋ ವಿಕಾಸಗೊಂಡಿದ್ದರೂ ಇರಬಹುದೆಂದು ಕೆಲವರ ಅಭಿಪ್ರಾಯ. ಈ ಊಹೆಗಳು ಏನೇ ಆಗಿದ್ದರೂ ಹಿಂದಿ ಮತ್ತು ಉರ್ದು ಭಾಷೆಗಳ ಎಷ್ಟೋ ಅಂಶಗಳು ಪರಸ್ಪರ ಒಂದನ್ನೊಂದು ಹೋಲುತ್ತವೆ. ಹಿಂದಿ ಭಾಷೆಯಲ್ಲಿರುವ ಸಂಸ್ಕೃತ ಶಬ್ದಗಳನ್ನು ತೆಗೆದರೆ ಅದು ಪೂರ್ಣವಾಗಿ ಉರ್ದು ಭಾಷೆಯನ್ನು, ಉರ್ದುವಿ

ನಲ್ಲಿರುವ ಪಾರ್ಸಿ, ಅರಬಿಕ್, ತುರ್ಕಿ ಶಬ್ದಗಳನ್ನು ತೆಗೆದರೆ ಅದು ಪೂರ್ಣವಾಗಿ ಹಿಂದಿಯನ್ನು ಹೋಲುವುದು. ಈ ಕಾರಣದಿಂದಲೇ ಮಹಾತ್ಮಾ ಗಾಂಧಿಯವರು ಉರ್ದು ಭಾಷೆಯನ್ನು ಹಿಂದುಸ್ತಾನಿ ಎಂದು ಕರೆದರೆಂದು ತೋರುತ್ತದೆ. ಅನೇಕ ಸಾಹಿತಿಗಳು ಉರ್ದು ಮತ್ತು ಹಿಂದಿ ಎರಡು ಭಾಷೆಗಳಲ್ಲಿಯೂ ಸಾಹಿತ್ಯವನ್ನು ರಚಿಸಿಕೊಂಡಿದ್ದಾರೆ. ಈ ಎರಡು ಭಾಷೆಗಳಲ್ಲಿ ರಚಿಸಿಕೊಂಡಿರುವ ಬೇರೆ ಬೇರೆ ಗ್ರಂಥಗಳು ದೊರೆಯುತ್ತವೆ. ಇವುಗಳ ವ್ಯಾಕರಣ ಮಾತ್ರವಲ್ಲದೆ ಅವುಗಳ ಸಾಹಿತ್ಯವು ಕೂಡ ಸಮಾನವಾಗಿದೆ. ಉರ್ದು ಭಾಷೆಯಲ್ಲಿ ಸಂಸ್ಕೃತ ಮತ್ತು ಹಿಂದಿ ಶಬ್ದಗಳು ಹಿಂದಿ ಶೈಲಿಯನ್ನು, ಪಾರ್ಸಿ ಮತ್ತು ಅರಬಿಕ್ ಶಬ್ದಗಳು ಪಾರ್ಸೋ ಅರಬಿಕ್ ಶೈಲಿಯನ್ನು ನಿರ್ಮಾಣ ಮಾಡಿವೆ. ಈ ಬೇರೆ ಬೇರೆ ಶೈಲಿಗಳು ಬೇರೆ ಬೇರೆಯಾಗಿ ತೋರಿಬರಲು ಆ ಭಾಷೆಯಲ್ಲಿ ಕಂಡುಬರುವ ಆ ಶಬ್ದಗಳು ಮುಖ್ಯ ಕಾರಣವಾಗಿದೆ. ಹಿಂದಿ ಶೈಲಿಯ ಉರ್ದುವನ್ನು ಕೆಲವು ಮುಸಲ್ಮಾನರು ಹಿಂದವಿ ಎಂದು ಕರೆದುಕೊಂಡರೆ ಮತ್ತೆ ಕೆಲವು ಮುಸಲ್ಮಾನರು ಪಾರ್ಸೋ ಅರಬಿಕ್ ಶೈಲಿಯ ಉರ್ದುವನ್ನು ರೆಖ್ತ ಎಂದು ಕರೆದುಕೊಂಡರು. ಇನ್ನೂ ಕೆಲವರು ಉರ್ದು ಭಾಷೆಯನ್ನು ಹಿಂದೂಸ್ತಾನಿ ಎಂದೂ, ದಖಿನಿ ಎಂದೂ ಬೇರೆ ಬೇರೆ ಹೆಸರಿಂದ ಕರೆದರು. ಉರ್ದುವಿನ ವಿಶೇಷಣ, ವಿಶೇಷ್ಯ, ಕ್ರಿಯಾವಿಶೇಷಣಗಳು ಮುಂತಾದುವು ಪಾರ್ಸಿ ಅರಬಿಕ್ ಭಾಷೆಗಳಿಗೆ ಸಂಬಂಧಿಸಿದವುಗಳಾಗಿ ಕಂಡುಬರುತ್ತವೆ.

ಉರ್ದು ಸಾಹಿತ್ಯ ಖುಸ್ರು ಮುಂತಾದ ಕವಿಗಳಿಂದ ಆರಂಭವಾಯಿತು. ಇದಕ್ಕೂ ಹಿಂದೆ ಉರ್ದು ಸಾಹಿತ್ಯವನ್ನು ದಖಿನಿ ಎಂಬ ಹೆಸರಿನಿಂದ ರಚಿಸುತ್ತಿದ್ದರು. ಖುಸ್ರು ಕವಿಯನ್ನು ದಖಿನಿಯ ಅಂತಿಮ ಕವಿ ಎಂದು ಪರಿಗಣಿಸಿಕೊಳ್ಳಲಾಗಿದೆ. ಉರ್ದುಲಿಪಿ ಪರ್ಸೋ ಅರಾಬಿಕ್ ಲಿಪಿಯಿಂದ ವಿಕಾಸಗೊಂಡಿದ್ದು. ಹಿಂದಿಲಿಪಿ ಪ್ರಾಚೀನ ನಾಗರಿ ಲಿಪಿಯಿಂದ ವಿಕಾಸಗೊಂಡಿದ್ದು. ಆದರಿಂದಲೇ ಇದಕ್ಕೆ ದೇವನಾಗರಿ ಲಿಪಿ ಎಂಬ ಹೆಸರು ಬಂದಿದೆ. ಈಗ ಹಿಂದಿ ಮತ್ತು ಉರ್ದು ಭಾಷೆಗಳ ಶೈಲಿ ಎಷ್ಟೇ ಬೇರೆ ಬೇರೆಯಾಗಿ ತೋರಿಬಂದರೂ ಇವು ಹಿಂದೆ ಪರಸ್ಪರ ಒಂದೇ ಆಗಿದ್ದವು ಎಂಬುದನ್ನು ಮರೆಯುವಂತಿಲ್ಲ. ಆದರೆ ಇವು ಪರ್ಷಿಯನ್ನರ ಆಗಮನದಿಂದ ಬೇರೆ ಬೇರೆಯಾಗಿ ಬೆಳೆದು ಬಂದವು.

೧೦೨೭ರಲ್ಲಿ ಘಜ್ನಿಯ ಸೈನ್ಯ ಮೊತ್ತ ಮೊದಲಿಗೆ ಲಾಹೋರಿಗೆ ಬಂದು ನೆಲಸಿತು. ಆಗ ಉರ್ದು ಭಾಷೆಯ ಅಸ್ತಿಭಾರವಾಯಿತೆಂದು ಕೆಲವರ ಅಭಿಪ್ರಾಯ. ಅವರು ಭಾರತಕ್ಕೆ ಬರುವುದಕ್ಕೆ ಮೊದಲು ಪರ್ಷಿಯನ್ ಮತ್ತು ಅರಬಿಕ್ ಭಾಷೆಗಳನ್ನು ಆಡುತ್ತಿದ್ದರು. ಇವರು ಲಾಹೋರಿಗೆ ಬಂದ ಮೇಲೆ ಅವರು ಸ್ಥಳೀಯ ಭಾಷೆಯನ್ನು ಕಲಿತು ಬಳಸಲಾರಂಭಿಸಿದರು. ಈ ಲಾಹೋರಿಭಾಷೆ ಮುಂದೆ ಪಂಜಾಬಿ ಭಾಷೆಯಾಗಿ ಬೆಳೆದು ಬಂದಿತು. ಪಂಜಾಬಿ ಭಾಷೆಯಲ್ಲಿ ಪಾರ್ಸಿ ಮತ್ತು ಅರಬಿಕ್ ಭಾಷೆಗಳ ಪ್ರಭಾವ ಹೆಚ್ಚಿತು. ಘಜ್ನಿ, ಘೋರಿ ಸೈನ್ಯಗಳು ದೆಹಲಿಯನ್ನು

ವಶಪಡಿಸಿಕೊಂಡ ಮೇಲೆ ಪರ್ಷಿಯನ್, ಅರಬಿಕ್ ಮುಂತಾದ ಇಂಡೋ ಇರಾನಿಯನ್ ಭಾಷೆಗಳನ್ನು ಆಡುತ್ತಿದ್ದ ಜನ ತಳವೂರಿದರು. ಅವರ ಸಂಪರ್ಕದಿಂದ ಆಗ ದೆಹಲಿಯ ಸುತ್ತ ಮುತ್ತಲ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಖಡಿ ಬೋಲಿ ಭಾಷೆಯ ಮೇಲೆ ಪರ್ಷಿಯನ್ ಮತ್ತು ಅರಬಿಕ್ ಭಾಷೆಗಳ ಪ್ರಭಾವ ಉಂಟಾಗಿ ಖಡಿ ಬೋಲಿ ಬೇರೊಂದು ರೂಪಕ್ಕೆ ತಿರುಗಿ ಅದೇ ಮುಂದೆ ಉರ್ದು ಭಾಷೆ ಎನಿಸಿಕೊಂಡಿತು ಎಂದು ಹೆಚ್ಚು ಜನರ ಅಭಿಪ್ರಾಯ. ದೆಹಲಿ ಮತ್ತು ಉತ್ತರ ಭಾರತದ ಬೇರೆ ಬೇರೆ ಭಾಗಗಳಲ್ಲಿ ಪರ್ಷಿಯನ್ ಆಡಳಿತ ಭಾಷೆಯಾಗಿ ಬಳಕೆಗೆ ಬಂದ ಮೇಲೆ ಉರ್ದು ಸಾಹಿತ್ಯಿಕ ಭಾಷೆಯಾಗಿ ಹೆಚ್ಚು ಪ್ರಚಾರಕ್ಕೆ ಬಂದಿತು.

ಖಿಲ್ಜಿಗಳ ದಾಳಿಗಳ ಪರಿಣಾಮವಾಗಿ ಹೊಸ ಉರ್ದು ಭಾಷೆಯೊಂದು ದಕ್ಷಿಣ ಭಾರತಕ್ಕೆ ಬಂದಿತು. ಇದು ಸುಮಾರು ೩೫೦ ವರ್ಷಗಳ ಕಾಲ ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿದ್ದಿತು. ಬಹುಮನಿ ಮತ್ತು ದಖನ್ನಿನ ಐದು ರಾಜ್ಯಗಳ ಆಳ್ವಿಕೆಯಲ್ಲಿ ಆಡಳಿತ ಭಾಷೆಯಾಗಿಯೂ, ಸಾಹಿತ್ಯಿಕ ಭಾಷೆಯಾಗಿಯೂ ಪ್ರಚಾರಕ್ಕೆ ಬಂದಿತು. ಇದನ್ನು ದಕ್ಷಿಣದಲ್ಲಿ ದಖನಿ ಎಂದು ಕರೆದುಕೊಳ್ಳಲಾಯಿತು. ದಖಿನಿ ಹದಿನಾಲ್ಕನೇ ಶತಮಾನದಲ್ಲಿ ಬಳಕೆಯಲ್ಲಿದ್ದಿತಾದರೂ ಇದು ಉತ್ತರ ಭಾರತದಲ್ಲಿ ಪರ್ಷಿಯನ್ ಭಾಷೆಯ ಪ್ರಭಾವದಿಂದ ಅಭಿವೃದ್ಧಿ ಹೊಂದಿ ಉರ್ದು ಭಾಷೆ ಎನಿಸಿಕೊಂಡಿತು. ದಖಿನಿ ಮರಾಠಿ, ಗುಜರಾತಿ, ಮುಂತಾದ ಕೆಲವು ಪ್ರಾದೇಶಿಕ ಭಾಷೆಗಳ ಪ್ರಭಾವಕ್ಕೆ ಒಳಗಾಯಿತು. ದಖಿನಿ ಗುಜರಾತಿಯ ಭಾಷೆಯ ಪ್ರಭಾವ ದಿಂದ ಬೇರೊಂದು ರೂಪವಾಗಿ ಕಾಣಿಸಿಕೊಂಡಿತು. ಇದನ್ನು ಗುಜರಾತಿನಲ್ಲಿ ಗುಜ್ರಿ ಎಂದು ಕರೆದುಕೊಳ್ಳಲಾಯಿತು. ದಖಿನಿ ದಕ್ಷಿಣ ಭಾರತದಲ್ಲಿ ಸಾಹಿತ್ಯಿಕ ಭಾಷೆ ಯಾಗಿ ಬಳಕೆಗೆ ಬಂದಿತು. ದಕ್ಷಿಣ ರಾಜ್ಯಗಳ ಆಡಳಿತಗಾರರು ತಮ್ಮನ್ನು ದಖಿನಿ ಗಳೆಂದೂ, ಉತ್ತರದವರನ್ನು ಅಫಾಕಿಗಳು ಎಂದು ಕರೆದುಕೊಂಡರು. ಈ ಭೇದ ಸಾಮಾಜಿಕ ಜೀವನದಲ್ಲಿ ಮತ್ತು ಆಸ್ಥಾನ ಕವಿಗಳಲ್ಲಿ ಉಳಿದುಕೊಂಡಿತು. ಇದರ ಪರಿಣಾಮವಾಗಿ ದಖಿನಿ ಪರ್ಷಿಯನ್ ಭಾಷೆಗೆ ಸರಿಸಮಾನವಾಗಿ ಬೆಳೆಯ ತೊಡಗಿತು. ೧೩೭೫ರವರೆಗೂ ದೆಹಲಿಯ ಉರ್ದುವಿಗೂ ದಕ್ಷಿಣದ ಉರ್ದುವಿಗೂ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ. ದಖನಿಗೆ ದಕ್ಷಿಣ ಸುಲ್ತಾನರು ಸಾಕಷ್ಟು ಪ್ರೋತ್ಸಾಹ ನೀಡಿದರು. ಕವಿಗಳು ದಖನಿಯಲ್ಲಿ ಉತ್ತಮವಾದಕಾವ್ಯಗಳನ್ನು ರಚಿಸಿದರು. ಔರಂಗಜೇಬನ ಮತ್ತು ಮುಘಲರ ಆಳ್ವಿಕೆಗಳು ಉತ್ತರದ ಉರ್ದುವಿನ ಪ್ರಭಾವ ದಕ್ಷಿಣದ ಉರ್ದುವಿನ ಮೇಲೆ ಉಂಟಾಗುವಂತೆ ಮಾಡಿದವು. ಇದು ತನ್ನ ಪಥವನ್ನು ಬದಲಾಯಿಸಿತು. ದಕ್ಷಿಣಭಾರತದಲ್ಲಿ ದಖನಿಯ ಸಾಹಿತ್ಯಿಕ ಚಟುವಟಿಕೆಗಳ ಅನಂತರ ಉತ್ತರ ಭಾರತದ ಆಡು ಭಾಷೆಯಾಗಿದ್ದ ಉರ್ದುವಿನಲ್ಲಿ ಸಾಹಿತ್ಯಿಕ ಚಟುವಟಿಕೆಗಳು ಆರಂಭವಾದವು. ದಕ್ಷಿಣ ಭಾರತದಲ್ಲಿ ಮುಘಲರ ಆಳ್ವಿಕೆ ಮುಗಿದ ಮೇಲೂ ದಖನಿಯ ಸಾಹಿತ್ಯಿಕ ಚಟುವಟಿಕೆಗಳು ಮುಂದುವರಿದವು. ದಖನಿ ಭಾಷೆ ಕಾಲಕ್ರಮೇಣ ತನ್ನ

ಮೂಲ ಲಕ್ಷಣವನ್ನು ಕಳೆದುಕೊಳ್ಳುತ್ತಾ ಬಂದು ಉರ್ದುವಿನಲ್ಲಿ ಬೆರೆಯತೊಡಗಿತು-ದಕ್ಷಿಣದಲ್ಲಿ ಇಂದು ದಖನಿ ಆಡು ಭಾಷೆಯಾಗಿಯೂ, ಉರ್ದು ಸಾಹಿತ್ಯಿಕ ಭಾಷೆಯಾಗಿಯೂ ಉಳಿದಿದೆ.

ವಲೀ ಕವಿಯ ದಖನಿ ಸಾಹಿತ್ಯ ದೆಹಲಿ ಪ್ರವೇಶಿಸಿದ ಮೇಲೆ ಉತ್ತರ ಭಾರತದಲ್ಲಿ ಉರ್ದು ಸಾಹಿತ್ಯದ ಉಬ್ಬರ ಕಂಡ ಬಂದಿತು. ಇಲ್ಲಿ ಉರ್ದುಭಾಷೆ ಪರ್ಶಿಯನ್ ಭಾಷೆಯ ಪ್ರಭಾವಕ್ಕೆ ಒಳಗಾಗಿ ಅದು ಪರ್ಶಿಯನೀಕರಣಗೊಂಡಿತು. ಆಗ ಪರ್ಶಿಯನ್ ಭಾಷೆ ಸೊಗಸಾಗಿ ಬೆಳೆದು ಸಂಸ್ಕಾರಗೊಂಡ ಸಾಂಸ್ಕೃತಿಕ ಭಾಷೆಯಾಗಿದ್ದಿತು. ಪರ್ಶಿಯನ್ ಭಾಷೆಗೆ ಸಮಾನವಾದ ಶಬ್ದಗಳು ಪ್ರಾಕೃತದಲ್ಲಿರಲಿಲ್ಲ. ಪರ್ಶಿಯನ್ ಭಾಷೆ ಆಳುವವರು, ವೀರರು, ಯುದ್ಧ ಪ್ರಿಯರು ಮತ್ತು ಪ್ರೇಮ ಪ್ರಣಯದ ರಾಜರುಗಳ, ಕವಿಗಳ ಭಾಷೆಯಾಗಿದ್ದಿತು. ಪರ್ಶಿಯನ್ ಶಬ್ದಗಳು ಮಧುರವಾಗಿದ್ದವು. ಉರ್ದು ಭಾಷೆಗೆ ಪರ್ಶಿಯನ್ ಭಾಷೆ ಮತ್ತು ಸಾಹಿತ್ಯ ಮಾದರಿಯಾಯಿತು. ಪರ್ಶಿಯನೀಕರಣ ಉರ್ದು ಭಾಷೆಗೆ ಮೆರುಗನ್ನು ತಂದು ಕೊಟ್ಟಿತು. ಅಕ್ಬರನಕಾಲದಲ್ಲಿ ಸರ್ಕಾರಿ ಸೇವೆಗೆ ಸೇರಲು ಪರ್ಶಿಯನ್ ಭಾಷೆಯ ಜ್ಞಾನ ಕಡ್ಡಾಯವಾಯಿತು. ದೆಹಲಿ ಮತ್ತು ಲಖನೌದ ಬಹುಪಾಲು ಕವಿಗಳು ದ್ವಿಭಾಷಿಗಳಾದರು. ಅವರು ಪರ್ಶಿಯನ್ ಮತ್ತು ಉರ್ದು ಭಾಷೆ ಎರಡರಲ್ಲಿಯೂ ಕಾವ್ಯ ರಚಿಸಿದರು. ೧೭೦೦ ರಿಂದ ಸುಮಾರು ನೂರು ವರ್ಷಗಳ ಕಾಲ ದೆಹಲಿ ಸಾಹಿತ್ಯಿಕ ಚಟುವಟಿಕೆಗಳ ಕೇಂದ್ರವಾಯಿತು. ದೆಹಲಿಯ ಅನಾಯಕತ್ವದ ಕಾರಣದಿಂದ ದೆಹಲಿಯಲ್ಲಿದ್ದ ಕವಿಗಳು ಲಖನೌಗೆ ವಲಸೆಹೋದರು. ಇಲ್ಲಿ ಉರ್ದು ಭಾಷೆಯ ವ್ಯಾಕರಣ ಸಿದ್ಧವಾಯಿತು. ಛಂದಸ್ಸು, ಅಲಂಕಾರ, ಉಪಮೆ ರೂಪಕಗಳು ಇಲ್ಲಿಯೇ ಸಿದ್ಧವಾದವು. ೧೯ನೇ ಶತಮಾನದಲ್ಲಿ ಉರ್ದುಭಾಷೆ ಲಖನೌದಲ್ಲಿ ವ್ಯವಸ್ಥಿತವಾಗಿ ನಿಯಂತ್ರಣಕ್ಕೆ ಒಳಗಾಯಿತು.

೧೯ನೇ ಶತಮಾನದ ಮಧ್ಯಭಾಗದಲ್ಲಿ ಉರ್ದು ಸಾಹಿತ್ಯ ಚಟುವಟಿಕೆಗಳು ಪುನಃ ಆರಂಭವಾದವು. ಅಲ್ಲಿಂದೀಚೆಗೆ ಲಖನೌ, ದೆಹಲಿ, ಪಾಟ್ನ, ಮುರ್ಶಿದಾಬಾದ್, ಭೂಪಾಲ್, ಮಂಗ್ರೋಲ್, ರಾಮಪುರ, ಹೈದರಾಬಾದ್ ಮುಂತಾದುವು ಉರ್ದು ಸಾಹಿತ್ಯ ಚಟುವಟಿಕೆಯ ಕೇಂದ್ರಗಳಾದವು. ಈ ಕೇಂದ್ರಗಳು ಕವಿಗಳನ್ನು, ವಿದ್ವಾಂಸರನ್ನು, ಬರಹಗಾರರನ್ನು ಆಕರ್ಷಿಸಿದವು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕವಿಗಳು ಸಾಹಿತಿಗಳು, ದೆಹಲಿಯಿಂದ ನಿರ್ಗಮಿಸಿ ಬೇರೆ ಬೇರೆ ಸ್ಥಳಗಳಲ್ಲಿ ತಮ್ಮ ತಮ್ಮ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರಿಸಿದರು. ಇದರಿಂದ ಉರ್ದು ಭಾಷೆ ಮತ್ತು ಸಾಹಿತ್ಯ ದೇಶದಲ್ಲೆಲ್ಲಾ ವ್ಯಾಪಿಸಿತು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಆರಂಭವಾದ ಮೇಲೆ ಉರ್ದು ಭಾಷೆ ಹೊಸ ತಿರುವನ್ನು ಪಡೆದುಕೊಂಡಿತು. ಅವರ ಭಾಷೆ ಮತ್ತು ನಾಗರಿಕತೆಯ ಪ್ರಭಾವದಿಂದ ಉರ್ದು ಭಾಷೆ ಆಧುನಿಕತೆಯನ್ನು ಸಂಪಾದಿಸಿಕೊಂಡಿತು. ಅದುವರೆಗೆ ಉರ್ದು

ಕೇವಲ ಸಾಹಿತ್ಯಿಕ ಭಾಷೆಯಾಗಿದ್ದಿತು. ಆಗ ಉರ್ದುಗದ್ಯ ಸಾಂಪ್ರದಾಯಿಕವಾಗಿ ಮಾತ್ರ ಮುಂದುವರಿಯುತ್ತಿದ್ದಿತು. 1800ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಬ್ರಿಟಿಷ್ ಅಧಿಕಾರಿಗಳಿಗೆ ದೇಶೀಯ ಭಾಷೆಗಳನ್ನು ಕಲಿಸಲು ಮಾಡಿದ ಪ್ರಯತ್ನದ ಫಲವಾಗಿ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಉರ್ದು ಗದ್ಯ ಅಭಿವೃದ್ಧಿ ಹೊಂದಿತು. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಅಲಿಘರ್ ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು. ಸರ್ ಸೈಯದ್ ಅಹಮದ್ ಖಾನ್ ತನ್ನ ಅಮೂಲ್ಯ ಕಾಣಿಕೆಯಿಂದ ಉರ್ದು ಭಾಷೆಯ ಗದ್ಯವನ್ನು ಸರಳಗೊಳಿಸಿ ಅಸಾಂಪ್ರದಾಯಿಕತೆಯನ್ನು ಹೋಗಲಾಡಿಸಿ ಶಾಸ್ತ್ರೀಯಗೊಳಿಸಿದನು. ಅನೇಕ ಇಂಗ್ಲಿಷ್ ಗ್ರಂಥಗಳು ಉರ್ದು ಭಾಷೆಗೆ ಭಾಷಾಂತರಗೊಂಡವು. ಇದರಿಂದ ಉರ್ದು ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಅವಕಾಶ ದೊರೆಯಿತು. ಉರ್ದು ಬೇರೆಬೇರೆ ಭಾಷೆಗಳಿಂದ ಸಾಕಷ್ಟು ಶಬ್ದಗಳನ್ನು ಸ್ವೀಕರಿಸಿ ಶ್ರೀಮಂತಗೊಂಡಿತು. ದೆಹಲಿಯಲ್ಲಿ ಬ್ರಿಟಿಷ್ ಸರ್ಕಾರ ಸ್ಥಾಪಿತವಾದ ಮೇಲೆ ಪರ್ಷಿಯನ್ ಭಾಷೆ ಆಡಳಿತ ಭಾಷೆಯಾಗಿದ್ದಿತು. ಬ್ರಿಟಿಷ್ ಆಳ್ವಿಕೆಯ ಆರಂಭಕಾಲದಲ್ಲಿ ಪರ್ಷಿಯನ್ ಭಾಷೆಯ ಸ್ಥಾನವನ್ನು ಇಂಗ್ಲಿಷ್ ಪಡೆಯುವವರೆಗೆ ಉರ್ದು ಆಸ್ಥಾನದಲ್ಲಿ ಬಳಕೆಯಾಗುತ್ತಿದ್ದಿತು.

ದಖಿನಿಯ ವಲೀ ಮೊದಲ ಉರ್ದು ಕವಿ. ಇವನು ದೆಹಲಿಗೆ ಭೇಟಿ ನೀಡಿದನು. ಇವನ ಮೊದಲ ಭೇಟಿಯೇ ಉತ್ತರ ಭಾರತದಲ್ಲಿ ಉರ್ದುಕಾವ್ಯದ ಅಸ್ತಿಭಾರಕ್ಕೆ ನಾಂದಿಯಾಯಿತು. ಇಲ್ಲಿಯವರೆಗೆ ದೆಹಲಿಯ ಕವಿಗಳು ಉರ್ದುವಿನಲ್ಲಿ ಮಾತನಾಡಿ ಪರ್ಷಿಯನ್ನಿನಲ್ಲಿ ಬರೆಯುತ್ತಿದ್ದರು. ದಕ್ಷಿಣದಲ್ಲಿ ಸುಮಾರು 400 ವರ್ಷಗಳಿಂದಲೂ ದಖಿನಿಯಲ್ಲಿ ಉರ್ದುವಿನ ಗದ್ಯ ಪದ್ಯ ಸೃಷ್ಟಿಯಾಗಿದ್ದಿತು. ಈ ವಿಚಾರ ಉತ್ತರದವರಿಗೆ ಗೊತ್ತೇ ಇರಲಿಲ್ಲ. ವಲೀಯ ಕಾವ್ಯವನ್ನು ಓದಿ ಉತ್ತರದ ಜನ ಅದಕ್ಕೆ ಮಾರುಹೋದರು. ವಲೀಯ ಪದ್ಯಗಳು ಬಹುಬೇಗ ಜನಪ್ರಿಯವಾದವು. ಬಜಾರುಗಳಲ್ಲಿ ಅವನ ಕಾವ್ಯವನ್ನು ಜನ ಆಡತೊಡಗಿದರು. ಅವನಿಗೆ ಎಲ್ಲ ಕಡೆಯೂ ಗೌರವ ದೊರೆಯಿತು. ಹೀಗೆ ವಲೀಯ ಉತ್ತರ ಭಾರತದ ಭೇಟಿ ಕಾವ್ಯಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನುಂಟು ಮಾಡಿತು. ದೆಹಲಿಯ ಕವಿಗಳು ದಖಿನಿ ಕವಿಗಳನ್ನು ಅನುಸರಿಸಿದರು. ತಮ್ಮ ಆಡು ಭಾಷೆಯಾದ ಉರ್ದುವಿನಲ್ಲಿ ಕಾವ್ಯ ರಚಿಸತೊಡಗಿದರು. ಇದರಿಂದ ಪರ್ಷಿಯನ್ನಿನಸ್ಥಾನವನ್ನು ಪೂರ್ಣವಾಗಿ ಉರ್ದುವಿಗೆ ಬದಲಾಯಿಸಲು ಅವಕಾಶದೊರೆಯಿತು. ಅನೇಕ ಉರ್ದು ಕವಿಗಳಿಗೆ ಪರ್ಷಿಯನ್ ಕಾವ್ಯಗಳೇ ಮೇಲ್ಪಂಕ್ತಿಗಳಾದವು. ವಲೀಯಂತಹ ದೇಶೀಯ ಕವಿಗೂ ಈ ಪ್ರಭಾವ ಮುಟ್ಟದೆ ಇರಲಿಲ್ಲ. ಆದರೆ ಮೊದಲ ಕಾವ್ಯಗಳಲ್ಲಿ ಕಾಣಲಾಗದ ಪರ್ಷಿಯನ್ ಛಾಯೆಯನ್ನು ಅವನ ಅನಂತರದ ಕಾವ್ಯಗಳಲ್ಲಿ ಕಾಣಲು ಸಾಧ್ಯವಾಯಿತು. ವಲೀ ಮಾತ್ರವಲ್ಲದೆ ಫಿರಾಕಿ, ಫಕ್ರಿ. ಅಜಾದ್, ತಾಲಿಬೆ ಮತ್ತು ಇತರ ಹಲವಾರು ಕವಿಗಳು ದೆಹಲಿಗೆ ಭೇಟಿ ನೀಡಿದರು. ವಲೀ ಕವಿ ಉರ್ದುಕಾವ್ಯದ ಜನಕನಾದುದರಿಂದ ಅವನು ಬಾಬಾ-

ಎ–ರೀಖ್ತ ಎಂಬ ಹೊಗಳಿಕೆಗೆ ಕಾರಣನಾದನು. ಇವನು ದೆಹಲಿಯಿಂದ ತಂದ ಪರ್ಶಿಯನ್ ಪ್ರಭಾವ ದಕ್ಷಿಣದ ದಖನಿಯ ಪಥವನ್ನು ಬದಲಾಯಿಸಿತು. ಅದು ಅಲ್ಲದೆ ಉರ್ದುವನ್ನು ದಖನಿಯ ಸ್ಥಾನದಲ್ಲಿ ಬಳಸಲಾಯಿತು.

ಸಿರಾಜುದ್ದೀನ್ ಸಿರಾಜ್ ಎಂಬ ಕವಿ ಔರಂಗಾಬಾದ್‌ನಿಂದ ಬಂದ ಒಬ್ಬ ಶ್ರೇಷ್ಠ ಸೂಫಿ ಕವಿ. ಈತನು ಗಜಲ್‌ಗಳನ್ನು ರಚಿಸಿದನು. ಇವನ ಭಾಷೆ ದಖಿನಿಗಿಂತ ಉರ್ದುವಿನ ಕಡೆ ವಾಲಿದ್ದಿತು. ಸೂಫಿ ಸಿದ್ಧಾಂತದ ಪ್ರಚಾರವೇ ಇವನ ಮುಖ್ಯ ಉದ್ದೇಶ. ವಾರಕೊಮ್ಮೆ ಈತ ತನ್ನ ಮನೆಯಲ್ಲಿ ಮುಷಾಯರಗಳನ್ನು ಏರ್ಪಡಿಸು ತ್ತಿದ್ದನು. ಈತನನ್ನು ವಾಲೀಯ ಉತ್ತರಾಧಿಕಾರಿ ಎಂದೇ ಜನರು ಪರಿಗಣಿಸಿದರು. ದಕ್ಷಿಣ ಭಾರತದಲ್ಲಿ ಮುಘಲರ ಆಳ್ವಿಕೆಕೊನೆಗೊಂಡ ಮೇಲೆ ದಖಿನಿ ದಕ್ಷಿಣದಲ್ಲಿ ಆತನ ಭಾಷೆಯಾಗಿ ಮುಂದುವರಿಯಿತು. 18ನೇ ಶತಮಾನದ ಮಧ್ಯಭಾಗದವರೆಗೂ ಇದು ಗದ್ಯ ಪದ್ಯಗಳ ಭಾಷೆಯಾಗಿ ಹೈದರಾಬಾದ್, ಮದರಾಸ್, ಮೈಸೂರು, ಮತ್ತು ಮಹಾರಾಷ್ಟ್ರಗಳಲ್ಲಿ ಬಳಕೆಯಲ್ಲಿದ್ದಿತು. ಉರ್ದುಬರವಣಿಗೆಯ ಭಾಷೆಯಾದ ಮೇಲೆ ದಖನಿಯ ಪ್ರಭಾವ ಕುಗ್ಗಿತು. ವಲೀಯ ಉರ್ದು ಕವಿತೆ ಉತ್ತರ ಭಾರತದ ಕವಿಗಳಿಗೆ ಮೇಲುಪಂಕ್ತಿ ಎನಿಸಿತು. ಹಾತಿಂಖಾನ್ ಆರ್‌ಜು ಮುಂತಾದ ಕವಿಗಳು ಉತ್ತರಭಾರತದಲ್ಲಿ ಉರ್ದು ಕವಿತೆಗಳನ್ನು ಜನಪ್ರಿಯಗೊಳಿಸಿದರು.. ಖಾಜಾಮೀರ್ ದರ್ಜ್, ಮಿರ್ಜಾರಫಿ ಸೌದಾ, ಮೀರ್ ತಕಮೀರ್ ಮತ್ತು ಮೀರ್ ಮಹಮ್ಮದ್ ಸೋಜ್ ಎಂಬ ನಾಲ್ವರು ಶ್ರೇಷ್ಠ ಕವಿಗಳು ಮುಂದೆ ಒಂದು ದೇಶದಲ್ಲಿ ಕೀರ್ತಿಯನ್ನು ಗಳಿಸಿದರು. ಅವರು ಉರ್ದುಭಾಷೆಯನ್ನು ಸಂಸ್ಕರಿಸಿದರಲ್ಲದೆ ಪರ್ಶಿಯನ್ ವಾಕ್ಯರಣ ಗಳನ್ನು ಪದಪುಂಜಗಳನ್ನು ಬಳಕೆಗೆ ತಂದರು. ಇದರ ಪರಿಣಾಮವಾಗಿ ಕೆಲವು ನಿರುಪಯುಕ್ತ ಹಳೆಯ ಶಬ್ದಗಳು, ವಾಕ್ಯರಚನಾ ರೀತಿಗಳು ಮೂಲೆ ಗುಂಪಾದವು. ಜನರಿಗೆ ಕವಿತೆಯ ವಿಷಯದಲ್ಲಿರುವ ಪ್ರೀತಿ ನಾಡತುಂಬ ಹಬ್ಬಿತು. ಕವಿಗಳು ಪರ್ಶಿಯನ್ ಭಾಷೆಯನ್ನು ಬಿಟ್ಟು ಹೆಚ್ಚು ಹೆಚ್ಚಾಗಿ ಉರ್ದುವನ್ನು ಬಳಸತೊಡಗಿ ದರು. ದಕ್ಷಿಣ ಭಾರತದಲ್ಲಿ ಮದರಾಸಿನ ಮೌಲಾನಾ ಬಾಕರ್ ಆಗಾಹ್ ಮತ್ತು ಅವನ ಶಿಷ್ಯರು ಭಾವಗೀತೆಗಳನ್ನು ಮಸ್ನವಿಗಳನ್ನು (ದೀರ್ಘಕವನಗಳನ್ನು) ಉರ್ದುವಿ ನಲ್ಲಿ ರಚಿಸುವುದಕ್ಕೆ ತೊಡಗಿ ಅನೇಕ ಗ್ರಂಥಗಳನ್ನು ಬರೆದು ಈ ಭಾಗದಲ್ಲಿ ಉರ್ದು ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುವಂತೆ ಮಾಡಿದರು.

ಮೀರ್‌ಹಸನ್ ಎಂಬಾತನು ಆ ಕಾಲದಲ್ಲಿ ಸೆಹ್‌ರುಲ್ ಬಯಾನ್ ಎಂಬ ತನ್ನ ಮಸ್ನವಿಯನ್ನು ರಚಿಸಿ ಪ್ರಸಿದ್ಧನಾಗಿದ್ದನು. ಈ ಕವಿತೆ ಸೌಂದರ್ಯ ಮತ್ತು ಸರಳತೆ ಯಿಂದಾಗಿ ಉರ್ದು ಕವಿತೆಗಳಲ್ಲಿ ಅತ್ಯುತ್ತಮವೆನಿಸಿಕೊಂಡಿದೆ. ದಕ್ಷಿಣ ಮತ್ತು ಪಂಜಾಬುಗಳಿಂದ ಉರ್ದುಕೇಂದ್ರ ದೆಹಲಿಗೆ ಸೇರಿತು. ಅಲ್ಲಿ ಮೊಘಲರ ಆಳ್ವಿಕೆ ಕ್ಷೀಣಿಸಿದುದರಿಂದ ಕವಿಗಳು ಒಂದಿಲ್ಲೊಂದು ಕಾರಣಕ್ಕಾಗಿ ದೆಹಲಿಯಿಂದ ಲಖನೌಗೆ ವಲಸೆ ಬಂದರು. ದೆಹಲಿಯ ರಾಜರುಗಳನ್ನು ಮೀರಿಸುವಂತೆ ಲಖನೌದ ನವಾಬರು

ಈ ಕವಿಗಳಿಗೆ ಆಶ್ರಯ ನೀಡಿದರು. ಅವರು ಎಲ್ಲಾ ರೀತಿಯಲ್ಲಿಯೂ ದೆಹಲಿಯ ರಾಜರನ್ನು ಅನುಕರಿಸಿದರು. ಮೀರ್ ಮತ್ತು ಸೌದಾ ಎಂಬಾತರು ಆಗಲೇ ದೆಹಲಿಯಿಂದ ಲಖನೌಗೆ ವಲಸೆ ಬಂದು ಸೇರಿದ್ದರು. ಹಾಗೆಯೇ ಇತರರೂ ವಲಸೆ ಬಂದು ನೆಲಸಿದರು. ಲಖನೌದ ನವಾಬರು ಹಾಗೆ ಬಂದ ಎಲ್ಲರಿಗೂ ಆಶ್ರಯ ನೀಡಿದರು. ಅಲ್ಲಿ ಅನೇಕ ಕವಿಗಳು ಅನೇಕ ಗ್ರಂಥಗಳನ್ನು ಉರ್ದುವಿನಲ್ಲಿ ರಚಿಸಿದರು. ಇನ್ಶಾ ಎಂಬಾತನು ಹಾಸ್ಯ ಕವಿ. ಇವನು ಸ್ವಭಾವತಃ ಹಾಸ್ಯಗಾರನಾಗಿದ್ದನು. ಈತನು ಹಾಸ್ಯ ಗೀತೆಗಳನ್ನು ರಚಿಸಿದನಲ್ಲದೆ ದರ್ಯಾಯೆ ಲತಾ ಫತ (ಸಾರ ಸಾಗರ) ಎಂಬ ಕೃತಿಯನ್ನು ರಚಿಸಿದನು.

ಸಹದತ್ ಯಾರ್ ಖಾನ್ ರಂಗೀನ್ ಎಂಬಾತನನ್ನು ರೇಖ್ತಿ ಕವಿಯ ಜನಕನೆಂದು ಕರೆಯಲಾಗಿದೆ. ಹೆಂಗಸರ ಮಾತಿನಲ್ಲಿಯೇ ರಾಗೋತ್ಕಟ ಕವಿತೆಗಳನ್ನು ರಚಿಸುವುದು ಈ ಪ್ರಕಾರದ ಮುಖ್ಯ ಸ್ವರೂಪ. ಹೆಂಗಸರಿಗೆ ವಿಶಿಷ್ಟವಾದ ಉಕ್ತಿಗಳನ್ನು, ಪದಗಳನ್ನು ಇದರಲ್ಲಿ ಬಳಸಲಾಗುತ್ತದೆ. ಪೂರ್ವದ ಕವಿಗಳ ರಚನೆಗಳಲ್ಲಿ, ಅದರಲ್ಲಿಯೂ ಬಿಜಾಪುರದ ಹಾಸಿಮಿ ಎಂಬಾತನ ಕವಿತೆಗಳಲ್ಲಿ ಈ ಕವಿತೆಯ ಕುರುಹುಗಳು ದೊರೆಯುತ್ತವೆ. ಮನಸ್ಸನ್ನು ಕಾಮವಿಕಾರಕ್ಕೆ ಒಳಗಾಗಿಸುವ ಇಂತಹ ಮಸಾಲೆಯುಳ್ಳ ಪದ್ಯಗಳು ತುಂಬ ಜನಪ್ರಿಯವಾಗಿವೆ.

ದೆಹಲಿಯಿಂದ ಬಂದ ಕವಿಗಳು ಲಖನೌದಲ್ಲಿ ಕವಿತಾಭಿರುಚಿಯನ್ನು ಜನರಲ್ಲಿ ಹುಟ್ಟಿಸಿದರು. ಕವಿ ಸಭೆಗಳು ಜನರನ್ನು ಹೆಚ್ಚು ಆಕರ್ಷಿಸಿದವು. ಕವಿತಾಸ್ಪರ್ಧೆಗಳಿಂದ ಕವಿಗಳ ತೇಜಸ್ಸು ವೃದ್ಧಿಯಾಯಿತು. ಪದ್ಯಗಳಲ್ಲಿ ಭಾವಗಳನ್ನು ಚಿತ್ರಿಸುವುದು ದೆಹಲಿ ಕವಿಗಳ ವೈಶಿಷ್ಟ್ಯವಾಗಿದ್ದಿತು. ಕಲ್ಪನೆಗಳು, ಶಬ್ದಗಳು ಭಾವನೆಗಳಿಗೂ ವಿಚಾರ ಗಳಿಗೂ ಅಡಿಯಾಳಾಗಿದ್ದವು. ಲಖನೌ ಕವಿಗಳು ಈ ಸಂಪ್ರದಾಯದಿಂದ ದೂರ ಸರಿದು ತಮ್ಮದೇ ಹಾದಿಯನ್ನು ಹಿಡಿದರು. ಅವರು ಅಲಂಕಾರಗಳಿಗೂ ಪದಗಳಿಗೂ ವಿಶಿಷ್ಟ ಗಮನಕೊಟ್ಟರು. ಈ ರೀತಿಗಾಗಿ ಭಾವನೆಗಳು ಬಲಿಯಾದವು. ಪರಸ್ಪರ ಸಂಬದ್ಧವೂ ಸಂಗತವೂ ಆದ ಶಬ್ದಗಳನ್ನು ಮಾತ್ರ ಅವರು ಬಳಸುತ್ತಿದ್ದರು. ಶಬ್ದಗಳಿಗೆ ಇಷ್ಟು ಮಹತ್ವವನ್ನು ಕೊಟ್ಟದ್ದರಿಂದ ಕೃತಕತೆ ತಲೆಹಾಕಿತು. ಕವಿತೆಗೆ ಸಾಂಪ್ರದಾಯಿಕ ಸ್ವರೂಪ ಬಂದಿತು. ಈ ಸ್ವರೂಪ ಷೇಕ್ ಇಮಾಂ ಬಕ್ಷ್ ನಾಸಿಕ್ ಎಂಬಾತನಿಂದ ಆರಂಭವಾಯಿತು. ಲಖನೌ ಮತ್ತು ರಾಮಾಪುರಗಳಲ್ಲಿದ್ದ ಆತನ ಶಿಷ್ಯರು ತಮ್ಮ ನುಡಿಗಟ್ಟುಗಳನ್ನು ಪದಗಳನ್ನು ಗುರುವಿನಿಂದ ಬಹಳ ಎಚ್ಚರಿಕೆಯಿಂದ ಆಯ್ದು ಬಳಸತೊಡಗಿದರು. ಲಖನೌದ ಕವಿಗಳು ಜನಗಳು ತಮ್ಮ ಶಬ್ದ ಪ್ರಯೋಗಗಳು ನುಡಿಗಟ್ಟುಗಳು, ದೆಹಲಿಯ ಕವಿಗಳಿಗಿಂತ ಮೇಲ್ಮಟ್ಟದವೆಂದು ಅವರು ವಾದಿಸಿದರು. ಈ ವ್ಯತ್ಯಾಸವ್ಯಾಕರಣಕ್ಕೂ ಹಬ್ಬಿತು. ಲಖನೌದವರು ಕೆಲವು ಶಬ್ದಗಳನ್ನು ಪುಲ್ಲಿಂಗವೆಂದರೆ ದೆಹಲಿಯವರು ಅವುಗಳನ್ನು ಸ್ತ್ರೀ ಲಿಂಗವೆಂದು ವಾದಿಸುತ್ತಿದ್ದರು. ಈ ವ್ಯತ್ಯಾಸದ ಹೋರಾಟಗಳು ಈಗಲೂ ನಡೆಯುತ್ತಿದೆ. ಈ ಕಾಲದಲ್ಲಿ ನಾಸಿಕ್

ಮತ್ತು ಆತಿಷ್ ಎಂಬ ಕವಿಗಳು ಭಾಷಾಶುದ್ಧಿಗೆ ಗಮನಕೊಟ್ಟು ರೂಪಕಾಲಂಕಾರಗಳನ್ನು ಬಳಸಿ ಕಾವ್ಯ ರಚಿಸಿದರು. ಆತಿಷ್‌ನ ಶಿಷ್ಯ ಪಂಡಿತ್ ದಯಾಶಂಕರ್ ನಸೀಂ ಎಂಬಾತನು ಗುಲ್‌ಜಾಕೆ ನಸೀಂ ಎಂಬ ಪ್ರಸಿದ್ಧ ಮಸ್ನವಿಯನ್ನು ಬರೆದನು. ಇದು ಈಗಲೂ ಹೆಚ್ಚು ಜನಪ್ರಿಯವಾಗಿದೆ.

ಕರ್ಬಲಾದಲ್ಲಿ ಇಮಾಂ ಹುಸೇನ್ ಮತ್ತು ಸಂಗಡಿಗರು ಮಡಿದ ಪ್ರಸಂಗ ಇಸ್ಲಾಮಿನ ಇತಿಹಾಸದಲ್ಲಿ ಬಹು ವಿಷಾದಕರವಾದ ಪ್ರಸಂಗ. ಇದನ್ನು ಪ್ರತಿ ವರ್ಷವೂ ಮೊಹರಮ್ಮಿನ ಮೊದಲ ಹತ್ತು ದಿನಗಳಲ್ಲಿ ಜನಕ್ಕೆ ಶ್ರವಣ ಮಾಡಿಸಲಾಗುತ್ತದೆ. ದಕ್ಷಿಣದ ಮತ್ತು ದೆಹಲಿಯ ಪ್ರಾಚೀನ ಕವಿಗಳು ದುರಂತಕ್ಕೆ ಈಡಾದವರ ಮಹಾನಾಯಕರಲ್ಲಿ ಯಾರಾದೊಬ್ಬರನ್ನು ಕುರಿತು ಶೋಕ ಗೀತೆಗಳನ್ನು ರಚಿಸಲು ಪ್ರಯತ್ನಿಸಿದವರಲ್ಲಿ ಮಿರ್ ಖಲೀಕ್, ಮಿರ್ ಬಬ್ಬರ್ ಅಲಿ ಅನ್ನೀಸ್, ಮಿರ್ಜಾ ಸಲಾಮತ್ ಅಲಿ ದಬೀರ್ ಮುಂತಾದ ಕವಿಶ್ರೇಷ್ಠರು ಮುಖ್ಯರೆನಿಸಿಕೊಂಡಿದ್ದಾರೆ. ಈ ತರಹದ ಶೋಕ ಗೀತೆಗಳನ್ನು ಉತ್ತಮ ದರ್ಜೆಗೆ ತಂದು ಲಖನೌದಲ್ಲಲ್ಲದೆ ಇಡೀ ದೇಶದಲ್ಲೆಲ್ಲಾ ಅದನ್ನು ಜನಪ್ರಿಯಗೊಳಿಸಲು ಶ್ರಮಿಸಿದರು. ಮಿರ್ ಖಲೀಕನ ಮಗ ಮಿರ್ ಅನಿಸ್ ತಂದೆಯ ಹೆಜ್ಜೆಯನ್ನೇ ಅನುಸರಿಸಿದನು. ಈತ ಸಾವಿರಾರು ಶೋಕಗೀತೆಗಳನ್ನು (ಮರ್ಸಿಯ) ಪ್ರಗಾಥ, ಚೌಪದಿ ಮತ್ತು ಗೀತೆಗಳನ್ನು ರಚಿಸಿದನು. ಹರ್ಷ ಶೋಕ, ರಾಗ–ದ್ವೇಷ, ಮತ್ಸರ–ಈರ್ಷೆ, ಭಯ–ಮೃತ್ಯು ಮುಂತಾದ ಮಾನವೀಯ ಭಾವಗಳನ್ನು, ರಾಗಗಳನ್ನು ಆಧರಿಸಿ ಅನೇಕ ಶೋಕ ಗೀತೆಗಳನ್ನು ರಚಿಸಿದನು. ಈತನ ತರುವಾಯ ಎಣಿಕೆಗೆ ಬರುವ ಮಿರ್ಜಾ ದಬೀರ್ ಗಂಭೀರವಾದ ಭಕ್ತಿ ಹಾಗೂ ನಾದತೆಯುಳ್ಳ ಶಬ್ದಗಳಲ್ಲಿ ಶೋಕ ಗೀತೆಗಳನ್ನು ರಚಿಸಿದನು. ಈ ಶೋಕ ಗೀತಾಕಾರರ ಶಿಷ್ಯರು ತಮ್ಮ ಸ್ಪರ್ಧೆಗಳಿಂದ ಇಡೀ ಲಖನೌ ಅನ್ನು ಎರಡು ಪಕ್ಷಗಳಾಗಿ ವಿಭಜಿಸಿದರು.

ನಜೀರ್ ಅಕ್ಬರಾಬಾದಿ ಎಂಬ ಕಾವ್ಯನಾಮದ ವಲೀ ಮಹಮ್ಮದನು ಸೂಫೀ ಕವಿತೆಗಳನ್ನು ರಚಿಸಿದನು. ಧನ ಮತ್ತು ಭೋಗಗಳನ್ನು ಕಂಡರೆ ಆವನಿಗೆ ಆಗುತ್ತಿರಲಿಲ್ಲ. ತನ್ನ ಕವಿತೆಗಳ ಮೂಲಕ ಜನರಿಗೆ ನೀತಿಯನ್ನು ಬೋಧಿಸಿ ಸ್ವಾರ್ಥ ತ್ಯಾಗವನ್ನು ದಾನಶೀಲತೆಯನ್ನು ಉಪದೇಶಿಸುತ್ತಿದ್ದನು. ಈತ ಯಾವ ಮತದ ಅಥವಾ ಪಂಥದ ಹಿಡಿತಕ್ಕೆ ಒಳಗಾಗಲಿಲ್ಲ. ಆದ್ದರಿಂದ ಹಿಂದೂಗಳು ಮುಸ್ಲಿಮರು ತುಂಬ ಮಮತೆಯಿಂದ ಕಾಣುತ್ತಿದ್ದರು. ಈತನ ಸೂಫಿ ಕವಿತೆಗಳು ಎಲ್ಲ ವರ್ಗದ ಜನರಿಗೂ ಹಿಡಿಸುತ್ತಿದ್ದವು. ಅಜಾದ್ ಹಾಲಿ, ಸಕೂರ್ ಮತ್ತು ಚಕ್ ಬಸ್ತ ಎಂಬುವವರು ಕವಿತೆಯ ಹೊಸ ಪಂಥವನ್ನು ಆರಂಭಿಸಿದರು. ವೆಲ್ಲೂರಿನ ಮಾಲಾನಾ ಬಾಕಿ ಅಗಾಹ್ ಎಂಬಾತನು ಅರಬ್ಬಿ, ಪರ್ಷಿಯನ್, ಮತ್ತು ಉರ್ದು ಭಾಷೆಗಳಲ್ಲಿ ಗದ್ಯ ಪದ್ಯಾತ್ಮಕವಾದ ಅನೇಕ ಕೃತಿಗಳನ್ನು ರಚಿಸಿದನು. ಗಾಲಿಬ್ ಜಾಕ್, ಮೋಯಿನ್ ಮತ್ತು ಜಫರ್ ಎಂಬುವವರು ಬೆಳಕಿಗೆ ಬಂದು ಉರ್ದು ಕವಿತೆಯ

ಆಕಾಶದಲ್ಲಿ ತೊಳಲಾಡುತ್ತಿದ್ದಾಗ ದೆಹಲಿ ಪುನಃ ಹೆಚ್ಚಿನ ಪ್ರಾಮುಖ್ಯಕ್ಕೆ ಬಂತು. ಮಿರ್ಜಾ ಅಸದುಲ್ಲಾಖಾನ್ ಗಾಲಿಬ್‌ನನ್ನು ಜಗತ್ತಿನ ಅತ್ಯುತ್ತಮ ಕವಿಗಳ ಪಂಕ್ತಿಗೆ ಸೇರಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಗಾಲಿಬ್‌ನು ಪರ್ಶಿಯನ್ನಲ್ಲಿಯೂ, ಉರ್ದುವಿನಲ್ಲಿಯೂ ಶ್ರೇಷ್ಠ ಗದ್ಯವನ್ನು ಬರೆದಿದ್ದಾನೆ. ಆತ ತನ್ನ ಮಿತ್ರರಿಗೆ ಬರೆದ ಪತ್ರಗಳು ಇಂದು ಉತ್ತಮ ಸಾಹಿತ್ಯವೆನಿಸಿಕೊಂಡಿವೆ.

ಮೊಗಲ್ ವಂಶದ ಕೊನೆಯ ರಾಜ ಬಹಾದ್ದೂರ್‌ಷಾ ಜಫರ್ ಒಬ್ಬ ಹೆಸರಾಂತ ದೊಡ್ಡ ಕವಿ. ಈತನ ಗುರು ಶೇಕ್ ಇಬ್ರಾಹಿಂ ಜಾಕ್ ಎಂಬಾತನು ಕೂಡ ಬಹಳ ಪ್ರಸಿದ್ಧನಾದ ಕವಿ. ಇವರ ಕವಿತೆಗಳು ಮಧುರವಾಗಿದ್ದು ಮನೋಹರವಾಗಿದ್ದು ಸರಳತೆಯಿಂದ ಕೂಡಿವೆ. ಹಕೀಂ ಮೋಮಿನ್ ಖಾನ್ ಕವಿತೆಯಲ್ಲಿ ತುಂಬ ಪಳಗಿದವನು. ಸೂಕ್ಷ್ಮ ಭಾವನೆಗಳಿಗೂ ಉನ್ನತ ಕಲ್ಪನೆಗಳಿಗೂ ಈತನ ಪದ್ಯಗಳು ಹೆಸರಾಗಿವೆ.

1856 ರಲ್ಲಿ ಔಧ್ ಸಂಸ್ಥಾನ ಬ್ರಿಟಿಷರ ಸ್ವಾಧೀನಕ್ಕೆ ಬಂತು. 1857 ರಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಯಿತು. ಆಗ ದೆಹಲಿ ಮತ್ತು ಲಖನೌಗಳ ವ್ಯಾಮೋಹ ಕವಿಗಳಿಗೆ ಬಿಟ್ಟುಹೋಯಿತು. ಅವರ ಗಮನ ಸಣ್ಣ ರಾಜ್ಯಗಳ ಕಡೆ ತಿರುಗಿತು. ಲಖನೌದ ಮುನ್ಷಿ ಅಮೀರ್ ಅಹಮದ್ ಮೀನಾಯಿ ಎಂಬುವನು ರಾಮಪುರ ಸೇರಿದನು. ಅವನ ಪ್ರತಿಸ್ಪರ್ಧಿ ಕವಿ ಮಿರ್ಜಾ ಫಸೀಹುಲ್ ಮುಲ್ಕ್ ದಾಗ್ ದೆಹಲಿಯಿಂದ ಹೈದರಾಬಾದಿಗೆ ಬಂದನು. ನಿಜಾಮನು ಈತನನ್ನು ತನ್ನ ಕವಿತಾ ಗುರುವಾಗಿ ಮಾಡಿಕೊಂಡನು. ಈತನು ಅನೇಕ ಗಜಲ್‌ಗಳನ್ನು (ಪ್ರಣಯಗೀತೆ) ರಚಿಸಿದನು.

ಪರ್ಶಿಯನ್ ಭಾಷೆಗೆ ಮನ್ನಣೆ ದೊರೆಯುವವರೆಗೂ ಉರ್ದು ಬೆಳೆದು ಮುಂದೆ ಬರಲು ಅವಕಾಶವೇ ದೊರೆಯಲಿಲ್ಲ. ತಮ್ಮ ಶಿಷ್ಯರು ಮತ್ತು ಅನುಯಾಯಿಗಳ ಉಪಯೋಗಕ್ಕಾಗಿ ಅನೇಕ ಮುಸ್ಲಿಂ ಯೋಗಿಗಳು ಸಣ್ಣ ಸಣ್ಣ ಪುಸ್ತಕಗಳನ್ನು ಹಳೆಯ ಉರ್ದುವಿನಲ್ಲಿ ಬರೆದರು. ಪರ್ಶಿಯನ್ನಿನ ಕೆಲವು ಶೃಂಗಾರ ಕಥೆಗಳು ಉರ್ದುಗೆ ಅನುವಾದಿತವಾದುವು. ಅದು ಕವಿತೆಗಳ ರಚನೆಗೆ ಉತ್ತಮವಾದ ಕಾಲವಾಗಿದ್ದಿತು. ಉರ್ದು ಕವಿಗಳು ತಮ್ಮ ಕವನಗಳನ್ನು ಉರ್ದುವಿನಲ್ಲಿ ಬರೆಯಲು ಇಷ್ಟಪಡದೆ ಪರ್ಶಿಯನ್ ಭಾಷೆಯಲ್ಲಿ ಬರೆಯಲಾರಂಭಿಸಿದರು. ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಷ್ ಅಧಿಕಾರಿಗಳು ಪರ್ಶಿಯನ್ ಭಾಷೆಯ ವ್ಯಾಸಂಗಕ್ಕೆ ಅಷ್ಟಾಗಿ ಗಮನ ಕೊಡದೆ ದೇಶೀಯ ಭಾಷೆಗಳನ್ನು ಕಲಿತು ಎಲ್ಲ ಜನರ ಸಂಪರ್ಕವನ್ನು ಇರಿಸಿಕೊಳ್ಳಬೇಕೆಂಬ ಅಂಶವನ್ನು ಮನಗಂಡರು. ಆ ಸಮಯದಲ್ಲಿ ಜಾನ್‌ಗಿಲ್‌ಕ್ರಿಸ್ಟ್ ಎಂಬ ವೈದ್ಯವೃತ್ತಿಯ ವಿದ್ವಾಂಸ ಕಲ್ಕತ್ತೆಯಲ್ಲಿ ಸ್ಥಾಪಿತವಾದ ಫೋರ್ಟ್‌ವಿಲಿಯಂ ಕಾಲೇಜಿಗೆ ಅಧ್ಯಕ್ಷನಾಗಿ ನಿಯಮಿತನಾದನು. ಮೀರ್ ಅಮ್ಮನ್, ಮೀರ್ ಷೇರ್ ಆಲಿ ಅಫ್ಸೋಸ್, ಮೀರ್ ಬಹಾದೂರ್ ಆಲಿ ಹುಸೇನಿ ಮತ್ತು ಇತರರು ಆತನ ಆಡಳಿತದಲ್ಲಿ

ಅಧಿಕಾರಿಗಳ ವ್ಯಾಸಂಗಕ್ಕೆ ಯೋಗ್ಯವಾದ ಪಠ್ಯಪುಸ್ತಕಗಳನ್ನು ರಚಿಸಿ ಉರ್ದುವಿಗೊಂದು ಗದ್ಯದ ಮೇಲುಪಂಕ್ತಿಯನ್ನು ಹಾಕಿಕೊಟ್ಟರು. ಷಾವಲೀವುಲ್ಲನ ಪುತ್ರ ಮೌಲ್ವಿ ರಫಿಯುದ್ದೀನ್ ಮತ್ತು ಮೌಲ್ವಿ ಅಬ್ದುಲ್ ಕಾದಿರ್ ಎಂಬುವವರು ಕುರಾನನ್ನು ಸರಳವೂ, ಶುದ್ಧವೂ ಆದ ಉರ್ದುವಿಗೆ ಭಾಷಾಂತರಿಸಿದರು. ದಕ್ಷಿಣದಲ್ಲಿ ಮದರಾಸಿನ ಕಾಜಿ ಬದ್ರುದ್ದೌಲ ಉರ್ದುವಿನಲ್ಲಿ ಕೆಲವು ಕೃತಿಗಳನ್ನು ರಚಿಸಿ ಆದರ ಭಾಷೆಯನ್ನು ಹಿಂದಿ ಎಂದು ಕರೆದನು.

ಫಕೀರ್ ಮುಹಮ್ಮದ್ ಗೋಯ ಮತ್ತು ಮಿರ್ಜಾ ರಜಬ್ ಆಲಿಬೇಗ್ ಸುರೂ ಮುಂತಾದ ವಿದ್ವಾಂಸರು ಕೆಲವು ಶೃಂಗಾರ ಕತೆಗಳನ್ನು ಪ್ರಾಸಬದ್ಧ ಗದ್ಯದಲ್ಲಿ ಬರೆದರು. ಇದು ಜನಸಾಮಾನ್ಯರ ಕೈಗೆ ಎಟುಕುವಂತಿರಲಿಲ್ಲ. ಆದ್ದರಿಂದ ಆ ಗದ್ಯ ಜನರಿಗೆ ಅಷ್ಟಾಗಿ ಹಿಡಿಸಲಿಲ್ಲ. ಮಿರ್ಜಾ ಗಾಲಿಬ್ ಮತ್ತು ಸರ್ ಸೈಯದ್ ಅಹಮದ್‌ಖಾನ್ ಭಾಷೆಯನ್ನು ಕೃತಕತೆ ಮತ್ತು ಶಬ್ದಾಂತರ ಬರದ ಸಂಕೋಲೆಯಿಂದ ಬಿಡಿಸಿ ಸರಳಗೊಳಿಸಿದರು. ದೇಶಾದ್ಯಂತ ಮುದ್ರಣ ಕಾರ್ಯಗಳು ಆರಂಭವಾಗಿ ಹಳೆಯ ರೂಢಿಗಳು ಮುರಿದುಬಿದ್ದವು. ಅನೇಕ ಪುಸ್ತಕಗಳು, ಪತ್ರಿಕೆಗಳು, ಪ್ರಕಟವಾಗಲಾರಂಭವಾದವು. ಇಂಗ್ಲಿಷ್ ಸಾಹಿತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳು ಉರ್ದುವಿನಲ್ಲಿ ಹೊಸ ದಾರಿಗಳನ್ನು ತೆರೆದವು. ಸರ್ ಸೈಯದ್ ಅಹಮದ್ ಖಾನ್ ಎಲ್ಲಾ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಮತೀಯ ಸಮಸ್ಯೆಗಳನ್ನು ತನ್ನ ತಹಜೀಬುಲ್ ಅಖ್ಲಾಕ್ ಎಂಬ ಮಾಸ ಪತ್ರಿಕೆಯಲ್ಲಿ ಚರ್ಚಿಸಿ ಪ್ರಕಟಿಸಿದನು. ಇದು ಭಾರತದ ಮುಸ್ಲಿಂರಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿತು. ಈತ ಸರಳವಾದ ಶೈಲಿಯಲ್ಲಿ ಕೆಲವು ಉರ್ದು ಗ್ರಂಥಗಳನ್ನು ಬರೆದನು. ಹಾಲಿ ಈತನನ್ನು ಉರ್ದು ಗದ್ಯದ ಜನಕನೆಂದು ಕರೆದನು. ನವಾಬ್ ಮೊಹಸಿ ನುಲ್ ಮುಲ್ಕ್, ನವಾಬ್ ವಕಾರುಲ್ ಮುಲ್ಕ್ ಮೌಲಾನ ಅಲ್‌ತಾಫ್ ಹುಸೇನ್ ಹಾಲಿ, ಮೌಲ್ವಿ ಜೀರ್‌ಅಹಮದ್, ಮೌಲಾನ ಮುಹಮ್ಮದ್ ಹುಸೇನ್ ಆಜಾದ್ ಇವರೆಲ್ಲರೂ ಉರ್ದುವಿಗೆ ಹಿಂದೆ ಲಭ್ಯವಾಗಿದ್ದ ಹೊಸ ವಿಷಯಗಳನ್ನು ಭಾವನೆಗಳನ್ನು ತುಂಬಿ ಅದನ್ನು ಸಂಪನ್ನಗೊಳಿಸಿದರು.

ಹಾಲಿ ಮತ್ತು ಆಜಾದರು ಉರ್ದು ಕವಿತೆಯಲ್ಲಿ ಒಂದು ಹೊಸ ಯುಗವನ್ನು ತೆರೆದರು. ಅವರು ಗಜಲುಗಳನ್ನು, ಕಸೀದಗಳನ್ನು ಪರಿಷ್ಕರಿಸಿ ಅವುಗಳ ಕ್ಷೇತ್ರವನ್ನು ವಿಸ್ತರಿಸಿದರು. ಶೃಂಗಾರರಸಯುಕ್ತ ಸೂಫೀ ಭಾವಪೂರಿತ ದಾರ್ಶನಿಕ ಮತ್ತು ನೈತಿಕ ಕಾವ್ಯ ಪ್ರಕಾರಗಳ ಜೊತೆಗೆ ರಾಷ್ಟ್ರೀಯ, ಸಾಮಾಜಿಕ, ಸಾಂಸ್ಕೃತಿಕ ವಸ್ತುಗಳು ಉದಿಸಿದವು. ಆಜಾದನದು ಇತರರು ಅನುಕರಿಸಲು ಅಸಾಧ್ಯವಾದ ಒಂದು ವಿಶಿಷ್ಟ ಶೈಲಿ. ಹಾಲಿಯ ಜೊತೆಗೆ ಈತನು ಉರ್ದು ಸಾಹಿತ್ಯದ ದೂರ ವ್ಯಾಪ್ತಿ ಹೆಚ್ಚು ಪರಿಣಾಮಕಾರಿ ಪ್ರಭಾವವನ್ನು ಬೀರಿ ಹೊಸ ಪ್ರಕಾರಗಳನ್ನು ಬೆಳಕಿಗೆ ತಂದ ಕೀರ್ತಿಗೆ ಪಾತ್ರನಾಗಿದ್ದಾನೆ.

ಮೀರತ್ತಿನ ಮೌಲ್ವಿ ಮುಹಮ್ಮದ್ ಇಸ್ಮಾಯಿಲ್, ಮುನ್ಷಿ ದುರ್ಗಾ ಸಹಾಯ್ ಸರೂರ್, ಸೈಯದ್ ಅಕ್ಬರ್ ಹುಸೇನ್ ಅಕ್ಬರ್, ಬ್ರಜನಾರಾಯಣ ಚಕ್‌ಬಸ್ತ್ ಮುಂತಾದವರು, ಆಧುನಿಕ ಯುಗದ ಪ್ರತಿಭಾಶಾಲಿಯಾದ ಸರ್ ಮುಹಮ್ಮದ್ ಮುಂತಾದ ಕವಿಗಳು, ಇಕ್ಬಾಲನಿಗೆ ಮುಂಚಿನ ಕವಿಗಳಾದ ಇವರು ಜನರ ಮನಸ್ಸನ್ನು ಪರಿವರ್ತನೆಗೊಳಿಸುವ ಕೆಲವು ಉರ್ದು ಮತ್ತು ಪರ್ಷಿಯನ್ ಕವಿತೆಗಳನ್ನು ಬರೆದರು. ಇಕ್ಬಾಲ್ ಶ್ರೇಷ್ಠ ವಿಚಾರಶೀಲ ಮತ್ತು ದಾರ್ಶನಿಕ. ಈತನ ಮುಂದಿನ ಕವಿಗಳು ಈತನ ಮೇಲ್ಪಂಕ್ತಿಯನ್ನು ಅನುಸರಿಸಿದರು. ಇವರು ತಮ್ಮ ಕವಿತೆಗಳಲ್ಲಿ ವಾಸ್ತವಿಕತೆಗೆ ಹೆಚ್ಚು ಗಮನ ಹರಿಸಿದರು. ಸೈಯದ್ ಫಜಲುಲ್ ಹಸರತ್ ಮೊಹಾನಿ, ಗೊಂಡಾವಿನ ಅಸಘರ್ ಹುಸೇನ್ ಅಸಘರ್ ಬದಾಯೂವಿನ ಷಾ ವಕತ್ ಆಲಿಖಾನ್ ಫಾನಿ ಮತ್ತು ಮುರಾದಾಬಾದಿನ ಆಲಿ ಸಿಕಂದರ್ ಜಿಗರ್ ಎಂಬುವರು ಭಾವಗೀತೆಗಳಲ್ಲಿ ಹೊಸ ಪ್ರವೃತ್ತಿಗಳನ್ನು ತೆರೆದು ಪ್ರೇಯಸಿಯ ದೇಹಾಂಗ ವರ್ಣನೆ ಮೊದಲಾದ ಹಳೆಯ ಸಂಪ್ರದಾಯಗಳ ಸಂಕೋಲೆಯಿಂದ ಅದನ್ನು ಪಾರುಗೊಳಿಸಿದರು. ಹೈದರಾಬಾದಿನ ಅಂಜದ್ ಹುಸೇನ್ ಅಂಜದ್ ಸರಳ ಹಾಗೂ ಸುಂದರವಾದ ಚೌಪದಿಗಳಲ್ಲಿ ಕಾವ್ಯ ರಚಿಸಿದನು. ಈತನೊಬ್ಬ ಉಪದೇಶಕ. ಅವನ ಕವಿತೆಗಳಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದು.

ಹತ್ತೊಂಬತ್ತನೇ ಶತಮಾನ ಮುಗಿಯುವ ಹೊತ್ತಿಗೆ ಉರ್ದುಗದ್ಯದಲ್ಲಿ ಮಹತ್ತರವಾದ ಬದಲಾವಣೆ ಉಂಟಾಯಿತು. ಅನೇಕ ಮಾಸ, ವಾರ, ದಿನಪತ್ರಿಕೆಗಳು ಉರ್ದುಭಾಷೆ ಮತ್ತು ಸಾಹಿತ್ಯದ ಪ್ರಸಾರಕ್ಕೆ ಹುಟ್ಟಿಕೊಂಡವು. ಮುನ್ಷಿನೌಲ್ ಕಿಶೋರ್ ಲಖನೌದಲ್ಲಿ ತನ್ನ ಸ್ವಂತ ಅಚ್ಚಿನ ಯಂತ್ರವನ್ನು ಸ್ಥಾಪಿಸಿದನು. ಇದು ಉರ್ದು ಭಾಷೆ ಮತ್ತು ಸಾಹಿತ್ಯದ ಮೇಲೆ ಹೆಚ್ಚು ಪರಿಣಾಮಕಾರಿಯಾದ ಪ್ರಭಾವವನ್ನುಂಟುಮಾಡಿತು. ಈತನು ಎಲ್ಲಾ ಸಣ್ಣದೊಡ್ಡ ಕವಿಗಳ ಕವಿತೆಗಳನ್ನು, ಕವನ ಸಂಗ್ರಹಗಳನ್ನು ಪ್ರೇಮ ಮತ್ತು ಸಾಹಸದ ಕಥೆಗಳನ್ನು, ಕಥಾಸಂಗ್ರಹಗಳನ್ನು ಪ್ರಕಟಿಸಿದನು. ಲಖನೌದ ಜೌಧ್ ಅಕ್‌ಬಾರ್, ಮತ್ತು ಜೌಧ್ ಪ್ರಪಂಚ್ ಎಂಬ ದಿನ ಮತ್ತು ವಾರ ಪತ್ರಿಕೆಗಳು, ದೆಹಲಿಯ ಆಷ್ರಫುಲ್ ಅಖ್‌ಬಾರ್, ಲಾಹೋರಿನ ಪೈಸಾ ಅಖ್‌ಬಾರ್, ಬೊಂಬಾಯಿಯಕಷ್ಫಲ್ ಅಖ್‌ಬಾರ್, ಮದರಾಸಿನ ಷಾಂಸುಲ್ ಅಖ್‌ಬಾರ್ ಬೆಂಗಳೂರಿನ ಕಾಸಿಮುಲ್ ಅಖ್‌ಬಾರ್ ಮುಂತಾದ ಪತ್ರಿಕೆಗಳು ಉರ್ದು ಓದುಗರ ವಲಯವನ್ನು ವಿಸ್ತರಿಸಿ ಅವರನ್ನು ಸಾಹಿತ್ಯದತ್ತ ಸೆಳೆದವು. ಪಂಡಿತರತನ್‌ನಾಥ್ ಸರ್‌ಷಾರ್ ಎಂಬಾತನು ಒಬ್ಬ ಪ್ರತಿಭಾವಂತ ಲೇಖಕ. ಈತ ಅನೇಕ ಉರ್ದು ಕೃತಿಗಳನ್ನು ರಚಿಸಿದ್ದಾನೆ. ಫಸಾನ್-ಎ-ಆಜಾದ್ ಎಂಬ ಗ್ರಂಥ ಅವುಗಳಲ್ಲಿ ಮುಖ್ಯವಾದದ್ದು. ಈತನು ಈ ಗ್ರಂಥದಲ್ಲಿ ತನ್ನ ಕಾಲದ ಸಮಾಜದ ಅನೇಕ ಮುಖಗಳನ್ನು ನೈಜವಾಗಿ ಚಿತ್ರಿಸಿದ್ದಾನೆ. ಮೌಲ್ವಿ ಅಬ್ದುಲ್ ಹಲಿಂಷರರ್ ಅನೇಕ ಕಾದಂಬರಿಗಳನ್ನು ಸಣ್ಣಕಥೆಗಳನ್ನು ರಚಿಸಿ ಪ್ರಖ್ಯಾತನಾಗಿದ್ದಾನೆ.

ಮುನ್ಷಿ ಪ್ರೇಮ ಚಂದ್‌ನ ನಿಜವಾದ ನಾಮಧೇಯ ಧನ್‌ಪತ್‌ರಾಯ್. ಈತ ಸಣ್ಣ ಕಥೆಗಳು ಮತ್ತು ಕಾದಂಬರಿ ಕ್ಷೇತ್ರದಲ್ಲಿ ತುಂಬ ಹೆಸರುವಾಸಿಯಾದವನು. ಈತನು ತನ್ನ ಕಾಲದ ರೈತರು, ಭೂಮಾಲೀಕರು, ಜಹಗೀರಿದಾರರು, ಜಮೀನುದಾರರು ಮುಂತಾದವರ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾನೆ. ಭಾರತೀಯ ಜನರ ವಿಚಾರದಲ್ಲಿ ಪ್ರೇಮಚಂದ್‌ನ ತಿಳುವಳಿಕೆ, ಮಾನವೀಯತೆ, ಭಾಷೆಯ ಮೇಲಿನ ಪ್ರಭುತ್ವ ಈತನ ಉರ್ದು ಬರವಣಿಗೆಗಳು ಆದರ್ಶಕ್ಕೇರಲು ಕಾರಣವಾದವು. ೧೯೩೬ ರಲ್ಲಿ ಈತ ಕೊನೆಯುಸಿರೆಳೆಯುವವರೆಗೆ ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಉತ್ತಮ ಕಾದಂಬರಿಗಳನ್ನು ಸಣ್ಣಕಥೆಗಳನ್ನು ಬರೆದು ಪ್ರಕಟಿಸಿದನು.

೧೯೦೩ರಲ್ಲಿ ಅಂಜುಮನ್ ತರಕ್ಕಿ ಉರ್ದು ಎಂಬ ಒಂದು ದೊಡ್ಡ ಸಂಶೋಧನಾಲಯವನ್ನು ಹೈದರಾಬಾದಿನಲ್ಲಿ ತೆರೆಯಲಾಯಿತು. ಮೌಲಾನ ಷಿಬ್ಲಿ ನೊಮಾನಿ ಎಂಬ ಸಾಹಿತಿ ಮತ್ತು ವಿಮರ್ಶಕ ಇದರ ಮೊದಲ ಕಾರ್ಯದರ್ಶಿ, ಡಾ. ಮೌಲ್ವಿ ಅಬ್ದುಲ್ ಹಕ್ ಆದರ ಕಾರ್ಯದರ್ಶಿಯಾದಾಗ ಇದು ತುಂಬ ಅಭಿವೃದ್ಧಿ ಹೊಂದಿತು. ಇದರ ಆಡಳಿತ ಕಛೇರಿಯನ್ನು ಹೈದರಾಬಾದ್‌ನಿಂದ ಔರಂಗಾಬಾದಿಗೆ ವರ್ಗಾಯಿಸಲಾಯಿತು. ಉರ್ದು ಎಂಬ ತ್ರೈಮಾಸಿಕ ಪತ್ರಿಕೆಯನ್ನು ೧೯೨೧ರಲ್ಲಿ ಹೊರಡಿಸಲಾಯಿತು. ಇದು ೧೯೪೮ರವರೆಗೂ ನಿರಂತರವಾಗಿ ಪ್ರಕಟವಾಯಿತು. ಮೌಲ್ವಿ ಅಬ್ದುಲ್‌ಹಕ್ ಒಂದು ಘನವಾದ ಉರ್ದು ಇಂಗ್ಲಿಷ್ ನಿಘಂಟನ್ನು ಪ್ರಕಟಿಸಿದನು. ಹಕ್ ಈ ಸಂಶೋಧನಾಲಯದ ಶಾಖೆಗಳನ್ನು ದೇಶಾದ್ಯಂತ ಸ್ಥಾಪಿಸಲು ಎಲ್ಲ ಕಡೆಯಿಂದ ಅನೇಕ ವಿದ್ವಾಂಸರ ಸಹಕಾರವನ್ನು ಈತ ಪಡೆದನು. ೧೯೩೮ರಲ್ಲಿ ಅಂಜುಮನ್ ಅನ್ನು ದೆಹಲಿಗೆ ವರ್ಗಾಯಿಸಲಾಯಿತು. ಹಮಾರಿಜಬಾನ್ ಎಂಬ ಪತ್ರಿಕೆಯನ್ನು ೧೯೪೧ರಲ್ಲಿ ಹೊರಡಿಸಲಾಯಿತು. ಈ ಪತ್ರಿಕೆ ಈಗಲೂ ಅಲಿಘರ್‌ನಿಂದ ಪ್ರಕಟವಾಗುತ್ತಿದೆ. ಉರ್ದುಭಾಷೆ ಮತ್ತು ಸಾಹಿತ್ಯಕ್ಕೆ ಈತ ಸಲ್ಲಿಸಿರುವ ಸೇವೆಯನ್ನು ಗಮನಿಸಿ ಭಾರತೀಯರು ಈತನಿಗೆ ಬಾಬಾ–ಎ–ಉರ್ದು ಎಂಬ ಬಿರುದನ್ನು ಸಲ್ಲಿಸಿದರು. ಷಿಬ್ಲಿ ಅಕಾಡೆಮಿ ಎಂಬ ಇನ್ನೊಂದು ಸಂಶೋಧನಾಲಯವನ್ನು ಅಜಮ್ ಗಡದಲ್ಲಿ ೧೯೪೧ರಲ್ಲಿ ಸ್ಥಾಪಿಸಿದನು. ಇದರಲ್ಲಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಸಂಶೋಧನೆಗಳನ್ನು ನಡೆಸಲಾಗುತ್ತಿದೆ.

ಭಾರತದ ಮಾಜಿ ವಿದ್ಯಾಮಂತ್ರಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಎಂಬುವವನು ದೊಡ್ಡ ವಿದ್ವಾಂಸ. ಉತ್ತಮ ಉರ್ದು ಬರಹಗಾರ. ಉರ್ದುವಿನ ಗದ್ಯದಲ್ಲಿ ಇವನದೇಆದ ವಿಶಿಷ್ಟ ಶೈಲಿಯಲ್ಲಿ ಅಲ್–ಹಿಲಾಲ್ ಮತ್ತು ಅಲ್ ಬಲಾಗ್ ಎಂಬ ಪತ್ರಿಕೆಗಳನ್ನು ಕಲ್ಕತ್ತೆಯಲ್ಲಿ ಆರಂಭಿಸಿದನು. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯ ಇಂಗ್ಲಿಷ್ ಮುಂತಾದ ಭಾಷೆಗಳ ಉತ್ತಮ ಕೃತಿಗಳನ್ನು ಉರ್ದು ಭಾಷೆಗೆ ಭಾಷಾಂತರಿಸಲು ೧೯೧೭ರಲ್ಲಿ ದಾರುಲ್ ತರ್ಜುಮಾ ಎಂಬ ಭಾಷಾಂತರ ಇಲಾಖೆಯನ್ನು ಸ್ಥಾಪಿಸಿತು. ಉರ್ದುವಿನಲ್ಲಿ ವೈಜ್ಞಾನಿಕ ಮತ್ತು

ತಾಂತ್ರಿಕ ಪರಿಭಾಷಾ ಶಬ್ದಕೋಶವನ್ನು ರಚಿಸಲು ಪ್ರಯತ್ನ ನಡೆಸಲಾಯಿತು. ೧೯೨೧ರ ಅಸಹಕಾರ ಚಳುವಳಿಯ ಕಾಲದಲ್ಲಿ ಜಾಮಿಯ ಮಿಲಿಯ ಎಂಬ ರಾಷ್ಟ್ರೀಯ ವಿದ್ಯಾಸಂಸ್ಥೆಯೊಂದನ್ನು ದೆಹಲಿಯಲ್ಲಿ ಸ್ಥಾಪಿಸಲು ಯೋಜಿಸಲಾಯಿತು. ಈ ಸಂಸ್ಥೆಯನ್ನು ಸ್ಥಾಪಿಸಿ ವಿವಿಧ ವಿಷಯಗಳ ಮೇಲೆ ಶ್ರೇಷ್ಠ ದರ್ಜೆಯ ಗ್ರಂಥಗಳನ್ನು ಪ್ರಕಟಿಸಲಾಯಿತು. ಇಂದಿಗೂ ಈ ಕಾರ್ಯ ಮುಂದುವರಿಯುತ್ತಿದೆ. ಹೈದರಾಬಾದಿನ ಇದಾರ ಅದಬಿಯಾತೆ ಉರ್ದು, ಅಲಹಾಬಾದಿನ ಹಿಂದೂಸ್ತಾನಿ ಅಕಾಡೆಮಿ, ದೆಹಲಿಯ ನದಿವತುಲ್ ಮುಸನ್ನಿಫೀನ್ ಮುಂತಾದ ಸಂಶೋಧನಾ ಕೇಂದ್ರಗಳು ಈ ದಿಸೆಯಲ್ಲಿ ಸಾಕಷ್ಟು ಗ್ರಂಥಗಳನ್ನು ಪ್ರಕಟಿಸುತ್ತಿವೆ.

ಇಪ್ಪತ್ತನೇ ಶತಮಾನದ ಪ್ರಥಮಾರ್ಧದ ಹೊತ್ತಿಗೆ ರೊಮ್ಯಾಂಟಿಸಿಸಂ, ರ್‍ಯಾಡಿಕಲಿಸಂ, ರ್‍ಯಾಷನಲಿಸಂ ಮುಂತಾದ ಸಾಹಿತ್ಯ ಪಂಥಗಳು ಹುಟ್ಟಿಕೊಂಡವು. ಇವುಗಳ ಮೇಲೆ ಬೇರೆ ಬೇರೆ ಗ್ರಂಥಗಳು ಪ್ರಕಟವಾದವು. ಸ್ವಾತಂತ್ರ್ಯಕ್ಕಾಗಿ ಹೋರಾಟ ಒಂದು ಹೊಸ ಘಟ್ಟವನ್ನು ಮುಟ್ಟಿದ್ದಿತು. ಅಂತ್ರಾಷ್ಟ್ರೀಯ ದೃಶ್ಯವೂ ಕೂಡ ಬದಲಾಗುತ್ತಿದ್ದಿತು. ಸಾಮಾಜಿಕ, ಸಾಹಿತ್ಯಿಕ, ಧಾರ್ಮಿಕ ತತ್ತ್ವಗಳಿಗೆ ವಿರುದ್ಧವಾಗಿ ಕಾಲ್ಪನಿಕ ಪ್ರತಿಭಟನೆಗಳು ತಲೆದೋರಿದವು. ತರುಣರು ತಮ್ಮ ಬರವಣಿಗೆಗಳಿಂದ ಹೊಸತನವನ್ನು ಹೊರತಂದರು. ತಮ್ಮ ಶೈಲಿ, ಶಬ್ದ, ಶಬ್ದಪುಂಜಗಳ ರೀತಿರೂಪಸೌಂದರ್ಯಗಳಲ್ಲಿ ತುಂಬ ಎಚ್ಚರಿಕೆ ವಹಿಸಿದರು. ಆದರೆ ಅವರ ಭಾವಗಳು ಆಳವಾಗಿರಲಿಲ್ಲ. ನೀತಿಯ ವಿಷಯದಲ್ಲಿ ಅವರಿಗೆ ಅಷ್ಟಾಗಿ ಉತ್ಸಾಹವೇನೂ ಇರಲಿಲ್ಲ. ಫ್ರೆಂಚ್, ಇಂಗ್ಲಿಷ್, ರಷ್ಯನ್, ಬರಹಗಾರರ ಮೂಲ ಕೃತಿಗಳನ್ನು ಭಾಷಾಂತರಿಸಿ ಅವರು ಪ್ರಭಾವಿತರಾಗಿದ್ದರು. ಹಳೆಯದಾವುದನ್ನೂ ಅನುಸರಿಸದೆ ಅವರು ಪಾಶ್ಚಾತ್ಯ ಸಂಪ್ರದಾಯಗಳಲ್ಲಿ ಮಗ್ನರಾಗಿದ್ದರು. ತರುಣ ಬರಹಗಾರರು ಉರ್ದು ಓದುಗರಿಗಾಗಿ ಅಂದಿನವರೆಗೂ ತಿಳಿಯದಿದ್ದ ವಿಷಯಗಳ ಮೇಲೆ ಕಥೆಗಳನ್ನು ಕಾದಂಬರಿಗಳನ್ನು ರಚಿಸತೊಡಗಿದರು. ಜೇಮ್ಸ್, ಜಾಯ್ಸ್, ಪ್ರಾಯ್ಡ್, ಮಾರ್ಕ್ಸ್, ಗಾರ್ಕಿ, ಡಿ.ಎಚ್.ಲಾರೆನ್ಸ್ ಮತ್ತು ಟಾಲ್‌ಸ್ಟಾಯ್ ಇವರೆಲ್ಲರ ಬರಹಗಳು ಓದುಗರ ಮತ್ತು ಬರಹಗಾರರ ಹೊಸ ತಿರವುಗಳನ್ನು ತೆರೆದವು. ಇವು ಮುಂದಿನ ಬರವಣಿಗೆಗಳಿಗೆ ನಾಂದಿಯಾದವು. ೧೯೩೬ರಲ್ಲಿ ಪ್ರಗತಿಶೀಲ ಲೇಖಕರ ಚಳುವಳಿ ಒಂದು ಸ್ಪಷ್ಟರೂಪವನ್ನು ತಳೆಯಿತು. ಅದರ ಮೊದಲ ಸಮ್ಮೇಳನ ಲಖನೌದಲ್ಲಿ ನಡೆಯಿತು. ವಾಸ್ತವಿಕತೆ, ವಿಚಾರನಿಷ್ಠೆ, ಮತ್ತು ನವಕಲಾ ಕುಶಲ ಸಾಹಿತ್ಯ ಮೌಲ್ಯಗಳಿಗೆ ವಿಶೇಷ ಗಮನ ಕೊಡಬೇಕೆಂದು ಅದು ಒತ್ತಿ ಹೇಳಿತು. ಉರ್ದು ಸಾಹಿತ್ಯದಲ್ಲಿ ಇಕ್ಬಾಲನ ಅನಂತರ ಶ್ರೇಷ್ಠಕವಿ ಎನಿಸಿದ ಷಬ್ಬೀರ್ ಹಸನ್ ಖಾನ್ ಜೋಷ್ ಮಲಿಹಾಬಾದಿ ಎಂಬಾತನು ತನ್ನ ವಿಶಿಷ್ಟ ಕೌಶಲವನ್ನು ಪ್ರಣಯ, ಪ್ರಕೃತಿಪ್ರೇಮ, ಮಾನವೀಯತೆ ಮುಂತಾದ ಶೃಂಗಾರ ಭಾವಗಳಿಗೆ ಮೀಸಲಿಟ್ಟ ಕವಿತೆಗಳನ್ನು ರಚಿಸುತ್ತಿದ್ದನು. ಆತನ ರುದ್ರಪ್ರತಿಭೆ ಭಾಷೆ ಮತ್ತು ಶೈಲಿಯ

ಪ್ರಭುತ್ವಗಳು ಇತರ ಕವಿಗಳನ್ನು ಬೆರಗುಗೊಳಿಸಿದವು. ಫೈಜ್, ಮಜಾಜ್ ಅಲಿಸರ್ದಾರ್, ಜಾಫ್ರಿ, ಅಖ್ತರ್, ಕ್ಷೀರಾನಿ, ಆನಂದ ನಾರಾಯಣ ಮುಲ್ಲಾ ಮುಖದೂಮ್ ಮೊಹ್ಯುದ್ದೀನ್ ಸಿರಾಜ್, ಗೋರಖ್‌ಪುರಿ, ಮುಂತಾದವರು ಪರಕೀಯರ ಆಡಳಿತ, ಅಜ್ಞಾನ, ಬಡತನ, ದಬ್ಬಾಳಿಕೆ ಮತ್ತು ಯುದ್ಧವನ್ನು ತೆಗಳುತ್ತಾ ಕ್ರಾಂತಿಯನ್ನು ಜನಪ್ರೀತಿಯನ್ನು ಹಾಡಿಹೊಗಳಿದರು. ಕೃಷ್ಣಚಂದ್ರ, ರಾಜೇಂದ್ರಸಿಂಗ್, ಬೇದಿ, ಇಸಮತ್‌ಚುಗ್‌ತಾಯಿ, ಖ್ವಾಜ ಅಹಮದ್ ಅಬ್ಬಾಸ್, ಅಲಿ ಅಬ್ಬಾಸ್, ಹುಸೇನಿ, ಹಯತುಲ್ಲ, ಅನ್‌ಸಾರಿ, ಸಆದತ್‌ಹಸನ್ ಮನಟೋ, ಸಾದಿಕ್ ಹುಸೇನ್ ಸರ್‌ಧನವಿ, ತೀರ್ಥರಾಮ್ ಫಿರೋಜ್ ಪುರಿ, ಅಹಮದ್ ನಾದೀಂ ಕಾಸಿಮಿ, ಅಜೀಜ್ ಅಹಮದ್, ರೈಸ್ ಅಹಮದ್ ಜಾಫರಿ ಮತ್ತು ಇತರರು ಬೇರೆ ಬೇರೆ ಕಥೆಗಳನ್ನು ಬರೆದು ಹೆಸರುವಾಸಿಯಾಗಿದ್ದಾರೆ. ಪ್ರೊ.ಮಸೂದ್ ಹಸನ್ ರಜ್‌ವಿ, ನೈಯಾಜಫತೇಪುರಿ, ಅಲ್‌ಅಹಮದ್ ಸರೂರ್, ಪ್ರೊ. ರಶೀದ್ ಅಹಮದ್ ಸಿದ್ದಿಕ್ಕಿ ಎಂಬುವವರು ವಿಮರ್ಶೆಯಲ್ಲಿ ಪ್ರಖ್ಯಾತರಾಗಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಭಾರತದಲ್ಲಿ ಬಹುಭಾಗದ ಜನ ಉರ್ದು ಭಾಷೆಯನ್ನು ಆಡಿ ಅರ್ಥಮಾಡಿ ಕೊಳ್ಳುತ್ತಿದ್ದಾರೆ. ಭಾರತದಲ್ಲಿ ಉರ್ದು ಪ್ರಾಂತ್ಯ ಯಾವುದೂ ಇಲ್ಲ. ದೇಶದ ಎಲ್ಲ ಕಡೆಗಳಲ್ಲಿಯೂ ಉರ್ದು ಪತ್ರಿಕೆಗಳು ಪ್ರಕಟವಾಗುತ್ತವೆ. ಲಂಡನ್, ಏಡನ್ ಮತ್ತು ಪೂರ್ವಆಫ್ರಿಕಗಳಿಂದ ಉರ್ದುನಿಯತಕಾಲಿಕಗಳು ಪ್ರಕಟವಾಗುತ್ತಿವೆ. ಬಹುಸಾಲು ದೇಶದ ಎಲ್ಲಾ ನಗರಗಳಲ್ಲಿಯೂ ಉರ್ದುಪುಸ್ತಕಗಳು ಪ್ರಕಟವಾಗುತ್ತಿವೆ. ಬಹು ತೇಕ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಉರ್ದುಪೀಠಗಳಿದ್ದು ಅವುಗಳಲ್ಲಿ ಸ್ನಾತಕೋತ್ತರ ಮತ್ತು ಸಂಶೋಧನಾಲಯಗಳಿವೆ. ಮಾಸ್ಕೊ, ಮದೀನ, ಪ್ಯಾರಿಸ್ ಮತ್ತು ಲಂಡನ್ ವಿಶ್ವವಿದ್ಯಾನಿಲಯಗಳಂತಹ ಕೆಲವು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉರ್ದು ಅಧ್ಯಾಪನ ಮತ್ತು ಸಂಶೋಧನೆಗೆ ಅವಕಾಶಗಳಿವೆ. ಉರ್ದು ಭಾಷೆಯನ್ನು ಪಾಕಿಸ್ತಾನ ರಾಷ್ಟ್ರಭಾಷೆಯನ್ನಾಗಿ ಪರಿಗಣಿಸಿಕೊಂಡಿದ್ದರೂ ಪಾಕಿಸ್ತಾನದಲ್ಲಿ ಉರ್ದುವನ್ನು ತನ್ನ ಪ್ರದೇಶದ ಭಾಷೆ ಎಂದು ಹೇಳಿಕೊಳ್ಳುವ ಯಾವ ಪ್ರಾಂತವೂ ಇಲ್ಲ. ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಉರ್ದು ಕೆಲವು ದಶಕಗಳ ಕಾಲ ಬೋಧನಾ ಮಾಧ್ಯಮವಾಗಿದ್ದು ಅನಂತರ ಅದನ್ನು ಇಂಗ್ಲಿಷ್ ಮಾಧ್ಯಮ ಮಾಡಿಕೊಳ್ಳಲಾಯಿತು. ಉರ್ದು ಸಾಹಿತ್ಯಕ್ಕೆ ಮುಸ್ಲಿಮರಷ್ಟೇ ಹಿಂದೂಗಳು ಸೇವೆ ಸಲ್ಲಿಸಿದ್ದಾರೆ. ಇದು ಕೇವಲ ಮುಸ್ಲಿಂ ಭಾಷೆಯಲ್ಲ ಹಾಗೆಯೇ ಉರ್ದು ಸಾಹಿತ್ಯ ಕೇವಲ ಮುಸ್ಲಿಂ ಸಾಹಿತ್ಯವೂ ಅಲ್ಲ. ಇದು ಹಿಂದೂ ಮುಸ್ಲಿಂ ಸಂಸ್ಕೃತಿಗಳ ಮಿಶ್ರಣವಾದ ಭಾರತೀಯ ಸಂಸ್ಕೃತಿ. ಪ್ರಪಂಚದ ಜನಸಂಖ್ಯೆ ಯಲ್ಲಿ ಉರ್ದು ಆಡು ಭಾಷೆಯಾಗಿ ಮೂರನೆಯ ಸ್ಥಾನ ಗಳಿಸಿಕೊಂಡಿದೆ.

ಡಿ. ಎಲ್. ವಿಜಯಕುಮಾರಿ

ಮದುವಣಗಿತ್ತಿ

ತೋಳದಿಂಬಿನಲಿ ಅತ್ತಿತ್ತ ಹೊರಳುತ್ತ
ಬಿಕ್ಕಿ ಬಿಕ್ಕಿ ಅತ್ತವಳು
ನೆನ್ನೆಯ ಮದುವಣಗಿತ್ತಿ :
ನೆನ್ನೆಗೂ ಇಂದಿಗೂ ನಡುವೆ ನಡೆದದ್ದೇನು ?

ಹಾವು ಹಾಸಿಗೆಯಲಿ
ಹೊಂಗನಸುಗಳು ಪಾತಾಳಕಿಳಿದು
ತಳಕಚ್ಚಿದಳು ಮದುವಣಗಿತ್ತಿ ;
ಕಾಮದ ದಳ್ಳುರಿಗೆ ಕರಿಕಾಯಿತು ತೋಳಬಂದಿ !

ಲೋಭದ ಅಗ್ನಿಜ್ವಾಲೆಯಲಿ
ಹೊನ್ನತಾವರೆಯನೊಟ್ಟ
ಬಲಿಪಶುವಾದಳು ಮದುವಣಗಿತ್ತಿ ;
ನೆನ್ನೆಗೂ ಇಂದಿಗೂ ನಡುವೆ ಕ್ರೌರ್ಯ ಭೂತ ನೃತ್ಯ !

ಒಪ್ಪಿಕೊಂಡ ಬದುಕು ಅಪ್ಪಿಕೊಳ್ಳಲಾಗದೆ
ಅಸ್ಥಿಪಂಜರದ ಗೂಡಾಗಿದೆ
ಮಸಣಸೇರಿದಳು ಮದುವಣಗಿತ್ತಿ ;
ಕಂಡದ್ದು ಕಂಡಂತೆ ಯಾರೂ ಹೇಳುತ್ತಿಲ್ಲವೇಕೆ ಸಾಕ್ಷಿ ?

•

ಡಾ. ಸೋಮಶೇಖರಗೌಡ

ಶಿಷ್ಟಭಾಷೆ

ಶಿಷ್ಟಭಾಷೆ ಎಂದರೇನು ?

[ಡಾ. ಸೋಮಶೇಖರಗೌಡರು ಈ ಲೇಖನದಲ್ಲಿ ಶಿಷ್ಟಭಾಷೆಯ ಲಕ್ಷಣ ಗಳನ್ನು ಶಿಷ್ಟವಾದ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಶಿಷ್ಟಭಾಷೆಯು ವರ್ಗವಲಯ ಸಾಮಾಜಿಕ ಮತ್ತು ಪ್ರಾದೇಶಿಕ ಎಲ್ಲೆಯನ್ನು ಮೀರಿದ್ದು. ಉಪಭಾಷೆಗಳ ನಡುವಣ ಅಂತರವನ್ನು ಕಡಿಮೆ ಮಾಡುವಂತಹದು. ಇಂದಿನ ಪ್ರಪಂಚದಲ್ಲಿ ಇತರ ಭಾಷೆ ಗಳೊಡನೆ ಸ್ಪರ್ಧಿಸಲು, ತನ್ನ ಆಧುನಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಯಾವುದೇ ಭಾಷೆ ಶಿಷ್ಟೀಕರಣಗೊಳ್ಳುವದು ಅನಿವಾರ್ಯವೆಂಬುದು ಲೇಖಕರ ಅಭಿಪ್ರಾಯ—ಸಂ]

ಯಾವ ಭಾಷೆಯ ಒಂದು ರೂಪ ವರ್ಗ ವಲಯಗಳನ್ನು ದಾಟಿ, ಸಾಮಾಜಿಕ, ಪ್ರಾದೇಶಿಕ ಪ್ರತಿಬಂಧಕಗಳನ್ನು ಮೀರಿ ಆ ಭಾಷೆಯನ್ನಾಡುವ ಎಲ್ಲರಿಗೂ ಅರ್ಥವಾಗುತ್ತದೆಯೋ ಅದೇ ಶಿಷ್ಟಭಾಷೆ. ಚಾಮರಾಜನಗರ, ಕೊಳ್ಳೇಗಾಲ, ಮಂಡ್ಯ, ಮದ್ದೂರುಗಳಲ್ಲಿ ಮಾತಾಡುವಂಥ ಕನ್ನಡ ಕರ್ನಾಟಕದ ಎಲ್ಲ ಭಾಗಗಳಲ್ಲಿರುವ–ಕನ್ನಡಿಗರಿಗೆಲ್ಲ ಸಂಪೂರ್ಣವಾಗಿ ಅರ್ಥವಾಗದೇ ಹೋಗಬಹುದು. ಹಾಗೆಯೇ ಧಾರವಾಡ, ಹುಬ್ಬಳ್ಳಿ, ಗುಲ್ಬರ್ಗಗಳಲ್ಲಿ ಮಾತನಾಡುವ ಕನ್ನಡ ಕೂಡ. ಆದರೆ, ಆಡಳಿತ, ಕಾನೂನು, ಶಿಕ್ಷಣ ಮಾಧ್ಯಮಗಳಲ್ಲಿ ಬಳಸುವ ಕನ್ನಡ ಕರ್ನಾಟಕದ ಎಲ್ಲ ಭಾಗಗಳ ಕನ್ನಡಿಗರಿಗೂ ತಿಳಿಯುತ್ತದೆ. ಆದುದರಿಂದಲೇ ಇದನ್ನು ದಿನಪತ್ರಿಕೆಗಳು, ರೇಡಿಯೊ, ದೂರದರ್ಶನದಂಥ ಸಮೂಹ ಮಾಧ್ಯಮಗಳು ಅವಲಂಭಿಸಿರುವುದು.

ಶಿಷ್ಟಭಾಷೆಯನ್ನು ಗುರುತಿಸುವುದು ಹೇಗೆ ?

ಶಿಷ್ಟಭಾಷೆಗೆ ಹೆಚ್ಚು ಜನರಿಗೆ ತಲುಪುವಂಥ, ಹೆಚ್ಚು ಜನರಿಗೆ ಅರ್ಥವಾಗುವಂಥ ಉಚ್ಚಾರಣೆ, ಪದಸಂಪತ್ತು, ವಾಕ್ಯರಚನೆ ಹಾಗೂ ವ್ಯಾಕರಣ ರೂಪ ಇರುತ್ತದೆ. ಶಿಕ್ಷಣವೇತ್ತರು, ಅಧಿಕಾರಿಗಳು ಶಿಷ್ಟಭಾಷೆಯನ್ನು ಬಳಸುತ್ತಾರೆ. ಅನ್ಯ ಭಾಷಿಗರು ಯಾವಾಗಲೂ ಕಲಿಯುವುದು ಶಿಷ್ಟಭಾಷೆಯನ್ನೇ. ಹೀಗಾಗಿ ಬೋಧಕರು ತಮ್ಮ

ಬೋಧನಾ ಸಾಮಗ್ರಿಯನ್ನು ಶಿಷ್ಟಭಾಷೆಯಲ್ಲಿಯೇ ಸಿದ್ಧಪಡಿಸುತ್ತಾರೆ. ವಿದ್ಯಾವಂತರನ್ನು ಗುರುತು ಹಚ್ಚುವುದೇ ಅವರು ಆಡುವ ಶಿಷ್ಟಭಾಷೆಯಿಂದ. ಈ ಕಾರಣಗಳಿಂದಾಗಿ ಶಿಷ್ಟಭಾಷೆ ಇತರ ಉಪಭಾಷಾ ರೂಪಗಳ ಮೇಲೆ ಕುಳಿತು ಸವಾರಿ ಮಾಡುತ್ತದೆ. ಆದುದರಿಂದಲೇ ಇದಕ್ಕೆ Superposed variety, Prestigious variety ಎಂಬ ಗೌರವ, ಸನ್ಮಾನಗಳು ಲಭ್ಯವಾಗಿವೆ.

ಶಿಷ್ಟಭಾಷೆ ರೂಪುಗೊಳ್ಳುವ ಬಗೆ ಎಂಥದು?

ಶಿಷ್ಟ ಭಾಷೆ ಏಕಾಏಕಿ ಎಲ್ಲಿಂದಲೊ ಬಂದುಬಿಡುವುದಿಲ್ಲ. ಉಪಭಾಷೆಗಳ ನಡುವಣ ಅಂತರವನ್ನು ಕಡಿಮೆ ಮಾಡುವ ನೆಪದಲ್ಲಿ ಇದು ಏಕಸ್ವಾಮ್ಯಗಳಿಸಿ ಗದ್ದುಗೆ ಏರುತ್ತದೆ. ಐತಿಹಾಸಿಕವಾಗಿ, ಇಂಗ್ಲಿಷ್, ಶಿಷ್ಟಭಾಷಾರೂಪವನ್ನು ಪಡೆದ ಬಗೆಯನ್ನಿಲ್ಲಿ ಹೆಸರಿಸಬಹುದು. ಲಂಡನ್ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂಗ್ಲಿಷಿನ ಅನೇಕ ಉಪಭಾಷೆಗಳು ಪ್ರಚಲಿತವಿದ್ದವು. ಆದರೆ ಲಂಡನ್ ನಗರದಲ್ಲಿದ್ದ ಇಂಗ್ಲಿಷ್ ಭಾಷೆ ವಿಶ್ವವಿದ್ಯಾನಿಲಯಗಳಲ್ಲಿ, ಅನಂತರ ಲೇಖಕರಿಂದ, ಆಮೇಲೆ ಸಾರ್ವಜನಿಕ ಶಾಲೆಗಳಲ್ಲಿ, ಶತಮಾನಗಳ ಕಾಲ ನ್ಯಾಯಾಲಯದಲ್ಲಿ ಬಳಕೆಗೊಳ್ಳುತ್ತ, ಬದಲಾಗುತ್ತ ಬಂತು. ಕಾಲಾನಂತರದಲ್ಲಿ ಇದು ಲಂಡನ್‌ನ ಉನ್ನತ ವರ್ಗದವರು, ಸಮಾಜದ ಗಣ್ಯರು ಬಳಸುವಂಥ ಮನ್ನಣೆಗೆ ಪಾತ್ರವಾಯಿತು. ಕ್ರಮೇಣ ಇತರ ಇಂಗ್ಲಿಷ್ ರೂಪಗಳಿಗಿಂತ ಇದು ರಚನೆಯಲ್ಲಿ ತೀರಾ ಭಿನ್ನವಾಗತೊಡಗಿತು. ಇದನ್ನು ಕಲಿಯಲು, ಮಾತಾಡಲು ಮತ್ತು ಬರೆಯಲು ಹಾತೊರೆಯುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಅದೇ ವೇಳೆಗೆ ಮುದ್ರಣದ ಅನ್ವೇಷಣೆಯಾಯಿತು. ಮುದ್ರಣಕ್ಕೆ ಬೇರೆಲ್ಲ ರೂಪಗಳಿಗಿಂತ ಲಂಡನ್ ಇಂಗ್ಲಿಷ್ ರೂಪವನ್ನು ಅನಿವಾರ್ಯವಾಗಿ ಬಳಸಿಕೊಳ್ಳಲಾಯಿತು. ಹೀಗಾಗಿ, ಈ ರೂಪಕ್ಕೆ ಉಳಿದೆಲ್ಲ ಉಪಭಾಷಾ ರೂಪಗಳಿಗಿಂತ ಹೆಚ್ಚು ವ್ಯಾಪಕತೆ ಲಭಿಸಿತು. ಇದರಿಂದ ಹೆಚ್ಚು ಜನರನ್ನು ತಲುಪುವಲ್ಲಿ ಇದು ಯಶಸ್ವಿಯಾಯಿತು. ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತ ಎಲ್ಲೆಲ್ಲೂ ವಿರಾಜಮಾನವಾಗಿ ಬೆಳೆಯಿತು, ಬೆಳಗಿತು. ತನ್ಮೂಲಕ ಶಿಷ್ಟತೆಯನ್ನು ಪಡೆಯಿತು.

ಶಿಷ್ಟಭಾಷೆಗಿರುವುದು ಒಂದೇ ಶಿಷ್ಟರೂಪವೆ?

ಶಿಷ್ಟಭಾಷೆಯಲ್ಲಿಯೂ ಅನೇಕ ಪ್ರಾದೇಶಿಕ ಪ್ರಭೇದಗಳಿರಲು ಸಾಧ್ಯ. ಉದಾಹರಣೆಗೆ ಇಂಗ್ಲಿಷ್‌ನಲ್ಲಿ ಈಗ ಅನೇಕ ಶಿಷ್ಟಭಾಷಾರೂಪಗಳಿವೆ; Standard English, Standard Scottish English, Standard American English ಹೆಸರಿಸುವಂಥವು. ಕನ್ನಡದಲ್ಲಿಯೂ ಮೈಸೂರು ಕನ್ನಡ ಮತ್ತು ಧಾರವಾಡ ಕನ್ನಡಗಳು ಹೊಯ್‌ಕಯ್‌ಯಾಗಿ ಶಿಷ್ಟತೆಯ ಪಟ್ಟಕ್ಕೆ ಪೈಪೋಟಿ ನಡೆಸಿರುವುದು ಇತಿಹಾಸ. ಇಂಗ್ಲಿಷ್‌ನ್ನು ಎರಡನೇ ಭಾಷೆಯಾಗಿ ಕಲಿಯಲಿಚ್ಛಿಸುವವರು ಇಂದಿಗೂ

'Oxford English'ನ ಉಚ್ಚಾರಣೆಗೂ 'B.B.C. English'ನ ಶೈಲಿಗೂ ಮಾರು ಹೋಗುವುದು ವಾಡಿಕೆ.

ಶಿಷ್ಟಭಾಷೆ ಏಕೆ ಬೇಕು?

ಒಂದು ಭಾಷೆಯ ಉಪಭಾಷೆಗಳ ನಡುವಣ ದೂರವನ್ನು, ಅಂತರವನ್ನು ಕಡಿಮೆ ಮಾಡಲು (to reduce the distance) ಶಿಷ್ಟ ಭಾಷೆಬೇಕು. ಇಲ್ಲವಾದರೆ ಉಪಭಾಷೆಗಳೇ ಪರಭಾಷೆಗಳಂತೆ ಅರ್ಥಮಾಡಿಕೊಳ್ಳಲು ತೊಡಕನ್ನುಂಟುಮಾಡ ಬಹುದು. ಜೊತೆಗೆ ಒಂದು ಭಾಷೆಯ ಎಲ್ಲ ಉಪಭಾಷೆಗಳನ್ನು ಶಿಕ್ಷಣ, ಕಾನೂನು, ಆಡಳಿತ, ವಾರ್ತಮಾಧ್ಯಮಗಳಾಗಿ ಬಳಸಲು ಸಾಧ್ಯವಿಲ್ಲ. ಇವುಗಳ ಪ್ರತಿನಿಧಿಯಾಗಿ ಒಂದು ಶಿಷ್ಟಭಾಷೆ ಈ ಎಲ್ಲ ಕಾರ್ಯಗಳನ್ನು ನಿರ್ವಹಿಸಬಲ್ಲದು. ಕನ್ನಡ ಕಲಿಯುವವರು ಕನ್ನಡದ ಎಲ್ಲ ಉಪಭಾಷೆಗಳನ್ನು ಕಲಿಯುವುದು ಸಾಧ್ಯವಿಲ್ಲ. ಅಥವಾ ಯಾವುದಾದರೂ ಒಂದು ಉಪಭಾಷಾರೂಪವನ್ನು ಕರಗತ ಮಾಡಿಕೊಂಡರೆ ಕನ್ನಡ ಬಂದಂತಾಗುವುದಿಲ್ಲ. ಏಕೆಂದರೆ, ಓದಲು ಮುದ್ರಣದಲ್ಲಿ ಕಲಿತ ಉಪಭಾಷೆ ದಕ್ಕದಿದ್ದರೆ ಅದರಿಂದ ಲಾಭ ವೇನು? ಅಲ್ಲದೆ, ಒಂದು ಭಾಷೆ ಸಂಪದ್ಭರಿತವಾಗಬೇಕಿದ್ದಲ್ಲಿ, ಆಧುನಿಕ ಅಗತ್ಯಗಳಿಗೆ ತಕ್ಕಂತೆ ಬದಲಾಗುವ, ಬೇರೆ ಆಕರಗಳಿಂದ ಸ್ವೀಕರಿಸಿ ಅರಗಿಸಿಕೊಳ್ಳುವ, ಇತರ ಭಾಷೆ ಗಳೊಡನೆ ಸ್ಪರ್ಧೆಗಿಳಿಯುವ ಗತ್ತು ಗೈರತ್ತುಗಳನ್ನು ಹೊಂದಿರಬೇಕಾಗುತ್ತದೆ. ಹೀಗಾಗುವುದು ಒಂದು ಭಾಷೆಯ ಎಲ್ಲ ಉಪಭಾಷೆಗಳಿಗೂ ಸಾಧ್ಯವಿಲ್ಲ. ಯಾವುದಾದರೂ ಒಂದು ಅವುಗಳಿಂದಲೇ ಒಡಮೂಡಿ ಈ ತಾಕತ್ತನ್ನು ಪಡೆಯ ಬೇಕಾಗುತ್ತದೆ. ಹೀಗಾಗಿ, ಇಡೀ ಭಾಷೆಯ ಹಿತದೃಷ್ಟಿಯಿಂದ ಒಂದು ಸಮರ್ಥ ಶಿಷ್ಟಭಾಷೆ ರೂಪು ತಳೆಯಬೇಕುದ್ದು ಅನಿವಾರ್ಯ ಹಾಗೂ ಅಪೇಕ್ಷಣೀಯ.

ಶಿಷ್ಟಭಾಷೆಯಿಂದ ಉಪಭಾಷೆಗಳಿಗಾಗಿರುವ ಹಾನಿಯೇನು?

ಶಿಷ್ಟಭಾಷೆಯನ್ನು ಬರೆಹದ ಭಾಷೆಗೆ, ವಿದ್ಯಾವಂತರ ಭಾಷೆಗೆ ಸಮೀಕರಿಸುವು ದುಂಟು. ಅರ್ಥಾತ್ ಬರೆಹದ ಭಾಷೆಯನ್ನು, ವಿದ್ಯಾವಂತರು ಆಡುವ ಭಾಷೆಯನ್ನು ಭಾಷಾವಿಜ್ಞಾನಿಗಳು ಆಡುನುಡಿಯಂತೆ, ಗ್ರಾಮ್ಯ (Colloquial) ಭಾಷೆಯಂತೆ ಸ್ವಜನಾದುದೆಂದು ಪರಿಗಣಿಸುವುದಿಲ್ಲ. ಶಿಕ್ಷಣ ಆಡುಮಾತಿನ ದೊಡ್ಡ ಶತ್ರು. ಏಕೆಂದರೆ, ಓದಲು, ಬರೆಯಲು ಕಲಿತವರು ಬಹುಬೇಗ ತಮ್ಮ ಆಡುನುಡಿಯನ್ನು ಕೈಬಿಡುತ್ತಾರೆ. ಅದನ್ನು ಬಳಸುವುದರಿಂದ ಎಲ್ಲಿ ನಗೆಪಾಟಲಿಗೆ ತುತ್ತಾದೇವೋ ಎಂಬ ಹುಸಿ ಭ್ರಮೆ, ಭಯ ಅವರನ್ನು ಕಾಡುತ್ತಿರುತ್ತದೆ. ತಾವು ವಿದ್ಯಾವಂತರೆನಿಸಿಕೊಳ್ಳಲು, ತಾವು ಬೆಳೆದು ಬಂದ ಪರಿಸರದ ಜನರಿಗಿಂತ ಭಿನ್ನ ಎಂದು ಗುರುತಿಸಿಕೊಳ್ಳಲು ಇಂಥವರು ಶಿಷ್ಟಭಾಷೆಗೆ ಮರೆಹೋಗುತ್ತಾರೆ. ತಮ್ಮ ಪ್ರಾದೇಶಿಕ ಅಥವಾ ಸಾಮಾಜಿಕ ಉಪಭಾಷೆಗೆ ಗುದ್ದ ತೋಡುತ್ತಾರೆ.

ಸಾಮಾಜಿಕ ಭಾಷಾವಿಜ್ಞಾನಿಗಳ ನಿಲುವೇನು ?

ಸಾಮಾಜಿಕ ಭಾಷಾವಿಜ್ಞಾನಿಗಳ ಪ್ರಕಾರ ಯಾವುದೇ ಒಂದು ಭಾಷೆ, ಅದನ್ನಾಡುವ ಸಮಾಜದ ಜನರ ಸೊತ್ತು. ಅದರ ಬಗೆಗೆ ತಳೆಯುವ ಧೋರಣೆ, ನಿಲುವು, ಅಭಿಪ್ರಾಯಗಳು ಸಮಾಜದ ಜನರಿಂದ ರೂಪಿತವಾಗುವಂಥವು; ಆಯಾ ಸಮಾಜದ ರಚನೆ ಮತ್ತು ಸಾಮಾಜಿಕ ಮೌಲ್ಯಗಳಿಗೆ ಅವು ನಿಕಟವಾಗಿರುತ್ತವೆ, ನಿಷ್ಠವಾಗಿರುತ್ತವೆ. ಹೀಗಾಗಿ, ಶಿಷ್ಟಭಾಷಾ ರೂಪಕ್ಕೆ ಸಮಾಜದಲ್ಲಿ ಉಳಿದೆಲ್ಲ ಉಪಭಾಷಾ ರೂಪಗಳಿಗಿಂತ ಉನ್ನತವಾದ ಸ್ಥಾನಮಾನಗಳು ಲಭ್ಯವಾಗುತ್ತವೆ. ಸಾಮಾಜಿಕವಾಗಿ ಅಷ್ಟೇ ಅಲ್ಲ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ವಿಶೇಷವಾದ ಸವಲತ್ತುಗಳು ಶಿಷ್ಟ ಭಾಷೆಯನ್ನು ಮಾತನಾಡುವ, ಓದುವ, ಬರೆಯುವ ಜನರಿಗೆ ದಕ್ಕುತ್ತವೆ. ಶಿಷ್ಟಭಾಷೆಯನ್ನು ಬಲ್ಲವರು, ಅದನ್ನು ಸಹಜ ಭಾಷಾರೂಪ. ಸುಂದರರೂಪ, ಸ್ಪಷ್ಟರೂಪ, ಅರ್ಥೈಸಿಕೊಳ್ಳಲು ಸುಲಭ ಹಾಗೂ ಸೊಗಸಾದ ರೂಪ ಎಂದೆಲ್ಲ ಹಾಡಿ ಹೊಗಳುತ್ತಾರೆ. ಅದೇ ವೇಳೆಗೆ ಇವರು ಆಡುನುಡಿಯನ್ನು ಭಾಷಿಕ ಕುರೂಪ, ಕಲುಷಿತ ಅಸಹಜರೂಪ, ಅರ್ಥವಾಗದ ಅಸ್ಪಷ್ಟರೂಪ ಎಂದೂ ಹೀನಾಯವಾಗಿ ಕಾಣುವುದುಂಟು.

ಸಾಮಾಜಿಕ ಭಾಷಾವಿಜ್ಞಾನಿ ಈ ಬಗೆಯ ತಾರತಮ್ಯವನ್ನು ಒಪ್ಪುವುದಿಲ್ಲ. ಅವನ ದೃಷ್ಟಿಯಲ್ಲಿ ಶಿಷ್ಟಭಾಷೆ ಕೂಡ ಉಳಿದೆಲ್ಲ ಉಪಭಾಷೆಗಳಲ್ಲಿ ಒಂದು ಅಷ್ಟೆ. ಶಿಷ್ಟಭಾಷಾರೂಪ ಯಾವುದೇ ಉಪಭಾಷಾ ರೂಪಗಳಿಗಿಂತ ಮೇಲೂ ಅಲ್ಲ ಕೀಳೂ ಅಲ್ಲ. ಭಾಷಾರೂಪಗಳ ನಡುವೆ ಹಾಗೆ ಭೇದ ಎಣಿಸುವುದು ಅವೈಜ್ಞಾನಿಕ. ಆದುದರಿಂದಲೇ ಆತ ಖಂಡತುಂಡವಾಗಿ ಘೋಷಿಸುತ್ತಾನೆ: " Linguistically speaking it (sta. lg.) cannot even legitimately be consider better than other varieties...The Scientific Study of language has convinced most scholars that all languages, and correspondingly all dialects are equally good as linguistic systems " (Trudgill–Sociolinguistics). ಶಿಷ್ಟವಲ್ಲದ ಉಪಭಾಷೆಗಳಲ್ಲಿ ಅವು ಕೀಳೆಂದು ಪರಿಗಣಿಸುವಂಥ ಯಾವುದೇ ಜನ್ಯ ಲಕ್ಷಣ ಇರುವುದಿಲ್ಲ.

ಒಂದು ಭಾಷಾರೂಪ ಮೇಲು ಇನ್ನೊಂದು ಕೀಳು ಎಂಬ ತೀರ್ಮಾನಗಳು ಸಾಮಾಜಿಕವಾದುವೇ ಹೊರತು ಭಾಷಾವೈಜ್ಞಾನಿಕವಾದುವಲ್ಲ. ಒಂದು ಉಪಭಾಷೆಗೆ ಅಥವಾ ಭಾಷೆಗೆ ಕೀಳರಿಮೆ ಉಂಟಾಗುವುದು ಅಥವಾ ಪ್ರಾಪ್ತವಾಗುವುದು ಅದನ್ನು ಕೆಳದರ್ಜೆಯ ಗುಂಪಿನ ಅವಕಾಶ ವಂಚಿತಜನ ಬಳಸುವುದರಿಂದ ಅರ್ಥಾತ್ ಶಿಷ್ಟವಲ್ಲದ ಭಾಷಾ ರೂಪಗಳು ಅಥವಾ ಉಪಭಾಷೆಗಳು ಆಯಾ ಸಮಾಜದ ವ್ಯವಸ್ಥೆಯನ್ನು ಪ್ರತಿನಿಧಿಸುವಂಥ ವರ್ತನೆಗಳು ಮಾತ್ರ. ಆದುದರಿಂದ, ಒಂದು ಗೊತ್ತಾದ ಭಾಷಾ

ರೂಪ ಶಿಷ್ಟವೋ ಅಲ್ಲವೋ ಎನ್ನುವಂಥ ನಿರ್ಧಾರ, ತೀರ್ಮಾನ ಕೂಡ ಸಾಮಾಜಿಕ ವ್ಯವಸ್ಥೆಯ ಪ್ರತೀಕವಮೌಲ್ಯ ಅಷ್ಟೆ.

ಉದಾಹರಣೆಗೆ, ಇಂಗ್ಲೆಂಡ್‌ನಲ್ಲಿ ಬಳಸುವ ಇಂಗ್ಲಿಷ್‌ನ ಉಚ್ಚಾರಣೆಯಲ್ಲಿನ ಶಿಷ್ಟತೆ, ಅಮೆರಿಕನ್ನರು ಬಳಸುವ ಇಂಗ್ಲಿಷ್‌ಗೆ ಶಿಷ್ಟವಲ್ಲ. rat, rich, Carry, Sorry, ಪದಗಳಲ್ಲಿ (r) ನ ಉಚ್ಚಾರಣೆ ಇದೆ. ಆದರೆ Cart, Car ಈ ಪದಗಳಲ್ಲಿ (r) ನ ಉಚ್ಚಾರಣೆ ಇಲ್ಲ. Care ಎನ್ನುವಂಥ ಪದಗಳಲ್ಲಿ ಬರುವ ಸ್ವರಗಳ ನಡುವಣ (r) ಇದಕ್ಕೆ ಅಪವಾದ. ಇಂಗ್ಲೆಂಡ್‌ನಲ್ಲಿ ಸ್ವರದ ಮುಂದೆ ಬರುವ (r) ನ್ನು ಉಚ್ಚರಿಸುವುದು ಶಿಷ್ಟವಲ್ಲ. ಹೀಗಾಗಿ ma, mar ಇಂಥ ಪದಗಳು ಉಚ್ಚಾರಣೆಯ ಹಂತದಲ್ಲಿ ಒಂದೇ ಆಗಿ ಕೇಳಿಸುತ್ತವೆ. ಆದರೆ ಅಮೆರಿಕನ್ ಇಂಗ್ಲಿಷ್‌ನಲ್ಲಿ Post vocalic (r) ಉಚ್ಚಾರಣೆ ಶಿಷ್ಟವಾದದ್ದು. ವೆಸ್ಟ್‌ಇಂಡೀಸ್, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾಗಳಲ್ಲೂ (r) ಉಚ್ಚಾರಣೆ ಅಮೆರಿಕನ್ ಇಂಗ್ಲಿಷ್ ಮಾದರಿಯದೆ. ಇಂಗ್ಲೆಂಡ್ ಬಗೆಯ ಉಚ್ಚಾರಣೆ ಇಲ್ಲೆಲ್ಲ ಗ್ರಾಮ್ಯವಾದುದು. ಅವಿದ್ಯಾವಂತರು ಆಡುವಂಥದು ಎಂದು ಅಪಹಾಸ್ಯಕ್ಕೆ ಗುರಿಯಾಗುತ್ತದೆ. ರೇಡಿಯೊ, ದೂರದರ್ಶನ, ನಾಟಕಗಳಲ್ಲಿ ಒಂದು ಪಾತ್ರ ಗ್ರಾಮೀಣ ಪರಿಸರದ್ದು, ನಿರಕ್ಷರ ಕುಕ್ಷಿಯಂಥದು ಎಂದ ಚಿತ್ರಿತವಾಗಲು ಈ ಬಗೆಯ ಉಚ್ಚಾರಣೆಯನ್ನು ಬಳಸಲಾಗುತ್ತದೆ. ಒಂದು ಪಾತ್ರದ ಮೂಲಕ ಹಾಸ್ಯರಸವನ್ನು ಉಕ್ಕಿಸಲೂ ಇಂಗ್ಲೆಂಡ್ ಬಗೆಯ ಉಚ್ಚಾರಣೆಯನ್ನು ಅಳವಡಿಸುವುದುಂಟು, ಅಮೆರಿಕನ್ನರು. ಆದರೆ ಇಂಗ್ಲೆಂಡ್‌ನಲ್ಲಿ ಬಹುತೇಕ ಜನ Post vocalic (r) ರಹಿತ ಉಚ್ಚಾರಣೆಯನ್ನು ಆದರದಿಂದ ಕಾಣುತ್ತಾರೆ. ಅತ್ಯಂತ Prestigious ಎಂದು ಪರಿಗಣಿಸಿ BBC ಯಲ್ಲೂ ಪ್ರಸಾರಮಾಡುತ್ತಾರೆ.

ಮೇಲಿನ ಉದಾಹರಣೆಯಿಂದ ಭಾಷೆಯಲ್ಲಿರುವ ಒಂದು ಅಂಶ ಶಿಷ್ಟತೆಗೆ ಅಥವಾ ಹೀನಾಯಕ್ಕೆ ಒಳಗಾಗುವಂಥ ಯಾವುದೇ ಜನ್ಯ ಗುಣವನ್ನು ಹೊಂದಿಲ್ಲ. ಆದರೆ ಅದಕ್ಕೆ ಶಿಷ್ಟತೆಯ ಅಥವಾ ಅಶಿಷ್ಟತೆಯ ಗುಣದ ಲೇಪನವನ್ನು ಮಾಡುವುದು ಒಂದು ಸಾಮಾಜಿಕ ವರ್ತನೆಯೇ ಹೊರತು ಭಾಷಾವಿಜ್ಞಾನ ಅಲ್ಲ. ಒಂದು ದೃಷ್ಟಿಯಲ್ಲಿ ಇಂಥ ತೀರ್ಮಾನಗಳು ಯಾದೃಚ್ಛಿಕವಾದುವು ಎನ್ನಲೂ ಅಡ್ಡಿಯಿಲ್ಲ. ಅಂದರೆ, ಸ್ವರದ ಮುಂದೆ ಬರುವ ಇಂಗ್ಲಿಷ್‌ನ (r) ಕಾರದಲ್ಲಿ ವಾಸ್ತವವಾಗಿ ಏನೂ ದೋಷವಿಲ್ಲ. ಒಳ್ಳೆಯ ಅಥವಾ ಕೆಟ್ಟ, ನಾಗರೀಕ ಅಥವಾ ಅನಾಗರಿಕ ಎಂದು ಕರೆಸಿಕೊಳ್ಳುವ ಯಾವ ಜನ್ಯಗುಣವೂ ಅದರಲ್ಲಿಲ್ಲ. ಅದರ ಬಗೆಗೆ ಅಮೆರಿಕನ್ನರು ತಳೆದ ನಿಲುವಾಗಲೀ, ಇಂಗ್ಲೆಂಡಿನವರು ತಳೆದಿರುವ ನಿಲುವಾಗಲೀ ಕೇವಲ ಸಾಮಾಜಿಕವಾಗಿ ರೂಪುಗೊಂಡವು. ಈ ನಿಲುವುಗಳು ಅಥವಾ ತೀರ್ಮಾನಗಳು ಆ ಉಚ್ಚಾರಣೆಗೆ ಸಂಬಂಧಿಸಿದಂಥ ಆಯಾ ದೇಶದ ಸಾಮಾಜಿಕ ಮೌಲ್ಯಗಳು ಅಥವಾ ಭಾಷಿಕ ವರ್ತನೆಗಳು ಎಂದು ಸಾಮಾಜಿಕ ಭಾಷಾವಿಜ್ಞಾನಿಗಳು ಭಾವಿಸುತ್ತಾರೆಯೇ ವಿನಃ ಭಾಷಾ ವಿಜ್ಞಾನ ಕಾರಣಕ್ಕಾಗಿ ಅಲ್ಲ.

ಭಾಷಾಶಿಷ್ಟೀಕರಣ ಎಂದರೇನು ?

ಭಾಷಾ ಶಿಷ್ಟೀಕರಣ ಒಂದು ಪ್ರಕ್ರಿಯೆ. ಇದು ಭಾಷಾ ಸಾಮಗ್ರಿಗೆ ಸಂಬಂಧಿಸಿದ್ದು. ಈ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳನ್ನು ಮೀರಿದ, ಅತಿಕ್ರಮಿಸಿದ ಒಂದು ಮಾದರಿ ಭಾಷಾರೂಪ ಸಾಧಿತವಾಗುತ್ತದೆ. ಇಂಥ ಭಾಷಾರೂಪ ಸಿದ್ಧಿಸುವಲ್ಲಿ, ಎರಡು ಮುಖ್ಯ ಹಂತಗಳನ್ನು ಶಿಷ್ಟೀಕರಣ ಪ್ರಕ್ರಿಯೆಯಲ್ಲಿ ಗಮನಿಸಬೇಕಾಗುತ್ತದೆ ;

(೧) ಮಾದರಿ ಸೃಷ್ಟಿ (Formation or Creation of a model)

(೨) ಮಾದರಿಯನ್ನು ಜನಪ್ರಿಯಗೊಳಿಸುವಿಕೆ (Popularisation of model)

ಮಾದರಿ ಸೃಷ್ಟಿ, ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳನ್ನಾಡುವ ಆಯಾ ಭಾಷೆಯ ಎಲ್ಲ ಜನರು ಮೆಚ್ಚುವಂಥ ರೀತಿಯಲ್ಲಿ ಆಗಬೇಕು. ಮಾದರಿ ಸೃಷ್ಟಿಯಾದ ಮಾತ್ರಕ್ಕೆ ಭಾಷಾಶಿಷ್ಟೀಕರಣ ಮಾಡಿದಂತಲ್ಲ. ಅದನ್ನು ಸರ್ವತ್ರ ಜನಪ್ರಿಯಗೊಳಿಸಬೇಕು. ಆಡಳಿತ ನಡೆಸುವವರು ಸೃಜಿತ ಮಾದರಿ ಜನಪ್ರಿಯವಾಗುವಂಥ ತಂತ್ರಗಳನ್ನು ರೂಪಿಸಬೇಕು. ಲೇಖಕರಿಗೆ, ಜನಸಾಮಾನ್ಯರಿಗೆ ತಲುಪುವಂಥ ಸರ್ಕಾರಿ ಪ್ರಕಟಣೆಗಳನ್ನು, ವರದಿಗಳನ್ನು ಬುಲೆಟಿನ್ನುಗಳನ್ನು ಕೈಪಿಡಿಗಳನ್ನು ಸೃಜಿತ ಭಾಷಾ ಮಾದರಿಯನ್ನು ಬಳಸಿಕೊಂಡು ಹೊರತರಬೇಕು. ಹಾಗೆಯೇ ವ್ಯಾಕರಣ, ನಿಘಂಟು, ಪದಕೋಶ, ಪರಾಮರ್ಶನ, ಪಾರಿಭಾಷಿಕಪದಗಳು, ಸ್ಥಳನಾಮಗಳು, ಪ್ರಾಣಿ ಪಕ್ಷಿ ಹಾಗೂ ಮಾನವನ ಹೆಸರುಗಳು ಶಿಷ್ಟಭಾಷಾರೂಪದಲ್ಲಿ ಪ್ರಕಟಗೊಳ್ಳಬೇಕು. ಹೀಗೆ ಮಾಡುವಲ್ಲಿ ಗುಣ ಮತ್ತು ಮೌಲ್ಯವನ್ನು ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ದುಡಿವಂಥ ಗಣ್ಯಮಹನೀಯರನ್ನು ಲೇಖಕರಾಗಿ, ಅನುವಾದಕರಾಗಿ ಸರ್ಕಾರ ನಿಯೋಜಿಸಿಕೊಳ್ಳಬೇಕು. ಅವರಿಂದ ಅಧಿಕೃತವಾಗಿ ಶಿಫಾರಸು ಪಡೆದ, ಅನುಮೋದಿಸಲ್ಪಟ್ಟ ಮಾಹಿತಿಯನ್ನು ಭಾಷಿಕವಾಗಿ ಜಾರಿಗೊಳಿಸಬೇಕು. ಭಾಷೆಯ ಪ್ರಗತಿಗೆ, ಅಭಿವೃದ್ಧಿಗೆ, ಶಿಷ್ಟರೂಪ ನಿರ್ಮಾಣಕ್ಕೆ ದುಡಿದು ಗಣ್ಯಕಾಣಿಕೆ ಇತ್ತಂಥ ನಿಷ್ಣಾತರನ್ನು ಪ್ರಶಸ್ತಿ ಗೌರವಗಳಿಂದ ಸನ್ಮಾನಿಸಿ ಉತ್ತೇಜಿಸಬೇಕು. ಆಗ ಮಾತ್ರ ಸೃಜಿತ ಮಾದರಿಗೆ ಮನ್ನಣೆ ದೊರಕುತ್ತದೆ.

ಆಧುನಿಕ ಜಗತ್ತಿನಲ್ಲಿ ಇತರ ಭಾಷೆಗಳೊಡನೆ ತಲೆಎತ್ತಿ ನಿಲ್ಲಲು, ತನ್ನ ಜಾಗತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಯಾವುದೇ ಭಾಷೆ ಶಿಷ್ಟೀಕರಣಗೊಳ್ಳುವುದು ಅನಿವಾರ್ಯ. ಕೇವಲ ಪ್ರಾದೇಶಿಕ ಹಾಗೂ ಸಾಮಾಜಿಕ ನೆಲೆಗಟ್ಟಿನಲ್ಲಷ್ಟೇ ಜೀವಂತವಾಗುಳಿಯುವ ಭಾಷೆಗೆ ನವ್ಯ ಸಮಾಜದ ಭಾಷಿಕ ಸವಾಲುಗಳನ್ನು ಎದುರಿಸುವಂಥ ಸಾಮರ್ಥ್ಯ ಇರುವುದಿಲ್ಲ.

ಡಾ. ಮೃತ್ಯುಂಜಯ, ಕುಳೀನೂರ್

ಹರ್ಡೇಕರ್ ಮಂಜಪ್ಪ : ಜೀವನ ಮತ್ತು ಸಾಧನೆ

[ಹರ್ಡೇಕರ ಮಂಜಪ್ಪನವರು ಕನ್ನಡನಾಡಿನ ಸುಪುತ್ರರಲ್ಲಿ ಒಬ್ಬರು. ಅವರು ಗಾಂಧಿ ಅನುಯಾಯಿಗಳಾಗಿ ರಾಷ್ಟ್ರೀಯಶಿಕ್ಷಣ, ಖಾದಿ ಆಂದೋಲನ, ಹರಿಜನೋದ್ಧಾರ, ಸ್ತ್ರೀ ಶಿಕ್ಷಣ-ಇತ್ಯಾದಿ ಕ್ಷೇತ್ರಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿದವರು. ಪತ್ರಕರ್ತರಾಗಿ ಜನ ಜಾಗ್ರತಿಯನ್ನುಂಟುಮಾಡಿದವರು. ಅನೇಕ ಪುಸ್ತಕಗಳನ್ನು ಬರೆದು ಜನರ ಹೃದಯಸೂರೆಗೊಂಡವರು. —ಇಂಥ ಹಿರಿಯ ವ್ಯಕ್ತಿಗಳ ಜೀವನ ಮತ್ತು ಸಾಧನೆಯನ್ನು ಹೃದಯಂಗಮವಾಗಿ ಡಾ. ಮೃತ್ಯುಂಜಯ ಕುಳೀನೂರ್ ಇಲ್ಲಿ ಚಿತ್ರಿಸಿದ್ದಾರೆ....ಸಂ]

ಕಳೆದ ಶತಮಾನದ ಉತ್ತರಾರ್ಧ ಭಾರತೀಯ ಇತಿಹಾಸದಲ್ಲಿನ ಪರ್ವಕಾಲ. ಪುನರುತ್ಥಾನ ಯುಗವೆಂದೇ, ಪ್ರಸಿದ್ಧವಾಗಿರುವ ಈ ಸಂಧಿಕಾಲದಲ್ಲಿ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಅಧ್ಯಾತ್ಮ ಜಗತ್ತಿಗೆ ಹೊಸ ವಿಚಾರಗಳನ್ನು, ಚೈತನ್ಯವನ್ನು ನೀಡಿದ ಮಹಾನ್ ಪುರುಷರಲ್ಲಿ ರಾಜಾರಾಂಮೋಹನ್ ರಾಯ್, ದಯಾನಂದ ಸರಸ್ವತಿ, ರಾಮಕೃಷ್ಣಪರಮಹಂಸ, ಸ್ವಾಮಿವಿವೇಕಾನಂದ ಮರೆಯಲಾಗದ ವಿಭೂತಿಗಳು. ಇವರು ತಮ್ಮ ಪ್ರಗತಿಶೀಲ ವಿಚಾರಗಳು, ಆಧ್ಯಾತ್ಮಿಕ ಸಾಧನೆ ಮತ್ತು ತಮ್ಮ ಅನನ್ಯ ಪ್ರೀತಿ–ಪ್ರೇಮದಿಂದ ಮನುಕುಲದ ಒಳತಿಗಾಗಿ ತೋರಿದ ಅರ್ಪಣಭಾವ ಭಾರತೀಯರ ಬದುಕು ಮರುಹುಟ್ಟು ಪಡೆಯಲು ಕಾರಣವಾದವು. ಮರುಹುಟ್ಟು ಪಡೆಯುತ್ತಿದ್ದ ಸಮಾಜಕ್ಕೆ, ಪಾರತಂತ್ರ್ಯದ ಸಂಕೋಲೆಯಲ್ಲಿ ಬಂಧಿತವಾಗಿದ್ದ ದೇಶಕ್ಕೆ ಸ್ವಾತಂತ್ರ್ಯ, ಸಮಾನತೆ, ಸತ್ಯ ಮತ್ತ ಅಹಿಂಸೆಯ ದೀಕ್ಷೆ ನೀಡಿ ರಾಷ್ಟ್ರಜೀವನವನ್ನು ರೂಪಿಸಿದ ಪ್ರಾತಃಸ್ಮರಣೀಯರಲ್ಲಿ ಮಹಾತ್ಮಾ ಗಾಂಧೀ ಮೇರುಪುರುಷರು. ಗಾಂಧೀಜಿಯವರ ವಿರಾಟ್ ವ್ಯಕ್ತಿತ್ವದ ಮೂಸೆಯಲ್ಲಿ ಮುಪ್ಪುರಿಗೊಳ್ಳದ, ಅವರು ಚಿಂತಿಸದ, ಅಭಿವ್ಯಕ್ತಿಸದ ಯಾವುದೊಂದು ಅಂಶವೂ ಇಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಶಿಕ್ಷಣ, ಅಧ್ಯಾತ್ಮ, ಸಾಹಿತ್ಯ, ಆರೋಗ್ಯ ಹೀಗೆ ವ್ಯಕ್ತಿ ಜೀವನದಿಂದ ಸಮಷ್ಟಿಜೀವನದವರೆಗೆ, ಗ್ರಾಮಜೀವನದಿಂದ ರಾಷ್ಟ್ರಜೀವನದ

ವರೆಗೆ ಎಲ್ಲ ಮುಗ್ಗುಲುಗಳ ಬಗೆಗೆ ಆಳವಾಗಿ ಗಂಭೀರವಾಗಿ ಚಿಂತಿಸಿದ ಗಾಂಧೀಜಿಯವರ ಅಂತಃಕರಣ ಮನುಕುಲದ ಸಮಗ್ರ ಉದ್ಧಾರಕ್ಕಾಗಿ ಮಿಡಿದಿರುವುದನ್ನು ಅವರ ಬದುಕಿನುದ್ದಕ್ಕೂ ಕಾಣಬಹುದು

ಗಾಂಧೀಜಿಯವರ ಬಳಿಗೆ ಬಂದ ಯಾರೂ ಬರಿಗೈಲಿ, ಬರಿ ಹೃದಯದಲ್ಲಿ ಹೋದದ್ದಿಲ್ಲ. ಅವರ ವ್ಯಕ್ತಿಗತ ಪ್ರಭಾವವಲಯಕ್ಕೆ ಬಂದವರೇ ಆಗಲಿ ಅವರ ಚಿಂತನೆಯ ಸೆಳವಿಗೆ ಸಿಕ್ಕವರೇ ಆಗಲಿ ಧನ್ಯತೆಯನ್ನು ಅನುಭವಿಸಿದ್ದಷ್ಟೇ ಅಲ್ಲ ಹೊಸ ಬೆಳಕು ಪಡೆದಿದ್ದಾರೆ; ಅವರ ವೈಚಾರಿಕತೆಯಿಂದ, ಸಿದ್ಧಾಂತಗಳಿಂದ ಹೊಸದಿಕ್ಕು ಪಡೆದಿದ್ದಾರೆ. ಜಾತ್ಯತೀತ ಜನಾಂಗ, ಅಹಿಂಸಾತ್ಮಕ ಸರ್ವೋದಯ ಸಮಾಜ—ಇವು ಗಾಂಧೀ ಚಿಂತನೆಯ ಮೂರು ಆಯಾಮಗಳಾಗಿದ್ದು, ಈ ಮೂರು ವಿಶ್ವಕ್ಕೇ ದಾರಿದೀಪಗಳಾಗಿವೆ. ಗಾಂಧೀಜಿಯವರ ವ್ಯಕ್ತಿತ್ವದ ಚುಂಬಕ ಶಕ್ತಿಗೆ ಕರ್ಣಾಟಕವೂ ಸೇರಿದಂತೆ ಭಾರತದ ಎಲ್ಲ ಭಾಗದವರೂ ಒಳಗಾಗಿದ್ದು ಅವರ ಚಿಂತನೆಯನ್ನು ಭಾರತದ ಉದ್ದಗಲಕ್ಕೂ ಬಿತ್ತುವ ಕಾಯಕವನ್ನು ಮಾಡಿದ್ದಾರೆ. ಗಾಂಧೀ ಚಿಂತನೆಯಿಂದ ಪ್ರೇರಣೆಗೊಂಡ ಕರ್ನಾಟಕದ ಅಸಂಖ್ಯರಲ್ಲಿ ಹರ್ಡೇಕರ್ ಮಂಜಪ್ಪನವರು ಒಬ್ಬರು.

ಗಾಂಧೀಜಿ ವಿಶ್ವವಂದ್ಯರಾದರೆ ಗಾಂಧೀ ಪ್ರತಿಗಳಾದ ಹರ್ಡೇಕರ್ ಮಂಜಪ್ಪನವರು ಕನ್ನಡಿಗರ ಪಾಲಿಗೆ ನಿತ್ಯವಂದ್ಯರು. ಚಿರಸ್ಮರಣೀಯರು. 1886ರ ಫೆಬ್ರವರಿ 18 ರಂದು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಬಡಕುಟುಂಬವೊಂದರಲ್ಲಿ ಜನಿಸಿದ ಮಂಜಪ್ಪನವರು ಈ ಶತಮಾನದ ಪೂರ್ವಾರ್ಧದಲ್ಲಿ ಕನ್ನಡಿಗರ ಉದ್ಧಾರಕ್ಕಾಗಿ ಕನ್ನಡ ನಾಡಿನ ಉದ್ದಗಲಕ್ಕೂ ತಮ್ಮ ಅನನ್ಯ ರಾಷ್ಟ್ರಪ್ರೇಮ, ವೈಚಾರಿಕತೆ, ಪ್ರಗತಿಶೀಲ ಚಿಂತನೆ, ಜಾತಿರಹಿತ ಸಮಾಜದ ನಿರ್ಮಾಣ, ನಿರಕ್ಷರತೆಯ ನಿರ್ಮೂಲನೆ, ಸ್ತ್ರೀ ಶಿಕ್ಷಣ, ಹರಿಜನೋದ್ಧಾರ, ಖಾದಿ ಪ್ರಸಾರ, ಮಧ್ಯಪಾನ ನಿಷೇಧ ಸಾಹಿತ್ಯ ರಚನೆ, ಪತ್ರಿಕೋದ್ಯಮವೇ ಮುಂತಾದ ಹತ್ತು—ಹಲವು ಕ್ಷೇತ್ರಗಳಲ್ಲಿ ಸಕ್ರಿಯರಾಗಿ ಚಿಂತಿಸಿದರು. ಅಲ್ಲದೆ ಸಾಮಾಜಿಕ ಬದುಕಿನಲ್ಲಿ ಅವನ್ನು ಪ್ರಯೋಗಿಸಲು ತಮ್ಮನ್ನು ತಾವು ಅಕ್ಷರಶಃ ಅರ್ಪಿಸಿಕೊಂಡರು. ಅವರು ತಮ್ಮ ಉದಾರ ಮಾನವೀಯ ಹೃದಯದಿಂದ ಕನ್ನಡಿಗರ ಬದುಕನ್ನು ಹಸನುಗೊಳಿಸಲು ಅಹರ್ನಿಶಿ ದುಡಿದ ನಿಷ್ಕಾಮ ಯೋಗಿ. ನಿರಂತರ ಅಧ್ಯಯನ, ಚಿಂತನ ಮಂಥನದಿಂದ ಪಕ್ವಗೊಂಡಿದ್ದ ಅವರ ವೈಚಾರಿಕತೆ, ಸಾಮಾಜಿಕ ಕ್ರಾಂತಿಯ ರೂವಾರಿಗಳಾಗಿದ್ದ ಬುದ್ಧ-ಗಾಂಧಿಯವರಿಂದ ನಿತ್ಯಸ್ಫೂರ್ತವಾದದ್ದು. ಅಂತೆಯೇ ತಾನು ಬದುಕಿದ್ದ ಸಮಾಜದ ಯಥಾರ್ಥಗಳಿಂದ ಪುಷ್ಟಗೊಂಡದ್ದೂ ಆಗಿವೆ. ರಾಷ್ಟ್ರಮಟ್ಟದಲ್ಲಿ ಗಾಂಧೀಜಿಯವರು ಹೇಗೋ ರಾಜ್ಯಮಟ್ಟ ದಲ್ಲಿ ಡಾ. ಹರ್ಡೇಕರ್ ಮಂಜಪ್ಪನವರು ಹಾಗೇ. ಗಾಧೀಚಿಂತನೆಯ ಪ್ರವಾಹವನ್ನು ಕನ್ನಡದ ನೆಲದಲ್ಲಿ ಹರಿಸಿದ ಹರ್ಡೇಕರ್ ಮಂಜಪ್ಪನವರು ಸರ್ವೋದಯ ಸಮಾಜದ ಹರಿಕಾರರಾದವರು. ಇವರು ಬರೀ ಗಾಂಧೀ 'ವಾದಿ' ಗಳಾಗದೇ ಗಾಂಧೀ ಸಿದ್ಧಾಂತ ಗಳನ್ನು ಸ್ವತಃ ಪಾಲಿಸಿದರು, ತನು-ಮನ-ಧನವನ್ನು ಅಕ್ಷರಶಃ ಆ ವಿಚಾರಗಳಿಗೆ

ಅರ್ಪಿಸಿದರು. ಗಾಂಧೀಜಿಯವರ ಅಂಧಭಕ್ತರಾಗದೆ, ಅವರೊಡನೆ ಭಿನ್ನಾಭಿಪ್ರಾಯ ಗಳನ್ನು ಹೊಂದಿಯೂ ಅವರ ಪ್ರಭಾವಲಯಕ್ಕೆ ಬಂದು ಧನ್ಯತೆಯನ್ನು ಕಂಡು ಕೊಂಡ ಮಂಜಪ್ಪನವರು ಕನ್ನಡಿಗರ ಪಾಲಿಗೆ ಕರ್ನಾಟಕದ ಗಾಂಧೀ.

ಹರ್ಡೇಕರ್ ಮಂಜಪ್ಪನವರು ಶಾಲೆಯಲ್ಲಿ ಕಲಿತದ್ದು ಮುಲ್ಕಿವರೆಗೆ ಮಾತ್ರ. ಮುಲ್ಕಿ ಕನ್ನಡ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸುಮಾಡಿದ ಮಂಜಪ್ಪನವರು ಏಳು ರೂ.ಗಳ ಮಾಸಿಕ ವೇತನದ ಮೇಲೆ ಅಧ್ಯಾಪಕರಾದರೂ, ಈ ಅಧ್ಯಾಪನ ವೃತ್ತಿ ಯಲ್ಲಿ ಬಹಳ ಕಾಲ ಮುಂದುವರಿಯದೆ ಲೋಕ ಶಿಕ್ಷಣ ಕಾರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು. ಈ ಲೋಕ ಶಿಕ್ಷಣಕಾರ್ಯದಲ್ಲಿ ಅಡ್ಡಿ ಆತಂಕಗಳು ಎಷ್ಟೇ ಎದುರಾದರೂ ಅವನ್ನು ಲೆಕ್ಕಿಸದೆ ಅವುಗಳಿಂದ ಎದೆಗುಂದದೆ ತಮ್ಮ ಬದುಕಿನ ನಂಬಿಕೆ ಗಳನ್ನು ದೃತಿಗೆಡದೆ ಪ್ರತಿಪಾದಿಸಿದ ಹರ್ಡೇಕರ್ ಮಂಜಪ್ಪನವರು ಈ ಶತಮಾನದಲ್ಲಿ ಕರ್ನಾಟಕ ಕಂಡ ಧೀಮಂತ ಚಿಂತಕ, ಛಲವಾದಿ ಮತ್ತು ಮಾನವತಾವಾದಿ.

ಹರ್ಡೇಕರ್ ಮಂಜಪ್ಪನವರು ಅಪ್ರತಿಮ ರಾಷ್ಟ್ರಾಭಿಮಾನಿಗಳಾಗಿದ್ದರು. ರಾಷ್ಟ್ರ ದಾಸ್ಯದ ಸಂಕೋಲೆಯಲ್ಲಿದ್ದಾಗ ದೇಶವಾಸಿಗಳಲ್ಲಿ ದೇಶಾಭಿಮಾನವನ್ನು ಮೂಡಿಸಲು ಮರಾಠಿಯ 'ಕೇಸರಿ' ಪತ್ರಿಕೆಯ ಮಾದರಿಯಲ್ಲಿ ಕನ್ನಡದಲ್ಲೂ ಪತ್ರಿಕೆ ಯೊಂದನ್ನು ಪ್ರಕಟಿಸುವ ಆಲೋಚನೆ ಮಾಡಿ 1906ರ ಸೆಪ್ಟಂಬರ್ ತಿಂಗಳಲ್ಲಿ 'ಧನುರ್ಧಾರಿ' ಎಂಬ ಪತ್ರಿಕೆಯನ್ನು ತಮ್ಮ ಅಣ್ಣನವರ ಸಹಕಾರದಿಂದ ಪ್ರಕಟ ಸಿದರು. ರಾಷ್ಟ್ರಾಭಿಮಾನದ ಉಜ್ವಲ ಸಂಕೇತವಾಗಿದ್ದ ಈ ಪತ್ರಿಕೆ ಬಹಳ ಕಾಲ ನಡೆಯಲಿಲ್ಲ. ದೇಶದ ಉದ್ದಗಲಕ್ಕೂ ಸ್ವಾತಂತ್ರ್ಯ ಚಳುವಳಿ ಚರಮಸ್ಥಿತಿಯಲ್ಲಿದ್ದಾಗ ಆ ಚಳುವಳಿಗೆ ಕಣ್ಣು–ಬಾಯಿ ಆಗಬೇಕಾಗಿದ್ದ ಪತ್ರಿಕೆ ನಿಂತುಹೋದದ್ದರಿಂದ ತೀವ್ರ ವಾಗಿ ಪರಿತಪಿಸಿದ ಮಂಜಪ್ಪನವರು ತಮ್ಮ ದುಃಖವನ್ನು ಹೀಗೆ ತೋಡಿಕೊಂಡಿದ್ದಾರೆ: 'ದೇಶದಲ್ಲಿ ರಾಜಕೀಯ ಚಟುವಟಿಕೆ ಪ್ರಚಂಡವಾಗಿ ನಡೆದಿತ್ತು. ಸೌಮ್ಯ ಮತ್ತು ಉಗ್ರ ಪಂಗಡಗಳ ಮೇಲೆ ಬ್ರಿಟಿಷ್ ಸರ್ಕಾರ ದಬ್ಬಾಳಿಕೆಯನ್ನು ಹೆಚ್ಚಾಗಿಯೇ ನಡೆಸಿತು. ಇಂತಹ ಸಮಯದಲ್ಲಿ ನಮ್ಮ ಪತ್ರಿಕೆ ಇಲ್ಲವಾಯಿತಲ್ಲಾ ಎಂದು ನನಗೆ ಬಹು ಚಿಂತೆ.'

ರಾಷ್ಟ್ರೀಯ ಸಮಸ್ಯೆಗಳನ್ನು ಜನರ ಬಳಿಗೆ ಕೊಂಡೊಯ್ಯಲು ಪತ್ರಿಕೆಯನ್ನು ಸಶಕ್ತ ಮಾಧ್ಯಮವೆಂದೇ ಭಾವಿಸಿದ್ದ ಮಂಜಪ್ಪನವರು 'ಧನುರ್ಧಾರಿಯನ್ನು 1908 ರಲ್ಲಿ ಪುನಃ ಪ್ರಾರಂಭಿಸಿ ಜನಮನವನ್ನು ಎಚ್ಚರಿಸುವ ಕಾಯಕ ಕೈಗೊಂಡರು. ತಮ್ಮ ಬದುಕಿನ ಮುಂದಿನ ವರ್ಷಗಳಲ್ಲೂ ಅನೇಕ ಪತ್ರಿಕೆಗಳನ್ನು ನಡೆಸಿದ ಹರ್ಡೇಕರ್ ಮಂಜಪ್ಪನವರಿಗೆ ಪತ್ರಿಕೆ ಎಂದೂ ಜೀವನೋಪಾಯದ ಸಾಧನವಾಗಿರಲಿಲ್ಲ. ಅದು ಶಂಕನಾದವಾಗಿತ್ತು, ಪಾಂಚಜನ್ಯವಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದ ಲಾಲ್–ಬಾಲ್–ಪಾಲ್‌ರ ಸಿಂಹಗರ್ಜನೆ ದೇಶದ ತುಂಬೆಲ್ಲ ಅನುರಣಿಸುತ್ತಿದ್ದ ದಿನಗಳು ಅವು. ಮಂಜಪ್ಪನವರು

ಅವರ ಭಾಷಣಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಇಲ್ಲಿನ ಕ್ರಾಂತಿಕಾರಿ ವಿಚಾರಗಳಿಂದ ಆಗಿನ ಆಳರಸರು ಕೆಂಡಕಾರಿದರು. 'ಧನುರ್ಧಾರಿ' ಪತ್ರಿಕೆಯ ಕ್ರಾಂತಿಕಾರಕ ಲೇಖನಗಳನ್ನು ಗುರಿಯಾಗಿಟ್ಟುಕೊಂಡೇ ಅಂದಿನ ಸರ್ಕಾರ ಪ್ರೆಸ್ ಕಾನೂನನ್ನು ತಂದು ಪತ್ರಿಕೆಯ ಬಾಯನ್ನು ಮುಚ್ಚುವ ಯತ್ನ ನಡೆಸಲಾಯಿತು. ಮಂಜಪ್ಪನವರು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಪತ್ರಿಕೆಯನ್ನು ಆಳರಸರ ತುತ್ತೂರಿಯಾಗಿ ಮಾಡಲಿಲ್ಲ. ರಾಜಿ ಮಾಡಿಕೊಳ್ಳದ ಪತ್ರಿಕೆ ಚಂದಾದಾರರಿಲ್ಲದೆ ಒಂದು ದಿನ ನಿಂತಿತು.

ಹರ್ಡೇಕರ್ ಮಂಜಪ್ಪನವರ ಓದು ವಿಸ್ತಾರವೂ ಆಳವೂ ಆಗಿತ್ತು. ಕನ್ನಡ–ಮರಾಠಿಗಳ ಮೇಲೆ ಅದ್ಭುತ ಪ್ರಭುತ್ವವನ್ನು ಪಡೆದಿದ್ದ ಮಂಜಪ್ಪನವರು ಈ ಶತಮಾನದ ಆದಿಭಾಗದಲ್ಲಿಯೇ ಕನ್ನಡ ಭಾಷೆ, ಸಾಹಿತ್ಯವನ್ನು ತಮ್ಮ ಅಮೂಲ್ಯ ಗ್ರಂಥಗಳಿಂದ ಸಂಪದ್ಭರಿತಗೊಳಿಸಿದರು. ಸಮಾಜಶಾಸ್ತ್ರ ಮತ್ತು ಆಧ್ಯಾತ್ಮಗಳ ಕಡೆಗೆ ಒಲವಿದ್ದ ಮಂಜಪ್ಪನವರು ಈ ಎರಡೂ ಕ್ಷೇತ್ರಗಳ ವಿಶಿಷ್ಟ ಕೃತಿಗಳನ್ನು, ಪ್ರಸಿದ್ಧರನ್ನು ಓದಿ ಅರಗಿಸಿಕೊಂಡವರು.

ಹರ್ಡೇಕರ್ ಮಂಜಪ್ಪನವರದು ನಿಜವಾದ ಅರ್ಥದಲ್ಲಿ ತಪಸ್ವೀ ಜೀವನ. ಲೌಕಿಕ, ಸಾಂಸಾರಿಕ ಬದುಕು ಸಾಮಾಜಿಕ ಬದುಕಿಗೆ ಅಡ್ಡಿಯಾಗಬಹುದೆಂದು ಪರಿಭಾವಿಸಿದ ಮಂಜಪ್ಪನವರು ಆಜನ್ಮ ಬ್ರಹ್ಮಚಾರಿಗಳಾಗಿಯೇ ಉಳಿಯಬೇಕೆಂದು ನಿರ್ಧರಿಸಿ ಲೋಕವನ್ನೇ ತಮ್ಮ ಕುಟುಂಬವನ್ನಾಗಿ ಸ್ವೀಕರಿಸಿದರು. ಸರಳ ಬದುಕು, ಉಚ್ಚ ವಿಚಾರಗಳಿಂದ ತಮ್ಮನ್ನು ಸಾರ್ವಜನಿಕ ಬದುಕಿಗೆ ಧಾರೆ ಎರೆದುಕೊಂಡರು. ತಮ್ಮ ಬದುಕಿನ ಬಗೆಗೆ ಧೀರ ನಿಲುವನ್ನು ತಾಳಿ ಅವರು ದೇಶಸೇವಕ, ದೀನಬಂಧು ಗಳಾದರು.

ಮಂಜಪ್ಪನವರು ವ್ಯಕ್ತಿತ್ವ ಮತ್ತು ಜೀವನದರ್ಶನ ಅರಳಿರುವುದು ವೀರಶೈವ ಸಾಹಿತ್ಯದ ಭದ್ರ ಬುನಾದಿಯ ಮೇಲೆಯೆ. ವೀರಶೈವ ಸಾಹಿತ್ಯದಲ್ಲಿ ಪ್ರತಿಪಾದಿತ ವಾಗಿರುವ ಉದಾತ್ತ ಜೀವನ ಮೌಲ್ಯಗಳು, ಸರ್ವೋದಯ ಸಮಾಜದ ಪರಿಕಲ್ಪನೆ ಹಾಗೂ ಕಾಯಕವೇ ಮುಂತಾದ ತಾತ್ತ್ವಿಕ ಸಿದ್ಧಾಂತಗಳು ಮಂಜಪ್ಪನವರ ಬದುಕಿಗೆ ಕ್ರಿಯಾಶಕ್ತಿಯನ್ನೂ ಗತಿಶೀಲತೆಯನ್ನೂ ಪ್ರದಾನಮಾಡಿವೆ. ಹಾಗೆ ನೋಡಿದರೆ ಅವರ ಬದುಕಿನ ಆರಂಭದ ದಿನಗಳಲ್ಲಿ ಆರ್ಯಸಮಾಜದ ಸಿದ್ಧಾಂತಗಳು ಮಂಜಪ್ಪ ನವರ ಮೇಲೆ ಎಂಥ ಗಾಢ ಪ್ರಭಾವ ಬೀರಿದ್ದವೆಂದರೆ 'ಸತ್ಯಾರ್ಥ ಪ್ರಕಾಶ'ದ ಅನುವಾದವನ್ನೂ ಅವರು ಆರಂಭಿಸಿದ್ದರು. ವೀರಶೈವ ಧರ್ಮದ ಬಗೆಗೆ ಮಂಜಪ್ಪ ನವರಿಗೆ ಹೆಚ್ಚು ಅರಿವಿಲ್ಲದ ದಿನಗಳು ಅವು. ಹಾಗೂ ವೀರಶೈವ ಧರ್ಮದಲ್ಲಿ ಇದ್ದ ಒಳಪಂಗಡಗಳ ಬಗ್ಗೆ ಅಸಮಾಧಾನದಿಂದಿದ್ದ ದಿನಗಳು ಅವು. ಹೀಗಾಗಿ 'ನನಗೆ ಆರ್ಯ ಸಮಾಜದ ವಿಚಾರಗಳೇ ಸರಿತೋರಿದ್ದರಿಂದ ನಮ್ಮ ಸಮಾಜದಲ್ಲಿ ಸೇರಿ ಕೆಲಸ ಮಾಡಲು ಇಷ್ಟವಿರಲಿಲ್ಲ' ಎಂದು ಅವರೇ ಹೇಳಿದ್ದಾರೆ. ಆದರೆ ಈ ಆರ್ಯಸಮಾಜವೇ ಹರ್ಡೇಕರ್

ಮಂಜಪ್ಪನವರನ್ನು ತಮ್ಮ ಧರ್ಮ ಹಾಗೂ ಸಮಾಜದ ಬಗೆಗೆ ಆತ್ಮ ವಿಮರ್ಶೆ ಮಾಡಿಕೊಳ್ಳಲು ಪ್ರೇರೇಪಿಸಿದ್ದು ಒಂದು ಸಂಯೋಗ. ಆರ್ಯಸಮಾಜದ ಸಭೆಯೊಂದರಲ್ಲಿ ಭಾಗವಹಿಸಲು ಹೋಗಿದ್ದಾಗ ಅಲ್ಲಿನ ಭಜನೆ, ವ್ಯಾಖ್ಯಾನಗಳನ್ನು ನೋಡಿ ನಮ್ಮ ಮಠಗಳಲ್ಲಿಯೂ ಇಂಥ ಕಾರ್ಯಕ್ರಮಗಳನ್ನು ನಡೆಸಬಾರದೇಕೆ ಎಂದು ಯೋಚಿಸಿದರು. ತಮ್ಮ ಈ ಯೋಚನೆಯನ್ನು ದಾವಣಗೆರೆಯ ಮಹಾಶಿವಯೋಗಿ ಮೃತ್ಯುಂಜಯ ಮಹಾಸ್ವಾಮಿಗಳ ಸಮ್ಮುಖದಲ್ಲಿ ಮಂಡಿಸಿದಾಗ, ಅವರು ಅದನ್ನು ಅನುಮೋದಿಸಿದ್ದಷ್ಟೇ ಅಲ್ಲ ಅದನ್ನು ಕಾರ್ಯರೂಪಕ್ಕೂ ತಂದರು. ಮಂಜಪ್ಪನವರ ಕ್ರಿಯಾಶಕ್ತಿಗೆ ಮೃತ್ಯುಂಜಯ ಸ್ವಾಮಿಗಳು ಸ್ಫೂರ್ತಿಪುಂಜವಾದರು, ಚೈತನ್ಯ ಶಕ್ತಿಯಾದರು. ಹೀಗೆ ತಮ್ಮ ಧರ್ಮದ ಬಗೆಗೆ ಒಲವನ್ನು ಬೆಳೆಸಿಕೊಂಡರೂ ಆರ್ಯಸಮಾಜದ ಬಗ್ಗೆ ಅವರಲ್ಲಿದ್ದ ಆದರಭಾವ ಇನ್ನೂ ಹೋಗಿರಲಿಲ್ಲ. ನಿಜಾಮರಾಜ್ಯದಲ್ಲಿ ಆರ್ಯಸಮಾಜದವರು ಸತ್ಯಾಗ್ರಹ ಆರಂಭಿಸಿದಾಗ ಅದಕ್ಕೆ ಅವರು ಪ್ರೋತ್ಸಾಹವನ್ನಿತ್ತರು. ಆದರೆ ಆರ್ಯಸಮಾಜದ ಪ್ರಚಾರಕನೊಬ್ಬ ಆವೇಶದ ಭರದಲ್ಲಿ ಒಂದು ವರ್ಷದಲ್ಲಿ ಸಾವಿರ ಲಿಂಗಗಳನ್ನು ಕೀಳಿಸಿ ಜನಿವಾರಗಳನ್ನು ಹಾಕಿಸುತ್ತೇನೆ ಎಂದು ಹುಚ್ಚು ಪ್ರತಿಜ್ಞೆ ಮಾಡಿದಾಗ ಮಂಜಪ್ಪನವರು ಕೆಂಡವಾದರು. ಇದನ್ನು ವಿರೋಧಿಸಿದರು, ಉಗ್ರವಾದ ಚಳವಳಿಯನ್ನೇ ಮಾಡಿದರು. ಹರ್ಡೇಕರ್ ಮಂಜಪ್ಪನವರು ಈ ಸಂದರ್ಭದಲ್ಲಿ ತಾವು ಯಾಕಾಗಿ ಆರ್ಯಸಮಾಜದ ಬಗೆಗೆ ಒಲವನ್ನಿಟ್ಟುಕೊಂಡಿದ್ದರು ಎಂಬುದನ್ನು ಈ ಮಾತುಗಳಲ್ಲಿ ಸ್ಪಷ್ಟಪಡಿಸಿದರು—'ಬೇರೆ ಮತಗಳಲ್ಲಿ ಮತಾಂತರಗೊಂಡ ಹಿಂದೂಗಳನ್ನು ಶುದ್ಧೀಕರಿಸಿ ಮತ್ತೆ ಹಿಂದೂ ಧರ್ಮಕ್ಕೆ ತೆಗೆದುಕೊಳ್ಳುವ ಕಾರ್ಯಮಾಡುತ್ತಿದೆ ಎಂದು ಆರ್ಯಸಮಾಜದ ಬಗ್ಗೆ ನನಗೆ ಅಭಿಮಾನವಿದ್ದಿತು, ಈಗ ಹಿಂದೂಗಳೇ ಆಗಿರುವ ಲಿಂಗವಂತರನ್ನು ಮತಾಂತರಗೊಳಿಸುವುದೆಂದರೇನು? ಶುದ್ಧಿ ಮತ್ತು ಸಂಘಟನೆಯ ಒಂದು ಆಂದೋಲನವಾಗಿ ಮುಂದುವರಿಯುವುದಕ್ಕೆ ಬದಲಾಗಿ ಅದೇ ಒಂದು ಜಾತಿಯಾಗಿ ಪರಿವರ್ತನೆಗೊಳ್ಳುತ್ತಿರುವುದು ವಿಷಾದಕರ. ಶೋಚನೀಯ. ಜಾತಿನಿರಾಕರಣ ಸಿದ್ಧಾಂತವನ್ನೇ ಆಧರಿಸಿ ಜಾತಿ ನಿರ್ಮೂಲನಕ್ಕಾಗಿಯೇ ಹುಟ್ಟಿದ ಲಿಂಗಾಯತ ಮತವು ಇಂಥದೊಂದು ಜಾತಿಯಲ್ಲೇ ಸೇರುವುದೆಂದರೇನು? ಜಾತೀಯವಾದಕ್ಕೆ ಪುರಸ್ಕಾರ ನೀಡಲು ಸುತರಾಂ ಸಾಧ್ಯವಿಲ್ಲ. ಮಂಜಪ್ಪನವರ ಈ ಮಾತುಗಳಿಂದಾಗಿ ವೀರಶೈವರಲ್ಲಿ ಕೆಚ್ಚುಮೂಡಿತು; ಅವರು ಎಚ್ಚೆತ್ತರು. ಹೀಗೆ ಒಂದು ಸಮಾಜದ ಅಹಮಿಕೆಯನ್ನು ಜಾಗೃತಗೊಳಿಸಿದ ಕೀರ್ತಿಗೆ ಮಂಜಪ್ಪನವರು ಕಾರಣರಾದರು.

ಅಲ್ಲಿಂದಾಚೆಗೆ ಅವರು ವೀರಶೈವ ಧರ್ಮೋನ್ಮುಖರಾದರು. ವೀರಶೈವ ಧರ್ಮದಲ್ಲಿಯ ಉದಾರಗುಣಗಳು ಅವರಿಗೆ ಅತ್ಯಂತ ಮಾನವೀಯವೂ ಉದಾರವೂ ಆಗಿ ಕಂಡವು. ಆದರೆ ವೀರಶೈವರಲ್ಲಿದ್ದ ಒಳಪಂಗಡಗಳು ಇವರನ್ನು ಯಾವತ್ತೂ ಕಾಡಿದ್ದುವು. ಹೀಗಾಗಿ ಬಸವ ಕಲ್ಪಿತ ಸಮಾಜದ ಪುನರ್ರಚನೆಗಾಗಿ ಮಂಜಪ್ಪನವರು

ತಮ್ಮ ಜೀವನದ ಉದ್ದಕ್ಕೂ ಶ್ರಮಿಸಿದರು. ಮಂಜಪ್ಪನವರು ಕಂಡ ಆದರ್ಶ ಸಮಾಜ ಗಾಂಧಿ ಮತ್ತು ಬಸವತತ್ವಗಳ ಸಂಗಮವಾಗಿತ್ತು. ಬಸವ ಮತ್ತು ಗಾಂಧೀ ಇವರ ಆದರ್ಶಪುರುಷರಾಗಿದ್ದರು. ಹೀಗಾಗಿ ಹರ್ಡೇಕರ್ ಮಂಜಪ್ಪನವರು ಸಮಾಜದ ದೋಷಗಳನ್ನು ತಿದ್ದುವ ಕೆಲಸವನ್ನು ಮಾಡಿದರು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ತೀವ್ರ ಆಸಕ್ತಿ ವಹಿಸಿ ಅವುಗಳ ಪ್ರಚಾರಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು.

ಹರ್ಡೇಕರ್ ಮಂಜಪ್ಪನವರು ತಮ್ಮ ಕಾಲದ ಪ್ರಮುಖ ಸುಧಾರಕರಾಗಿದ್ದರು. ತಾವು ಹೋದೆಡೆಯೆಲ್ಲ ತಂಬಾಕು ಮತ್ತು ಚಹಾ ವ್ಯಸನ ಬಿಡುವಂತೆ ಖಾದಿ ಧರಿಸುವಂತೆ ಮದ್ಯಪಾನದಿಂದ ದೂರಸರಿಯುವಂತೆ ಜನರ ಮನ ಒಲಿಸುತ್ತಿದ್ದರು. ಹೋದ ಹೋದೆಡೆಯೆಲ್ಲ 'ತಂಬಾಕು ಬಿಡಿಸುವ ಮಂಜಪ್ಪ' ಎಂದೇ ಗುರುತಿಸುವಷ್ಟರಮಟ್ಟಿಗೆ ಅವರು ತಮ್ಮ ಸುಧಾರಣ ಆಂದೋಲನದಲ್ಲಿ ಸಕ್ರಿಯರಾಗಿದ್ದರು.

ಭಾರತ ಗ್ರಾಮಗಳ ದೇಶವಾದ್ದರಿಂದ, ಗ್ರಾಮಗಳು ಪುನರುಜ್ಜೀವನಗೊಳ್ಳದೆ ಭಾರತದ ಪ್ರಗತಿ ಸಾಧ್ಯವಿಲ್ಲವೆಂದು ಅವರು ಭಾವಿಸಿದ್ದರು. ಈ ಗ್ರಾಮಗಳ ಪುನರುಜ್ಜೀವನ ಗ್ರಾಮೋದ್ಯೋಗಗಳಿಂದ ಮಾತ್ರ ಸಾಧ್ಯವೆಂದು ಭಾವಿಸಿ, ಈ ಉದ್ದೇಶಕ್ಕಾಗಿ ಹಳ್ಳಿ-ಹಳ್ಳಿಯಲ್ಲೂ ಸಂಚಾರ ಮಾಡಿ ಗ್ರಾಮೋದ್ಯೋಗ ಕೇಂದ್ರಗಳ ಸ್ಥಾಪನೆಗಾಗಿ ಶ್ರಮಿಸಿದರು. ಅದರಲ್ಲೂ ಖಾದಿ ಉದ್ಯಮದ ಮೂಲಕ ಭಾರತದ ಭವಿಷ್ಯವನ್ನು ಕಂಡರು. ರಾಟೆ ಸಂಘಗಳನ್ನು ಸ್ಥಾಪಿಸಿ ಅಲ್ಲಿ ಶರಣ ಸಾಹಿತ್ಯ ಪ್ರವಚನಗಳನ್ನು ಏರ್ಪಡಿಸುವುದರ ಮೂಲಕ ಬಸವಣ್ಣನವರ ಕಾಯಕ ತತ್ವ ಮತ್ತು ಸಮಾನತೆಯ ತತ್ವಗಳ ಮಹತ್ವವನ್ನು ಮನದಟ್ಟು ಮಾಡಿಕೊಡುತ್ತಿದ್ದರು. ಈ ಸಂಘಗಳು ಸ್ವಾವಲಂಬಿಗಳಾಗಲು ಅಲ್ಲೇ ಹಣವನ್ನು ಕೂಡಿಸಿಕೊಡುತ್ತಿದ್ದರು. ಒಂದೊಂದು ಸಂಘವನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದರು.

ಬಸವೇಶ್ವರರು ಬೋಧಿಸಿದ ವೀರಶೈವ ಪಂಥ ವಿಶ್ವಪಂಥವಾಗದೆ ವಿಶ್ವಧರ್ಮವಾಗದೆ, ಜಾತಿಯಾಗಿ ಸೀಮಿತಗೊಂಡದ್ದು ಮಂಜಪ್ಪನವರಿಗೆ ತೀವ್ರ ದುಃಖದ ವಿಷಯವಾಗಿತ್ತು. ಈ ಸಮಾಜದ ಡೊಂಕುಗಳನ್ನು ಸರಿಪಡಿಸಿಕೊಳ್ಳುವುದರ ಮೂಲಕ ಲೋಕದ ಡೊಂಕುಗಳನ್ನು ತಿದ್ದುವ ಕಾಯಕಕ್ಕೆ ಕೈಹಾಕಬೇಕೆಂದು ಯೋಚಿಸಿದ ಮಂಜಪ್ಪನವರು ಈ ಬಗ್ಗೆ ಗಾಂಧೀಜಿಯವರೊಡನೆಯೂ ಚರ್ಚಿಸಿದರು. 'ಒಂದೇ ಮತದ ವಿದ್ಯಾರ್ಥಿಗಳಿಗಾಗಿ ವಿದ್ಯಾಲಯಗಳನ್ನು ಸ್ಥಾಪಿಸುವುದು ಉಚಿತವೆ' ಎಂಬ ಪ್ರಶ್ನೆಗೆ 'ಗಾಂಧೀಜಿಯವರು' ರಾಷ್ಟ್ರೀಯ ಶಿಕ್ಷಣ ಪದ್ಧತಿಯಂತೆ ಒಂದೇ ಮತದವರಿಗೇ ಆಗಲಿ ಶಿಕ್ಷಣ ಕೊಡಲು ಅಡ್ಡಿಯೇನಿಲ್ಲ ಎಂದು ಹೇಳಿದಾಗ ಮಂಜಪ್ಪನವರಿಗೆ ಆನೆಬಲ ಬಂದಂತಾಯಿತು. ಸರಿ, ಬಿಜಾಪುರ ಜಿಲ್ಲೆಯ ಹಳ್ಳಿ-ಹಳ್ಳಿಗೆ ಹೋಗಿ ಭಾಷಣಗಳನ್ನು ಮಾಡಿದರು, ಜನರನ್ನು ಸಂಘಟಿಸಿದರು. ಕೊನೆಗೆ ಫ. ಗು.

ಹಳಕಟ್ಟಿಯವರ ಸಲಹೆಯಂತೆ ಆಲಮಟ್ಟಿಯನ್ನೇ ಯೋಗ್ಯಸ್ಥಳವೆಂದು ಆಯ್ಕೆಮಾಡಿ ಅಲ್ಲಿ ಶಾಲೆಯನ್ನು ಸ್ಥಾಪಿಸಿದರು. ವೀರಶೈವ ಸಮಾಜದ ಎಲ್ಲರಿಗೂ ಕಲಿಯುವ ಸಮಾನ ಅವಕಾಶವನ್ನು ಕಲ್ಪಿಸಿದರು. ಮಂಜಪ್ಪನವರು ಈ ಶಾಲೆಯು ಮೂಲಕ ಎಂಥ ಶಿಕ್ಷಣವನ್ನು ಕೊಡಬಯಸುತ್ತಿದ್ದರೆಂದರೆ ಅಲ್ಲಿಂದ ಹೊರಬರುವ ವಿದ್ಯಾರ್ಥಿಗಳು ಸಮಾಜದ ಹಾಗೂ ದೇಶದ ನಿಧಿಯಾಗಬೇಕೆಂದು ಕನಸುಕಂಡರು. ಆ ಶಾಲೆಯ ಸ್ಥಾಪನೆಯ ಉದ್ದೇಶಗಳೆಂದರೆ—

(೧) ಬಾಲಕ–ಬಾಲಕಿಯರಿಗೆ ಆರಂಭದಲ್ಲಿಯೇ ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳು ದೊರೆತು ಅವರ ಆತ್ಮಿಕ, ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕ ಬಲಗಳು ಹೆಚ್ಚಿ ಚಾರಿತ್ರ್ಯವು ಪವಿತ್ರತರವಾಗುವಂತೆ ಮಾಡಲು ಪ್ರಾಚೀನ ಗುರುಕುಲಗಳ ಪದ್ಧತಿಯ ಮೇರೆಗೆ ವಿದ್ಯಾಸಂಸ್ಥೆಗಳನ್ನು ನಾನಾಕಡೆಗಳಲ್ಲಿ ಸ್ಥಾಪಿಸುವುದು.

(೨) ದೇಶ–ವಿದೇಶಗಳ ನಾನಾ ಭಾಷೆಗಳನ್ನು ಕಲಿತು ಸುಸಂಸ್ಕೃತರಾಗಿ ಒಕ್ಕಲುತನ, ವ್ಯಾಪಾರ ಕೈಗಾರಿಕೆ ಮೊದಲಾದ ಉದ್ಯೋಗಗಳನ್ನು ಮಾಡಿಕೊಂಡು ಸ್ವತಂತ್ರ ಜೀವನವನ್ನು ನಡೆಸಲು ಸಮರ್ಥರನ್ನಾಗಿ ಮಾಡುವುದು.

ಹೀಗೆ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕೆ ಅನುವಾಗುವಂಥ ವ್ಯವಸ್ಥೆಯನ್ನು ಗಾಂಧೀಜಿಯವರ ಜೀವನ ಶಿಕ್ಷಣ ಪದ್ಧತಿಗೆ ಅನುಸಾರವಾಗಿ ಮಾಡಿದರು. ಕಾರ್ಯಶೀಲತೆ, ಸ್ವಾವಲಂಬನೆ, ಸ್ವಾರ್ಥತ್ಯಾಗ, ಸಹಕಾರ ಭಾವನೆ, ದೈಹಿಕ ಶ್ರಮ, ಆತ್ಮ ವಿಶ್ವಾಸ, ಆತ್ಮಾಭಿಮಾನವನ್ನು ಅರಳಿಸುವ ಕೇಂದ್ರವನ್ನಾಗಿ ಆಲಮಟ್ಟಿ ವಿದ್ಯಾಲಯುವನ್ನು ರೂಪಿಸಿ ನಾಡಿನ ಯುವಶಕ್ತಿಗೆ ಹೊಸ ಚೈತನ್ಯವನ್ನು ಕೊಡಬೇಕೆನ್ನುವ ಉದಾತ್ತ ಧ್ಯೇಯವನ್ನು ಅವರು ಹೊಂದಿದ್ದರು. ಮುಂದೆ ಮಹಾತ್ಮಾ ಗಾಂಧೀಜಿಯವರು ವಾರ್ಧಾದಲ್ಲಿ ಸ್ಥಾಪಿಸಿದ ವೃತ್ತಿಶಿಕ್ಷಣ ಕೇಂದ್ರಕ್ಕೆ ಈ ಆಲಮಟ್ಟಿಯ ಶಾಲೆ ನಾಂದಿಯಾಯಿತು ಎಂದರೆ ಇದರ ಮಹತ್ವದ ಅರಿವಾಗುತ್ತದೆ.

ಆದರೆ ಆಲಮಟ್ಟಿಯ ಕೇಂದ್ರ ಮಂಜಪ್ಪನವರು ನಿರೀಕ್ಷಿಸಿದ ಮಟ್ಟಕ್ಕೆ ಯಶಸ್ವಿಯಾಗಲಿಲ್ಲ. ಆಲಮಟ್ಟಿಯ ಶಿಸ್ತುಜೀವನ ಅನುಶಾಸನಯುಕ್ತ ಬದುಕಿಗೆ ಆಗಿನ ಯುವಜನಾಂಗ ಅಷ್ಟು ಆದರ, ಆಸ್ಥೆ ತೋರಲಿಲ್ಲ. ಇದರಿಂದಾಗಿ ಮಂಜಪ್ಪನವರು ತುಂಬಾ ವ್ಯಸನಪಟ್ಟರು. ತಮ್ಮ ವ್ಯಸನವನ್ನು ಈ ಶಬ್ದಗಳಲ್ಲಿ ವ್ಯಕ್ತಪಡಿಸಿದರು– ''ಕೈಗಳು ಕೆಲಸದಲ್ಲಿ ತೊಡಗಲಿ! ಇದೊಂದನ್ನುಳಿದು ಬೇರೆ ಏನನ್ನಾದರೂ ಹೇಳಿರೆನ್ನುವರೇನೋ ಹೆಚ್ಚಿನ ಯುವಕರು! ಪದವಿದಾನ ಸಮಾರಂಭದಲ್ಲಿ ದೊಡ್ಡವರೊಬ್ಬರಿಂದ ಸನದು ಸ್ವೀಕರಿಸಿದ ಈ ಕೈಗಳಿಂದ ಕೆಲಸ ಮಾಡುವುದೆ? ಲೆಕ್ಕಣಿಕೆ ಹಿಡಿದ ಕೈ ಮತ್ತೆ ತಕ್ಕಡಿ ತಕಲಿ- ರಾಟೆ, ಮೇಟೆ, ಮಗ್ಗ ಹಿಡಿಯಬೇಕೆ?'' ಅಂದಿನ ಯುವಕರಂತೂ ಹಿಡಿಯಲು ಒಪ್ಪಲಿಲ್ಲವೆಂಬುದು ಆಲಮಟ್ಟಿಯ ವಿದ್ಯಾಲಯದ ಪ್ರಯೋಗದಿಂದ ಸಿದ್ಧವಾಯಿತು! ಹೊಸ ಜನಾಂಗವೊಂದರ ನಿರ್ಮಾಣಕ್ಕಾಗಿ ಕನಸು ಕಂಡ ಮಂಜಪ್ಪನವರು ಯಶಸ್ವಿಯಾಗದಿದ್ದುದು ಇತಿಹಾಸದ ದುರಂತವೇ ಸರಿ.

ಹರ್ಡೀಕರ್ ಮಂಜಪ್ಪನವರು ಅದಮ್ಯ ಆಶಾವಾದಿಗಳಾಗಿದ್ದರು. ಭವಿಷ್ಯದ ಬಗ್ಗೆ ಭರವಸೆಗಳನ್ನಿಟ್ಟುಕೊಂಡಿದ್ದರು. ಕರ್ಮವನ್ನು ಬದುಕಿನ ವ್ರತವನ್ನಾಗಿ ಸ್ವೀಕರಿಸಿದ್ದರು. ವಿಫಲತೆಗಳಿಂದ, ನಿರಾಶೆಯಿಂದ ಬದುಕಿನಿಂದ ಎಂದೂ ವಿಮುಖ ರಾದವರಲ್ಲ ಅವರು. ಆಸೆ–ನಿರಾಸೆಗಳನ್ನು, ಬಾಳಿನ ಏರುಪೇರುಗಳನ್ನು ಬದುಕಿನ ಅವಿಭಾಜ್ಯ ಅಂಗಗಳೆಂದೇ ಸ್ವೀಕರಿಸಿದ್ದ ಅವರು ನಿಜವಾದ ಅರ್ಥದಲ್ಲಿ ಸ್ಥಿತಪ್ರಜ್ಞರು.

ಆಲಮಟ್ಟಿಯ ವಿದ್ಯಾಲಯದ ಪ್ರಯೋಗ ಯಶಸ್ವಿಯಾಗದಿದ್ದಾಗ ಮಂಜಪ್ಪ ನವರು ಲೋಕಶಿಕ್ಷಣ ಕ್ಷೇತ್ರವಾದ ಪತ್ರಿಕೋದ್ಯಮಕ್ಕೆ ಬಂದರು. ಖಾದಿ ಚಳವಳಿ ಈಗಾಗಲೇ ನೋಡಿರುವಂತೆ ಅವರ ಮೊದಲ ಆಸಕ್ತಿಯಾಗಿತ್ತು. ಈಗ ಪುನಃ ಈ ಕ್ಷೇತ್ರಕ್ಕೇ ಬಂದು ಖಾದಿ ಆಂದೋಲನವನ್ನು ಚುರುಕುಗೊಳಿಸಿದರು.

ಅಖಿಲ ಕರ್ನಾಟಕ ಖಾದಿ ಪರಿಷತ್ತಿನ ಅಧ್ಯಕ್ಷಪೀಠದಿಂದ ಮಾತನಾಡುತ್ತ ಖಾದಿ ಆಂದೋಲನಕ್ಕಾಗಿ ಪ್ರತ್ಯೇಕ ಪತ್ರಿಕೆಯಿರಬೇಕೆಂದು ಪ್ರತಿಪಾದಿಸಿದರು. ಈ ಸಲಹೆ ಅದೇ ಸಭೆಯಲ್ಲಿದ್ದ ದೇಶಪಾಂಡೆ ಗಂಗಾಧರರಾವ್ ಅವರಿಗೆ ತುಂಬ ಪ್ರಿಯವಾಯಿತು. ಅವರು ಈ ಪತ್ರಿಕೆಗೆ ನೆರವಾದರು. ಹರ್ಡೀಕರ್ ಮಂಜಪ್ಪನವರು ರಂಗನಾಥ ದಿವಾಕರರೊಡನೆ 'ಖಾದಿ ವಿಜಯ' ಎಂಬ ಮಾಸಪತ್ರಿಕೆಯನ್ನು ಒಂದು ವರ್ಷ ಸಂಪಾದಿಸಿದರು. ಖಾದಿ ಹರ್ಡೀಕರ್ ಮಂಜಪ್ಪನವರಿಗೆ ಬರಿ ನೂಲಿನ ಬಟ್ಟೆ ಯಾಗಿರಲಿಲ್ಲ; ಅದು ರಾಷ್ಟ್ರಭಕ್ತಿಯ ಸಂಕೇತವಾಗಿತ್ತು; ರಾಷ್ಟ್ರಧರ್ಮವಾಗಿತ್ತು. ಖಾದಿ ಸ್ವಾತಂತ್ರ್ಯದ ಪರ್ಯಾಯವಾಗಿತ್ತು. ಖಾದಿಯ ಮೂಲಕ ಭಾರತದ ಭವಿಷ್ಯ ಕಾಣುತ್ತಿದ್ದರು ಮಂಜಪ್ಪನವರು. ಈ ದೃಷ್ಟಿಯಿಂದ ೧೯೩೩ರಲ್ಲಿ ಪ್ರಕಟವಾದ 'ಖಾದಿ ಶಾಸ್ತ್ರ' ಎಂಬ ಮಹತ್ವದ ಗ್ರಂಥದಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯ ಅಪೂರ್ಣ, ಅರ್ಥಹೀನ ಎಂಬುದನ್ನು ಅವರು ಸೋದಾಹರಣವಾಗಿ ಪ್ರತಿಪಾದಿಸಿದರು.

'ಖಾದೀ ವಿಜಯ' ಪತ್ರಿಕೆಯ ಪ್ರಕಾಶನ ನಿಂತಿತಾದರೂ ಆ ಪತ್ರಿಕೆಯ ವಿಸ್ತೃತ ರೂಪ 'ಉದ್ಯೋಗ' ಮಂಜಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾಗಲಾರಂಭಿಸಿತು. ಇಲ್ಲೂ ಅಷ್ಟೆ ಮಂಜಪ್ಪನವರದು ಯಥಾರ್ಥ ದೃಷ್ಟಿ. ವಾಸ್ತವಿಕ ಬದುಕಿನ ನೆಲಗಟ್ಟಿನ ಮೇಲೆ ನಿಂತೇ ಚಿಂತನೆ ನಡೆಸಿದರು. ಹೊಟ್ಟೆ, ಬಟ್ಟೆ, ವಸತಿಗಾಗಿ ಸಂಘರ್ಷಿಸುತ್ತಿರುವ ಮನುಷ್ಯನ ಬಗ್ಗೆ ಭಾರತೀಯನ ಬಗ್ಗೆ ಕಾಳಜಿ ವಹಿಸಿದರು. 'ಉದ್ಯೋಗ' ಪತ್ರಿಕೆಯ ಸಂಪಾದಕೀಯಗಳು ಮಂಜಪ್ಪನವರ ಜೀವನ ದೃಷ್ಟಿಯನ್ನು ನಿಚ್ಚಳಗೊಳಿಸುತ್ತವೆ. ಉದಾಹರಣೆಗೆ ಒಂದೆರಡು ಸಂಪಾದಕೀಯ ಅಂಶಗಳನ್ನು ನೋಡಬಹುದು.—'ಈ ಜಗತ್ತಿನಲ್ಲಿ ಜನ್ಮವೆತ್ತುವ ಪ್ರತಿಯೊಬ್ಬ ಮನುಷ್ಯನೂ ಹೊಟ್ಟೆತುಂಬ ಊಟ ಮಾಡಿ, ಮೈತುಂಬ ಬಟ್ಟೆ ಹಾಕಿಕೊಂಡು ಸುಖಶಾಂತಿಯಿಂದ ಕಳೆಯಲು ಸಂಪೂರ್ಣ ಅಧಿಕಾರ ವುಳ್ಳವನಾಗಿದ್ದಾನೆ. ಇದು ಅವನ ನೈಸರ್ಗಿಕ ಅಧಿಕಾರವಾಗಿದೆ.' 'ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಮೃಗಯಾ ಮತ್ತು ಗೋಪಾಲಯುಗಗಳನ್ನು

ಜಾಗ್ರತೆ ಕಳೆದು ಕೃಷಿಯುಗದಲ್ಲಿ ಸ್ವಲ್ಪಕಾಲವಿದ್ದು ೧೭ನೇ ಶತಮಾನದಲ್ಲಿಯೇ ಉದ್ಯೋಗ ಯುಗವನ್ನು ಪ್ರವೇಶಿಸಿದುವು. ಭಾರತೀಯರಾದ ನಾವು ಸಾವಿರಾರು ವರ್ಷಗಳಿಂದಲೂ ಕೃಷಿಯುಗದಲ್ಲಿಯೇ ಇದ್ದೇವೆ. ಆದುದರಿಂದ ಉದ್ಯೋಗಯುಗ ದಲ್ಲಿರುವ ಪಾಶ್ಚಾತ್ಯರು ನಮ್ಮ ದೇಶದ ಮೇಲೂ, ಬುದ್ಧಿಯ ಮೇಲೆಯೂ ಮನಸ್ಸಿನ ಮೇಲೆಯೂ ಸ್ವಾಮಿತ್ವವನ್ನು ಸ್ಥಾಪಿಸಿದ್ದಾರೆ. ಈ ಪ್ರಕಾರ ಮನಸ್ಸಿನಿಂದಲೂ, ಬುದ್ಧಿಯಿಂದಲೂ ನಾವು ಅವರ ದಾಸರಾದುದರಿಂದಲೇ ದೇಶವು ಅವರ ಸ್ವಾಧೀನ ವಾಗಿದೆ.'

....“ಭಾರತೀಯರು ತಮ್ಮ ನಾನಾ ಪಾರತಂತ್ರ್ಯಗಳನ್ನು ನಿವಾರಣೆ ಮಾಡಿ ಕೊಳ್ಳುವ ಮುಂಚೆ ಸಾಂಪತ್ತಿಕ ದಾಸ್ಯತ್ವವನ್ನು ಮೊದಲು ತೆಗೆದುಹಾಕಬೇಕು....”

'ನಮಗೆ ಬೇಕಾಗುವ ಪ್ರತಿಯೊಂದು ಪದಾರ್ಥವನ್ನೂ ನಾವು ನಮ್ಮ ದೇಶ ದಲ್ಲಿಯೇ ಮಾಡಿಕೊಳ್ಳಬೇಕು. ಯಾವುದು ನಮ್ಮಲ್ಲುಂಟಾಗುತ್ತದೆಯೋ ಅಂಥ ಪರದೇಶದ ಯಾವ ಪದಾರ್ಥವನ್ನೂ ನಾವು ಕೊಂಡುಕೊಳ್ಳಬಾರದು. ಇದರಿಂದಲೇ ನಮ್ಮ ಭರತಖಂಡದ ಸಾಂಪತ್ತಿಕ ಶೋಚನೀಯ ಸ್ಥಿತಿಯು ನಿವಾರಣೆಯಾಗುವುದು.'

ಹೀಗೆ ಸ್ವಾವಲಂಬಿಯಾದ ರಾಷ್ಟ್ರನಿರ್ಮಾಣಕ್ಕೆ ಹರ್ಡೇಕರ್ ಮಂಜಪ್ಪನವರು ಕಳಕಳಿ ವ್ಯಕ್ತಪಡಿಸಿದರು. ನಮ್ಮ ದೇಶದ ಪ್ರಾಕೃತಿಕ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಸಂಪತ್ತಿನ ಮೂಲಗಳನ್ನು, ಸೆಲೆಗಳನ್ನು ವಿಸ್ತರಿಸಿಕೊಳ್ಳಬೇಕೆಂದು ಮಂಜಪ್ಪ ನವರು ತಮ್ಮ ಅನೇಕ ಸಂಪಾದಕೀಯಗಳಲ್ಲಿ ಪ್ರತಿಪಾದಿಸಿದರು. ಹೀಗೆ ಮಂಜಪ್ಪ ನವರು ಮಂಡಿಸಿದ ಆರ್ಥಿಕ ಚಿಂತನೆ ಇಂದಿಗೂ ಉಪಯುಕ್ತವಾಗಿದೆ, ಮಾರ್ಗದರ್ಶಿ ಯಾಗಿದೆ.

ಆರ್ಥಿಕ ಚಿಂತನೆಗೆ ಬದ್ಧವಾಗಿದ್ದ 'ಉದ್ಯೋಗ' ಪತ್ರಿಕೆ ನಿಂತ ಮೇಲೆ ಹರ್ಡೇಕರ ಮಂಜಪ್ಪನವರು 'ಶರಣ ಸಂದೇಶ' ಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆ ಅವರ ಸಾಮಾಜಿಕ ಚಿಂತನೆಗೆ ವೇದಿಕೆಯಾಯಿತು. ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ದಷ್ಟೇ ಸಾಮಾಜಿಕ ಸ್ವಾತಂತ್ರ್ಯ ಎಂಬುದನ್ನು ಮನಗಂಡ ಮಂಜಪ್ಪನವರು ಸಮಾಜ– ಜೀವನದ ಅಸಾಂಗತ್ಯಗಳನ್ನು, ವಿರೋಧಾಭಾಸಗಳನ್ನು, ಜಾತಿ ಮೂಢನಂಬಿಕೆಗಳಿಂದ ಆವೃತ್ತವಾಗಿದ್ದ ಲೋಕಮಾನಸವನ್ನು ಎಚ್ಚರಿಸಲು 'ಶರಣ ಸಂದೇಶ' ಪತ್ರಿಕೆಯನ್ನು ಉಪಯೋಗಿಸಿಕೊಂಡರು. ಶರಣರ ಚಿಂತನೆ, ಶರಣರು ಕಲ್ಪಿಸಿದ ಸರ್ವರೂ ಸಮಭಾವ ವೆಂಬ ಸಮಾಜದ ಪರಿಕಲ್ಪನೆಯಿಂದ ಮಂಜಪ್ಪನವರು ಪ್ರೇರಿತರಾಗಿ ಹೊಸಸಮಾಜ ವೊಂದರ ನಿರ್ಮಾಣಕ್ಕಾಗಿ ಕರೆಕೊಟ್ಟರು. ಈ ಬಗೆಗೆ ಅವರು ಬರೆದಿರುವ ಈ ಮಾತುಗಳು 'ಶರಣ ಸಂದೇಶ'ದ ಧ್ಯೇಯ ವಾಕ್ಯಗಳಾಗಿವೆ—'ಮಹಾನುಭಾವ ರಾದ ಬಸವಾದಿ ಶರಣಶ್ರೇಷ್ಠರು ಈ ಕರ್ನಾಟಕದಲ್ಲಿ ಶ್ರೇಷ್ಠತರವಾದ ಸಾಮಾಜಿಕ ಸುಧಾರಣೆಯನ್ನು ಮಾಡಿದ್ದಾರಷ್ಟೆ. ಅವರ ದಿವ್ಯತತ್ವಗಳು ಈ ಕಾಲದಲ್ಲಿ

ಪುನಃ ಪ್ರಸಾರವಾಗಿ, ವೀರಶೈವ ಸಮಾಜವೂ ಜಾಗೃತಗೊಂಡು ರಾಷ್ಟ್ರಕಾರ್ಯಕ್ಕೆ ಪೋಷಕವಾಗುವ ರೀತಿಯಲ್ಲಿ ನಡೆಯಬೇಕಾಗಿರುವುದು ಅತ್ಯಾವಶ್ಯಕವಾಗಿರುವುದರಿಂದ ಆ ಶರಣಶ್ರೇಷ್ಠರ ಉದಾತ್ತ ತತ್ವಗಳನ್ನು ಪ್ರಸಾರಗೊಳಿಸುವುದು ಈ 'ಶರಣ ಸಂದೇಶ'ದ ಮುಖ್ಯೋದ್ದೇಶವಾಗಿದೆ. 'ಈ ಪ್ರಕಾರ ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಪತ್ತಿಕ ಸುಧಾರಣೆಗಳ ಸಂಬಂಧವಾಗಿ ಪ್ರಯತ್ನಿಸುವುದು ಈ ಪತ್ರಿಕೆಯ ಉದ್ದೇಶ ವಾದರೂ ಸಾಮಾಜಿಕ ಸುಧಾರಣೆಯನ್ನೇ ಹೆಚ್ಚು ಪುಷ್ಟೀಕರಿಸಲಾಗುವುದು. ಈ ಉದ್ದೇಶಗಳಿಗಾಗಿ 'ಶರಣ ಸಂದೇಶ'ವನ್ನು ಮಂಜಪ್ಪನವರು ಉಪಯೋಗಿಸಿಕೊಂಡರು. ಮಂಜಪ್ಪನವರ ಸಾಮಾಜಿಕ ಕ್ರಾಂತಿಗೆ ಎರಡು ಆಯಾಮಗಳಿದ್ದು, ಒಂದು ತಮ್ಮದೇ ಆದ ವೀರಶೈವ ಸಮಾಜದಲ್ಲಿದ್ದ ಒಳಪಂಗಡಗಳನ್ನು ನಿರ್ಮೂಲಮಾಡುವುದಾಗಿತ್ತು. ಇನ್ನೊಂದು ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸುವುದಾಗಿತ್ತು. 'ವೀರಶೈವತತ್ವ ಪ್ರಚಾರಕ ಸಂಘ'ವನ್ನು ಸ್ಥಾಪಿಸಿ ಅದರ ಮೂಲಕ ಎಲ್ಲ ವೀರಶೈವರನ್ನು ಒಂದುಗೂಡಿಸುವ ಪ್ರಯತ್ನಮಾಡಿ, ಅದರಲ್ಲಿ ಮಂಜಪ್ಪನವರು ಆಗಿನ ಕಾಲಕ್ಕೆ ಸಾಕಷ್ಟು ಯಶಸ್ವಿಯಾದರು. ಇನ್ನು ಅಸ್ಪೃಶ್ಯತೆಯ ನಿವಾರಣೆಗಾಗಿ ಮಂಜಪ್ಪನವರು ಮಾಡಿದ ಕೆಲಸ ಮಹತ್ವವಾದುದು. ಹರಿಜನರೆಂದುಕರೆದ ಜನರನ್ನು ಮಂಜಪ್ಪ ನವರು ಆದಿಜನ ಎಂದು ಕರೆದರು. ಈ ಜನರ ಸುಧಾರಣೆಗಾಗಿ, ಅವರನ್ನೂ ಎಲ್ಲರೊಂದಿಗೆ ಒಂದಾಗಿ ಬಾಳುವಂತೆ ಮಾಡಲು ಆದಿಜನ ಸುಧಾರಣೆಯ ಕಾರ್ಯಕ್ರಮಗಳನ್ನು ರೂಪಿಸಿದರು. 'ಆದಿಜನ ಸುಧಾರಣೆ' ಎಂಬ ಪುಸ್ತಕವನ್ನು ಬರೆದು ಈ ದಲಿತರ ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚಿಂತಿಸಿದರು. ಹರ್ಡೇಕರ ಮಂಜಪ್ಪನವರ ಪ್ರಕಾರ ಈ ಆದಿಜನರ ಜೀವನ ಸುಧಾರಣೆಗಾಗಿ ಮಾಡಬೇಕಾದ ಕಾರ್ಯಗಳೆಂದರೆ ಅವರಿಗಿರುವ ಅಸ್ಪೃಶ್ಯತೆ ಎಂಬ ಶಾಪವನ್ನು ಮೊದಲು ತೊಡೆದು ಹಾಕಬೇಕು. ಬಾವಿಯ ನೀರು ಎಲ್ಲರಂತೆ ಅವರಿಗೂ ಲಭ್ಯವಾಗಬೇಕು. ಅವರಿಗಾಗಿಯೇ ಬೇರೆ ಬಾವಿಗಳಿರಬಾರದು. ಸ್ಕೂಲು, ದೇವಸ್ಥಾನ, ಸಭೆ-ಸಮಾರಂಭಗಳಿಗೂ ಅವರಿಗೆ ಮುಕ್ತ ಅವಕಾಶವಿರಬೇಕು. ಆದಿಜನ ಕೇರಿಗಳೆಂಬ ಪ್ರತ್ಯೇಕ ವಾಸಸ್ಥಾನಗಳಿರ ಬಾರದು. ಸಮಾಜದ ಇತರರೊಡನೆ ಸಮಾನವಾಗಿ ಬದುಕುವ, ವಾಸಿಸುವ ಸೌಲಭ್ಯವಿರಬೇಕು. ಅವರ ಶುಚಿತ್ವಕ್ಕಾಗಿ, ಆರೋಗ್ಯಕ್ಕಾಗಿ ವಿಶೇಷ ಕಾರ್ಯಕ್ರಮ ಗಳನ್ನು ರೂಪಿಸಿಕೊಡಬೇಕು. ಅವರ ವಿದ್ಯಾಭ್ಯಾಸಕ್ಕಾಗಿ ಶಿಷ್ಯವೃತ್ತಿ, ವಸತಿಗೃಹ, ಬಹುಮಾನಗಳ ವ್ಯವಸ್ಥೆ ಮಾಡಬೇಕು. ಅವರ ಆದಾಯದ ಮೂಲಗಳನ್ನು ಹೆಚ್ಚಿಸಲು ಅವಕಾಶಮಾಡಿಕೊಡಬೇಕು. ಹೀಗೆ ಹರಿಜನರ ಬದುಕಿನ ಸುಧಾರಣೆಗಾಗಿ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿಯೇ ಹರ್ಡೇಕರ ಮಂಜಪ್ಪನವರು ಗಂಭೀರವಾಗಿ ಚಿಂತಿಸಿದ್ದರು. ಮಾನವೀಯತೆಯೊಂದೇ ಅವರ ಲಕ್ಷ್ಯವಾಗಿತ್ತು. ಜಾತಿ-ಪಂಥಗಳ ಸಂಕೋಲೆಗಳನ್ನು ದಾಟಿ ಅಥವಾ ಮೀರಿದ ಸಮಾಜವೊಂದರ ನಿರ್ಮಿತಿಗಾಗಿ ದುಡಿದ ವಿಭೂತಿಪುರುಷರು ಮಂಜಪ್ಪ.

ಮಂಜಪ್ಪನವರು ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸಲು ಶ್ರಮಿಸಿದರು. ಹಿಂದೂಧರ್ಮದಲ್ಲಿನ ಎಲ್ಲ ದೋಷಗಳನ್ನೂ ಮೂಢನಂಬಿಕೆಗಳನ್ನೂ ಉಚ್ಚಾಟಿಸಿ ಎಲ್ಲರನ್ನು ಹಿಂದೂಧರ್ಮವೆಂಬ ಉದಾರ ಧರ್ಮದಡಿ ಪ್ರತಿಷ್ಠಾಪಿಸಲು ಶ್ರಮಿಸಿದರು. ಹಿಂದೂಧರ್ಮದ ನವೀಕರಣ, ಏಕೀಕರಣ, ಬಲಸಂವರ್ಧನೆಯ ಕನಸು ಕಂಡರು. ಹಿಂದೂಧರ್ಮದಲ್ಲಿ ಹಾಸುಹೊಕ್ಕಾಗಿರುವ ಜಾತಿ, ವರ್ಣಗಳನ್ನು ಬುಡಸಹಿತ ಕಿತ್ತೊಗೆದು ಸಮಾನತೆ ಮತ್ತು ಸೋದರತೆಯ ಆಧಾರದಮೇಲೆ ಮಾನವಕುಲವನ್ನು ಒಂದು ಘಟಕವನ್ನಾಗಿ ನೋಡಲು ಮಂಜಪ್ಪನವರು ಶ್ರಮಿಸಿದರು. ಅವರು ತಮ್ಮ 'ಭಾರತೀಯರ ದೇಶಭಕ್ತಿ' ಎಂಬ ಗ್ರಂಥದಲ್ಲಿ ಹಿಂದೂ ಸಮಾಜದ ಸಂಘಟನೆಗಾಗಿ ಮತ್ತು ಸುಧಾರಣೆಗಾಗಿ ಮಹತ್ವದ ಸಲಹೆಗಳನ್ನು ನೀಡಿದ್ದಾರೆ—"ಹಿಂದೂಗಳಲ್ಲಿರುವ ಬ್ರಾಹ್ಮಣಾದಿ ಚಾತುರ್ವರ್ಣಗಳು ಗುಣ ಕರ್ಮ ವಿಶಿಷ್ಟವಾದವುಗಳೇ ವಿನಾ ಅವು ಜನ್ಮದಿಂದ ಪ್ರಾಪ್ತವಾಗತಕ್ಕವುಗಳಲ್ಲ. ಆದಕಾರಣ ಜನ್ಮದಿಂದಲೇ ವರ್ಣವನ್ನು ಕಲ್ಪಿಸುತ್ತಿರುವ ಈಗಿನ ಅಧರ್ಮವಾದ ಘಾತಕ ಪದ್ಧತಿಯನ್ನು ನಿವಾರಣೆ ಮಾಡಬೇಕು. ಈ ದುಷ್ಟಪದ್ಧತಿಯಿಂದ ವ್ಯಕ್ತಿಯ ಮತ್ತು ವ್ಯಕ್ತಿಸಮೂಹದ ಮಾನಸಿಕ, ಬೌದ್ಧಿಕ, ಸಾಂಪತ್ತಿಕ ಮತ್ತು ಆತ್ಮೀಯ ಉನ್ನತಿಗಳಿಗೆ ಪ್ರತಿಬಂಧವುಂಟಾಗಿದೆ. ಇದರಿಂದಲೇ ಹಿಂದೂ ಸಮಾಜದಲ್ಲಿ ನಾನಾ ಭಿನ್ನಭೇದಗಳೂ ಸಾಮಾಜಿಕ ಹಿಂಸೆಗಳೂ, ಮತ ದ್ವೇಷಾಸೂಯೆಗಳೂ ಉಂಟಾಗಿವೆ....

"ತಾವು ಉತ್ತಮ ವರ್ಣದವರೆಂದು ಈಗ ಅನೇಕರು ಶೂದ್ರರನ್ನು ಮುಟ್ಟುವು ದಿಲ್ಲವಷ್ಟೆ. ಈ ಅಧರ್ಮಾಚರಣೆಯು ನಿವಾರಣೆಯಾಗಬೇಕು.....ಮನುಷ್ಯರನ್ನು ಮುಟ್ಟಬಾರದೆಂಬ ಈ ಭಯಂಕರವಾದ ಪಾಪಾಚರಣೆಯನ್ನು ಪ್ರಪಂಚದ ಯಾವ ಧರ್ಮದಲ್ಲಿಯೂ ಹೇಳಿಲ್ಲ. ಸರ್ವಶ್ರೇಷ್ಠವಾದ ಹಿಂದೂಧರ್ಮದಲ್ಲಿ ಇಂಥ ಹೀನಾಚರಣೆಯು ಹೇಳಲ್ಪಟ್ಟಿದೆ ಎಂಬುದು ಈ ಧರ್ಮಕ್ಕೆ ಕಳಂಕವನ್ನುಂಟು ಮಾಡಿದಂತಲ್ಲವೆ?

ಹಿಂದೂಗಳೆಲ್ಲ ಒಂದೇ ಧರ್ಮದ ಅನುಯಾಯಿಗಳಾಗಿರುವುದರಿಂದ ಅವರಲ್ಲಿ ಪರಸ್ಪರ ದೇಹಸಂಬಂಧವನ್ನು ಬೆಳೆಸಲು ಅವಕಾಶವಿರಬೇಕು. ಹಿಂದೂಗಳಲ್ಲಿ ಯಾವ ಮತಪಂಗಡಗಳಲ್ಲಿಯಾದರೂ ಪರಸ್ಪರ ವಿವಾಹ ಜರುಗಲು ಪ್ರತಿಬಂಧವಿರಬಾರದು. ಈ ಸ್ಥಿತಿಯುಂಟಾಗಲು ಆರಂಭದಲ್ಲಿ ಒಂದೊಂದು ಮತದಲ್ಲಿನ ಒಳಬೇಧಗಳನ್ನೆಲ್ಲ ತೆಗೆದುಹಾಕಲು ಮೊದಲು ಪ್ರಯತ್ನಿಸಬೇಕು.

'ಯಾವ ಧರ್ಮದವನಾದರೂ ಹಿಂದೂ ಸಮಾಜದಲ್ಲಿ ಸೇರಿಸಿಕೊಳ್ಳಬೇಕು'.

'ವಿಧವಾವಿವಾಹಗಳು ಶಾಸ್ತ್ರಸಮ್ಮತವಾದವುಗಳೆಂದು ಆಚರಣೆಯಲ್ಲಿ ಬರಬೇಕು. ಬಾಲ್ಯ ವಿವಾಹವನ್ನು ಅನಾಚಾರವೆಂದು ತಿಳಿದು ನಿಷೇಧಿಸಬೇಕು'.

'ಸ್ತ್ರೀಯರು ಪುರುಷರಂತೆಯೇ ಸಮಾನ ಸ್ವಾತಂತ್ರ್ಯವುಳ್ಳವರಾಗಬೇಕು. ಅವರ ಅಭಿಪ್ರಾಯಗಳಿಗೂ ಸಮಾನ ಗೌರವವಿರಬೇಕು'.

'ಹಿಂಸೆಯನ್ನು ವರ್ಜಿಸಿ ಅಹಿಂಸೆ ಹಿಂದೂಧರ್ಮದ ಮೂಲತತ್ವವಾಗಬೇಕು. ಮದ್ಯ, ಮಾಂಸಗಳನ್ನು ವರ್ಜಿಸಬೇಕು'.

ಈ ಪ್ರಕಾರವಾಗಿ ಮಂಜಪ್ಪನವರು ಇಡೀ ಮನುಕುಲವನ್ನು ಒಂದೆಂದು ಪರಿಭಾವಿಸಿ 'ವಸುದೇವ ಕುಟುಂಬಕಂ ಹಾಗೂ ಸರ್ವೇಜನಾಃ ಸುಖಿನೋ ಭವಂತು' ಎಂಬ ಧ್ಯೇಯವಾಕ್ಯಗಳನ್ನು ಸಾಮಾಜಿಕ ಬದುಕಿನಲ್ಲಿ ಸಾಕಾರಗೊಳಿಸಲು ಪ್ರಯತ್ನಿಸಿದರು. ಈ ದೃಷ್ಟಿಯಿಂದ ನೋಡಿದರೆ ಹರ್ಡೇಕರ್ ಮಂಜಪ್ಪನವರು ಕರ್ನಾಟಕದ ಸುಧಾರಕ, ಸರ್ವೋತ್ಥಾನ ಯುಗದ ಹರಿಕಾರ, ಕರ್ನಾಟಕದ ಗಾಂಧಿಯಷ್ಟೇ ಅಲ್ಲ ರಾಜಾರಾಂ ಮೋಹನ್‌ರಾಯ್ ಕೂಡ.

ಈ ಹಿಂದೆಯೇ ಸ್ಪಷ್ಟಪಡಿಸಿರುವಂತೆ ಮಂಜಪ್ಪನವರು ಕಠೋರ ಯಥಾರ್ಥವಾದಿಗಳು. ವಾಸ್ತವತೆಯ ಸಂಪೂರ್ಣ ಅರಿವುಳ್ಳವರಾಗಿದ್ದರು. ಆದರ್ಶಗಳನ್ನು ಸುಧಾರಣೆಯ ಮಾತುಗಳನ್ನು ಆಡುವಾಗ ಇವನ್ನು ಕಾರ್ಯಗತಗೊಳಿಸುವಾಗ ಎದುರಾಗುವ ದ್ವಂದ್ವಗಳ ಅರಿವೂ ಅವರಿಗಿತ್ತು. ಆದ್ದರಿಂದಲೇ ಮಾತಿಗೂ ಕೃತಿಗೂ ಸಮನ್ವಯವಿರಬೇಕೆಂದು ಒತ್ತಿ ಹೇಳಿದರು. ಹೇಳುವವರು ತಮ್ಮ ಕಾರ್ಯಾಚರಣೆಯ ಮೂಲಕ ಆದರ್ಶವನ್ನು ಮುಂದಿಡಬೇಕೆಂದು ಹೇಳಿದರು. ಈ ಕುರಿತು ಮಂಜಪ್ಪನವರು ಈ ರೀತಿ ಎಚ್ಚರಿಸಿದ್ದಾರೆ—'ದೇಶಸೇವಕರು ಈ ಸಮಾಜ ಸುಧಾರಣೆಯ ವಿಷಯದಲ್ಲಿ ತಮ್ಮ ಆಚರಣೆಯ ಮೂಲಕವಾಗಿಯೇ ಜನಗಳಿಗೆ ಬೋಧಿಸುತ್ತ ಹಿಂದೂ ಸಮಾಜವು ಸುಸ್ಥಿತಿಯನ್ನು ಹೊಂದುವಂತೆ ಮಾಡಬೇಕು. ಇದೇ ಸಾಮಾಜಿಕ ಸೇವೆ.

ಹರ್ಡೇಕರ್ ಮಂಜಪ್ಪನವರು ಮಹಾತ್ಮಾ ಗಾಂಧೀಜಿಯವರಲ್ಲಿ ಅನನ್ಯ ಭಕ್ತಿ–ಗೌರವಗಳನ್ನು ಇಟ್ಟುಕೊಂಡಿದ್ದರು. ಅವರನ್ನು ಯುಗಪುರುಷನೆಂದು ಕರೆದರು. ಅಸಹಕಾರ ಚಳುವಳಿಯಲ್ಲಿ ಗಾಂಧೀಜಿಯವರನ್ನು ಬಂಧಿಸಿ ಜೈಲುವಾಸಕ್ಕೆ ಕಳಿಸಿದಾಗ ಮಂಜಪ್ಪನವರು ತೀವ್ರ ದುಃಖಿತರಾದರು. ಅವರು ಬಂಧಿತರಾದ 1922ರ ಮಾರ್ಚ್ 18ನೇ ತಾರೀಖನ್ನು ಗಾಂಧೀಶಕೆಯ ಆರಂಭವೆಂದು ಕರೆದರು. ತಮ್ಮ ಪತ್ರವ್ಯವಹಾರಗಳಲ್ಲಿ ಇದನ್ನು ನಮೂದಿಸಲಾರಂಭಿಸಿದರು. ಗಾಂಧೀಜಿಯವರೊಡನೆ ವಾಸಮಾಡುವ ಸದವಕಾಶವೂ ಮಂಜಪ್ಪನವರಿಗೆ ಲಭಿಸಿತ್ತು. ಇದನ್ನು ಅವರು ತಮ್ಮ ಜೀವನದ ಪುಣ್ಯವೆಂದು ಭಾವಿಸಿ ಹೀಗೆ ಬರೆದಿದ್ದಾರೆ—"ಗಾಂಧೀಜಿಯವರಲ್ಲಿ ವಾಸವಾಗಿದ್ದುದು ನನ್ನ ಧನ್ಯತೆಯೆಂದು ನನಗೆ ಬಹು ಸಂತೋಷ. ನಾನೆಂತಹ ಕ್ಷುದ್ರಮನುಷ್ಯನು? ನನ್ನ ಸ್ಥಳವೆಲ್ಲಿ? ನನ್ನ ವಿದ್ಯೆ ಎಷ್ಟು? ಜಗತ್ತಿಗೆ ಪೂಜ್ಯನಾಗಿರುವ ಆ ಮಹಾತ್ಮನ ಹತ್ತಿರ ಇರತಕ್ಕ ಪ್ರಸಂಗ ನನಗೆ ಸಂಭವಿಸಿದುದು ಎಷ್ಟು ಹೆಚ್ಚಿನದೆಂದೇ ನನಗೆ ಅಲ್ಲಿ ಆಗಾಗ್ಗೆ ಅನ್ನಿಸುತ್ತಿತ್ತು."

ಗಾಂಧೀಜಿಯವರು ಜೈಲುವಾಸದಲ್ಲಿದ್ದಾಗ ಮಂಜಪ್ಪನವರು ಅವರ ಸತ್ಯಾಗ್ರಹ ತತ್ವಗಳ ಪ್ರಸಾರಕ್ಕಾಗಿ ಊರೂರು ಅಲೆದು 'ಸತ್ಯಾಗ್ರಹ ಸಮಾಜ'ವನ್ನು ಸ್ಥಾಪಿಸಿದರು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ, ಅಸ್ವಾದ, ಅಭಯ, ಸ್ವದೇಶಿ, ಅಸ್ಪೃಶ್ಯತಾ ನಿವಾರಣೆ, ಖಾದಿ ವ್ರತಗಳಲ್ಲಿ ನಂಬಿಕೆಯಿಟ್ಟವರು ಈ ಸತ್ಯಾಗ್ರಹವ್ರತಿಗಳೆಂದು ಸಾರಿದರು. ಈ ಸಮಾಜಕ್ಕೆ ಜಾತಿ–ಧರ್ಮಗಳ ಕಟ್ಟಳೆಯಿರಲಿಲ್ಲ. ಗಾಂಧೀ ಸಿದ್ಧಾಂತಗಳಲ್ಲಿ ನಂಬಿಕೆಯುಳ್ಳವರೆಲ್ಲ ಇದರ ಸದಸ್ಯರಾಗಬಹುದೆಂದು ಕರೆಕೊಟ್ಟರು. ಗಾಂಧೀಜಿಯವರ ಈ ಸತ್ಯಾಗ್ರಹತತ್ವಗಳನ್ನು ಧರ್ಮತತ್ವಗಳೆಂದು ಕರೆದು 'ಮಹಾತ್ಮಗಾಂಧೀ ಪ್ರಣೀತ ಸತ್ಯಾಗ್ರಹಧರ್ಮ' ಎಂಬ ಪುಸ್ತಕವನ್ನು ರಚಿಸಿದರು. ಗಾಂಧೀಜಿಯವರ 54ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ವಿಧಿವತ್ತಾಗಿ ಸ್ಥಾಪಿಸಿದ ಈ ಸತ್ಯಾಗ್ರಹ ಸಮಾಜಕ್ಕೆ 'ಪೃಥ್ವಿಯ ನಕ್ಷೆಯ ಮೇಲೆ ಕೈರಾಟಿಯ ಚಿತ್ರ'ವಿರುವ ಒಂದು ಲಾಂಛನವನ್ನೂ ನೀಡಿದರು. ಹುಬ್ಬಳ್ಳಿಯಲ್ಲಿ ಸ್ಥಾಪಿತವಾದ ಈ ಸತ್ಯಾಗ್ರಹ ಸಮಾಜದ ಶಾಖೆಗಳನ್ನು ಬೇರೆಡೆಯಲ್ಲೂ ಸ್ಥಾಪಿಸುವುದರಲ್ಲಿ ಯಶಸ್ವಿಯಾದರು.

ಆಶ್ರಮದ ಜೀವನದ ಕಟ್ಟುಪಾಡುಗಳು, ಶ್ರಮಾಧಾರಿತ ಜೀವನ, ಸ್ವಾವಲಂಬನೆ, ಉದಾತ್ತ ಮಾನವೀಯ ಮೌಲ್ಯಗಳ ಆತ್ಮಸಾಕ್ಷಾತ್ಕಾರ, ಸಮಾನತೆ— ಇವೇ ಮುಂತಾದ ಶಿಸ್ತಿನ ಜೀವನ ಅಂದಿನ ಯುವಜನಾಂಗಕ್ಕೆ ಪ್ರಿಯವಾಗಲಿಲ್ಲ. ಈ ಎಲ್ಲ ಮೌಲ್ಯಗಳ ಬಗೆಗೆ ಆಸಕ್ತಿಯುಳ್ಳ ಯುವಜನಾಂಗವನ್ನು ತಾವು ಕಾಣದಿದ್ದುದರ ಬಗೆಗೆ ಮಂಜಪ್ಪನವರು ತೀವ್ರ ಖೇದ ವ್ಯಕ್ತಪಡಿಸಿದ್ದಾರೆ. ಅಂದಿನ ದಿನಗಳಲ್ಲೇ ನಮ್ಮ ಯುವಪೀಳಿಗೆಯ ಮನಸ್ಸು ಯಾವ ರೀತಿ ಕೆಲಸ ಮಾಡುತ್ತಿತ್ತು ಎಂಬುದನ್ನು ಗಮನಿಸಿದರೆ ದುಃಖವಾಗುತ್ತದೆ. ಇಷ್ಟಾದರೂ ಮಂಜಪ್ಪನವರು ತಮ್ಮ ಕಾಯಕವನ್ನು ಮಾತ್ರ ಬಿಡಲಿಲ್ಲ. ಜನರ ಆರೋಪ–ನಿಂದನೆಗಳನ್ನು ಲೆಕ್ಕಿಸದೆ ಗಾಂಧೀಜಿಯವರ ತತ್ವಗಳನ್ನು ಹಳ್ಳಿ–ಹಳ್ಳಿಗೆ ತೆಗೆದುಕೊಂಡು ಹೋಗಿ ಪ್ರಚಾರ–ಪ್ರಸಾರ ಮಾಡಿದ ಹೆಗ್ಗಳಿಕೆ ಮಂಜಪ್ಪನವರದು. ಒಮ್ಮೆ ಧಾರವಾಡ ಜಿಲ್ಲಾ ರಾಷ್ಟ್ರೀಯ ಸಭೆಯ ಅಧ್ಯಕ್ಷ ಪೀಠದಿಂದ ಮಾತನಾಡುತ್ತ (24–11–1923) ಗಾಂಧೀ ತತ್ವಗಳ ಆಧಾರದಮೇಲೆ ಸಮಾಜದ ನಿರ್ಮಾಣವಾಗಬೇಕು ಎಂದರು. ಅಂತೆಯೇ ಬ್ರಾಹ್ಮಣ ಮತ್ತು ಜಂಗಮರ ಆರಾಧನೆಗಿಂತ ಅಸ್ಪೃಶ್ಯರ ಆರಾಧನೆಯಾಗಬೇಕು. ಅಸ್ಪೃಶ್ಯರನ್ನು ಸ್ಪೃಶ್ಯರನ್ನಾಗಿಸುವ ಕಾರ್ಯ ತುರ್ತು ಆಗಬೇಕು ಎಂದು ಕಳಕಳಿಯ ಮನವಿಮಾಡಿಕೊಂಡರು. ಮಂಜಪ್ಪನವರ ಈ ಕ್ರಾಂತಿಕಾರಿ ವಿಚಾರಗಳು ಅಂದಿನ ಜನರ ಮನಸ್ಸನ್ನು ಆಕರ್ಷಿಸಿದವು.

1924 ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನಕ್ಕೆ ತಮ್ಮ ಆರಾಧ್ಯದೈವರಾದ ಮಹಾತ್ಮಾಜಿಯವರು ಅಧ್ಯಕ್ಷರಾದದ್ದು ಮಂಜಪ್ಪನವರಿಗೆ ತುಂಬಾ ಸಂತೋಷವಾಗಿತ್ತು. ಮಂಜಪ್ಪನವರ ಈ ಸಂತೋಷಕ್ಕೆ ಎಣೆಯೇ ಇರಲಿಲ್ಲ. ವೀರಶೈವರನ್ನು

ರಾಷ್ಟ್ರೀಯ ಪ್ರವಾಹದೊಂದಿಗೆ ಕೊಂಡೊಯ್ಯಬೇಕೆಂಬುದು ಮಂಜಪ್ಪನವರ ಮಹದಾಕಾಂಕ್ಷೆಯಾಗಿತ್ತು. ಹೀಗಾಗಿ ವೀರಶೈವ ಪರಿಷತ್ತಿಗೆ ಗಾಂಧೀಜಿ ಮತ್ತು ಸರೋಜಿನಿ ನಾಯಿಡುಯವರನ್ನು ಆಹ್ವಾನಿಸಿ ಅವರ ಸಂದೇಶದ ಮೂಲಕ ರಾಷ್ಟ್ರ ಪ್ರಜ್ಞೆ ಜಾಗೃತಗೊಳ್ಳುವಂತೆ ಮಾಡಿದರು. ಅಂತೆಯೇ ರಾಷ್ಟ್ರಮಟ್ಟದ ನಾಯಕರಿಗೆ ಬಸವೇಶ್ವರರ ಸಂದೇಶವೂ ತಲುಪುವಂತೆ ನೋಡಿಕೊಂಡರು. ತಾವು ಕರೆದುಕೊಂಡು ಹೋಗಿದ್ದ ಸ್ವಯಂಸೇವಕ ದಳಕ್ಕೆ 'ಬಸವೇಶ್ವರ ಸೇವಾದಳ' ಎಂದೇ ನಾಮಕರಣ ಮಾಡಿದರು. 'ಬಸವ ಸಂದೇಶ' ಪ್ರಸಾರಕ್ಕಾಗಿ ಹಿಂದೀ ಮತ್ತು ಮರಾಠಿ ಭಾಷೆಗಳಲ್ಲಿ 'ಸತ್ಯಾಗ್ರಹಿ ಬಸವೇಶ್ವರ' ಎಂಬ ಪುಸ್ತಕ ಬರೆಸಿ ವಿತರಿಸಿದರು. ಹೀಗೆ ಬಸವ ಸಂದೇಶವಾಹಕರಾಗಿ ಮಂಜಪ್ಪನವರು ಮಾಡಿದ ಕೆಲಸ ಅನನ್ಯವಾದುದು. ಈ ಸತ್ಯಾಗ್ರಹ ಸಮಾಜದ ಮೂಲಕ ಬಸವ ಸಮಾಜದ ರಚನೆಗೆ ಶ್ರಮಿಸಿದ ಮಂಜಪ್ಪನವರ ಕಾರ್ಯದಕ್ಷತೆಯ ಬಗೆಗೆ ಶಂ. ಭಾ. ಜೋಶಿಯವರು ಹೇಳಿರುವ ಮಾತುಗಳು– 'ಜಾತಿಮತ ಪಂಥಗಳನ್ನೆಲ್ಲ ಮೀರಿ, ಮಾನವ್ಯದ ಶ್ರೇಷ್ಠಮಟ್ಟದ ಮೇಲೆ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದ ಮಂಜಣ್ಣನವರು ನಮ್ಮ ನಾಡಿನ ಅಜರಾಮರ ವ್ಯಕ್ತಿಗಳಲ್ಲೊಬ್ಬರೆಂದು ನನ್ನ ಮತ............' 'ಮಂಜಣ್ಣನವರು ಹುಟ್ಟಿದೊಡನೆ ಸೂರ್ಯಮಂಡಲಕ್ಕೆ ಹಾರಿದ ಹನುಮಂತನಂತೆ, ತಮ್ಮ ಸಾರ್ವಜನಿಕ ಕಾಯಕ ಆರಂಭದ ದೆಸೆಯಲ್ಲಿಯೇ ಒಮ್ಮೆಲೇ ಉದಾತ್ತ, ದಿವ್ಯವಾದ ಮಹಾಕಾರ್ಯಕ್ಕೆ ಕೈಯಿಕ್ಕಿದರು. ಅವರ ಆ ಉಗ್ರತಪಸ್ಸಿಗೆ ಕಂನಾಡಿಗರೆಲ್ಲರೂ ಬೆರಗುಗೊಂಡು ಅವರತ್ತ ಆಕರ್ಷಿತರಾದರು. ಆದರೆ ರೂಢಿಮೂಲರಿಂದಲೂ, ಸಂಪ್ರದಾಯ ಶರಣರಿಂದಲೂ ತುಂಬಿದ ಈ ಸಮಾಜವು ಅವರತ್ತ ಬರಿ ಬೆರಗುಗೊಂಡು ನೋಡುತ್ತಿದ್ದಿತಲ್ಲದೆ ಬಿಚ್ಚುಮನಸ್ಸಿನಿಂದ ಅವರಿಗೆ ನೆರವನ್ನು ಕೊಡಲಿಲ್ಲ. ಅವರ ಮಹಾನ್ ವ್ಯಕ್ತಿತ್ವಕ್ಕೆ, ಕ್ರಿಯಾಶೀಲತೆಗೆ, ಕರ್ತೃತ್ವ ಶಕ್ತಿಗೆ ಗತಿಕೊಡುವಂಥ ಜನ ಲಭ್ಯವಾಗಿದ್ದಿದ್ದರೆ ಕರ್ನಾಟಕ ಹಾಗೂ ಭಾರತದ ಸ್ವರೂಪವೇ ಬೇರೆಯಾಗಿರುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಹರ್ಡೇಕರ್ ಮಂಜಪ್ಪನರು ಸಂಪೂರ್ಣ ಪರಿವರ್ತನೆಗಾಗಿ ದುಡಿದವರು. ಆರೋಗ್ಯಪೂರ್ಣ ಸಮಾಜಕ್ಕೆ ಶಿಕ್ಷಣವನ್ನು ಅನಿವಾರ್ಯವೆಂದು ಪರಿಭಾವಿಸಿದವರು. ಸ್ತ್ರೀ ಶಿಕ್ಷಣ ದುರ್ಲಭವಾಗಿದ್ದ ಆಂದಿನ ದಿನಗಳಲ್ಲಿ ಸ್ತ್ರೀಯರಿಗೆ ಶಿಕ್ಷಣವನ್ನು ಪ್ರಬಲವಾಗಿ ಪ್ರತಿಪಾದಿಸಿದರು. 'ಸ್ತ್ರೀನೀತಿ ಸಂಗ್ರಹ' ಎಂಬ ಪುಸ್ತಕ ಬರೆದು ಅದರ ಮುನ್ನುಡಿಯಲ್ಲಿ' ಸ್ತ್ರೀಯರೇ ಜನಾಂಗದ ಜನನಿಯರು, ಅವರು ನೀತಿವಂತರಾಗಿದ್ದರೇನೆ ಜನಾಂಗವು ಸುಖ–ಶಾಂತಿಗಳಿಂದ ಜೀವಿಸುವುದು. ಆದಕಾರಣ ಸ್ತ್ರೀಯರಿಗೆ ವಿದ್ಯೆ–ಬುದ್ಧಿಗಳನ್ನು ಕಲಿಸಿ ಅವರು ನೀತಿಪರರಾಗುವಂತೆ ಮಾಡುವುದು ಜನಾಂಗದ ಸುಖಾಪೇಕ್ಷಿಗಳ ಮುಖ್ಯ ಕೆಲಸವಾಗಿದೆ. ಆದರೆ ಭಾರತೀಯರಾದ ನಾವು ಇತ್ತಿತ್ತಲಾಗಿ, ಆನೇಕ ಶತಮಾನಗಳಿಂದ ಸ್ತ್ರೀಯರು ಬಹು ಕೀಳೆಂತಲೂ, ಅವರಿಗೆ

ವಿದ್ಯೆ ಬುದ್ಧಿಗಳೇನೂ ಬೇಕಾಗಿಲ್ಲವೆಂತಲೂ ಅವರು ನಮ್ಮ ಸೇವೆಗಾಗಿಯೇ ಇದ್ದಾರೆಂತಲೂ ತಪ್ಪು ತಿಳುವಳಿಕೆಯುಳ್ಳವರಾಗಿ ಸ್ತ್ರೀಯರನ್ನು ಸೆರೆಯಾಳುಗಳಿಗಿಂತಲೂ ಕಡೆಯಾಗಿ ಕಾಣುತ್ತ ಬಂದಿದ್ದೇವೆ. ರಾಷ್ಟ್ರವೆಂಬ ರಥಕ್ಕೆ ಸ್ತ್ರೀಪುರುಷರೇ ಎರಡು ಚಕ್ರಗಳು. ಹೀಗೆ ಸ್ತ್ರೀ–ಶೋಷಣೆಯನ್ನು ಪ್ರಖರವಾಗಿ ವಿರೋಧಿಸಿದ ಮಂಜಪ್ಪನವರು ಸ್ತ್ರೀಯರನ್ನು ಪುರುಷಪ್ರಧಾನ ಸಮಾಜದಲ್ಲಿ ಆತ್ಮಾಭಿಮಾನ, ಆತ್ಮಗೌರವದಿಂದ ಬದುಕಲು ಪ್ರೇರಣೆಯನ್ನು ನೀಡಿದರು. ಹೆಣ್ಣು ಮಕ್ಕಳ ಜಾಗೃತಿಗೆ 'ಅಕ್ಕನ ಹುಣ್ಣಿಮೆ'ಗಳನ್ನು ಆಚರಿಸುವುದರ ಮೂಲಕ ಹೊಸ ಆಯಾಮವನ್ನು ಕೊಟ್ಟರು.

ಸ್ತ್ರೀ ಜಾಗೃತಿಗೆಂತೋ ಅಂತೆಯೇ ಮಂಜಪ್ಪನವರು ಮಕ್ಕಳ ಮನೋವಿಕಾಸಕ್ಕೂ ಮಹತ್ವ ನೀಡಿದರು. ಮಕ್ಕಳನ್ನು ಭವಿಷ್ಯದ ಪ್ರಜೆಗಳೆಂದು ಭಾವಿಸಿದ ಅವರು ಮಕ್ಕಳ ಸಾಹಿತ್ಯಮಾಲೆಯನ್ನು ಆರಂಭಿಸಿ ಅನೇಕ ಮಕ್ಕಳ ಪುಸ್ತಕಗಳನ್ನು ಬರೆದರು. ಆ ಮೂಲಕ ಮಕ್ಕಳ ಮನೋಸ್ವಾಸ್ಥ್ಯವನ್ನು ಪೋಷಿಸಿದರು. ಪ್ರಾಥಮಿಕ ಶಾಲೆಯ ಮಕ್ಕಳಿಗೆ ವೈಜ್ಞಾನಿಕ ವಿಷಯಗಳ ಸಚಿತ್ರ ಪುಸ್ತಕಗಳನ್ನು ಪ್ರಕಟಿಸಿದರು.

ಹರ್ಡೇಕರ ಮಂಜಪ್ಪನವರು ಗುಣಗ್ರಾಹಿಗಳು, ಪುಸ್ತಕ ಪ್ರೇಮಿಗಳು. ಅದರಲ್ಲೂ ವೀರಶೈವ ಸಾಹಿತ್ಯದ ಬಗೆಗೆ ಅಪಾರ ಪ್ರೀತಿ–ಅಭಿಮಾನಗಳನ್ನು ಇಟ್ಟುಕೊಂಡಿದ್ದರು. ಶ್ರೀ ಹಳಕಟ್ಟಿಯವರು ಸಂಗ್ರಹಿಸಿದ ವಚನಗಳು ಹಣದ ಕೊರತೆಯಿಂದಾಗಿ ಪ್ರಕಟವಾಗದೆ ಇದ್ದಾಗ, ಇದು ನಾಡಿಗೆ ಆಗಲೇಬೇಕಾದ ಕೆಲಸವೆಂದು ಭಾವಿಸಿದ ಮಂಜಪ್ಪನವರು 15 ದಿನಗಳ ಕಾಲ ವಿವಿಧ ಊರುಗಳಿಗೆ ಹೋಗಿ 770 ರೂ.ಗಳನ್ನು ಸಂಗ್ರಹಿಸಿ ಅವರಿಗೆ ಸಮರ್ಪಿಸಿ ಪ್ರಕಟಣೆಗೆ ನೆರವಾದ ರೀತಿ ಅನನ್ಯವಾದುದು.

ಕನ್ನಡ ನಾಡಿನಲ್ಲಿ ಕನ್ನಡ ತಲೆ ಎತ್ತುವ ಬಗೆಗೆ ಮಂಜಪ್ಪನವರು ಚಿಂತಿಸಿದರು. ಹೈದರಾಬಾದ್ ಸಂಸ್ಥಾನದಲ್ಲಿ ಕನ್ನಡಕ್ಕೆ ಒದಗಿದ್ದ ದುರವಸ್ಥೆಯನ್ನು ಕಂಡು ಆ ಭಾಗಗಳಲ್ಲಿ ಕನ್ನಡ ಡಿಂಡಿಮ ಮೊಳಗಿಸಲು ಒಂದು ಮುದ್ರಣಾಲಯವನ್ನು ಸ್ಥಾಪಿಸಿದರು.

ಕನ್ನಡ ಸಾಹಿತ್ಯದ ಕಂಪನ್ನು ಕನ್ನಡೇತರರಿಗೆ ಪರಿಚಯಿಸಲು ಮಂಜಪ್ಪನವರು ವಹಿಸಿದ ಆಸ್ಥೆ ಅನುಕರಣೀಯ. ಬೆಳಗಾವಿಗೆ ಗಾಂಧೀಜಿಯವರು ಬಂದಿದ್ದಾಗ ಬಸವಣ್ಣನವರ ಬಗ್ಗೆ ಮಾಹಿತಿ ನೀಡಿದ ಹೆಗ್ಗಳಿಕೆ ಇವರದು. 'ವಚನಕಾರರ ಸಮಾಜ ರಚನೆ' ಎಂಬ ತಮ್ಮ ಕೃತಿಯನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿದರು. 'ಸತ್ಯಾಗ್ರಹಿ ಬಸವೇಶ್ವರ' ಎಂಬ ಕೃತಿಯನ್ನು ಮರಾಠಿ ಹಾಗೂ ಹಿಂದಿಯಲ್ಲಿ ಬರೆಸಿದರು. ವಚನ ಸಾಹಿತ್ಯದಿಂದ ತೀವ್ರವಾಗಿ ಪ್ರಭಾವಿತರಾಗಿದ್ದ ಮಂಜಪ್ಪನವರು ವಚನ ದಾಸೋಹವನ್ನು ವಿಶ್ವದ ಸಮಸ್ತ ಬಂಧುಗಳಿಗೆ ಉಣಿಸುವ ಕೈಂಕರ್ಯವನ್ನು ವ್ರತವನ್ನಾಗಿ ಸ್ವೀಕರಿಸಿದರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ಶತಮಾನದ ಮೂವತ್ತರ ದಶಕದಲ್ಲಿಯೇ ಹರ್ಡೇಕರ್ ಮಂಜಪ್ಪ ವಿಚಾರಕ್ರಾಂತಿಗೆ ಭದ್ರವಾದ ಬುನಾದಿ ಹಾಕಿದರು. ವ್ಯಕ್ತಿ ಮತ್ತು ಸಮಾಜದ ಸರ್ವತೋಮುಖ ಪ್ರಗತಿಗಾಗಿ ನಾನಾ ವಿಚಾರಗಳನ್ನು ಕುರಿತು ಅಸಂಖ್ಯ ಗ್ರಂಥಗಳನ್ನು ಬರೆದರು. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಅವರವರ ಮಾನಸಿಕ ಸ್ತರಕ್ಕನುಗುಣವಾದ ಸಾಹಿತ್ಯ ರಚಿಸಿದರು. ಬೇರೆ ಭಾಷೆಗಳಲ್ಲಿನ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಸಿಕೊಟ್ಟರು. ಅವರ ಎಲ್ಲ ರಚನೆಗಳ ಹಿನ್ನೆಲೆಯಲ್ಲಿ ಮಂಜಪ್ಪನವರ ಅಧ್ಯಯನ, ಚಿಂತನ–ಮಂಥನ, ಅನುಭವ, ಸ್ವಸ್ಥವಾದ ಮನಸ್ಸು ಮತ್ತು ಶುಭ್ರವಾದ ಅಂತಃಕರಣ ಕೆಲಸಮಾಡಿರುವುದನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಅಧ್ಯಾತ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅವರು ಬರೆದಿರುವ ಎಲ್ಲ ಗ್ರಂಥಗಳಲ್ಲೂ ಗಮನಿಸಬಹುದಾಗಿದೆ.

ಹರ್ಡೇಕರ ಮಂಜಪ್ಪನವರು 1947ರ ಜನವರಿ 3 ರಂದು ದಿವಂಗತರಾದರು. ಕರ್ನಾಟಕ ಕಂಡ ಪುಣ್ಯಪುರುಷರಲ್ಲಿ ಅವರು ಅಗ್ರ ಪಂಕ್ತಿಯ ಶಿಖರಪುರುಷರು. ಈ ಶತಮಾನ ಕಂಡ ಅನನ್ಯ ದೇಶಭಕ್ತ. ಸಮಾಜ ಸುಧಾರಕರಲ್ಲಿ ಮಂಜಪ್ಪನವರು ಮರೆಯಲಾಗದ ಪ್ರಾತಃಸ್ಮರಣೀಯರು. ಇಂಥ ಮಹಾಪುರುಷರ ವ್ಯಕ್ತಿತ್ವ ಮತ್ತು ಸಾಧನೆ ಇಂದಿನ ಮತ್ತು ಮುಂದಿನ ಪೀಳಿಗೆಗೆ ಅವಶ್ಯವಾಗಿ ಮಾರ್ಗದರ್ಶಿ. ಪ್ರೇರಣಾ ಸಿಂಧು. ಹರ್ಡೇಕರ್ ಮಂಜಪ್ಪನವರ ಜೀವನ ಮತ್ತು ದರ್ಶನವನ್ನು ವ್ಯಾಪಕವಾಗಿ ಪ್ರಚಾರ–ಪ್ರಸಾರಮಾಡುವ ಆವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಏಕೆಂದರೆ ಅಂಥ ವ್ಯಕ್ತಿತ್ವದವರು ಇಂದಿನ ನಮ್ಮ ರಾಷ್ಟ್ರೀಯ ಬದುಕಿನಲ್ಲಿ ಸಿಗುತ್ತಿಲ್ಲ ವಲ್ಲ, ಅದಕ್ಕಾಗಿ. 'ಧೀರರಾಗಿರಿ. ಪವಿತ್ರರಾಗಿರಿ ಸ್ವತಂತ್ರರಾಷ್ಟ್ರ ವೀರರಾಗಿರಿ' ಎಂಬುದು ಹರ್ಡೇಕರ್ ಮಂಜಪ್ಪನವರು ರಾಷ್ಟ್ರಕ್ಕೆ ಮಾಡಿಕೊಂಡ ಕೊನೆಯ ಮನವಿ. ಧೈರ್ಯ,ಪಾವಿತ್ರ್ಯ, ಸ್ವಾತಂತ್ರ್ಯಪ್ರೀತಿಯನ್ನು ಮೈಗೂಡಿಸಿಕೊಂಡು ಪ್ರತಿಯೊಬ್ಬ ಭಾರತೀಯನೂ ಮುನ್ನಡೆದರೆ ಅದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ, ಶ್ರದ್ಧಾಂಜಲಿ.

ಆಧಾರ ಗ್ರಂಥಗಳು

—ಸಿದ್ದಯ್ಯ ಪುರಾಣಿಕ : ಹರ್ಡೇಕರ ಮಂಜಪ್ಪನವರು,
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನ ಮಠ, ಗದಗ (1980)

—Shivanand Gubbannanavar : Political ideas of Hardekar Manjappa,
Karnataka University Press.
Dharwad (1977)

ಪಿ. ಆರ್. ವೀರ

ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ

೧. ಸಂಸ್ಕೃತಿ

[ಜೀವನದಲ್ಲಿ ಹಿರಿದಾದುದನ್ನು, ಉದಾತ್ತವಾದುದನ್ನು ರೂಢಿಸಿಕೊಳ್ಳುವುದು ಸಂಸ್ಕೃತಿಯ ಲಕ್ಷಣವೆಂದು ಹೇಳಿ, ಸಮನ್ವಯ ಸಿದ್ಧಾಂತವು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆಂದು ತೋರಿಸಿಕೊಟ್ಟು, ಕರ್ನಾಟಕದ ಪ್ರಾಚೀನತೆ, ನಿಸರ್ಗಸೌಂದರ್ಯ, ಪರಧರ್ಮ ಸಹಿಷ್ಣುತೆ, ವಿಜಯನಗರ ಸಾಮ್ರಾಜ್ಯದ ಘನತೆ, ಕರ್ನಾಟಕ ಸಂಗೀತ, ಯಕ್ಷಗಾನ, ಹೊಯ್ಸಳ-ಚಾಳುಕ್ಯ ಶಿಲ್ಪ-ಇವು ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆಗಳಾಗಿವೆಯೆಂದು ಲೇಖಕಿಯರು ಸುಂದರವಾಗಿ, ಅಚ್ಚುಕಟ್ಟಾಗಿ ಇಲ್ಲಿ ತೋರಿಸಿಕೊಟ್ಟಿದ್ದಾರೆ.—ಸಂ]

ಸಂಸ್ಕೃತಿ ಎಂಬುದು ಮಾನವಿಕ ಅಧ್ಯಯನಗಳ ಪೈಕಿ ಪ್ರಮುಖವಾದ ಪರಿಕಲ್ಪನೆ. ಸಾಮಾನ್ಯವಾಗಿ 'ಸಂಸ್ಕೃತಿ' ಎಂದರೆ ಸಭ್ಯತೆ, ಸುಗುಣ, ಸುಶಿಕ್ಷತೆ, ವಿನಯಶೀಲ ನಡವಳಿಕೆ ಎಂದು ಅರ್ಥ ಮಾಡಬಹುದು. 'ಮಾಧುರ್ಯ ಮತ್ತು ದೀಪ್ತಿ-ಇವು ಸಂಸ್ಕೃತಿಯ ಸಾರ' ಎಂದು ಮ್ಯಾಥ್ಯೂ ಅರ್ನಾಲ್ಡ್ ಹೇಳಿದ್ದಾರೆ. 'ಸಮಾಜದ ಸದಸ್ಯನಾಗಿ ಮಾನವ ಆರ್ಜಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನ್ಯಾಯ, ಸಂಪ್ರದಾಯ ಮತ್ತಿತರ ಸಾಮರ್ಥ್ಯ ಹಾಗೂ ಅಭ್ಯಾಸಗಳ ಒಟ್ಟು ಮೊತ್ತ-ಸಂಸ್ಕೃತಿ' ಎಂಬುದು ಟೈಲರ್ ಅವರ ವ್ಯಾಖ್ಯೆ. 'ಪರಿಸರದಲ್ಲಿ ಮಾನವನಿರ್ಮಿತ ಭಾಗವೇ ಸಂಸ್ಕೃತಿ' ಎಂಬುದು ಹರ್ಸ್ಕೋವಿಟ್ಸ್ ಎಂಬ ವಿದ್ವಾಂಸರ ಅಭಿಪ್ರಾಯ.

ಸುಸಂಸ್ಕೃತ ನಡವಳಿಕೆ ಎಲ್ಲರಿಗೂ ಪ್ರಿಯವಾದುದು. ಅದು ಮಾರ್ಗದರ್ಶಕ ಕೂಡ. ವ್ಯಕ್ತಿ ಬದುಕಿನ ಒರೆಗಲ್ಲು ಸಂಸ್ಕೃತಿ. ವ್ಯಕ್ತಿ ತನ್ನ ಜೀವನದ ಗೊತ್ತು ಗುರಿಗಳನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಒಂದು ಸಾಧನವೇ ಸಂಸ್ಕೃತಿ. ಸಂಸ್ಕೃತಿಯು ಸಾಂಪ್ರದಾಯಿಕವಾಗಿ ಬಂದ ಜನಪದ ಪದ್ಧತಿಗಳ ಬದುಕಿನ ಮೌಲ್ಯಗಳ ಮತ್ತು ಆದರ್ಶಗಳ ಮೊತ್ತ. ಈ ಪರಂಪರೆಯನ್ನು ಇಂದಿನ ವ್ಯಕ್ತಿ ಹಿಂದಣ ತಲೆಮಾರುಗಳಿಂದ ಹಾಗೂ ಜ್ಞಾನಾರ್ಜನೆಯಿಂದ ಪಡೆದಿದ್ದಾನೆ. ವ್ಯಕ್ತಿಯ ಆಸೆ ಆಕಾಂಕ್ಷೆಗಳಿಗೆ ಅಡಿಪಾಯವೇ ಸಂಸ್ಕೃತಿ.

ಸಂತೋಷದ ಅನ್ವೇಷಣೆಯನ್ನೇ ತಮ್ಮ ಪ್ರಮುಖ ಉದ್ದೇಶವಾಗಿ ಉಳ್ಳ ಸಂಸ್ಕೃತಿ ಮತ್ತು ನಾಗರಿಕತೆಗಳೆರಡೂ ಮಾನವಜೀವನದ ಪ್ರಮುಖ ಅಂಶಗಳಾಗಿವೆ. ನಾಗರಿಕತೆಯಿಂದ ಲೌಕಿಕ ಸುಖಸಂತೋಷಗಳನ್ನು ಹೊಂದುವ ಸಾಧನ, ಸೌಲಭ್ಯ ಗಳನ್ನು ಪಡೆಯಬಹುದು. ಆದರೆ ಈ ಸಾಧನಗಳಿಂದ ಉದ್ದೇಶಿತ ಕರ್ತವ್ಯಗಳು ತೃಪ್ತಿಕರವಾಗಿ ನಿರ್ವಹಣೆಯಾದಾಗ ಮಾತ್ರ ಅವು ಸಾರ್ಥಕವೆನಿಸುತ್ತವೆ.

ಸಂಸ್ಕೃತಿಯೆಂಬುದು ಪರಿಪೂರ್ಣ ಸಂತೋಷವನ್ನು ಹುಡುಕುವ ಸಾಹಸದ ಫಲ. ಸಂಸ್ಕೃತಿಯು ವ್ಯಕ್ತಿಯ ಸ್ವಭಾವಕ್ಕೆ ಸಂಸ್ಕಾರವನ್ನು ಒದಗಿಸಿ, ಬದುಕನ್ನು ಹೆಚ್ಚು ಸಹ್ಯ ಗೊಳಿಸುತ್ತದೆ, ಸುಂದರವಾಗಿಸುತ್ತದೆ.

ಪರಿಪೂರ್ಣತೆಯ ಬಯಕೆಯೇ ಸಂಸ್ಕೃತಿಯ ಉಗಮಸ್ಥಾನ. ವಿಶೇಷ ಜ್ಞಾನದ ಬಲದಿಂದ ಬುದ್ಧಿಯನ್ನು ಶ್ರೀಮಂತಗೊಳಿಸುವುದಷ್ಟೇ ಸಂಸ್ಕೃತಿಯಾಗಲಾರದು. ಅದು ಹೃದಯದ ಪರಿಪಕ್ವತೆಗೆ ಸಹಕಾರಿಯಾಗಬೇಕು. ಒಟ್ಟಾರೆ, ನಮ್ಮ ಸುತ್ತಲಿನ ಬದುಕನ್ನು ನಾವು ಕಾಣುವುದಕ್ಕಿಂತ ಹೆಚ್ಚು ಉತ್ತಮವಾಗಿ, ಸುಂದರವಾಗಿ ಮಾಡ ಬೇಕೆನ್ನುವ ಉದಾತ್ತ ಬಯಕೆಯೇ ಸಂಸ್ಕೃತಿ. ಉತ್ತಮ ಸಂಸ್ಕೃತಿಯಿಂದ ವ್ಯಕ್ತಿಯ ವಿಕಾಸ ಸಾಧ್ಯವಾಗುತ್ತದೆ. ಆ ಮೂಲಕ ಸಮಾಜದ ವಿಕಾಸ, ಹಿತ ಸಾಧ್ಯ ವಾಗುತ್ತದೆ. ಉತ್ತಮ ಅಭಿರುಚಿಯನ್ನೂ ಉದಾತ್ತ ಮೌಲ್ಯಗಳನ್ನೂ ಬೆಳೆಸಿ ಜನ ಜೀವನದ ಜೀವನದೃಷ್ಟಿಯನ್ನೂ ಕಾರ್ಯಚಟುವಟಿಕೆಗಳನ್ನೂ ಸಂಸ್ಕೃತಿಯು ರೂಪಿಸು ತ್ತದೆ. ಒಳ್ಳೆಯದನ್ನು ಬೆಳೆಸುವುದು, ಪ್ರೀತಿಸುವುದು, ಹರಡುವುದು ಸಂಸ್ಕೃತಿಯ ನಿಜವಾದ ಲಕ್ಷಣ. ಇಂತಹ ಶಾಶ್ವತ ಮೌಲ್ಯಗಳನ್ನು ಭಾರತ ಒಪ್ಪಿಕೊಂಡು ಅದನ್ನು ಜನಜೀವನದಲ್ಲಿ ಆಳವಾಗಿ ನಾಟಲು ಸಮರ್ಥವಾಗಿದೆ. ಕರ್ನಾಟಕವು ಪ್ರಾಚೀನಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದೆ.

೧.೧. ಭಾರತೀಯ ಸಂಸ್ಕೃತಿ

ಭಾರತೀಯ ಸಂಸ್ಕೃತಿ ಒಂದು ರೀತಿಯಲ್ಲಿ ‘ ಸಮನ್ವಯ ಸಂಸ್ಕೃತಿ.’ ಇಹಪರ ಗಳಲ್ಲಿ, ಭಕ್ತಿ ಜ್ಞಾನಕರ್ಮಗಳಲ್ಲಿ, ಹಳತು ಹೊಸತರಲ್ಲಿ, ವ್ಯಕ್ತಿ ಸಮಾಜಗಳಲ್ಲಿ, ಏಕ-ಅನೇಕಗಳಲ್ಲಿ–ಹೀಗೆ ಎಲ್ಲೆಡೆಯೂ ಸಮನ್ವಯವನ್ನು ಸಾಧಿಸುವ ಸಂಸ್ಕೃತಿ ಭಾರತೀಯರದು. ಭಾರತವು ಅನೇಕ ಭಾಷೆ, ಭಾವನೆ, ಜನಾಂಗಗಳನ್ನೂ ಅನೇಕ ಮಟ್ಟದ ಜನಜೀವನವನ್ನೂ ಬೆಸೆಯಬಲ್ಲ ‘ Unity in Diversity ’ (ಅನೇಕತೆಯಲ್ಲಿ ಏಕತೆ) ಎಂಬ ಏಕತೆಯ ಸೂತ್ರವನ್ನು ಕಂಡುಕೊಂಡಿದೆ. ಭಾರತೀಯ ವ್ಯಾಪಕ ದೃಷ್ಟಿಗೆ ಇದೇ ಮೂಲಸೂತ್ರ.

ಕ್ರಿ.ಪೂ. ಸುಮಾರು ೨೫೦೦ ರಿಂದ ೧೫೦೦ ರವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿ ತ್ತೆನ್ನಬಹುದಾದ ಸಿಂಧೂ ಸಂಸ್ಕೃತಿಯ ಸಂಶೋಧನೆಯಿಂದಾಗಿ ಭರತಭೂಮಿಯ ಹೆಸರು ಪ್ರಾಚೀನ ನಾಗರಿಕತೆಯನ್ನುಳ್ಳ ದೇಶಗಳ ಸಾಲಿನಲ್ಲಿ ಸೇರಿದೆ.

ಹರಪ್ಪಾ, ಮೊಹೆಂಜೊದಾರೊಗಳಲ್ಲಿ ಕಾಣಿಸಿಕೊಂಡಿರುವ ನಾಗರಿಕ ಜೀವನದ ಚಿತ್ರಣವು ಅಚ್ಚರಿ ಹುಟ್ಟಿಸುತ್ತದೆ.

ಅನಂತರ ವೇದಗಳ ಕಾಲದಲ್ಲಿ ಸುಸಂಸ್ಕೃತ ಸಮಾಜದ ಚಿತ್ರಣವನ್ನು ಕಾಣುತ್ತೇವೆ. ವೇದಸಾಹಿತ್ಯ, ಒಂದು ಸಂಸ್ಕೃತಿಯ ಪರಿಣತಾವಸ್ಥೆಯನ್ನು ಹೊರ ಗೆಡಹುತ್ತದೆ.

ವೇದಗಳ ಬಳಿಕ ಉಪನಿಷತ್ತಿನ ಕಾಲದಲ್ಲಿ ಪೂರ್ಣ ಜೀವನದ ದರ್ಶನ ಹೊರ ಹೊಮ್ಮಿದೆ. ಉಪನಿಷತ್ತುಗಳ ದಿವ್ಯ ಆದರ್ಶವು ಜನಜೀವನದಲ್ಲಿ ಹಾಸು ಹೊಕ್ಕಾಗುವಂತೆ ಮಾಡಿ, ಭರತಖಂಡದ ಸಂಸ್ಕೃತಿಗೆ ಅಚ್ಚಳಿಯದ ಸಾಕಾರ ಸ್ವರೂಪವನ್ನು ನಿರ್ಮಿಸಿದವು—ಇತಿಹಾಸ ಪುರಾಣಗಳು.

ಕೇವಲ ಧರ್ಮ ಮತ್ತು ಸಾಹಿತ್ಯಗಳಲ್ಲಿ ಮಾತ್ರವಲ್ಲದೆ ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ಚಿತ್ರಕಲೆ, ಸಂಗೀತ, ನೃತ್ಯ ನಾಟಕ-ಹೀಗೆ ಎಲ್ಲ ರಂಗಗಳಲ್ಲೂ ಭಾರತೀಯ ಸಂಸ್ಕೃತಿಗೆ ಉತ್ತಮ ಪರಂಪರೆಯಿದೆ. ಭಾರತೀಯ ಸಂಸ್ಕೃತಿಯು ಇಷ್ಟು ಉಜ್ವಲವಾಗಿ ಬೆಳೆದು ಬರಲು ಭಾರತದ ಒಂದೊಂದು ಭಾಗವೂ ವಿಶಿಷ್ಟವಾದ ಕಾಣಿಕೆಯನ್ನು ಕೊಟ್ಟು ಅದನ್ನು ವಿಪುಲವೂ ವೈವಿಧ್ಯಮಯವೂ ಆಗಿರುವಂತೆ ಮಾಡಿದೆ.

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಕಾಣಿಕೆಗಳನ್ನಿತ್ತು ಅದನ್ನು ಅನನ್ಯ ರೀತಿಯಲ್ಲಿ ಬೆಳೆಸಿಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಗೆ ಕರ್ನಾಟಕವು ಸಲ್ಲಿಸಿರುವ ಕೊಡುಗೆಯನ್ನು ಕುರಿತ ವಿವೇಚನೆಯನ್ನಿಲ್ಲಿ ಪರಿಭಾವಿಸಬಹುದು.

೧. ಕರ್ನಾಟಕ ಪ್ರಾಚೀನತೆ

ಕರ್ನಾಟಕದಲ್ಲಿ ಮುಗಿಲುಮುಟ್ಟುವ ಪಶ್ಚಿಮಘಟ್ಟಗಳು, ಅವುಗಳ ನೆರಳಿನಲ್ಲಿ ದಟ್ಟವಾಗಿ ಬೆಳೆದುನಿಂತ ಹಸಿರು ಕಾಡು, ಭೋರ್ಗರೆವ ಸಮುದ್ರ, ತುಂಬಿ ಹರಿಯುವ ನದಿಗಳು, ಸುಂದರ ಜಲಪಾತಗಳು, ಫಲವತ್ತಾದ ಕಪ್ಪು ಮಣ್ಣಿನ ಬಯಲುನಾಡು—ಹೀಗೆ ಪ್ರಕೃತಿಯ ಎಲ್ಲ ಮುಖಗಳನ್ನೂ ಕಾಣಬಹುದು.

ಕರ್ನಾಟಕದ ಜನಜೀವನವು—ಇತಿಹಾಸಕ್ಕೆ ಪೂರ್ವದ ಪ್ರಾಚೀನ ಯುಗದಿಂದ ಮೊದಲುಗೊಂಡು, ನಾಗರಿಕತೆಯ ಎಲ್ಲ ಘಟ್ಟಗಳನ್ನೂ ಕಂಡಿದೆ ಎಂಬ ವಿಚಾರ ಸಂಶೋಧನೆಗಳಿಂದ ತಿಳಿದುಬಂದಿದೆ.

'ರಾಮಾಯಣ' ಕಾವ್ಯದಲ್ಲಿಯ ಕಿಷ್ಕಿಂಧ, 'ಮಹಾಭಾರತದ' ಕರ್ನಾಟಕ, ಮಹಿಷಕ, ಕುಂತಲ ಅಲ್ಲದೆ ಲಾಟ, ಮಹಾರಾಷ್ಟ್ರ, ಕೊಂಕಣ, ಪುನ್ನಾಟ, ಕರ್ಣಾಟ ಮೊದಲಾದವು ಕನ್ನಡನಾಡಿನ ಬೇರೆ ಬೇರೆ ಭಾಗಗಳಿಗೆ ಇದ್ದ ಹೆಸರುಗಳು.

ಕ್ರಿ.ಪೂ. ೩ನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನು ತನ್ನ ಗುರುಗಳಾದ ಜೈನಮುನಿ ಭದ್ರಬಾಹುಗಳೊಡನೆ ಪುನ್ನಾಟಕ್ಕೆ ಬಂದು, ಅಲ್ಲಿ ಕಳ್ವಪ್ಪಿನಲ್ಲಿ ಅಂದರೆ ಶ್ರವಣಬೆಳಗೊಳದಲ್ಲಿ ನೆಲಸಿದನೆಂಬುದು ಶಾಸನಗಳಿಂದ ತಿಳಿದು ಬರುವ ಅಂಶ.

ಈ ಚಂದ್ರಗುಪ್ತನ ಮೊಮ್ಮಗನೇ–ಅಶೋಕ. (ಕ್ರಿ.ಪೂ. 274 ರಿಂದ 235) ಕನ್ನಡನಾಡಿನಲ್ಲಿ ದೊರೆತ ಈತನ ಕೆಲವು ಶಾಸನಗಳು ಕರ್ನಾಟಕದ ಐತಿಹಾಸಿಕ ಸ್ಪಷ್ಟತೆಗೆ ಸಾಕ್ಷಿಗಳಾಗಿವೆ.

೨.೧ ರಾಜಕೀಯ–ರಾಜನೀತಿ :

ಕ್ರಿಸ್ತಶಕದ ಪ್ರಾರಂಭದಲ್ಲಿ ಅಂದರೆ ಕ್ರಿ.ಶ. ೧ನೇ ಶತಮಾನದಿಂದ ಕ್ರಿ.ಶ. 3ನೇ ಶತಮಾನದವರೆಗೆ ಕನ್ನಡ ರಾಜ್ಯವನ್ನು ಶಾತವಾಹನರು ಆಳಿದರು. ಅನಂತರ ಬಂದ ಪ್ರಮುಖ ರಾಜವಂಶಗಳೆಂದರೆ ಕದಂಬರು ಮತ್ತು ಗಂಗರು. ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಪಾತ್ರ ಅಂತ್ಯಂತ ಹಿರಿದಾದುದು. ಹೊಯ್ಸಳರು ಮತ್ತು ಸೇವುಣರು ಕೂಡ ಈ ನಾಡನ್ನಾಳಿದ ಪ್ರಮುಖ ರಾಜವಂಶಗಳು. 1336ರಲ್ಲಿ ಆದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ದಕ್ಷಿಣಭಾರತದ ಇತಿಹಾಸದಲ್ಲೇ ಅದ್ವಿತೀಯ ಘಟನೆ ಎನಿಸಿದೆ. ಕೆಳದಿ ಮತ್ತು ಮೈಸೂರಿನ ಅರಸುವಂಶಗಳೂ ಕರ್ನಾಟಕವನ್ನು ಸುಭಿಕ್ಷವಾಗಿ, ಸುಸಂಸ್ಕೃತವಾಗಿ ಮಾಡಲು ಶ್ರಮಿಸಿದವು.

ಈ ಎಲ್ಲ ರಾಜವಂಶಗಳೂ ಕರ್ನಾಟಕವನ್ನು ಒಂದು ಪ್ರಮುಖ ರಾಜಕೀಯ ಶಕ್ತಿಯನ್ನಾಗಿ ಮಾಡಲು ಶ್ರಮಿಸಿದವು. ರಾಜಕೀಯಕ್ಕೆ ಔನ್ನತ್ಯ, ಪ್ರಜಾವಾತ್ಸಲ್ಯ ಪರಮತಸಹಿಷ್ಣುತೆ ಮೊದಲಾದ ಉನ್ನತ ಆದರ್ಶಗಳನ್ನು ಹಾಕಿಕೊಟ್ಟವು. ಹಾಗೆಯೇ ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ ನೀಡಿ ಭಾರತೀಯ ಇತಿಹಾಸದಲ್ಲಿ ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಪತ್ತು, ಹಿರಿಮೆಗಳು ಚಿರಂತನವಾಗಿ ಉಳಿದು ಬರುವಂತೆ ಮಾಡಿದವು.

ಕರ್ನಾಟಕದ ಅನೇಕ ರಾಜರು ಭಾರತದಾದ್ಯಂತ ದಿಗ್ವಿಜಯವನ್ನು ಕೈಗೊಂಡಿದ್ದರೂ ಆಕ್ರಮಣಶೀಲರಾಗಿರಲಿಲ್ಲ. ತಾವು ಗೆದ್ದ ಪ್ರಾಂತ್ಯಗಳನ್ನೆಲ್ಲ ಅಲ್ಲಿಯ ರಾಜರಿಗೇ ಒಪ್ಪಿಸಿ ತಮ್ಮ ಧೀರತನದ ಜೊತೆಗೇ ತ್ಯಾಗ- ಸಂಯಮ, ಸಹಿಷ್ಣುತೆಗಳನ್ನು ಮೆರೆದು, ಇತರ ರಾಜರಿಗೆ ಮಾರ್ಗದರ್ಶಕರಾಗಿದ್ದರು.

೨.೨ ಧಾರ್ಮಿಕ ಜೀವನ

ವೇದಕಾಲಕ್ಕಿಂತ ಪ್ರಾಚೀನವಾದ 'ನಾಗಧರ್ಮ'ದಿಂದ ಹಿಡಿದು ಕಾಲಕಾಲಕ್ಕೆ ಉಗಮಿಸಿದ ಎಲ್ಲ ಧರ್ಮಗಳೂ ಕರ್ನಾಟಕದಲ್ಲಿ ಆಶ್ರಯ ಪಡೆದವು. ಹೊಸ ಮತ ಧರ್ಮಗಳು ಇಲ್ಲಿ ಜನಿಸಿದವು. ಧರ್ಮ ಸಮನ್ವಯವೇ ಕರ್ನಾಟಕದ ಆದರ್ಶವಾಗಿದೆ. ಜೈನಧರ್ಮವೂ, ಬೌದ್ಧಧರ್ಮವೂ ಕರ್ನಾಟಕದಲ್ಲಿ ಹಲವು ಶತಮಾನಗಳವರೆಗೆ ಜನಪ್ರಿಯವಾಗಿದ್ದು, ರಾಜವಂಶಗಳ ಪೋಷಣೆಯನ್ನೂ ಪಡೆದವು. ತಮಿಳು ನಾಡಿನಿಂದ ಬಂದ ಶ್ರೀರಾಮಾನುಜಾಚಾರ್ಯರನ್ನು ಆದರಿಸಿದ ಕರ್ನಾಟಕ, ಶ್ರೀವೈಷ್ಣವ ಮತದ ಪ್ರಭಾವಕ್ಕೂ ಒಳಗಾಗಿತ್ತು. ಕ್ರಿ.ಶ. 12ನೆಯ ಶತಮಾನದಲ್ಲಿ ಕರ್ನಾಟಕ ದಲ್ಲಿ ವೀರಶೈವ ಮತವು ಆರಂಭಗೊಂಡು ಭಾರತದ ಅನೇಕ ಕಡೆ ಪ್ರಸಾರಗೊಂಡಿತು. ಕಳಚೂರ್ಯ ಬಿಜ್ಜಳನ ಬಳಿ ದಂಡಾಧೀಶನಾಗಿದ್ದ ಬಸವಣ್ಣ (ಕ್ರಿ.ಶ. 12ನೇ ಶತಮಾನ) ಕೈಗೊಂಡ ಧಾರ್ಮಿಕ ಕ್ರಾಂತಿ, ಬದುಕಿನ ಎಲ್ಲ ರಂಗಗಳಲ್ಲೂ ವ್ಯಾಪಿಸಿತು. ಆತನ ಕಾರ್ಯವ್ಯಾಪ್ತಿಯ ಮಹತ್ ಸಾಧನೆಯೆಂದರೆ ಯಾವ ಭಿನ್ನಭಾವಗಳೂ ಇಲ್ಲದೆ ವರ್ಣಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಧಾರ್ಮಿಕ ಸಮಾನತೆಯನ್ನು ತಂದುಕೊಟ್ಟದ್ದು. ಈ ಕಾರಣದಿಂದ ಭರತಭೂಮಿಯ ಧಾರ್ಮಿಕ ಇತಿಹಾಸದಲ್ಲೇ ಬಸವಣ್ಣನ ತಾತ್ವಿಕ ನಿಲುವು, ಆದರ್ಶಗಳು ಮಾದರಿಯಾದವು. ತರುವಾಯ ಮಧ್ವಾಚಾರ್ಯರಿಂದ ಮಧ್ವಮತದ ಸ್ಥಾಪನೆ. ಅನಂತರ ರೂಪುಗೊಂಡ ದಾಸಸಾಹಿತ್ಯ ಜನಜೀವನದಲ್ಲಿ ಭಕ್ತಿಯ ಹೊನಲನ್ನೇ ಬೆರಿಸಿತು.

ಹೀಗೆ ಕರ್ನಾಟಕ ಶಂಕರಾಚಾರ್ಯರ ಕಾರ್ಯಕ್ಷೇತ್ರವಾಗಿ, ರಾಮಾನುಜರ ಆಶ್ರಿತ ನಾಡಾಗಿ, ಬಸವಾದಿ ಶರಣರ, ಮಧ್ವಾಚಾರ್ಯರ ಜನ್ಮಭೂಮಿಯಾಗಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಶೈವ, ವೈಷ್ಣವ–ಈ ಎಲ್ಲ ನಿಲುವುಗಳಲ್ಲೂ ನಿಂತು ಅಂತರಂಗದ ಆತ್ಮವೀಕ್ಷಣೆ ಮಾಡಿಕೊಂಡಿದೆ. ಅಲ್ಲದೆ ಕ್ರೈಸ್ತರ ಹಾಗು ಮುಸ್ಲಿಮರ ಬಗ್ಗೆಯೂ ಈ ನಾಡಿನ ಜನ ಧರ್ಮಸಹಿಷ್ಣುಗಳಾಗಿದ್ದರು.

ಈ ರೀತಿ ಸ್ವಧರ್ಮ ಮತ್ತು ಅನ್ಯಧರ್ಮಗಳನ್ನು ಸಮಾನವಾಗಿ ಕಂಡ ಈ ನಾಡು ಉದಾರಭಾವನೆಯಿಂದ. ಸೌಜನ್ಯದಿಂದ ಎಲ್ಲ ಒಳ್ಳೆಯ ಅಂಶಗಳನ್ನೂ ಪ್ರೋತ್ಸಾಹಿಸಿತು. ಆ ಮೂಲಕ ಭಾರತೀಯ ಸಂಸ್ಕೃತಿಯ ಪ್ರಮುಖ ಆದರ್ಶ ಗಳಾದ ಸಹಬಾಳ್ವೆ, ಸಾಮರಸ್ಯಗಳ ಮನೋಭಾವವನ್ನು ತೋರಿಸಿಕೊಟ್ಟಿತು.

ಈಗಲೂ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಹಿಂದುಗಳು, ಮುಸ್ಲಿಮರು ಒಟ್ಟಿಗೆ ಸೇರಿ ಪೂಜೆ, ಜಾತ್ರೆಗಳನ್ನು ನಡೆಸುವುದುಂಟು. ನಮ್ಮ ನಾಡಹಬ್ಬವಾದ ನವರಾತ್ರಿಯನ್ನು ಮತಧರ್ಮಗಳ ಭೇದಭಾವವಿಲ್ಲದೆ ನಾಡಿಗರೆಲ್ಲರೂ ಸಡಗರ, ಸಂಭ್ರಮಗಳಿಂದ ಆಚರಿಸುತ್ತಾರೆ.

೨.೩ ಸಂಗೀತ, ನೃತ್ಯ, ನಾಟಕಗಳು

ಉತ್ತರಭಾರತದಲ್ಲಿ ಹೊರದೇಶಗಳಿಂದ ಅದರಲ್ಲೂ ಮುಸ್ಲಿಮರ ದಾಳಿಯಿಂದ ಅಲ್ಲಿಯ ಕಲೆಗಳೆಲ್ಲಾ ಮುಸಳಿಸತೊಡಗಿದವು, ಬದಲಾಗತೊಡಗಿದವು. ಹೀಗೆ ಬದಲಾಗತೊಡಗಿದ ಸಂಗೀತ, ನೃತ್ಯ ಪರಂಪರೆಗಳನ್ನು ರಕ್ಷಿಸಿ ಅವಕ್ಕೆ ಸಾಂಪ್ರದಾಯಿಕ ಚೌಕಟ್ಟು ಹಾಕಿ, ಈ ಕಲೆಗಳು ದಕ್ಷಿಣದಲ್ಲಿ ಭಾರತೀಯತೆಯನ್ನು ಉಳಿಸಿಕೊಂಡು ಬರುವಂತೆ ಮಾಡಿದ ನಾಡು–ಕರ್ನಾಟಕ. ಈ ಕಾರಣದಿಂದ ಭಾರತೀಯ ಸಂಗೀತವು 'ಕರ್ನಾಟಕ ಸಂಗೀತ' ಎಂಬ ಸಾರ್ಥಕ ನಾಮದಿಂದಲೇ ಪ್ರಸಿದ್ಧವಾಗಿದೆ.

ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಸಂಗೀತ ಮತ್ತು ನೃತ್ಯಕ್ಕೆ ಲಕ್ಷಣ ಗ್ರಂಥಗಳನ್ನು ಬರೆದವರಿದ್ದಾರೆ. ಅನೇಕ ನೂತನ ರಾಗಗಳನ್ನು ರೂಪಿಸಿದವರಿದ್ದಾರೆ, ಭಾರತದಾದ್ಯಂತ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ ಕರ್ನಾಟಕದ ರಾಜರಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಗೀತವನ್ನು ಕಲಿಯುವ ಬಗೆ ಕ್ಲಿಷ್ಟವೂ ಅವ್ಯವಸ್ಥಿತವೂ ಆಗಿದ್ದಾಗ ಅದಕ್ಕೆ ಒಂದು ವ್ಯವಸ್ಥೆಯನ್ನೊದಗಿಸಿ ಇಂದಿನ ಪದ್ಧತಿಯನ್ನು ರೂಪಿಸಿ, 'ಕರ್ನಾಟಕ ಸಂಗೀತದ ಪಿತಾಮಹ'ರೆನಿಸಿದವರು ಪುರಂದರದಾಸರು. ಗಮಕಕಲೆ ಸಂಗೀತ–ಪದ್ಯಗಳ ಅಪೂರ್ವ ಹೊಂದಾಣಿಕೆಯಾಗಿದ್ದು ಕರ್ನಾಟಕದ ಹೆಮ್ಮೆಯ ಸಂಪತ್ತಾಗಿದೆ.

ಕರ್ನಾಟಕದ ಅರಸುಮನೆತನದವರೂ ನೃತ್ಯಕಲೆಯ ಪ್ರಶಂಸಕರಾಗಿದ್ದರು. ನೃತ್ಯದ ಬಗ್ಗೆ ಅವರಿಗಿದ್ದ ಪ್ರೇಮ ಈ ನಾಡಿನ ದೇವಾಲಯಗಳ ಹೊರಮೈ, ಒಳ ಮೈಗಳ ಬಗೆಬಗೆಯ ಸುಂದರ ನೃತ್ಯ ಭಂಗಿಗಳ ಶಿಲ್ಪಗಳಲ್ಲಿ ಹೊರಹೊಮ್ಮಿದೆ.

ಸಂಗೀತಕ್ಕೂ, ನೃತ್ಯಕ್ಕೂ ಅನೇಕ ಪದ, ಕೀರ್ತನೆ, ಸುಳಾದಿ, ಉಗಾಭೋಗ ಗಳನ್ನು ಕನ್ನಡನಾಡಿನ ಅನೇಕ ವಿದ್ವಾಂಸರು ನೀಡಿದ್ದಾರೆ.

ಕರ್ನಾಟಕದಲ್ಲಿ ಅನೇಕ ಬಗೆಯ ಜನಪದ ನೃತ್ಯಪ್ರಕಾರಗಳೂ ಸಂಗೀತಗಳೂ ಇವೆ. ಸೋಬಾನೆ ಹಾಡುಗಳು, ಕುಟ್ಟುವ–ಬೀಸುವ ಹಾಡುಗಳು, ನಂದಿಕೋಲು, ಕೋಲಾಟ, ಬಯಲಾಟ, ಭೂತನೃತ್ಯಗಳು–ಹೀಗೆ ಲೆಕ್ಕವಿಲ್ಲದಷ್ಟು ಪ್ರಕಾರಗಳು ಚಾಲ್ತಿಯಲ್ಲಿವೆ.

ಇಲ್ಲಿನ ಯಕ್ಷಗಾನ ಮತ್ತು ದೊಡ್ಡಾಟಗಳು ಸಂಗೀತ ನೃತ್ಯದೊಂದಿಗೆ ಸಂಭಾಷಣೆಯನ್ನೂ ಬೆಳೆಸಿಕೊಂಡು ದೃಶ್ಯ-ಶ್ರಾವ್ಯಕ್ಕೆ ಸಂಕೇತವಾಗಿ ನಾಟಕದ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿವೆ.

೨.೪ ಸಾಹಿತ್ಯ

ಭಾರತೀಯ ಪ್ರಾಚೀನ ಸಾಹಿತ್ಯಗಳ ಪೈಕಿ ಕನ್ನಡ ಸಾಹಿತ್ಯವೂ ಒಂದು. ಸುಮಾರು ಎರಡು ಸಾವಿರ ವರ್ಷಗಳಿಗೂ ಮೀರಿದ ಸಾಹಿತ್ಯಕ ಬೆಳವಣಿಗೆಯ ಅಪಾರ ಕೃತಿಸಂಪತ್ತನ್ನು ಅದು ಪಡೆದಿದೆ. ಪರಿಚಯಿಸಲು ಅಸಾಧ್ಯವೆನಿಸುವಷ್ಟು ವಿಪುಲತೆ

ಯನ್ನೂ ವೈವಿಧ್ಯತೆಯನ್ನೂ ಕನ್ನಡ ಸಾಹಿತ್ಯ ಹೊಂದಿದೆ. ಅನೇಕ ಪ್ರಯೋಗಗಳು ಇಲ್ಲಿ ನಡೆದಿವೆ.

ಕನ್ನಡದ ಅನೇಕ ಕವಿಗಳೂ ವಿದ್ವಾಂಸರೂ ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿ ಭಾರತೀಯ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂಗ್ಲಿಷ್ ಭಾಷೆಯಲ್ಲೂ ಕನ್ನಡಿಗರಿಂದ ಅನೇಕ ಪುಸ್ತಕಗಳ ರಚನೆ ಆಗಿದೆ. ಹಾಸನದ ರಾಜಾರಾವ್, ಆರ್.ಕೆ. ನಾರಾಯಣ್ ಅವರನ್ನು ಇಲ್ಲಿ ಹೆಸರಿಸಬಹುದು. ಕನ್ನಡದ ಅನೇಕ ಕೃತಿಗಳು ಭಾರತದ ಹಾಗು ಪ್ರಪಂಚದ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡು ಜನಪ್ರಿಯತೆ ಗಳಿಸಿ ಭರತಭೂಮಿಯ ವೈಶಿಷ್ಟ್ಯ ವನ್ನು ಸಾರಿವೆ.

ಭಾರತದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯಾದ ಜ್ಞಾನಪೀಠದ ಆರುಗರಿಗಳು ಕನ್ನಡ ಸಾಹಿತ್ಯದ ಮುಕುಟವನ್ನು ಅಲಂಕರಿಸಿವೆ ಎಂಬುದು ಹೆಮ್ಮೆಯ ಸಂಗತಿ.

೨.೫ ವಾಸ್ತುಶಿಲ್ಪ–ಮೂರ್ತಿಶಿಲ್ಪ–ಚಿತ್ರಕಲೆ

ವಾಸ್ತುಶಿಲ್ಪದಲ್ಲಿ ಕರ್ನಾಟಕದಲ್ಲಿರುವಷ್ಟು ವೈವಿಧ್ಯ ಬಹುಶಃ ಭಾರತದ ಮತ್ತಾವ ಭಾಗದಲ್ಲಿಯೂ ಇಲ್ಲ. ದೇವಾಲಯ ನಿರ್ಮಾಣದಲ್ಲಿ ಕರ್ನಾಟಕವು ಉತ್ತಮ ಅಭಿರುಚಿಯನ್ನು ತೋರಿಸಿದೆ. ಅಜಂತ ಎಲ್ಲೋರದ ಗುಹೆಗಳು, ಚಾಲುಕ್ಯರ ದೇವಾಲಯಗಳು, ಬಾದಾಮಿಯ ಗುಹಾಂತರ್ದೇವಾಲಯಗಳು, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರದಂಥ ಹೊಯ್ಸಳ ಶಿಲ್ಪಕೇಂದ್ರಗಳು, ವಿಜಯನಗರದ ವಾಸ್ತುಶಿಲ್ಪ, ಹಂಪೆಯ ಕಲ್ಲಿನ ರಥಗಳು ಇಲ್ಲಿನ ಮುಸ್ಲಿಂ ಹಾಗು ಇನ್ನಿತರ ಶೈಲಿಯ ವಾಸ್ತುಶಿಲ್ಪಗಳು ಕರ್ನಾಟಕದ, ಶಿಲ್ಪಕಲೆಯ ಸಾಧನೆ, ಅನನ್ಯತೆಗಳನ್ನು ಪ್ರತಿಬಿಂಬಿಸುತ್ತವೆ.

ಮೂರ್ತಿಶಿಲ್ಪವೂ ಸಹ ಕರ್ನಾಟಕದಲ್ಲಿ ವಾಸ್ತುಶಿಲ್ಪಕ್ಕೆ ಪೂರಕವಾಗಿ ಬೆಳೆದು ಬಂದಿದೆ. ಇಜಿಪ್ಟ್ ದೇಶದ ದೈತ್ಯಶಿಲ್ಪಗಳಂತೆ ಕರ್ನಾಟಕದ ಶ್ರವಣಬೆಳಗೊಳದ ಗೊಮ್ಮಟಮೂರ್ತಿಯು ಬೃಹತ್ತು ಮತ್ತು ಮಹತ್ತುಗಳಿಗೆ ಸಾಕ್ಷಿಯಾಗಿದೆ. ಕಾರ್ಕಳ ಮುಂತಾದೆಡೆಗಳಲ್ಲಿ ಇರುವ ಏಕಶಿಲಾಮೂರ್ತಿಗಳು ಭಾರತದಾದ್ಯಂತ ಪ್ರಸಿದ್ಧಿಪಡೆದಿವೆ. ಭಾರತದ ಅನೇಕ ಕಡೆಗಳಲ್ಲಿ ಕರ್ನಾಟಕದ ಕಲಾವಿದರಿಂದಲೇ ನಿರ್ಮಿತವಾಗಿರುವ ಏಕಶಿಲಾ ವಿಗ್ರಹಗಳಿವೆ. ಅಂತೆಯೆ ಕಂಚಿನ, ಗಂಧದಮರದ, ಪಂಚಲೋಹದ ಹಾಗು ದಂತದ ವಿಗ್ರಹಗಳನ್ನೂ ಕಲಾಕೃತಿಗಳನ್ನೂ ಪ್ರತಿಮೆಗಳನ್ನೂ ನಿರ್ಮಿಸುವುದರಲ್ಲಿ ಕರ್ನಾಟಕದ ಕಲಾವಿದರು ಅಗ್ರಗಣ್ಯರು.

ಚಿತ್ರಕಲೆಯಲ್ಲೂ ಕರ್ನಾಟಕದ ಸಾಧನೆ ಅದ್ಭುತವಾದುದು. ಅಜಂತಾ ಎಲ್ಲೋರದ ಗುಹೆಗಳಲ್ಲಿ ಕಾಣುವ ಭಿತ್ತಿಚಿತ್ರಗಳು ಕರ್ನಾಟಕದ ರಾಜರ, ಕಲಾವಿದರ ಶ್ರಮ ಮತ್ತು ಸಾಧನೆಗಳಿಂದ ಮೂಡಿದಂಥವು. ವಿಜಯನಗರ ಸಾಮ್ರಾಜ್ಯವು

ದಕ್ಷಿಣಭಾರತದ ಚಿತ್ರಕಲೆಯ ಬೆಳವಣಿಗೆಗೆ ಪ್ರೋತ್ಸಾಹವನ್ನೂ ಪೋಷಣೆಯನ್ನೂ ಒದಗಿಸಿತ್ತು. ಮೈಸೂರಿನ ಅರಸರೂ ಚಿತ್ರಕಲೆಗೆ ಪ್ರೋತ್ಸಾಹ ಕೊಟ್ಟರು. ಕರ್ನಾಟಕವು ಚಿತ್ರಕಲೆಯ ಕ್ಷೇತ್ರಕ್ಕೆ ಕೆಲವು ಅಪೂರ್ವ ಕಲಾಕೃತಿಗಳನ್ನೂ ಶೈಲಿಗಳನ್ನೂ ನೀಡಿದುದೇ ಅಲ್ಲದೆ, ಅವನ್ನು ನಿರಂತರವಾಗಿ ಪೋಷಿಸಿಕೊಂಡು, ಬೆಳೆಸಿಕೊಂಡು ಬಂದಿದೆ. ಶ್ರೀ ಕೆ. ವೆಂಕಟಪ್ಪನವರಂಥ ಅನೇಕ ಕಲಾವಿದರನ್ನು ಭಾರತೀಯ ಚಿತ್ರಕಲಾ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದೆ.

ಸಮಾರೋಪ

ಕರ್ನಾಟಕದ ಸಂಸ್ಕೃತಿಯು ಪ್ರಾಚೀನತೆಯನ್ನೂ, ಉನ್ನತ ಪರಂಪರೆಯ–ಉದಾತ್ತ ಮೌಲ್ಯಗಳನ್ನೂ ವೈವಿಧ್ಯತೆಯನ್ನೂ ಹೊಂದಿದೆ. ಭಾರತದ ಅವಿಭಾಜ್ಯ ಅಂಗವಾಗಿರುವ ಕರ್ನಾಟಕ ತನ್ನ ಆಶಯ-ಆಶೋತ್ತರಗಳಲ್ಲಿ, ಅನುಭವದ ಅಭಿವ್ಯಕ್ತಿಯ ಮಾಧ್ಯಮವನ್ನು ರೂಪಿಸಿಕೊಳ್ಳುವುದರಲ್ಲಿ, ಸಾಧನೆಯ ಮಾರ್ಗದಲ್ಲಿ ಭಾರತೀಯ ಮನೋಧರ್ಮವನ್ನು ಬಿಂಬಿಸುವುದಷ್ಟೇ ಅಲ್ಲದೆ, ಅದರ ಪ್ರಾದೇಶಿಕ ವೈವಿಧ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನಿತ್ತು ಭಾರತದ ಸಿರಿವಂತಿಕೆಗೆ ಕಾರಣವಾಗಿದೆ.

ಕೆ. ವೈ. ಬಾಲರಾಜು

“ ವೇದಾಂತದಲ್ಲಿ ಕರ್ಮಮೀಮಾಂಸೆ ”

[ಮೋಕ್ಷಸಾಧನೆಯಲ್ಲಿ ಶಂಕರರು ಜ್ಞಾನಮಾರ್ಗವನ್ನು ಹೇಳಿದರೆ ರಾಮಾನುಜ ಹಾಗೂ ಮಧ್ವರು ಭಕ್ತಿಯ ಹಿರಿಮೆಯನ್ನು ಸಾರಿದರು. ಹಾಗಾದರೆ ವೇದಾಂತದಲ್ಲಿ ಕರ್ಮದ ಪಾತ್ರವೇನು ?

ಅಂತಃಕರಣ ಶುದ್ಧಿಗೆ ಭಗವದ್ಗೀತೆಯಲ್ಲಿ ಪ್ರಣೀತವಾದ ನಿಷ್ಕಾಮ ಕರ್ಮದ ಆವಶ್ಯಕತೆಯನ್ನು ಆಚಾರ್ಯತ್ರಯರು ತೋರಿಸಿಕೊಡುತ್ತಾರೆ.

ಈ ಲೇಖನದಲ್ಲಿ ಕರ್ಮ–ಮಾರ್ಗ ಮತ್ತು ಕರ್ಮಸಿದ್ಧಾಂತ ಎರಡರ ವಿವೇಚನೆಯೂ ಇದೆ. ಕರ್ಮಸಿದ್ಧಾಂತಕ್ಕೆ ಸಂಬಂಧಿಸಿದಂತೆ ಇಚ್ಛಾಸ್ವಾತಂತ್ರ್ಯ ಮತ್ತು ಪುನರ್ಜನ್ಮದ ಚರ್ಚೆಯನ್ನು ಡಾ. ಬಾಲರಾಜು ಇಲ್ಲಿ ಮಾಡಿದ್ದಾರೆ.—ಸಂ]

ಭಾರತೀಯರ ಆಧ್ಯಾತ್ಮಿಕ–ಸಂಪ್ರದಾಯವು ಪ್ರಸ್ಥಾನತ್ರಯ ಗ್ರಂಥಗಳಾದ ಉಪನಿಷತ್ತುಗಳು, ಭಗವದ್ಗೀತೆ ಮತ್ತು ವೇದಾಂತ–ಸೂತ್ರಗಳನ್ನು ಅವಲಂಬಿಸಿದೆ. ಆಧುನಿಕ ಯುಗದಲ್ಲಿ ವಿಜ್ಞಾನದ ಅನೇಕ ಆವಿಷ್ಕಾರಗಳಾಗಿ ಮಾನವನ ಜೀವನದ ಹೊರಗಿನ ಅವಸ್ಥೆಗಳು ಅತ್ಯಾಧುನಿಕ ರೂಪವನ್ನು ತಳೆದಿದ್ದರೂ ಅವನ ಒಳಗಿನ ವಾತಾವರಣ ಬದಲಾಯಿಸಿಲ್ಲ. ಜನನ, ಮರಣ, ನೋವು, ಕರ್ಮ, ಸುಖ–ದುಃಖಗಳು, ನೈಸರ್ಗಿಕ ಕೆಡುಕುಗಳು ಇವೆಲ್ಲವೂ ಹಿಂದಿನಂತೆಯೇ ಸಮಸ್ಯಾತ್ಮಕಗಳಾಗಿಯೇ ಉಳಿದಿವೆ. ರಾಗ ದ್ವೇಷಗಳು, ಈರ್ಷಾಸೂಯೆಗಳು ನಮ್ಮ ಮೇಲೆ ದಾಳಿಯನ್ನು ಇನ್ನೂ ಹೆಚ್ಚಾಗಿ ಮಾಡುತ್ತಿವೆ. ಮಾನವನ ಜೀವನ ಇಂತಹ ಜಂಜಾಟಗಳಲ್ಲಿ ಸಿಲುಕಿ ಅದರಿಂದ ಹೊರಬರಲು ನಿರಂತರ ಹೋರಾಟವನ್ನೇ ನಡೆಸಿದೆ. ಈ ಅರ್ಥದಲ್ಲಿ ನಾವು ಆಧುನಿಕ ಯುಗದ ನಾಗರಿಕರು ಎಂದು ಹೇಳಿಕೊಂಡರೂ ಆಧ್ಯಾತ್ಮಿಕ ದೃಷ್ಟಿಯಿಂದ ನಾವು ಹಿಂದಿನವರಿಗಿಂತ ಶ್ರೇಷ್ಠರಾಗಿದ್ದೇವೆಂದಾಗಲೀ, ಮನಃಶಾಂತಿಯನ್ನು ಪಡೆದಿದ್ದೇವೆಂದಾಗಲಿ ಹೇಳಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಪರಮಾತ್ಮನ ಹೇಳಲುಸ್ವರೂಪ, ಜಗತ್ತಿನ ಸ್ಥಿತಿ, ಜೀವಾತ್ಮನ ಗುರಿ, ಸಿದ್ಧಿಗೆ ಸಾಧನೆಗಳು, ಸಂಸಾರ ಬಂಧನದಿಂದ ವಿಮುಕ್ತಿ–ಇವುಗಳ ಜಿಜ್ಞಾಸೆ ಇನ್ನೂ ಕೊನೆಗೊಂಡಿಲ್ಲ. ಹೀಗೆ ಪ್ರತಿಯೊಬ್ಬ ಸಾಧಕನ ಸಮಸ್ಯೆಗಳನ್ನು ನಿವಾರಿಸಿ ಅವನನ್ನು ಚಿರಶಾಂತಿಯ ಪೂರ್ಣತ್ವಕ್ಕೆ ಒಯ್ಯುವ ಕಾರ್ಯವನ್ನು ವೇದಾಂತ ದರ್ಶನಗಳು ಕೈಗೊಂಡವು.

ಭಾರತೀಯ ದರ್ಶನಗಳಲ್ಲಿ ವೇದಾಂತವು ಶಿಖರಪ್ರಾಯವಾದುದು. ಶ್ರೀ ಶಂಕರಾಚಾರ್ಯರು ಜ್ಞಾನಕ್ಕೆ ಒತ್ತುಕೊಟ್ಟು ಕರ್ಮಬಂಧನ ಹರಿಯಬೇಕು ಎಂದು ಹೇಳಿದರು. ಶ್ರೀ ರಾಮಾನುಜಾಚಾರ್ಯರು ಮತ್ತು ಶ್ರೀ ಮಧ್ವಾಚಾರ್ಯರು ಸಗುಣಬ್ರಹ್ಮನನ್ನು ಹೇಳಿ ಮೋಕ್ಷ ಸಾಧನೆಯಲ್ಲಿ ಭಕ್ತಿ ಮಾರ್ಗವನ್ನು ಸಾರಿದರು. ಹಾಗಾದರೆ "ವೇದಾಂತದಲ್ಲಿ ಕರ್ಮಮೀಮಾಂಸೆಯ" ಅರ್ಥವೇನು? ಈ ಗಹನವಾದ ಸಮಸ್ಯೆಯ ಚರ್ಚೆಯೇ ಈ ಲೇಖನದ ಮೂಲ ಉದ್ದೇಶವಾಗಿದೆ.

ಕರ್ಮಮೀಮಾಂಸೆಯ ವಿವರಣೆಯ ದೃಷ್ಟಿಯಿಂದ ಪ್ರಸ್ತುತ ಈ ಲೇಖನವನ್ನು ಕೆಲವು ಭಾಗಗಳಾಗಿ ವಿಂಗಡಿಸಿ ಚರ್ಚೆಯನ್ನು ಮಾಡಿದ್ದೇನೆ. ಅವುಗಳು ಮುಖ್ಯವಾಗಿ ಹೀಗಿವೆ—

1. ಕರ್ಮಪದದ ಅರ್ಥ (ಕರ್ಮಸಿದ್ಧಾಂತ ಮತ್ತು ಕರ್ಮ–ಮಾರ್ಗ).
2. ಧರ್ಮಜಿಜ್ಞಾಸಾ ಮತ್ತು ಬ್ರಹ್ಮ ಜಿಜ್ಞಾಸಾ.
3. ಪ್ರಸ್ಥಾನತ್ರಯಗಳಲ್ಲಿ ಕರ್ಮಮೀಮಾಂಸೆ.
4. ವೇದಾಂತದಲ್ಲಿ ಕರ್ಮಮೀಮಾಂಸೆ.
5. ಕರ್ಮಸಿದ್ಧಾಂತ ಮತ್ತು ಇಚ್ಛಾಸ್ವಾತಂತ್ರ್ಯ.
6. ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ.
7. ಉಪಸಂಹಾರ.

I

ಕರ್ಮಪದಕ್ಕೆ ವಿವಿಧ ಅರ್ಥಗಳಿವೆ. ದೈವ, ಹಣೆಬರಹ, ಪಾಪ–ಪುಣ್ಯ, ಅದೃಷ್ಟ, ವಿಧಿ, ಪುನರ್ಜನ್ಮ ಇತ್ಯಾದಿ. ಹಾಗೆಯೇ ಕರ್ಮವೆಂದರೆ ನಾವು ಮಾಡಬೇಕಾದ ಕ್ರಿಯೆಗಳು ಅಥವಾ ಕರ್ತವ್ಯಗಳು, ವಿಧಿರೂಢಿಗಳು, ವರ್ಣಾಶ್ರಮಧರ್ಮಗಳು, ನಿಷ್ಕಾಮಕರ್ಮ ಇತ್ಯಾದಿ ಅರ್ಥಗಳನ್ನು ಕೊಡಬಹುದು. ಈ ಅರ್ಥಗಳ ಆಧಾರದ ಮೇಲೆ ಕರ್ಮಮೀಮಾಂಸೆಯನ್ನು ಕರ್ಮಸಿದ್ಧಾಂತ ಮತ್ತು ಕರ್ಮ–ಮಾರ್ಗ ಎಂಬ ಎರಡು ಹಂತಗಳಾಗಿ ಚರ್ಚೆಯನ್ನು ನಡೆಸಿದ್ದೇನೆ. ಜೀವನು ಫಲರೂಪಿಯಾಗಿ ಅನುಭವಿಸುವ ಕರ್ಮ ಮತ್ತು ಮೋಕ್ಷ ಸಾಧನ ರೂಪವಾಗಿ ಆಚರಿಸುವ ಕರ್ಮ ಇಲ್ಲಿನ ಮುಖ್ಯವಾದ ವಿಷಯಗಳು.

ಕರ್ಮ ನಿಯಮವನ್ನು ಚಾರ್ವಾಕದರ್ಶನವೊಂದು ಹೊರತುಪಡಿಸಿ, ಭಾರತೀಯ ದರ್ಶನಗಳೆಲ್ಲವೂ ಒಮ್ಮತದಿಂದ ಅಂಗೀಕರಿಸುತ್ತವೆ. ವ್ಯಕ್ತಿಯ ನಿತ್ಯಜೀವನದಲ್ಲೂ ಕರ್ಮದ ಕಲ್ಪನೆ ಬಹು ವಿಸ್ತಾರವಾಗಿದೆ. ಮಾನವನ ದುಃಖಕ್ಕೆ ಕಾರಣವೇನು? ಎಂಬ ಸಮಸ್ಯೆಗೆ ಭಾರತೀಯರು ಕರ್ಮಸಿದ್ಧಾಂತದಲ್ಲಿ ಉತ್ತರವನ್ನು ಕಂಡುಕೊಳ್ಳುತ್ತಾರೆ. ನೀತಿಯ ಪ್ರತಿಫಲಾತ್ಮಕವಾದ ಲಕ್ಷಣ ಕರ್ಮಸಿದ್ಧಾಂತದಲ್ಲಿದೆ. ಹಿಂದೆ ಮಾಡಿದುದರಿಂದ ಮುಂದೆ ಬಂದ, ಬರಲಿರುವ, ಬರುವ ಫಲ ಇದೇ ಕರ್ಮನಿಯಮ.

ಮಾಡಿದ್ದನ್ನು ಅನುಭವಿಸಲೇಬೇಕೆಂಬ ನಿಲುವಿಗೆ ಕರ್ಮಸಿದ್ಧಾಂತನೆಂದು ಹೆಸರು. ಪ್ರಾರಬ್ಧ, ಸಂಚಿತ, ಆಗಾಮಿ ಕರ್ಮಗಳು ಈ ಅರ್ಥದಲ್ಲಿ ಕಂಡುಬರುತ್ತವೆ. ಮನುಷ್ಯನಿಗೆ ತಾನು ಮಾಡಿದ ಕರ್ಮದಂತೆ ಫಲ ದೊರೆಯುತ್ತದೆ. ಯಾವ ಮನುಷ್ಯನೂ ಇನ್ನೊಬ್ಬರ ಒಳಿತು–ಕೆಡುಕುಗಳಲ್ಲಿ ಪಾಲ್ಗೊಳ್ಳುವುದಿಲ್ಲ. ವಿಧಿವಾದದ ಪ್ರಕಾರ ಯಾವುದೋ ಬಾಹ್ಯ ಶಕ್ತಿಯು ಮಾನವನ ಪ್ರತಿಯೊಂದು ಕ್ರಿಯೆಯಲ್ಲೂ ತನ್ನ ಪ್ರಭಾವವನ್ನು ಬೀರುತ್ತವೆ ಎಂಬ ನಂಬಿಕೆಯು ಅಡಗಿದೆ. ಅಂದರೆ ಮಾನವ ತನ್ನ ಕ್ರಿಯೆಗಳಿಗೆ ತಾನು ಹೊಣೆಗಾರನಲ್ಲ. ಅವನು ಇನ್ನೊಂದು ಶಕ್ತಿಯ ಕೇವಲ ಆಟದ ಬೊಂಬೆ ಎನ್ನಲಾಗಿದೆ. ಆದರೆ ಕರ್ಮಸಿದ್ಧಾಂತ ಈ ವಾದವನ್ನು ಒಪ್ಪಿಕೊಳ್ಳುವುದಿಲ್ಲ. ಕರ್ಮಸಿದ್ಧಾಂತದಲ್ಲಿ ಪ್ರಾರಬ್ಧಕರ್ಮ ಅನುಭವಿಸಲೇಬೇಕೆಂಬುವೇನೋ ನಿಜ. ಆದರೆ ಭವಿಷ್ಯ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳುವ ಇಚ್ಛಾಸ್ವಾತಂತ್ರ್ಯವು ಮಾನವನಿಗಿದೆ. ಈ ಜನ್ಮದಲ್ಲಿ ಗಳಿಸಿಕೊಳ್ಳುವ ಸಂಚಿತ ಒಳಿತಾಗಿದ್ದರೆ ಮುಂದೆ ಅನುಭವಿಸಲೇಬೇಕಾದ ಪ್ರಾರಬ್ಧಕರ್ಮವು ಕೂಡ ಒಳಿತಾಗಿರುತ್ತವೆ. ಮಾನವ ಕೇವಲ ಯಾವುದೋ ಬಾಹ್ಯಶಕ್ತಿಯ ಕೈಬೊಂಬೆಯಲ್ಲ, ಅವನು ತನ್ನ ಬದುಕಿನ ಸ್ವಂತ ಭವಿಷ್ಯ ನಿರ್ಮಾಣಕಾರ.

ಹಿಂದೂ ಧರ್ಮದಲ್ಲಿ ಮೋಕ್ಷ ಸಾಧನೆಗೆ ಕರ್ಮ, ಜ್ಞಾನ, ಭಕ್ತಿ ಎಂಬ ಮೂರು ಮಾರ್ಗಗಳನ್ನು ಹೇಳಲಾಗಿದೆ. ಕರ್ಮ–ಮಾರ್ಗವು ಈ ಸಂಸಾರದ ಕರ್ಮಚಕ್ರದಿಂದ ಬಿಡುಗಡೆಯನ್ನು ಹೊಂದಲು ಜೀವಿಗೆ ಪ್ರಥಮವಾಗಿ ಅಹಂಕಾರ–ಮಮಕಾರಗಳನ್ನು ದಮನಮಾಡುವ ಮತ್ತು ಚಿತ್ತಶುದ್ಧಿಯನ್ನು ಉಂಟುಮಾಡುವ ನಿಷ್ಕಾಮಕರ್ಮವನ್ನು ಬೋಧಿಸಿ ನಮ್ಮನ್ನು ಜ್ಞಾನ, ಭಕ್ತಿಯ ಮಾರ್ಗಕ್ಕೆ ಒಯ್ಯುತ್ತದೆ. ಕರ್ಮವನ್ನು ಭಗವಂತನ ಕೈಂಕರ್ಯವಾಗಿ ಅದು ರೂಪಿಸುತ್ತದೆ.

II

ಧರ್ಮ ಜಿಜ್ಞಾಸೆಯು ವೇದ ಪರವಾದರೆ, ಬ್ರಹ್ಮ ಜಿಜ್ಞಾಸೆಯು ವೇದಾಂತದ ಪರವಾಗಿದೆ. ಪೂರ್ವ ಮೀಮಾಂಸಕರು ತಮ್ಮ ಜೈಮಿನಿ ಸೂತ್ರಗಳಲ್ಲಿ "ಅಥಾತೋ ಧರ್ಮಜಿಜ್ಞಾಸಾ" ಎಂದು ಹೇಳಿ ವೇದಾಧ್ಯಯನದ ಮುಖ್ಯ ಉದ್ದೇಶ ಯಜ್ಞ ಯಾಗಾದಿಗಳನ್ನು ಆಚರಿಸುವುದು, ನಿತ್ಯ ನೈಮಿತ್ತಿಕ ಕರ್ಮಗಳನ್ನು ಆಚರಿಸುವುದು, ಇದರಿಂದಲೇ ಸ್ವರ್ಗಪ್ರಾಪ್ತಿ, ಎಂದು ಹೇಳುತ್ತಾರೆ. ಮಾನವ ಜೀವನದ ಗುರಿ ಸ್ವರ್ಗಪ್ರಾಪ್ತಿ, ಆದುದರಿಂದ ಶ್ರುತಿಪ್ರಣೀತವಾದ ಅಥವಾ ವೇದದ ಕರ್ಮಕಾಂಡದಲ್ಲಿ ಹೇಳಿರುವ ಕರ್ಮವನ್ನು ನಿಷ್ಠೆಯಿಂದ ಆಚರಿಸಬೇಕು. ಜ್ಞಾನಕಾಂಡಕ್ಕೆ ಮೌಲ್ಯ ವಿದ್ದೆಯಾದರೂ, ಅದು ಕರ್ಮಕಾಂಡಕ್ಕೆ ಅಧೀನವಾಗಿ ಮಾತ್ರವೇ ಹೊರತು ಸ್ವತಂತ್ರವಾಗಿ ಅಲ್ಲ. ಕರ್ಮಫಲವು 'ಅಪೂರ್ವ'ವೆಂಬ ಸೂಕ್ಷ್ಮರೂಪದಲ್ಲಿರುತ್ತದೆ. ಅದು ಸ್ವರ್ಗದಲ್ಲಿ ಪುಣ್ಯಫಲ ಆಚರಿಸಿದ ವ್ಯಕ್ತಿಯು ಆಗಮನವನ್ನು ಎದುರುನೋಡುತ್ತಿರು

ತ್ತದೆ. ವ್ಯಕ್ತಿಯು ಮರಣಾನಂತರ ಆ ಪುಣ್ಯಫಲವನ್ನು ಅನುಭವಿಸಲು ಸ್ವರ್ಗ ಲೋಕಕ್ಕೆ ಹೋಗುತ್ತಾನೆ. ಆ ಪುಣ್ಯಫಲದ ಕ್ರಿಯಾಶೀಲತೆಗೆ ಈಶ್ವರ ತತ್ವದ ಅಗತ್ಯವಿಲ್ಲ. ಇಲ್ಲಿ ಧರ್ಮಾಚರಣೆಯೇ ಈಶ್ವರ ಸ್ಥಾನವನ್ನು ಅಲಂಕರಿಸಿದೆ.

ಅದ್ವೈತಿಗಳು ಪೂರ್ವಮೀಮಾಂಸಕರ ಈ ವಾದವನ್ನು ಒಪ್ಪುವುದಿಲ್ಲ. ಈ ಜಗತ್ತಿನಲ್ಲಿ ಯಜ್ಞದಿಂದ ಉಂಟಾಗುವ ಫಲಗಳು ತಾತ್ಕಾಲಿಕ. ಸ್ವರ್ಗಲೋಕದ ಫಲಗಳು ಶಾಶ್ವತವಲ್ಲ. ಮಾಡಿದ ಯಜ್ಞಕ್ಕೆ ಅನುಸಾರವಾಗಿ ಪುಣ್ಯಫಲಗಳ ಪ್ರಾಪ್ತಿ. ಆ ಪುಣ್ಯಕ್ಕೆ ಅನುಸಾರವಾಗಿ ಸ್ವರ್ಗಪ್ರಾಪ್ತಿ. ಪುಣ್ಯದ ಫಲ ಮುಗಿದೊಡನೆ ಜೀವಿಯು ಅನುಶಯಿಯಾಗಿ ಈ ಕರ್ಮಭೂಮಿಯಲ್ಲಿ ಪುನಃ ಹುಟ್ಟಲೇಬೇಕು. ಈ ಹುಟ್ಟು–ಸಾವುಗಳ ನಿರಂತರ ಚಕ್ರಕ್ಕೆ ಕೊನೆಯೇ ಇಲ್ಲವಾಗುತ್ತದೆ. ಆದುದರಿಂದ ಯಜ್ಞಾಚರಣೆಗಳ ಫಲಗಳು ಶಾಶ್ವತವಾದ ಮುಕ್ತಿಯನ್ನು ಕೊಡುವುದಿಲ್ಲ ಎಂಬುದನ್ನು ಅರಿತು ಅಖಂಡವಾದ, ಶಾಶ್ವತವಾದ ಬ್ರಹ್ಮಜ್ಞಾನವನ್ನು ಪಡೆಯಬೇಕು. ನಿಜವಾದ ಜ್ಞಾನವೇ ಮುಕ್ತಿಗೆ ಸಾಧನ. ಆದುದರಿಂದ "ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ವೇದಾಂತಿಗಳು ಸಾರುತ್ತಾರೆ. ಈಶ್ವರನ ಅಗತ್ಯವಿಲ್ಲದೆ 'ಅಪೂರ್ವ'ವೆಂಬ ಜಡ ಶಕ್ತಿಯು ಕರ್ಮಫಲಗಳನ್ನು ವಿತರಿಸುತ್ತವೆ ಎನ್ನುವುದು ತರ್ಕಬದ್ಧವಲ್ಲದ ಹೇಳಿಕೆ. ಕರ್ಮಫಲಗಳ ಕ್ರಿಯಾಶೀಲತೆಗೆ ಚೇತನದ ಅಗತ್ಯವಿರಲೇಬೇಕು.

III

ಇನ್ನು ವೇದಾಂತದರ್ಶನಗಳಿಗೆ ಆಧಾರವಾಗಿರುವ ಪ್ರಸ್ಥಾನತ್ರಯ ಗ್ರಂಥಗಳಾದ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮ–ಸೂತ್ರಗಳಲ್ಲಿ ಕರ್ಮಮೀಮಾಂಸೆಯ ಬೆಳವಣಿಗೆಯ ಸಂಕ್ಷಿಪ್ತ ನೋಟವನ್ನು ತೋರಿಸುತ್ತಿದ್ದೇನೆ. ವೇದಗಳ 'ಋತ' ಮತ್ತು 'ಇಷ್ಟಾಪೂರ್ತ' ಈ ವಿಚಾರಗಳಲ್ಲಿ ಕರ್ಮಸಿದ್ಧಾಂತದ ಅಸ್ಪಷ್ಟ ನೆರಳನ್ನು ಗುರುತಿಸಬಹುದು. 'ಋತ' ಕಲ್ಪನೆಯಲ್ಲಿ ಪ್ರಕೃತಿಯ ಏಕರೂಪತೆ, ಕ್ರಮವನ್ನು ಕಾಣಬಹುದು. ಋತ ನಿಯಮವು ನೈತಿಕ ಜಗತ್ತಿನ ನಿಯಮಗಳನ್ನು ನಿಯಂತ್ರಿಸಿ ದೇವತೆಗಳಿಗೂ, ಮಾನವರಿಗೂ ಅವರವರ ಕರ್ಮಗಳನ್ನು ವಿಧೇಯಕ ಮಾಡುತ್ತದೆ. ಈ ನಿಯಮಗಳ ಉಲ್ಲಂಘನೆಯಾಗುವಂತೆ ಇಲ್ಲ. ಉದಾಹರಣೆಗೆ: ಗಾಳಿ ಬೀಸುವುದು, ನೀರು ಹರಿಯುವುದು, ಹಗಲು–ರಾತ್ರಿಗಳಾಗುವುದು, ಮಳೆಯಾಗುವುದು, ಋತುಗಳ ಬದಲಾವಣೆ ಇತ್ಯಾದಿಗಳು, ಹಾಗೆಯೇ ಮಾನವರಿಗೆ ಯಜ್ಞಯಾಗ, ಪೂಜೆಗಳ ಆಚರಣೆ, ನಿತ್ಯ ನೈಮಿತ್ತಿಕ ಕರ್ಮಾಚರಣೆಗಳು ಇತ್ಯಾದಿಗಳು; ಒಂದು ವೇಳೆ ಈ ನಿಯಮಗಳ ಉಲ್ಲಂಘನೆಯಾದರೆ ಋತ ತತ್ವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಶಿಕ್ಷೆಯನ್ನು ಅನುಭವಿಸಲೇಬೇಕು. ಹಾಗೆಯೇ ವೇದಗಳ ಕರ್ಮಕಾಂಡದಲ್ಲಿ ಮಾನವರು ತಮ್ಮ ಇಚ್ಛೆಗಳನ್ನು ಪೂರೈಸಿಕೊಳ್ಳಲು ಯಜ್ಞಯಾಗಾದಿಗಳನ್ನು ಆಚರಿಸಿ ದೇವತೆಗಳಿಂದ ಸ್ವರ್ಗಪ್ರಾಪ್ತಿಯ ಪುಣ್ಯರೂಪದ ಫಲಗಳನ್ನು ಪಡೆಯುತ್ತಿ

ಪ್ಪರು. ಇದನ್ನೇ 'ಇಷ್ಟಾಪೂರ್ತ' ಎಂದು ಕರೆಯಲಾಯಿತು. ಇಷ್ಟ ಎಂದರೆ ಯಜ್ಞಗಳನ್ನು ಆಚರಿಸುವುದು, ಪೂರ್ತ ಎಂದರೆ ಯಜ್ಞಗಳನ್ನು ಆಚರಿಸಲು ಪುರೋಹಿತರಿಗೆ ನೀಡುವ ಕಾಣಿಕೆ.

ವೇದಗಳ ಜ್ಞಾನಕಾಂಡಗಳಾದ ಉಪನಿಷತ್ತುಗಳಲ್ಲಿ ಜೀವನು ಕರ್ಮಫಲವನ್ನು ಪರವಲ್ಲಿಯೇ ಪೂರ್ತಿಯಾಗಿ ಅನುಭವಿಸದೇ ಅನನ್ನು ಅನುಶಯಿಯಾಗಿ ಪಡೆದು ಕೊಂಡು ಈ ಭೂಮಿಗೆ ಇಳಿದು ಬರುತ್ತಾನೆ ಎಂಬ ಹೇಳಿಕೆಯನ್ನು ಬೃಹದಾರಣ್ಯಕೋಪನಿಷತ್ತಿನಲ್ಲಿ ಸ್ಪಷ್ಟವಾಗಿ ಕಾಣಬಹುದು. ಒಳಿತು ಮಾಡಿದವನು ಒಳ್ಳೆಯನಾಗುವನು, ಕೆಡಕು ಮಾಡಿದವನು ಕೆಟ್ಟವನಾಗುವನು. ಪುಣ್ಯಕಾರ್ಯದಿಂದ ಪುಣ್ಯವಂತನಾಗುವನು. ಪಾಪಕಾರ್ಯದಿಂದ ಪಾಪಿಯಾಗುವನು. ಆದುದರಿಂದಲೇ ಮನುಷ್ಯನು ಕಾಮಮಯನೆಂದು ಹೇಳುವರು. ಎಂತಹ ಕಾಮುದವನೋ ಅಂತಹ ಕೃತ ಸಂಕಲ್ಪನಾಗುವನು. ಎಂತಹ ಕೃತ ಸಂಕಲ್ಪನೋ ಅಂತಹ ಕರ್ಮವನ್ನು ಮಾಡುವನು. ಎಂತಹ ಕರ್ಮವನ್ನು ಮಾಡುತ್ತಾನೋ ಆದನ್ನೇ ಪಡೆಯುತ್ತಾನೆ. ಇದು ಯಾಜ್ಞವಲ್ಕ್ಯ ಪ್ರಣೀತವಾದ ಕರ್ಮ. ಬಾದರಾಯಣರ ಪ್ರಕಾರ ನೈತಿಕ ಪುಣ್ಯ, ಯಜ್ಞದ ಪುಣ್ಯ ಎಂಬ ಎರಡು ರೀತಿಯ ಫಲಗಳು ಇವೆ. ಅವರು ಯಜ್ಞದ ಪುಣ್ಯ ಪರಲೋಕಕ್ಕೆ ಕಾರಣವಾದರೆ, ನೈತಿಕ ಪುಣ್ಯ ಇಹಜೀವನಕ್ಕೆ ಕಾರಣವಾಗಿದೆ. ನಿಜವಾದ ಬ್ರಹ್ಮಜ್ಞಾನವೊಂದೇ ಮೋಕ್ಷಕ್ಕೆ ಕಾರಣವಾಗಿದೆ ಎನ್ನುತ್ತಾರೆ.

ಭಗವದ್ಗೀತೆಯಲ್ಲಿ ಮಾನವ ಜೀವನದ ಎರಡು ಪ್ರಮುಖ ಅಂಶಗಳನ್ನು ಗುರುತಿಸಬಹುದು : ಅಹಂಕಾರ–ಮಮಕಾರಗಳಿಂದ ಒದಗುವ ಸುಖ-ದುಃಖಗಳ ಕರ್ಮದಕೊಂಡಿ, ಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನು ಮಾಡುವ ನಿಸ್ವಾರ್ಥಕರ್ಮದ ದೃಷ್ಟಿ. ಮಾನವನು ಕ್ರಿಯಾಜೀವಿಯಾಗಿರುತ್ತಾ. ದೈಹಿಕ ಹಾಗೂ ಮಾನಸಿಕವಾಗಿ ಒಂದಲ್ಲ ಒಂದು ವಿಧದ ಕೆಲಸವನ್ನು ಮನುಷ್ಯನು ಸದಾ ಮಾಡುತ್ತಲೇ ಇರುತ್ತಾನೆ. ಮಾಡುವ ಪ್ರತಿಯೊಂದು ಕೆಲಸಕ್ಕೂ ತಕ್ಕ ಫಲ ಬಂದೇ ಬರುತ್ತದೆ. ಕೆಲಸದ ಮೇಲಿನ ಆಸೆಯಿಂದಾಗಿ ಕೆಲಸಗಳನ್ನು ಮಾಡುತ್ತಾ ಫಲವನ್ನು ಅನುಭವಿಸುತ್ತಾ, ಫಲದ ಮೇಲಿನ ಆಸಕ್ತಿಯಿಂದಾಗಿ ಮಾನವನು ಕರ್ಮಬಂಧನಕ್ಕೆ ಒಳಗಾಗುತ್ತಾನೆ. ತಾನು ಮಾಡುವ ಕೆಲಸಗಳು ಯಾವಾಗ ಬಂಧನ ಎಂದಾಗುವುದಿಲ್ಲವೋ ಆಗ ಅದರಿಂದ ಜೀವಿಯು ಬಂಧಮುಕ್ತನಾಗುತ್ತಾನೆ. ಒಂದೆಡೆ ಕರ್ಮಗಳು ಜೀವಿಯನ್ನು ಬಂಧನಕ್ಕೆ ಒಳಪಡಿಸಿದರೆ, ಅದೇ ಕೆಲಸಗಳು ನಿಸ್ವಾರ್ಥ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ನಿರ್ವಹಿಸಲ್ಪಟ್ಟಾಗ ಜೀವಿಯ ಬಂಧ ವಿಮೋಚನೆಗೆ ಸಾಧನವಾಗುತ್ತದೆ. ಆದುದರಿಂದ ಯಾವ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಕರ್ಮಕ್ಕಾಗಿ ಆಚರಿಸು. ಅಹಂಕಾರಯುಕ್ತನಾಗಿ, ಫಲಾಸಕ್ತಿಯಿಂದ ಕರ್ಮಗಳನ್ನು ಆಚರಿಸಬೇಡ. ಮಾಡುವ ಯಾವುದೇ ಕೆಲಸವನ್ನು ಈಶ್ವರಾರ್ಪಣ ಭಾವದಿಂದ ಮಾಡು. ಆಗ ಕರ್ಮಫಲಗಳು ನಿಮ್ಮನ್ನು ಬಂಧಿಸುವುದಿಲ್ಲ. ಮಾಡುವ ಯಾವುದೇ ಕೆಲಸದ ಬಗ್ಗೆ

ಸಂಪೂರ್ಣ ಜ್ಞಾನದ ಕೌಶಲವಿರಲಿ, ಸುಖ–ದುಃಖ ಲಾಭ-ನಷ್ಟಗಳ ಬಗ್ಗೆ ಸಮತ್ವ ದೃಷ್ಟಿಯಿರಲಿ, ಯಾವ ಕರ್ಮವನ್ನೂ ಕೀಳಾಗಿ ಕಾಣದೆ ಅದನ್ನು ಸ್ವಧರ್ಮ ದೃಷ್ಟಿಯಿಂದ ಆಚರಿಸಲ್ಪಡಬೇಕು. ಕರ್ಮದಲ್ಲಿ ಸದಾ 'ಪ್ರವೃತ್ತಿ'ಯಿರಲಿ ಆದರೆ ಫಲಗಳ ಸ್ವಾರ್ಥ ಅವಿಷಗಳ ನಿವೃತ್ತಿಯಿರಲಿ. ತ್ಯಾಗದ ಮನೋಭಾವನೆಯೂ ಇಲ್ಲಿದೆ, ಕರ್ಮವೂ ಇಲ್ಲಿದೆ. ಇಲ್ಲಿ ಕರ್ಮತ್ಯಾಗವಿಲ್ಲ. ಆದರೆ ಕರ್ಮದಲ್ಲಿಯ ತ್ಯಾಗವಿದೆ. ಇದೇ ಕರ್ಮಯೋಗದ ರಹಸ್ಯ.

ಪರಮ ಪುರುಷಾರ್ಥವಾದ ಬ್ರಹ್ಮ ತತ್ವವು ಯಾವುದರಿಂದ ಸಿದ್ಧಿಸುತ್ತದೆ? ಮುಖ್ಯವಾಗಿ ಪುರುಷಾರ್ಥವು ಉಪಾಸನೆಯಿಂದ ನೇರವಾಗಿ ಉಂಟಾಗುತ್ತದೆಯೋ? ಉಪಾಸನೆಗೆ ಅಂಗವಾಗಿರುವ ಕರ್ಮದಿಂದ ಉಂಟಾಗುತ್ತದೆಯೋ? ಎಂಬುದು ವೇದಾಂತ-ಸೂತ್ರಗಳಲ್ಲಿ ಚರ್ಚಿತವಾಗಿರುವ ಬಹುಮುಖ್ಯವಾದ ಪ್ರಶ್ನೆಯಾಗಿದೆ.

ಬಾದರಾಯಣರ ಪ್ರಕಾರ ಸ್ವತಂತ್ರವಾದ ಆತ್ಮಜ್ಞಾನದಿಂದಲೇ ಪುರುಷಾರ್ಥವು ಸಿದ್ಧಿಸುತ್ತದೆ. ಬ್ರಹ್ಮಜ್ಞಾನವು ಕೇವಲ ಮೂಢನಂಬಿಕೆಯಿಂದ ಉತ್ಪನ್ನವಾಗುವ ವರೆಗೂ ವಿಚಾರವು ನಿಲ್ಲುವುದಿಲ್ಲ. ಅರಿವಿನಲ್ಲಿ ಅಂದರೆ ಸಾಕ್ಷಾತ್ಕಾರದಲ್ಲಿ ಪರ್ಯವಸಾನವಾಗುವ ಜ್ಞಾನವೇ ಇಚ್ಛೆಯ ಗುರಿ-ಎಂಬುದನ್ನು ಜಿಜ್ಞಾಸಾಪದವು ಸೂಚಿಸುತ್ತದೆ. ಆದುದರಿಂದ ಬ್ರಹ್ಮಜಿಜ್ಞಾಸೆಯಲ್ಲಿಯೇ ಪರಮಪುರುಷಾರ್ಥ. ಮಾನವರು ಕರ್ಮಗಳಿಂದ ಪಡೆದ ಭೋಗಗಳು ಹೇಗೆ ಕ್ಷೀಣವಾಗುತ್ತವೆಯೋ ಅಗ್ನಿಹೋತ್ರಾದಿ, ಯಜ್ಞಗಳನ್ನು ಮಾಡಿ ಆ ಪುಣ್ಯದಿಂದ ಅರ್ಜಿತವಾದ ಭೋಗವು ಕ್ಷೀಣವಾಗುತ್ತವೆ. ಆ ಪುಣ್ಯವಿರುವವರೆಗೆ ಮಾತ್ರ ಅವನು ಸುಖವನ್ನು ಅನುಭವಿಸಬಲ್ಲ....ಹೀಗೆ ನಾವು ಆಚರಿಸಿದ ಕ್ರೀಯಸಾಧನಗಳ ಫಲವು ಅನಿತ್ಯವೆಂದು ತಿಳಿಸುವಾಗ ಬ್ರಹ್ಮಜ್ಞಾನದಿಂದಲೇ ಮನುಷ್ಯನ ಪುರುಷಾರ್ಥವುಂಟಾಗುವುದು ಎಂದು ಹೇಳಿದಂತಾಗುವದು.

ಬಾದರಾಯಣರ ಈ ಅಭಿಪ್ರಾಯವನ್ನು ಜೈಮಿನಿಗಳು ತಿರಸ್ಕರಿಸುತ್ತಾರೆ. ಅವರ ಪ್ರಕಾರ ಆತ್ಮನೇ ಕರ್ಮದ ಫಲವನ್ನು ಅನುಭವಿಸುವವನು. ಆತ್ಮಜ್ಞಾನವು ಕರ್ಮದ ಅಂಗ. ಆತ್ಮನು ಕರ್ತೃ. ಆದುದರಿಂದ ಆತ್ಮಜ್ಞಾನವನ್ನು ಕರ್ಮಕ್ಕಾಗಿಯೇ ಹೇಳಿದೆ. ಅಂದರೆ ದೇಹಕ್ಕಿಂತ ಬೇರಾದ ಆತ್ಮನೇ ಕರ್ಮದ ಫಲವನ್ನು ಅನುಭವಿಸುವವನು. ಗಂಡ, ಹೆಂಡತಿ, ಮಗ ಮೊದಲಾದವುಗಳಿಂದ ಹೆಚ್ಚು ಪ್ರಿಯನಾದ ಸಂಸಾರಿಯಾದ ಆತ್ಮನನ್ನೇ ಕಂಡುಕೊಳ್ಳಬೇಕೆಂದು ಹೇಳಿರುವುದರಿಂದ ಜ್ಞಾನವು ಕರ್ಮದ ಅಂಗ. ಜನಕಮಹಾರಾಜನು ಅಶ್ವಮೇಧಯಾಗ ಮಾಡಿದನು. ಉದ್ದಾಲಕನು ಮಗನಿಗೆ ಉಪದೇಶಮಾಡಿದನು, ಯಾಜ್ಞವಲ್ಕ್ಯನು ಮೈತ್ರೇಯಿಗೆ ಬೋಧಿಸಿದನು. ಜ್ಞಾನವೊಂದರಿಂದಲೇ ಮೋಕ್ಷವಾಗತ್ತಿದ್ದರೆ ಅವರೇಕೆ ಕರ್ಮವನ್ನು ಮಾಡುತ್ತಿದ್ದರು? ಸಮಸ್ತ ವೇದಾರ್ಥವನ್ನು ತಿಳಿದವನಿಗೆ ವೇದವು ಕರ್ಮವನ್ನೇ ತಿಳಿಸುತ್ತದೆ. ಎಕ್ಕದ

ಗಿಡದಲ್ಲಿಯೇ ಜೇನುತುಪ್ಪ ಸಿಕ್ಕುವಂತಿದ್ದರೆ ಪರ್ವತಕ್ಕೆ ಏಕೆ ಹೋಗಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುತ್ತಾರೆ.

ಈ ರೀತಿಯಲ್ಲಿ ಕರ್ಮಾನುಷ್ಠಾನ ಮತ್ತು ಕರ್ಮತ್ಯಾಗ, ಇವೆರಡಕ್ಕೂ ಸಮಾನವಾದ ಬೆಂಬಲವು ಶ್ರುತಿಯಿಂದ ದೊರಕುತ್ತದೆಯಾದ್ದರಿಂದ ಈ ಎರಡೂ ರೀತಿಯ ಅಭಿಪ್ರಾಯಗಳ ಸಮರ್ಥನೆಯನ್ನು ಸೂತ್ರಗಳಲ್ಲಿ ನಡೆಸಿರುವುದು ಕಂಡು ಬರುತ್ತವೆ.

IV

ಕರ್ಮ ಮೀಮಾಂಸೆಯ ಬಗ್ಗೆ ವೇದಾಂತದ ಆಚಾರ್ಯರುಗಳಾದ ಶ್ರೀಶಂಕರ, ರಾಮಾನುಜ, ಮಧ್ವರ ವಿಚಾರಗಳು ಅವರವರ ವೇದಾಂತದರ್ಶನಗಳ ಆಧ್ಯಾತ್ಮ ಶಾಸ್ತ್ರದ ಸ್ವರೂಪ ಮತ್ತು ನೀತಿ ಶಾಸ್ತ್ರದ ವರ್ಜೆಗಳನ್ನು ಅವಲಂಬಿಸಿವೆ.

ಶ್ರೀಶಂಕರಾಚಾರ್ಯರ ಅದ್ವೈತವೇದಾಂತದಲ್ಲಿ ಪ್ರಾತಿಭಾಸಿಕ ಸತ್ಯ, ವ್ಯಾಪಹಾರಿಕ ಸತ್ಯ ಮತ್ತು ಪಾರಮಾರ್ಥಿಕಸತ್ಯಗಳೆಂಬ ಮೂರು ಹಂತಗಳಿವೆ. ಕನಸನ್ನು ಕಾಣುವವರಿಗೂ ಕನಸು ಸತ್ಯವಾಗಿರುತ್ತದೆ. ಎಚ್ಚರ ಸ್ಥಿತಿಗೆ ಬಂದಾಗ ಕನಸು ಕೇವಲ ತೋರಿಕೆ ಅಥವಾ ಪ್ರಾತಿಭಾಸಿಕತೆ. ಹಾಗೆಯೇ ಬ್ರಹ್ಮ ಒಂದೇ ಸತ್ಯವಾದುದು. ಜಗತ್ತು ಮಿಥ್ಯ. ಜೀವವು ಬ್ರಹ್ಮಕ್ಕಿಂತ ಬೇರೆಯಲ್ಲ. ವ್ಯಾಪಹಾರಿಕವಾದ ಈಶ್ವರ, ಜೀವ, ಜಗತ್ತು ಇವು ಬ್ರಹ್ಮದ ತೋರಿಕೆಯಷ್ಟೆ. ಆದರೆ ಪಾರಮಾರ್ಥಿಕವಾದ ಬ್ರಹ್ಮ ಒಂದೇ ಸತ್ಯ. ಈ ಸತ್ಯವನ್ನು ಬಿಟ್ಟು ಮತ್ತೊಂದು ಬೇರೆ ಸಾಧ್ಯವಿರಲು ಸಾಧ್ಯವಿಲ್ಲ. ಹೀಗೆ ಶಂಕರರ ಪ್ರಕಾರ ನಿರ್ಗುಣ ಅದ್ವೈತವೇ ಉಪನಿಷತ್ತುಗಳ ನಿಜವಾದ ಸಂದೇಶ. ಬ್ರಹ್ಮತತ್ತ್ವವು ದ್ವೈತರಹಿತ ಅಖಂಡ. ಅದು ನಿರ್ಗುಣವಾದ್ದರಿಂದ ವಾಕ್ ಮನಸ್ಸುಗಳಿಗೆ ಗೋಚರವಲ್ಲ. ಬ್ರಹ್ಮವು ಸತ್ಯ, ಜ್ಞಾನ, ಅನಂತ, ಇವು ಬ್ರಹ್ಮದ ಗುಣಗಳಾಗಲೀ, ಅವಯವಗಳಾಗಲೀ ಅಲ್ಲ. ಬ್ರಹ್ಮವೆಂದರೆ ಆನಂದ ಎಂದರ್ಥ. ಸೃಷ್ಟಿ, ಸ್ಥಿತಿ, ಲಯಗಳು ಬ್ರಹ್ಮನ ತಟಸ್ಥ ಲಕ್ಷಣಗಳು. ಈ ಜಗತ್ತು ಮಾಯೆಯ ಕಾರ್ಯ ಮಾಯೆಯೆಂಬುದು ಬ್ರಹ್ಮಕ್ಕಿಂತ ಪ್ರತ್ಯೇಕವಾದ ಶಕ್ತಿಯಲ್ಲ. ಈ ಬ್ರಹ್ಮದಲ್ಲಿಯೇ ಅಂತರ್ಗತವಾಗಿರುವ ಶಕ್ತಿ. ಈ ಮಾಯೆಯ ದೆಸೆಯಿಂದ ಬ್ರಹ್ಮವು ಈಶ್ವರ, ಜಗತ್ತು, ಜೀವವಾಗಿ ತೋರುತ್ತವೆ. ಮಾಯೆಯೆಂಬುದು ಸಂಪೂರ್ಣವಾಗಿ ಸುಳ್ಳಲ್ಲ, ಅನಿರ್ವಚನೀಯತೆಯೇ ಅದರ ಸ್ವರೂಪ.

ಮಾನವ ಜೀವನದ ಎಲ್ಲ ಕ್ರಿಯೆಗಳ ಗುರಿಯು ಬ್ರಹ್ಮ/ಸಾಕ್ಷಾತ್ಕಾರ. ಬ್ರಹ್ಮವು ಸಚ್ಚಿದಾನಂದ ಸ್ವರೂಪವಾದುದರಿಂದ—ಆನಂದದ ನೆಲೆಯಾದ ವಸ್ತುವನ್ನು ಮಾನವ ಅರಸುವುದು ಸಹಜ. ಇದನ್ನು ತಲುಪುವವರೆಗೂ ಜೀವನಿಗೆ ಶಾಂತಿ ಇರುವುದಿಲ್ಲ. ಇದು ಅವನ ನೈತಿಕ ಜೀವನದ ಹಕ್ಕು. ಆದರೆ ಜೀವನು ಅವಿದ್ಯಾಜನ್ಯವಾದ ಮಾಯೆಯಿಂದ ಈ ಜಗತ್ತನ್ನೇ ಸತ್ಯವೆಂದು ತಿಳಿದು ಅನೇಕ ಭೋಗಪಾಲನೆಗಳಿಗೆ ಗುರಿಯಾಗಿ

ಸುಃಖ-ದುಃಖಗಳ ಸಂಸಾರದಲ್ಲಿ ಒಂದಾಗುತ್ತಾನೆ, ಇದೇ ಕರ್ಮಬಂಧನ. ಈ ಬಂಧನ ಹರಿದು ಆತ್ಮಸಾಕ್ಷಾತ್ಕಾರವಾಗಬೇಕು. ಆದುದರಿಂದ ಜ್ಞಾನಮಾತ್ರವೇ ಮೋಕ್ಷ ಸಾಧನವೆಂದು ಶ್ರೀಶಂಕರರು ಸ್ಪಷ್ಟವಾಗಿ ತಿಳಿಸುತ್ತಾರೆ. ಹಾಗಾದರೆ ಇವರ ಅದ್ವೈತವೇದಾಂತದಲ್ಲಿ ಕರ್ಮಕ್ಕೆ ಯಾವ ಸ್ಥಾನವಿದೆ? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಶಂಕರರ ಪ್ರಕಾರ ಕರ್ಮದಿಂದ ಮುಕ್ತಿಯು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಕರ್ಮವನ್ನು ಮಾಡಿದರೂ ಅದರಿಂದ ಉತ್ಪತ್ತಿ, ಆಪ್ತಿ, ವಿಕಾರ, ಸಂಸ್ಕಾರ್ಯವೆಂಬ ಯಾವುದಾದರೂ ಒಂದು ಫಲವಾಗಿಯೇ ಇರುತ್ತದೆ. ಒಂದು ಕಾರ್ಯವನ್ನು ಮಾಡಿ ಹೊಸದಾಗಿ ಪಡೆದ ಫಲ ಆ ಕಾರ್ಯದ ಬಲ ಇರುವವರೆಗೆ ಮಾತ್ರ ಇರುತ್ತವೆ. ಅದು ಹೋದ ಮೇಲೆ ಅದು ಕೂಡ ಇಲ್ಲವಾಗುತ್ತದೆ. ಹೀಗೆ ಕರ್ಮದಿಂದ ಪಡೆದ ಹೊಸದಾದ ಮುಕ್ತಿ ಶಾಶ್ವತವಲ್ಲ. ಆದರೂ ಮನುಷ್ಯನಿಗೆ ವಾಸನಾಕ್ಷಯಗಳು ಕರ್ಮದಿಂದ ಉಂಟಾಗುತ್ತವೆ. ಚಿತ್ತಶುದ್ಧಿ ಅಥವಾ ಹೃದಯ ಪರಿಶುದ್ಧತೆಯಿಲ್ಲದೆ. ವಾಸನಾಕ್ಷಯಗಳಾಗುವುದಿಲ್ಲ. ಆದುದರಿಂದ ಗೀತೆಯಲ್ಲಿ ಭೋಧಿಸುವಂತಹ ಯಾವ ಫಲಾಪೇಕ್ಷೆಯೂ ಇಲ್ಲದ ನಿಷ್ಕಾಮ ಕರ್ಮಯೋಗ ಮತ್ತು ಈಶ್ವರಾರ್ಪಣ ಭಾವವೇ ವ್ಯಕ್ತಿಯ ಹೃದಯ ಪರಿಶುದ್ಧತೆಯನ್ನು ಮಾಡುತ್ತವೆ. ಇವುಗಳೊಂದಿಗೆ ವೇದಾಧ್ಯಯನ, ವೇದ ವಿಹಿತ ಕರ್ಮಗಳು, ವರ್ಣಾಶ್ರಮ ಧರ್ಮಗಳನ್ನು ಆಚರಿಸಬೇಕು. ಸಾಧನ ಚತುಷ್ಟಯಗಳಾದ ನಿತ್ಯ ಅನಿತ್ಯ ವಸ್ತು ವಿವೇಕ ಜ್ಞಾನ, ಇಹ ಮತ್ತು ಪರಲೋಕಗಳ ಫಲಗಳಲ್ಲಿ ವೈರಾಗ್ಯ, ಶಮದಮಾದಿ ಸಾಧನಗಳ ಆಚರಣೆಗಳಿಂದ ಮೋಕ್ಷಕ್ಕೆ ಹಂಬಲ ಉಂಟಾಗುತ್ತವೆ. ಶ್ರವಣ, ಮನನ, ನಿದಿಧ್ಯಾಸನಗಳು ಬ್ರಹ್ಮಜ್ಞಾನವನ್ನು ಪ್ರಾಪ್ತಿಮಾಡುತ್ತವೆ. ಕೇವಲ ಜ್ಞಾನದಿಂದ ಆತ್ಮ ಬ್ರಹ್ಮರ ಅಭೇದ ಸ್ಥಿತಿಯು ಸಾಕ್ಷಾತ್ಕಾರವಾಗುತ್ತದೆ. ಹೀಗೆ ಸಾಧನೆಯ ಚೌಕಟ್ಟಿನಲ್ಲಿ ಕರ್ಮಕ್ಕೆ ಪ್ರಾರಂಭಿಕ ಸ್ಥಾನವನ್ನು ಶಂಕರರು ಕೊಟ್ಟಿದ್ದಾರೆ. ಇನ್ನು ಕರ್ಮಸಿದ್ಧಾಂತದ ಬಗ್ಗೆ ಆಚಾರ್ಯರ ವಿವರಣೆ ಹೀಗಿದೆ. ಜೀವತ್ವಕ್ಕೆ ಕಾರಣ ಕರ್ಮ, ಅಜ್ಞಾನಜನ್ಯವಾದ ಕರ್ಮಗಳಿಂದಲೇ ಅವನ ವೈಯಕ್ತಿಕತೆಗಳ ಸ್ವಭಾವ, ಸ್ವರೂಪಗಳು ಪ್ರಾಪ್ತಿಯಾಗುತ್ತವೆ. ಜೀವನು ಈ ಕರ್ಮ ಮತ್ತು ಅಜ್ಞಾನಗಳಿಂದ ಬ್ರಹ್ಮದೊಂದಿಗೆ ಒಂದಾಗಿರುವುದಿಲ್ಲ. ಜೀವವು ಯಾವಕರ್ಮವನ್ನು ಮಾಡುತ್ತಾನೋ ಅದರ ಫಲಗಳನ್ನು ಈ ಪ್ರಪಂಚದಲ್ಲಿಯೇ ಅನುಭವಿಸಲು ಹುಟ್ಟುವನು. ಒಂದು ಜನ್ಮದ ಕರ್ಮಗಳು ಸವೆದಂತೆಲ್ಲ ಹೊಸ ಹೊಸ ಕರ್ಮಗಳು ಸಂಚಯವಾಗುವಂತೆ ಮಾಡುವ ಪುಣ್ಯಜ್ಞಾನ ಪ್ರಾಪ್ತವಾಗುವವರೆಗೂ ಈ ಕ್ರಿಯೆ ನಡೆಯುತ್ತಲೇ ಹೋಗುತ್ತದೆ. ಜೀವನ್ಮುಕ್ತಿಯೆಂಬುವುದು ಈ ಜನ್ಮದಲ್ಲಿಯೇ ಸಾಧ್ಯವಾಗಬೇಕೆಂದೇನೂ ಇಲ್ಲ. ಜನ್ಮ ಜನ್ಮಾಂತರರದ್ದಾಗಿರಬಹುದು. ಯಾವುದೋ ಒಂದು ಜನ್ಮದಲ್ಲಿ ಸಾಧನೆ ಪೂರ್ತಿಯಾದಾಗ ಮಾತ್ರ ಮುಕ್ತಿಯು ಸಾಧ್ಯವಾಗುತ್ತದೆ. ಅಲ್ಲಿ ಜೀವನ್ಮುಕ್ತನು ಕರ್ಮಕ್ಕೆ, ಸಂಸ್ಕಾರಕ್ಕೆ ಅಂಟಿಕೊಳ್ಳುವುದಿಲ್ಲ. ಅಲ್ಲಿಯವರೆಗೂ ಈ ವ್ಯಾವಹಾರಿಕ ಬದುಕು ಉರುಳುತ್ತಲೇ ಇರುತ್ತದೆ.

ಆಚಾರ್ಯರಾಮಾನುಜರು ತಮ್ಮ ವಿಶಿಷ್ಟಾದ್ವೈತ ವೇದಾಂತದಲ್ಲಿ ಶಂಕರರ ನಿರ್ಗುಣ ಅದ್ವೈತವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಸಗುಣಬ್ರಹ್ಮ, ಜೀವ ಜಗತ್ತುಗಳಿಗೆ ಬೇರ್ಪಡಿಸಲಾಗದ ಅತ್ಯಂತ ಸಂಕೀರ್ಣವಾದ ಸಂಬಂಧವಿದೆ. ಜೀವ ಜಗತ್ತುಗಳು ಶರೀರವಾದರೆ ಬ್ರಹ್ಮ ಅಥವಾ ಈಶ್ವರನೇ ಶರೀರಿ ಯಾಗಿದ್ದಾನೆ. ಅಂದರೆ ಪರಮಾತ್ಮನು ಶರೀರದಲ್ಲಿ ವಾಸವಾಗಿರುವ ಆತ್ಮನಾಗಿದ್ದಾನೆ. ಇದೇ 'ಅಪೃಥಕಸಿದ್ಧಿ' ಸಂಬಂಧ. ಧರ್ಮಭೂತ ಜ್ಞಾನ ವೆಂಬುದು ಈಶ್ವರನಿಗೂ, ಜೀವನಿಗೂ ಸಮಾನವಾಗಿರುವ ಅಂಶ. ಈಶ್ವರನಲ್ಲಿ ಅದು ಸದಾಪೂರ್ಣ ರೂಪವಾಗಿರುತ್ತದೆ. ಆದರೆ ಜೀವನದಲ್ಲಿ ಅದು ಬಹಳಷ್ಟು ಸಂಕುಚಿತಗೊಂಡಿರುತ್ತದೆ. ಅದನ್ನು ಪೂರ್ಣಗೊಳಿಸಿಕೊಳ್ಳುವುದೇ ಜೀವನ ಸಾಧನೆಯ ಮುಖ್ಯಗುರಿ. ಭಗವಂತನ ಸಂಕಲ್ಪಕ್ಕೆ ಶರಣಾಗತಿಯಾಗುವುದೇ ನೈತಿಕ ಜೀವನದ ಪರಮಗುರಿ. ಮಾನವನ ದುಃಖ ಪರಂಪರೆಗೆ ಅನಾದಿಯಾದ ಅಜ್ಞಾನದಿಂದ ಆಚರಿಸಲ್ಪಡುವ ಕರ್ಮವೇ ಕಾರಣ. ಕರ್ಮವು ಅಳಿಯುವವರೆಗೂ ಜೀವನಿಗೆ ಮೋಕ್ಷವಿಲ್ಲ. ಈ ದೇಹವಿರುವವರೆಗೂ ಕರ್ಮಾಚರಣೆ ಇದ್ದೇ ಇರುತ್ತದೆ. ಅಹಂಕಾರ ಮಮಕಾರಗಳು ಇರುತ್ತವೆ. ಈ ದೇಹ ಅವಸಾನವಾದ ಮೇಲೆ ಮುಕ್ತಿ ಸಾಧ್ಯ. ಇದೇ ವಿದೇಹಮುಕ್ತಿ. ರಾಮಾನುಜರ ಪ್ರಕಾರ ಅನುಷ್ಠಾನ ಸಾಧನೆಯು ಕರ್ಮ ಯೋಗದಿಂದಲೇ ಪ್ರಾರಂಭವಾಗುತ್ತದೆ. ಆದರೆ ಕರ್ಮ ಒಂದರಿಂದಲೇ ನೇರವಾಗಿ ಮೋಕ್ಷವಾಗುವುದಿಲ್ಲ ಎಂದು ಇವರು ಕೂಡ ಹೇಳಿದ್ದಾರೆ. ಕರ್ಮವು ಹೃದಯವನ್ನು ಪರಿಶುದ್ಧಗೊಳಿಸಿ ವ್ಯಕ್ತಿಯು ಸತ್ಯವನ್ನು ಅರಿಯಲು ಅವನನ್ನು ಅರ್ಹನನ್ನಾಗಿ ಮಾಡುತ್ತದೆ. ಅದ್ವೈತಕ್ಕೂ ಇದಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಕರ್ಮಾನುಷ್ಠಾನ ಪೂರ್ವಸಿದ್ಧತೆಯ ಹಂತದ ಲಕ್ಷಣ ಮಾತ್ರವಲ್ಲ ಎಂಬುದು. ಭಕ್ತಿಯೋಗವನ್ನು ಪ್ರವೇಶಿಸಿ ಪರಮಾತ್ಮನಲ್ಲಿ ಶರಣಾಗತಿಯಾಗುವವರೆಗೂ ಅದು ಮುಂದುವರೆಯುತ್ತದೆ. ನಿಷ್ಕಾಮಕರ್ಮ ಮತ್ತು ಈಶ್ವರಾರ್ಪಣ ಭಾವವೇ ಭಗವಂತನಲ್ಲಿ ನಮಗೆ ಭಕ್ತಿ ಉದಯಿಸುವಂತೆ ಮಾಡುತ್ತದೆ. ಭಕ್ತಿಗೆ ಪೂರ್ವಭಾವಿ ಯಾಗಿ ನಿತ್ಯ, ನೈಮಿತ್ತಿಕ ವರ್ಣಾಶ್ರಮಧರ್ಮಗಳು ಸೇರಿಕೊಳ್ಳುತ್ತವೆ. ಭಕ್ತಿಯು ಕರ್ಮದ ಮೂಲಕ ಬೆಳೆದು ಅಂತರ್ಬೋಧೆಯಾಗಿ ಪರಿಪಕ್ವವಾಗುತ್ತದೆ. ವಿವೇಕ, ವಿಮೋಕ, ಕ್ರಿಯಾಕಲ್ಯಾಣ, ಅಭ್ಯಾಸ, ಅನವಸಾದ, ಅನುದ್ಧರ್ಷ ಇವು ಕರ್ಮಾನು ಷ್ಠಾನ ಮಾಡುವುದರ ಉದ್ದಿಷ್ಟಫಲ. ಈ ಹಂತದಲ್ಲಿ ಕರ್ಮವನ್ನು ಆಚರಿಸುವುದು ಹಿಂದೆ ಮಾಡಿದಂತೆ ವ್ಯಕ್ತಿಯ ಚಿತ್ತಶುದ್ಧಿಗಾಗಿ ಅಲ್ಲ, ಆಧ್ಯಾತ್ಮಿಕ ಜೀವನದಲ್ಲಿ ಮುಂದೆ ಮುಂದೆ ಪ್ರಗತಿ ಪಡೆಯುವುದಕ್ಕಾಗಿ ಹೀಗೆ ರೂಪಾಂತರಗೊಂಡ ಉದ್ದೇಶವುಳ್ಳ ಕರ್ಮವು ಕಟ್ಟ ಕಡೆಯವರೆಗೂ ಭಗವಂತನ ಕೈಂಕರ್ಯ ಸೇವಾರೂಪದಲ್ಲಿ ಮುಂದು ವರೆಯುತ್ತದೆ.

ರಾಮಾನುಜರ ಪ್ರಕಾರ ಈ ವ್ಯಾವಹಾರಿಕ ಜಗತ್ತು ಸತ್ಯವಾದುದು, ಮಿಥ್ಯೆ

ಯಲ್ಲ. ಜೀವರುಗಳು ತಾವು ಪರಮಾತ್ಮನ ಅಂಶವೆಂದು, ಅವನ ಶರೀರವೆಂದು ಅರಿಯದೆ, ಅಜ್ಞಾನದಿಂದ ಸಂಸಾರದಲ್ಲಿ ಸಿಕ್ಕಿ ತೊಳಲುತ್ತಾರೆ. ಹೀಗೆ ಅವರು ಅನಾದಿಯಾದ ಸಂಸಾರಕ್ಕೆ ಸಿಲುಕಲು ಅವರ ಪೂರ್ವಕರ್ಮವೇ ಕಾರಣ. ಅವರವರ ಪೂರ್ವಕರ್ಮಗಳಿಂದಲೇ ಈ ಶರೀರಗಳು, ಸ್ವಭಾವ, ಸಾಮರ್ಥ್ಯಗಳು ಬಂದಿರುವುದು. ಪಾಪ ಕರ್ಮಗಳಿಂದ ರೋಗ, ದಾರಿದ್ರ್ಯವಾದರೆ, ಪುಣ್ಯಕರ್ಮಗಳಿಂದ ಆರೋಗ್ಯ, ಅಧಿಕಾರ, ಅಂತಸ್ತುಗಳು ಉಂಟಾಗುತ್ತವೆ. ಅಹಂಕಾರ ಬಂದಾಗ ಅಂತರ್ಯಾಮಿಯಾದ ಪರಮಾತ್ಮನನ್ನು ಕಾಣದೆ, ಜ್ಞಾನ ಕ್ರಿಯೆಗಳ ಪ್ರಾಬಲ್ಯವನ್ನು ಕಳೆದುಕೊಂಡು ತಪ್ಪುಮಾರ್ಗದಲ್ಲಿ ಜೀವನು ನಡೆದು ಅಧೋಗತಿಗೆ ಇಳಿಯುತ್ತಾನೆ. ಆದುದರಿಂದ ಸತ್ಕರ್ಮಗಳಿಂದ ಪರಮಾತ್ಮನ ಜ್ಞಾನ ಪಡೆದು ಅವನಲ್ಲಿ ತೀವ್ರತರವಾದ ಭಕ್ತಿಯಿಂದ ಶರಣಾಗತಿಯಾಗಿ ಪರಮಾತ್ಮನ ಪ್ರಸಾದದ ಮೂಲಕ ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳಬೇಕು ಎಂದು ಅವರು ಹೇಳುತ್ತಾರೆ.

ಶ್ರೀ ಮಧ್ವಾಚಾರ್ಯರ ದ್ವೈತ ವೇದಾಂತದಲ್ಲಿ ಈಶ್ವರ ಅಥವಾ ಬ್ರಹ್ಮನು ಸಗುಣ, ಸಾಕಾರನಾಗಿದ್ದಾನೆ. ಇವನೇ ಶ್ರೀವಿಷ್ಣು. ಇವನು ನಿರ್ಗುಣನಲ್ಲ. ಈಶ್ವರ ಸರ್ವತಂತ್ರ ಸ್ವತಂತ್ರವಾದ ತತ್ತ್ವ. ಜೀವ ಮತ್ತು ಜಗತ್ತುಗಳು ಪರಮಾತ್ಮನಿಗೆ ಅಧೀನವಾಗಿವೆ. ಅಂದರೆ ಅವು ಪರತಂತ್ರ ತತ್ತ್ವಗಳು; ಈಶ್ವರನ ಕರುಣೆಯಿಂದ ಜೀವನ, ಜಗತ್ತುಗಳು ತಮ ಅಸ್ತಿತ್ವವನ್ನು ಪಡೆದಿವೆ. ಈ ಅರ್ಥದಲ್ಲಿ ಈಶ್ವರ-ಜೀವ, ಈಶ್ವರ–ಜಗತ್ತು, ಜೀವ–ಜಗತ್ತು, ಜೀವ-ಜೀವ ಮತ್ತು ವಸ್ತು-ವಸ್ತುವಿನ ನಡುವೆ ಸಂಪೂರ್ಣವಾಗಿ ಭೇದವಿದೆ. ಇದೇ 'ಪಂಚಭೇದ–ಸಿದ್ಧಾಂತ' ಪ್ರತಿಯೊಂದು ಅವುಗಳ ನಡುವಿನ 'ವಿಶೇಷತೆ'ಯು ಆಧಾರದ ಮೇಲೆ ಭೇದಗಳನ್ನು ಪಡೆದಿವೆ.

ಮೋಕ್ಷಕ್ಕೆ ಭಕ್ತಿಯೊಂದೇ ಸಾಧನ. ಆದರೆ ಭಕ್ತಿಯೊಂದಿಗೆ ಪರಮಾತ್ಮನ ಪ್ರಸಾದ ಅಗತ್ಯ. ಜ್ಞಾನ-ಧ್ಯಾನಗಳು ಭಕ್ತಿಗೆ ಪೂರಕವಾಗಿ ಮುಂದುವರೆಯುತ್ತವೆ. ಜೀವನ ಸಚ್ಚಾರಿತ್ರ್ಯ, ನಡವಳಿಕೆಗಳು ಅಲ್ಲಿ ನೀತಿಯ ಸ್ಥಾನವನ್ನು ನಿರ್ಧರಿಸುತ್ತವೆ. ಜೀವನ ಭಕ್ತಿಯ ತೀವ್ರತೆ ಅವನ ಮೋಕ್ಷದ ಹಂಬಲವನ್ನು ತೋರಿಸುತ್ತದೆ.

ಆಚಾರ್ಯ ಮಧ್ವರು ಕೂಡ ಗೀತೆಯಲ್ಲಿ ಉಕ್ತವಾದ ಕರ್ಮಯೋಗದ ಹಾದಿಯಲ್ಲಿ ನಾವು ಹೋದರೆ ನಮ್ಮ ಅಂತಃಕರಣ ಶುದ್ಧವಾಗಿ ಜ್ಞಾನೋತ್ಪತ್ತಿಯಾಗಿ ಮೋಕ್ಷಪ್ರಾಪ್ತಿಗೆ ಅನುಕೂಲವಾಗುವುದು. ಜ್ಞಾನಿಯು ಕರ್ಮವನ್ನು ಮಾಡಿದಲ್ಲಿ ಜ್ಞಾನದಲ್ಲಿ ಉಂಟಾಗುವ ಮುಕ್ತಿಯ ಆನಂದವು ಇನ್ನೂ ಅಧಿಕಗೊಳ್ಳುತ್ತದೆ ಎನ್ನುತ್ತಾರೆ. ಹೀಗೆ ಕರ್ಮಾಚರಣೆಯು ಸಾಧಕನನ್ನು ಜ್ಞಾನಪ್ರಾಪ್ತಿಗೆ ಸಮರ್ಥನನ್ನಾಗಿಸುತ್ತದೆ. ಹೀಗೆ ಸಾಧನೆಯ ಪ್ರಾರಂಭದಲ್ಲಿ ಕರ್ಮವು ಅತ್ಯಗತ್ಯ. ಹಾಗೆಯೇ ಸಾಧನೆಯ ಅಂತಿಮದೆಸೆಯಲ್ಲೂ ಅದು ನಿಷ್ಪ್ರಯೋಜಕ ಅಲ್ಲ. ಇದರೊಂದಿಗೆ ವೇದ ವಿಹಿತ ಕರ್ಮಗಳು, ಯಜ್ಞಯಾಗಾದಿಗಳು, ವರ್ಣಾಶ್ರಮಧರ್ಮ, ವೇದಾಧ್ಯಯನಗಳು ಅಗತ್ಯ ಎನ್ನುತ್ತಾರೆ. ಮಧ್ವರು ಸಾಧನೆಯ ಚೌಕಟ್ಟಿನಲ್ಲಿ ಭಕ್ತಿಗೆ ವ್ಯಾಪಕವೂ

ಹಾಗೂ ಪ್ರಧಾನವಾದ ಸ್ಥಾನವನ್ನು ಕೊಡುತ್ತಾರೆ. ಮೊದಲು ಭಕ್ತಿಯು ಕರ್ಮ ಯೋಗದ ಅಂಶವಾಗಿಯೇ ಪ್ರವೇಶಿಸುತ್ತದೆ. ಏಕೆಂದರೆ ಕರ್ಮವೆಂಬುದನ್ನು ನಾವು ಈಶ್ವರ ಸೇವೆಯನ್ನು ಮಾಡಲು ಆಚರಿಸುತ್ತೇವೆ. ಈಶ್ವರ ಸೇವೆಗೆ ಮಾಡುವ ಯಾವುದೇ ಕೆಲಸಕ್ಕೆ ಭಕ್ತಿಯು ಅಗತ್ಯ. ಯಾವ ಕೆಲಸವು ಶ್ರೀ ಹರಿಯನ್ನು ಸಂತೋಷಪಡಿಸಲು ಮಾಡಲ್ಪಡುವುದೋ ಅದೇ ಕರ್ಮ ಎಂದು ಮಧ್ವರು ಬಹಳ ಸ್ಪಷ್ಟವಾಗಿ ತಿಳಿಸುತ್ತಾರೆ. ಹೀಗೆ ಕರ್ಮದಿಂದ ಪ್ರೇರೇಪಿತವಾದ ಭಕ್ತಿಯು ಜೀವಾತ್ಮನ ಮುಕ್ತಿಯಾತ್ರೆಯ ಪ್ರತಿಹಂತದಲ್ಲೂ ಒಂದು ಸಾರ್ವತ್ರಿಕ ಸಾಧನ ವಾಗಿದ್ದು ಅದು ಅದರ ಗುರಿಯೂ ಆಗಿದೆ; ಎನ್ನುತ್ತಾರೆ.

ಮಧ್ವರು ಜೀವರುಗಳ ಅಜ್ಞಾನ, ಸಂಸಾರಗಳನ್ನು ಒಪ್ಪಿ ಕೊಳ್ಳುತ್ತಾರೆ. ಅಜ್ಞಾನವು ಸತ್ಯವಾದುದು. ಇದು ಈಶ್ವರನ ಸ್ವರೂಪವನ್ನು ಮರೆಮಾಡು ತ್ತದೆ ಮತ್ತು ಜೀವನು ತನ್ನ ಸ್ವಭಾವವನ್ನು ಅರಿಯದಂತೆ ಮಾಡುತ್ತದೆ. ಇದೇ ಬಂಧನ. ತನ್ನ ಆತ್ಮವನ್ನು ಸಂಪೂರ್ಣವಾಗಿ ಸಾಕ್ಷಾತ್ಕರಿಸಿಕೊಳ್ಳುವವರೆಗೂ ಬಂಧನವೆಂಬುದನ್ನು ಜೀವನು ಅವಶ್ಯಕವಾಗಿ ಹಾದುಹೋಗಲೇಬೇಕು. ಆತ್ಮಕ್ಕೆ ಪೂರ್ಣತೆ ಬರುವುದು ಇದರ ಮೂಲಕ ಮಾತ್ರ. ಜೀವನು ತನ್ನ ಇಚ್ಛೆಯಿಂದ ಆಚರಿಸಲ್ಪಡುವ ಕರ್ಮಗಳೇ ಅವನವನ ಸುಖ-ದುಃಖಗಳಿಗೆ ಕಾರಣವಾಗುತ್ತವೆ. ಇದು ಅಜ್ಞಾನ ಜನ್ಯವಾದುದು. ಪರಮಾತ್ಮನು ಕರ್ಮಫಲ ವಿತರಕನು ಅಷ್ಟೆ. ಕರ್ಮವು ಅನಾದಿಯಾದುದು. ಯಥಾಯೋಗ್ಯ, ಯಥಾ ಶಕ್ತಿಯೆಂಬುದು ದ್ವೈತ ಸಿದ್ಧಾಂತದ ಬಹುಮುಖ್ಯವಾದ ಅಂಶ. ಇದರ ಪ್ರಕಾರ ಯೋಗ್ಯತೆ ಸಾಧನೆಗೆ ತಕ್ಕಂತೆ ಜೀವರುಗಳ ವರ್ಗೀಕರಣ ಮಾಡಲಾಗಿದೆ. ಜೀವರುಗಳು ಪಡೆಯುವ ಮೋಕ್ಷದಲ್ಲೂ ವ್ಯತ್ಯಾಸವಿದೆ. ಇದರೊಂದಿಗೆ ಸದಾನಾರಕಿಗಳು, ನಿತ್ಯಸಂಸಾರಿಗಳೆಂಬ ಭೇದವೂ ಇದೆ. ಈ ಎರಡೂ ವರ್ಗಗಳಿಗೂ ಮೋಕ್ಷವಿಲ್ಲ. ಇವು ಮಾನವನ ಜೀವನದ ವಾಸ್ತವಿಕ ಬದುಕನ್ನು ಆಧರಿಸಿದ ಹೇಳಿಕೆಯಾಗಿವೆ. ಈಶ್ವರನ ಸಂಕಲ್ಪದಂತೆ ಜೀವನು ಒಂದು ಕಾಲದಲ್ಲಿ ಬಂಧನದಲ್ಲಿದ್ದರೆ, ಮತ್ತೊಂದು ಕಾಲಕ್ಕೆ ಬಿಡುಗಡೆಯನ್ನು ಪಡೆಯುತ್ತಾನೆ. ಕರ್ಮನಿಯಮದ ಕಾರಣತತ್ತ್ವ ಹುಡುಕುವುದಕ್ಕಿಂತ ಈ ಬದುಕಿನ ವಾಸ್ತವಿಕ ಕೆಡುಕುಗಳನ್ನು ಜೀವನು ಎದುರಿಸ ಬೇಕು ಎಂದು ಆಚಾರ್ಯರು ಹೇಳುತ್ತಾರೆ.

V

ಮಾನವ ತನ್ನ ಸ್ವಂತ ಇಚ್ಛೆಗೆ ಅನುಸಾರವಾಗಿ ತನಗೆ ಬೇಕಾದ ರೀತಿಯಲ್ಲಿ ವರ್ತಿಸಬಹುದು. ಈ ಆತ್ಮಸ್ವಾತಂತ್ರ್ಯಕ್ಕೆ ಇಚ್ಛಾ ಸ್ವಾತಂತ್ರ್ಯವೆಂದು ಹೆಸರು. ಇಚ್ಛೆ ಇರುವ ಕಡೆ ಕ್ರಿಯೆಯೂ ಇರುತ್ತದೆ. ಈ ಇಚ್ಛಾಕ್ರಿಯಾ ಸ್ವಾತಂತ್ರ್ಯಗಳ ಮೆಸೆಯಿಂದಲೇ ಮಾನವನಿಗೆ ನೈತಿಕ ಜವಾಬ್ದಾರಿಯೂ ಕೂಡ ಇರುತ್ತದೆ.

ಪೂರ್ವನಿರ್ಧಾರಿತವಾದ ಅಥವಾ ವಿಧಿವಾದದ ಪ್ರಕಾರ ಮಾನವನಿಗೆ ಸ್ವಾತಂತ್ರ್ಯ ವಿಲ್ಲ. ಅವನ ಜೀವನದ ಆಗುಹೋಗುಗಳು ದೇವರಿಂದಲೇ ನಿರ್ಧಾರಿತವಾಗಿವೆ. ಮಾನವ ದೇವರ ಆಟದ ಕೈಗೊಂಬೆ ಅಷ್ಟೆ. ಈ ವಾದವನ್ನು ಸ್ವಯಂ-ನಿರ್ಧಾರಿತವಾದಿಗಳು ಬಹಳ ಕಟುವಾಗಿ ಖಂಡಿಸುತ್ತಾರೆ. ಈ ವಾದವನ್ನು ಒಪ್ಪಿಕೊಂಡರೆ ಮಾನವರು ಮಾಡುವ ತಪ್ಪುಗಳಿಗೆ ಕೆಡಕುಗಳಿಗೆ ಮಾನವರು ಹೊಣೆಯಲ್ಲ, ದೇವರೇ ಎನ್ನಬೇಕಾಗುತ್ತದೆ. ಮಾನವನ ಪ್ರಯತ್ನಶೀಲತೆಗೆ ಇಲ್ಲಿ ಯಾವ ಅರ್ಥವೂ ಇಲ್ಲ. ಬರೀ ಸೋಮಾರಿಯಾಗಿ, ಇನ್ನೊಬ್ಬರಿಗೆ ಪರಪೀಡಕನಾಗಿ ತನ್ನ ಜವಾಬ್ದಾರಿಯನ್ನು ಕಳೆದುಕೊಂಡು ಬದುಕಬೇಕಾಗುತ್ತದೆ. ಈ ಕಾರಣದಿಂದ ವಿಧಿವಾದವು ಮಾನವನಲ್ಲಿ ಯಾವ ಭರವಸೆಯನ್ನೂ, ಸ್ಫೂರ್ತಿಯನ್ನೂ ತುಂಬುವುದಿಲ್ಲ. ಆದುದರಿಂದ ಮಾನವನಲ್ಲಿ ಇಚ್ಛಾಸ್ವಾತಂತ್ರ್ಯದ ಕಲ್ಪನೆಯನ್ನು ಒಪ್ಪಲೇಬೇಕು. ಆದರೆ ಸ್ವಾತಂತ್ರ್ಯವೆಂದರೆ ಇಲ್ಲಿ ಸ್ವೇಚ್ಛಾಚಾರಿತನ ಎಂದರ್ಥವಲ್ಲ. ತನ್ನಲ್ಲಿ ಸಾಧು ವಾಗಬಹುದಾದ, ಪ್ರಕೃತಿಗೆ ಅನುಗುಣವಾಗಿ ಮಾಡಬಹುದಾದ ಇತಿಮಿತಿಯ ಸ್ವಾತಂತ್ರ್ಯ ಎಂದರ್ಥ. ಈ ಮಿತಿಯನ್ನು ಪ್ರತಿಯೊಬ್ಬನು ಒಪ್ಪಿಕೊಳ್ಳಲೇಬೇಕು. ಈ ಮಿತಿಯ ಮೂಲಕವೇ ಮಾನವನು ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು.

ಆಚಾರ್ಯ ಶಂಕರರ ಪ್ರಕಾರ ಜೀವಿಯ ಸ್ವಾತಂತ್ರ್ಯವೆಂಬುದು ಸ್ವಯಂಸಿದ್ಧ ವಾದುದು. ಜೀವವು ಬ್ರಹ್ಮಕ್ಕಿಂತ ಬೇರೆಯಲ್ಲ. ಆ ಅಭೇದ ಜ್ಞಾನವೇ ಸಾಕ್ಷಾತ್ಕಾರ. ವ್ಯಾವಹಾರಿಕ ಜೀವನದಲ್ಲಿ ಜೀವನು ಅಜ್ಞಾನದಿಂದ, ಅಹಂಕಾರಯುಕ್ತ ಭ್ರಮೆಯಿಂದ ನಾನು, ನನ್ನದು, ಪರರದು ಎಂಬ ಭೇದ ಜ್ಞಾನವನ್ನು ಹೊಂದುತ್ತಾನೆ. ಈ ಭೇದ ಜ್ಞಾನದಿಂದ ಸಂಸಾರ ಉಂಟಾಗುತ್ತದೆ. ಈ ಸಂಸಾರದ ದೌರ್ಬಲ್ಯಗಳಿಂದ ನಾನು ಸ್ವತಂತ್ರ್ಯನಲ್ಲ ಪರತಂತ್ರ ಎಂಬ ಭ್ರಮೆಗೆ ಜೀವನು ಒಳಗಾಗುತ್ತಾನೆ. ಈ ಅಜ್ಞಾನ ದಿಂದ ಹೊರಬರಬೇಕಾದರೆ ಜೀವಿಯು ಜೀವನದಲ್ಲಿ ಜ್ಞಾನ, ವಿವೇಕ, ವೈರಾಗ್ಯಗಳನ್ನು ಬೆಳೆಸಿಕೊಳ್ಳಬೇಕು. ಇವು ಅವನ ಸ್ವತಂತ್ರವಾದ ಕ್ರಿಯಾಶಕ್ತಿಗಳು. ಇವುಗಳ ಮೂಲಕವೇ ಬ್ರಹ್ಮಸಾಕ್ಷಾತ್ಕಾರವಾಗಬೇಕು. ಇದು ಜೀವಿಯ ಸ್ವಯಂಸಿದ್ಧವಾದ ಸ್ವಾತಂತ್ರ್ಯ.

ಆಚಾರ್ಯ ರಾಮಾನುಜರು ಬ್ರಹ್ಮ, ಜೀವ, ಜಗತ್ತು ಇವುಗಳ ಅಪೃಥಕ್‌ಸಿದ್ಧಿ ಹೇಳುತ್ತಾರೆ. ಪರಮಾತ್ಮನು ಜೀವಿಯಲ್ಲಿ ಅಂತರ್ಯಾಮಿಯಾಗಿ ಇದ್ದುಕೊಂಡು ಅವನನ್ನು ನಿಯಂತ್ರಿಸುತ್ತಾನೆ. ಈ ರೀತಿಯ ಹೇಳಿಕೆಯಲ್ಲಿ ಜೀವಿಗೆ ಸ್ವಾತಂತ್ರ್ಯವೇ ಇಲ್ಲವೆಂದು ಅರ್ಥವಲ್ಲ. ಜೀವದ ಸ್ವಾತಂತ್ರ್ಯ ಇಲ್ಲಿ ಮಿತವಾಗಿದೆಯೆಂದು ಅರ್ಥ. ಜೀವದ ಪ್ರಯತ್ನಶೀಲತೆಯನ್ನು ಪರಮಾತ್ಮನು ತನ್ನ ಅನುಮತಿಯ ಮೂಲಕ ನಡೆಸಿ ಕೊಡುತ್ತಾನೆ. ಜೀವನು ತನ್ನೆಲ್ಲ ಕೆಲಸ ಮಾಡಿಕೊಳ್ಳಲು ಸ್ವತಂತ್ರ. ಆದರೆ ಅವನಿಗೆ ಅಹಂಕಾರಪೂರಿತ ಸ್ವಾತಂತ್ರ್ಯವಿರಬಾರದು ಅಷ್ಟೆ. ಈ ಅಹಂಕಾರವು ಅಜ್ಞಾನದಿಂದ ಉಂಟಾಗುತ್ತದೆ. ಜೀವಿಯಲ್ಲಿ ಇದು ತಾನು ಪರಮಾತ್ಮನ ಒಂದಂಶ ಎಂಬುದನ್ನು

ಮರೆಸುತ್ತವೆ. ಪಾಪ-ಪುಣ್ಯ ಕಾರ್ಯಗಳಲ್ಲಿ ಜೀವನು ತನ್ನನ್ನು ತೊಡಗಿಸಿಕೊಂಡು ಈ ಸಂಸಾರ ಚಕ್ರದಲ್ಲಿ ಸಿಲುಕುತ್ತಾನೆ. ಭಗವಂತನಲ್ಲಿ ಭಕ್ತಿ ಮತ್ತು ಶರಣಾಗತಿಯಿಂದ ಜೀವನಿಗೆ ಇವರಿಂದ ಬಿಡುಗಡೆಯಾಗುತ್ತದೆ.

ಆಚಾರ್ಯ ಮಧ್ವರ ಪ್ರಕಾರ ಜೀವನ ಕರ್ತೃ. ಆಂದಮೇಲೆ ಅವನಿಗೆ ಸ್ವಾತಂತ್ರ್ಯವಿರಲೇಬೇಕು. ಆದರೆ ಈ ಸ್ವಾತಂತ್ರ್ಯಕ್ಕೆ ಮಿತಿಯಿದೆ. ಇಲ್ಲಿ ಭಗವಂತನೊಬ್ಬನೇ ಸರ್ವತಂತ್ರ ಸ್ವತಂತ್ರನು. ಆದರೆ ಜೀವನು ತನ್ನ ಸತ್ತಾ, ಪ್ರಮಿತಿ ಮತ್ತು ಪ್ರವೃತ್ತಿಗಳಿಂದ ಭಗವಂತನಿಗೆ ಅಧೀನನಾಗಿದ್ದಾನೆ. ಇಲ್ಲಿ ಜೀವನು ದೇವರ ಆಟದ ಬೊಂಬೆಯಲ್ಲ. ತನಗೆ ಏನು ಸರಿಯೆಂದು ತೋಚುತ್ತದೋ ಅದನ್ನು ಮಾಡಲು ಜೀವನು ಸ್ವತಂತ್ರ. ವೇದಗಳಲ್ಲಿ ನಿತ್ಯ, ನೈಮಿತ್ತಿಕ ಕರ್ಮಗಳನ್ನು ಹೇಳಲಾಗಿದೆ. ಹಠ, ಪುರುಷ ಪ್ರಯತ್ನನೆಂಬ ಮಾತುಗಳಿವೆ. ಇವೆಲ್ಲ ಜೀವಿಗೆ ಇಚ್ಛಾಸ್ವಾತಂತ್ರ್ಯವಿದೆ ಎಂಬುದನ್ನು ತೋರಿಸುತ್ತದೆ. ಭಗವಂತನು ಜೀವದ ಸ್ವಾತಂತ್ರ್ಯವನ್ನು ಕಸಿಯುವುದಿಲ್ಲ. ಬದಲಾಗಿ ಅವನ ಆಯ್ಕೆ, ಯತ್ನವನ್ನು ಮನ್ನಿಸಿ ಅದಕ್ಕೆ ಕರ್ಮಫಲಗಳನ್ನು ನೀಡುತ್ತಾನೆ. ಅಂತಿಮವಾಗಿ ಪರಮಾತ್ಮನ ಸಂಕಲ್ಪವೇ ಜೀವಿಯ ಬಂಧನ—ಬಿಡುಗಡೆಯನ್ನು ದಯಪಾಲಿಸುತ್ತದೆ.

VI

ಕರ್ಮ-ಸಿದ್ಧಾಂತದ ಜೊತೆ ಜೊತೆಯಾಗಿ ಬರುವ ಮತ್ತೊಂದು ಮುಖ್ಯವಾದ ವಿಚಾರ ಪುನರ್ಜನ್ಮ. ಪುನರ್ಜನ್ಮವೆಂದರೆ ಜನ್ಮವನ್ನು ದಾಟಿ, ಮರಣವನ್ನು ದಾಟಿ ಜೀವದ ಹರಿಯುವಿಕೆ. ಸಾವು ಎಂಬುದು ವ್ಯಕ್ತಿಯ ಸಂಪೂರ್ಣ ನಾಶವಲ್ಲ. ಅವನ ಅರ್ಹತೆಗೆ ಅನುಗುಣವಾಗಿ, ಅವನ ಕರ್ಮಗಳಿಗೆ ತಕ್ಕಂತೆ ಸುಖ ಅಥವಾ ದುಃಖ ಫಲಗಳನ್ನು ಅನುಭವಿಸುವುದಕ್ಕೆ ಬದುಕು ಇನ್ನೆಲ್ಲೋ ಮುಂದುವರೆಯುತ್ತದೆ. ಈ ಜನ್ಮಾಂತರದ ಕಲ್ಪನೆಯಿಲ್ಲದೆ ಜೀವಿಗಳ ವೈವಿಧ್ಯತೆ, ನೋವು ನಲಿವುಗಳನ್ನು ನಾವು ವಿವರಿಸಲು ಅಸಾಧ್ಯ.

ಆಚಾರ್ಯ ಶಂಕರರು ಆತ್ಮ ಜ್ಞಾನವಾಗುವವರೆಗೂ ಆತ್ಮನ ನಿಜವಾದ ಅರಿವಿಲ್ಲದೆ ಅಜ್ಞಾನದಿಂದ ಜೀವನು ಜನನ-ಮರಣ ಚಕ್ರದಲ್ಲಿ ಸಿಲುಕಿರುತ್ತಾನೆ. "ಪುನರಪಿ ಜನನಂ ಪುನರಪಿ ಮರಣಂ ಜನನೀ ಜಠರೇ ಶಯನಂ" ಹೀಗೆ ಜೀವನದ ಹುಟ್ಟು-ಸಾವುಗಳು ಪುನರ್ಜನ್ಮಗಳೆಂಬ ಅನುಭವ ಸ್ಥಿತಿ ಅಥವಾ ಭವಚಕ್ರವೇ ಸಂಸಾರವಾಗಿರುತ್ತದೆ. ಜ್ಞಾನಪ್ರಾಪ್ತಿಯಾಗಿ ಮಾಯೆಯ ತೆರೆ ಹರಿದಾಗ ಆತ್ಮ-ಬ್ರಹ್ಮರ ಅಭೇದ ಸ್ಥಿತಿ ಅಥವಾ ಸಾಕ್ಷಾತ್ಕಾರವಾಗುತ್ತದೆ. ಜೀವನ್ಮುಕ್ತಿಯೆಂಬುದು ಈ ವರ್ತಮಾನ ಬದುಕಿನಲ್ಲಿಯೇ ಸಾಧ್ಯವಾಗದಿರಬಹುದು. ಅದು ಜನ್ಮ ಜನ್ಮಾಂತರದ್ದಾಗಿರಬಹುದು. ಅದು ಜೀವಿಯ ಸಾಧನೆಯ ಮೇಲೆ ಕೇವಲ ಜ್ಞಾನದ ಮೇಲೆ ಅವಲಂಬಿತವಾಗಿದೆ. ಪಾರಮಾರ್ಥಿಕ ಸ್ಥಿತಿಯಲ್ಲಿ ಜನನ-ಮರಣ, ಸಂಸಾರಗಳಿಗೆ ಯಾವ ಅರ್ಥವೂ ಇಲ್ಲ, ಸ್ಥಾನವೂ ಇಲ್ಲ ಎಂದು ಹೇಳುತ್ತಾರೆ.

ಆಚಾರ್ಯ ರಾಮಾನುಜರ ಪ್ರಕಾರ ಪಾಪ–ಪುಣ್ಯಗಳು ಜೀವಿಯ ನೈತಿಕ ನಡವಳಿಕೆಯನ್ನು ರೂಪಿಸುತ್ತವೆ. ಈ ಫಲಗಳಿಗೆ ತಕ್ಕಂತೆ ಜೀವಿಯು ಜನ್ಮಾಂತರ ಗಳನ್ನು ಹೊಂದುತ್ತಾನೆ. ಈ ರೀತಿ ಅನಾದಿಯಾದ ಸಂಸಾರಕ್ಕೆ ಅವರವರ ಪೂರ್ವ ಕರ್ಮಗಳೇ ಕಾರಣವಾಗಿರುತ್ತವೆ. ಜೀವರುಗಳು ತಾವು ಪರಮಾತ್ಮನ ಅಂಶವೆಂದು ಅವನ ಶರೀರವೆಂದು ಅರಿಯದೆ ಅಜ್ಞಾನದಿಂದ, ಅಹಂಕಾರದಿಂದ ಸಂಸಾರಕ್ಕೆ ಸಿಲುಕು ತ್ತಾರೆ. ಎಲ್ಲಿಯವರೆಗೆ ಜೀವದ ಅಹಂಕಾರ ಮಮಕಾರಗಳು ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಜನನ–ಮರಣಗಳ ಸಂಕೋಲೆ ತಪ್ಪಿದ್ದಲ್ಲ. ಪರಿಶುದ್ಧ ಹೃದಯದಿಂದ ಭಕ್ತಿಯ ಮೂಲಕ ಪರಮಾತ್ಮನಲ್ಲಿ ಜೀವನು ಶರಣಾಗತಿಯಾಗಬೇಕು. ಪರಮಾತ್ಮನ ಅನುಗ್ರಹ ಮಾತ್ರ ಜೀವಿಗೆ ಈ ಸಂಸಾರ ಬಂಧನದಿಂದ ಪಾರುಮಾಡುತ್ತದೆ.

ಆಚಾರ್ಯ ಮಧ್ವರ ಪ್ರಕಾರ ಜೀವನಿಗೆ ಸಂಸಾರ, ಅಜ್ಞಾನ ಸತ್ಯವಾದುದು. ಜೀವಿಯು ಈ ಸಂಸಾರದಲ್ಲಿ ಹಾದುಹೋದಾಗಲೇ ಅವನಿಗೆ ಸತ್ಯ ಜ್ಞಾನ ಉಂಟಾಗಿ ಪೂರ್ಣವಾಗಲು ಪ್ರಯತ್ನಿಸುವುದು. ಪರಮಾತ್ಮನ ಸಂಕಲ್ಪಕ್ಕೆ ಜೀವನು ತಲೆ ಬಾಗಬೇಕು. ಒಂದು ಕಾಲದಲ್ಲಿ ಜೀವನು ಸಂಸಾರದಲ್ಲಿದ್ದರೆ, ಮತ್ತೊಂದು ಕಾಲಕ್ಕೆ ಅದಕ್ಕೆ ಬಿಡುಗಡೆಯಾಗುತ್ತದೆ. ನಿತ್ಯ ಸಂಸಾರಿಗಳು ಜೀವನದ ಅಹಂಕಾರ–ಮಮಕಾರ ಗಳಿಗೆ ಒಳಗಾಗಿ ಸದಾ ಜನನ–ಮರಣ ಚಕ್ರದಲ್ಲಿ ಸುತ್ತುತ್ತಿರುತ್ತಾರೆ. ಹಾಗೆಯೇ ನಿತ್ಯನಾರಕಿಗಳು ಎಂಬ ವರ್ಗಕ್ಕೆ ಮೋಕ್ಷವೇ ಇಲ್ಲ. ಕಾರಣ ಅವರ ಆಂತರಿಕ ಸ್ವರೂಪ ಸದಾ ಕೆಡುಕಿನಿಂದಲೇ ಕೂಡಿರುತ್ತದೆ. ಅಲ್ಲಿ ಪರಿವರ್ತನೆಯೇ ಸಾಧ್ಯವಾಗುವುದಿಲ್ಲ. ಮುಕ್ತಿಯೋಗ್ಯರು ಮಾತ್ರ ಭಗವಂತನ ದಯೆಯಿಂದ ತಮ್ಮ ಸಾಧನೆ, ಸಾಮರ್ಥ್ಯ ಗಳಿಗೆ ಅನುಗುಣವಾಗಿ ಮುಕ್ತಿಯನ್ನು ಹೊಂದುತ್ತಾರೆ.

VII

ಕೊನೆಯದಾಗಿ ಉಪಸಂಹಾರದ ರೂಪದಲ್ಲಿ ಕರ್ಮಮೀಮಾಂಸೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ. ಮಾನವನ ಸತ್ಯದ ಸಾಕ್ಷಾತ್ಕಾರದ ಹಾದಿ ಯಲ್ಲಿ ಕರ್ಮವು ಆಧ್ಯಾತ್ಮಿಕ ಅಭಿವ್ಯಕ್ತಿ ಮತ್ತು ಆಧ್ಯಾತ್ಮಿಕ ಸ್ಫೂರ್ತಿಯೆಂಬ ಆಚಾರ್ಯತ್ರಯರ ಇಂಗಿತವನ್ನು ನಾವು ಒಪ್ಪಬಹುದು. ನಮ್ಮ ಬದುಕಿನ ಕ್ರಿಯಾ ಪೂರ್ಣ ಮುಖದಲ್ಲಿ ಕರ್ಮವು ಸಾಮಾಜಿಕ ಹೊಂದಾಣಿಕೆಯ ಶಕ್ತಿಯಾಗಿ ಅದು ಹೃದಯದಲ್ಲಿರುವ ಆಧ್ಯಾತ್ಮಿಕತೆಯನ್ನು ಎಚ್ಚರಗೊಳಿಸುವ ಒಂದು ಸಾಧನವಾಗುತ್ತದೆ. ಎಚ್ಚರಗೊಳಿಸುವುದು ಎಂದರೆ ನಮ್ಮಲ್ಲಿ ಅಂತರ್ಗತವಾಗಿ ಹುದುಗಿಕೊಂಡಿರುವ ಒಳಗಿನ ಶಕ್ತಿಗಳನ್ನು ಜಾಗೃತಗೊಳಿಸಿ ಅವಶ್ಯಕತೆಯಿಂದ ವ್ಯಕ್ತಗೊಳಿಸುವುದು ಎಂದರ್ಥವಾಗುತ್ತದೆ. ನಾವು ಕರ್ಮಗಳನ್ನು ಕೇವಲ ಲೌಕಿಕ ಅರ್ಥದಲ್ಲಿ ಉಪ ಯೋಗಿಸಿಕೊಂಡರೆ ಅದರ ಸಾಧನಗಳು, ಫಲಗಳು ಲೌಕಿಕವಾಗಿಯೇ ಇರುತ್ತವೆ. ಅಂತಹ ಕರ್ಮಗಳನ್ನು ನಿಷ್ಕಾಮಭಾವದಿಂದ, ಅರ್ಪಣಭಾವದಿಂದ ವಿಶ್ವಚೇತನದಲ್ಲಿ

ಒಂದಾಗಿಸಿದಾಗ ಅದು ಲೋಕ ಸಂಗ್ರಹವಾಗುತ್ತದೆ. ಅಂತಹ ಕ್ರಿಯೆಗಳು ಮಾತ್ರ ಪೂರ್ಣ ಅಭಿವ್ಯಕ್ತಿತೆಯನ್ನು ಪಡೆದಿರುತ್ತವೆ. ಅಲ್ಲದೆ ಇಚ್ಛಾಶಕ್ತಿಯ ಎಲ್ಲ ಸಾಮಾನ್ಯ ಹಾಗೂ ರೂಢಿಯ ಅಭಿವ್ಯಕ್ತಿತೆಯನ್ನು ಅದು ಮೀರಿ ನಿಂತಿದೆ. ಕರ್ತವ್ಯಕ್ಕಾಗಿ ಕರ್ತವ್ಯ ಎಂಬ ಭಾವನೆ ಮೂಡಿಸಿ ಅದು ಲೌಕಿಕವಾದ ಆಕರ್ಷಣೆ, ತೃಪ್ತಿಯಿಂದ ಬಿಡುಗಡೆ ಮಾಡಿ ನಮ್ಮ ಕ್ರಿಯಾತ್ಮಕ ಬದುಕಿಗೆ, ವ್ಯಕ್ತಿತ್ವಕ್ಕೆ ಹೊಸ ಅರ್ಥವನ್ನು ಕೊಟ್ಟು ನಮ್ಮನ್ನು ಒಂದು ಹೊಸ ಬೆಳಕಿನಲ್ಲಿ ಚಲಿಸುವಂತೆ ಮಾಡುತ್ತದೆ. ಪ್ರತಿಯೊಂದೂ ಇಚ್ಛಾಶಕ್ತಿಗಳು ಮತ್ತು ಪುರುಷ ಪ್ರಯತ್ನಗಳು ಆಧ್ಯಾತ್ಮಿಕ ಶಕ್ತಿಯಾಗಿ ರೂಪುಗೊಳ್ಳಬೇಕು. ಈ ಸಾಧನೆಯಲ್ಲಿ ಕರ್ಮಮೀಮಾಂಸೆಯು ತನ್ನ ಅರ್ಥ ಪೂರ್ಣತೆಯನ್ನು ಪಡೆಯುತ್ತದೆ ಎಂದು ನಾವು ಯಾವ ಅನುಮಾನವಿಲ್ಲದೆ ನಿರೂಪಿಸ ಬಹುದು.

ಹನೂರು ಚೆನ್ನಪ್ಪ

ಮಾತು

ಕಟ್ಟಿ ಬಯ್ಯುತ್ತಿದ್ದ ಮೌನದ ಚೀಲ
ಹರಿದು ಮಾತುಗಳು ಸುರಿದು ಹೋಯಿತಲ್ಲ

ಒಳ್ಳೆಯವು–ಕೆಟ್ಟವು ಎಲ್ಲವೂ ಇತ್ತು.
ಗೊತ್ತಿಲ್ಲ ಉದುರಿದುದು ಯಾವ್ಯಾವು ಎಷ್ಟಷ್ಟು.
ಹುಡುಕುತಿರುವೆ ಅಡಗಿ ಹೋಗಿಹುದನ್ನ
ಗುರಿಯಿತ್ತು ಕೆಲವಕ್ಕೆ ಹಲವಕ್ಕೆ ಗುರುತೆ ಇಲ್ಲ.

ಮೌನದ ಚೀಲವನ್ನೊತ್ತ ಗಾಡಿ ಹಾದಿ ಏರಿಳಿತಕೆ
ಕುಲುಕಿ, ಕುದುರಿ ಬಹುಶ ಹರಿದಿರಬೇಕು.
ಸುರಿಯುತ್ತಲೇ ಇವೆಯಲ್ಲ ಹರಿದ ಚೀಲದಿಂದ,
ಬಿಲ್ಲಲು ಇದನಾರು ಹೊಲಿಯಬೇಕು

ಉದುರಿದ ಮಾತಿನಿಂದ ನೊಂದವರು ಎಷ್ಟೋ
ಅಷ್ಟಿಷ್ಟು ಸಂತಸವ ಉಂಡವರು ಎಷ್ಟೋ
ಒಮ್ಮೆ ಹರಿದರೆ ಉದುರುವುದ ತಡೆಯಲಾಗದು ಮನಸು.
ಮೌನಕೂ–ಮನಸಿಗೂ ಮಾತು ಮಧ್ಯದ ನಂಟು

ಹುಡುಕುತಿರುವ ಮನಸು ಮಾಸುವುದಕೂ ಮೊದಲೆ
ಒಳ್ಳೆಯವು ಎಷ್ಟೆಂದು–ಕೆಟ್ಟವು ಎಷ್ಟೆಂದು.
ಮಾಸುವಾಗಲಾದರೂ ಒಳ್ಳೆಯ ಮಾತು ಸೂಸುವಾಸೆ.
ಕೆಟ್ಟವನ್ನೆಲ್ಲಾ ಒಳಗಡಗಿಸಿಕೊಂಡು ಹೊತ್ತಿ ಹೋಗುವ ಆಸೆ.

ಬಿ. ಪಿ. ಮಹೇಶ್‌ಚಂದ್ರ ಗುರು

ದಲಿತರು ಮತ್ತು ಸಮೂಹ ಮಾಧ್ಯಮಗಳು

ದಲಿತರು : ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಹಿಂದೂ ಸಮಾಜದ ಬಹು ಸಂಖ್ಯಾತರನ್ನು ದಲಿತರು ಎಂಬುದಾಗಿ ಸಾಮಾನ್ಯವಾಗಿ ಕರೆಯಲಾಗುತ್ತದೆ. ವಾಸ್ತವವಾಗಿ ದಲಿತ ಸಮುದಾಯವು ಎಲ್ಲ ಸವಲತ್ತು, ಸಂಪನ್ಮೂಲ ಮತ್ತು ಅವಕಾಶಗಳಿಂದ ವಂಚಿತ ವಾಗಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಯಾವುದೇ ವರ್ಗಕ್ಕೂ ಸೇರದೆ ಅಸ್ಪೃಶ್ಯರಾಗುಳಿದು ಎಲ್ಲ ಬಗೆಯ ದಾರಿದ್ರ್ಯಕ್ಕೆ ಗುರಿಯಾಗಿರುವ 'ಪಂಚಮ' ರೆಂಬ ಐದನೆ ವರ್ಗವನ್ನು ವಸ್ತು ನಿಷ್ಟವಾಗಿ 'ದಲಿತರು' ಎಂಬುದಾಗಿ ಕರೆಯಬಹುದು. ಇತರೇ ಹಿಂದುಳಿದ ಜನಾಂಗಗಳು ತಮ್ಮನ್ನು 'ದಲಿತರು' ಎಂದು ಕರೆಸಿಕೊಳ್ಳಲು ಒಪ್ಪುವುದಿಲ್ಲ, ಅವರು ತಮ್ಮನ್ನು 'ಶೂದ್ರರು' ಎಂದೇ ಕರೆದು ಕೊಂಡಿದ್ದಾರೆ. ಕರ್ನಾಟಕ ದಲಿತ ಸಂಘರ್ಷಸಮಿತಿಯ ಸಂವಿಧಾನವು ದಲಿತರನ್ನು ಹೀಗೆ ವ್ಯಾಖ್ಯಾನಿಸುತ್ತದೆ. "ದಲಿತರು ಎಂದರೆ ಅಸ್ಪೃಶ್ಯರು ಮತ್ತು ಜಾತಿಯಿಂದ ಅವಮಾನಿತರಾದವರು. ಮತ್ತೂ ಹೇಳಬೇಕೆಂದರೆ ಯಾರೂ ಹಿಂದೂ ಚಾತುರ್ವರ್ಣದ ಶ್ರಮ ವಿಭಜನೆಯ ಕುತಂತ್ರಕ್ಕೆ ಈಡಾಗಿ ಕೀಳು ವೃತ್ತಿಗಳನ್ನೇ ತಲೆತಲಾಂತರದಿಂದ ಅವಲಂಬಿಸಿ ಜಾತಿಯ ಹೆಸರು ಹೇಳಲು ನಾಚಿಕೆ ಪಡುತ್ತಾರೋ ಅವರು ದಲಿತರು." ಶತಮಾನಗಳಿಂದ ವರ್ಣಾಶ್ರಮ ಧರ್ಮ ಮತ್ತು ಜಾತಿ ವ್ಯವಸ್ಥೆಗಳಿಗೆ ಬಲಿಪಶು ಗಳಾಗಿರುವ ಗಾಂಧೀಜಿ ಕರೆದ 'ಹರಿಜನ ಸಮುದಾಯವನ್ನೇ ದಲಿತರು ಎಂದು ವಸ್ತು ನಿಷ್ಟವಾಗಿ ಹೇಳಬಹುದು.

ದಲಿತ ಸಮುದಾಯ ಇತರೆ ಎಲ್ಲ ಸಮುದಾಯಗಳಿಗಿಂತಲೂ ಸರ್ವ ವಿಧದಲ್ಲೂ ಶೋಷಣೆಗೊಳಪಟ್ಟಿದೆ. ದಲಿತರು ಸಾಂಸ್ಕೃತಿಕವಾಗಿ ಆಗರ್ಭ ಶ್ರೀಮಂತರೇ ಆಗಿದ್ದಾರೆ. ಆದರೆ ಬದುಕಿನ ಎಲ್ಲಾ ಅವಕಾಶಗಳಿಂದಲೂ ವಂಚಿತರಾಗಿದ್ದಾರೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ದಲಿತರನ್ನು ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ತೊಡಗಿಸಿ ಸರ್ವರೂ ಸಮಾನರು ಎಂದು ಹೇಳಿ ಸಮತಾ ಸಮಾಜ" ನಿರ್ಮಾಣ ಮಾಡಿದರು. 20ನೇ ಶತಮಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಲಿತ

ಸಮುದಾಯವನ್ನು ಸಂಘಟಿಸಿ ಅವರ ಅಭಿವೃದ್ಧಿಗೆ ನಾಂದಿ ಹಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 48 ವರ್ಷಗಳೇ ಕಳೆದಿದ್ದರೂ ದಲಿತರು ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ದಲಿತರು ಮೇಲ್ವರ್ಗದವರಿಂದ ನಿರಂತರವಾಗಿ ಶೋಷಣೆಗೆ ಒಳಪಟ್ಟಿದ್ದಾರೆ. ಅವರಲ್ಲಿ ಬಹು ಸಂಖ್ಯಾತರು ಭೂ ಹೀನರು, ಅವಿದ್ಯಾವಂತರು ಮತ್ತು ನಿರುದ್ಯೋಗಿಗಳಾಗಿ ಇಂದಿಗೂ ನರಳುತ್ತಿದ್ದಾರೆ.

ಸಮೂಹ ಮಾಧ್ಯಮಗಳು :

ಜನ ಸಮೂಹಕ್ಕೆ ಸಮಾಚಾರ, ಶಿಕ್ಷಣ ಮತ್ತು ಮನರಂಜನೆಗಳನ್ನು ಒದಗಿಸುವ ಆಧುನಿಕ ಮತ್ತು ಜಾನಪದ ಮಾಧ್ಯಮಗಳನ್ನು ಸಾಮಾನ್ಯ ಅರ್ಥದಲ್ಲಿ ಸಮೂಹ ಮಾಧ್ಯಮಗಳು ಎಂದು ವರ್ಗೀಕರಿಸಲಾಗಿದೆ. ವೃತ್ತ ಪತ್ರಿಕೆಗಳು, ಚಲನ ಚಿತ್ರ, ಬಾನುಲಿ, ದೂರದರ್ಶನ ಜಾಹಿರಾತು, ಸಾರ್ವಜನಿಕ ಸಂಪರ್ಕ, ಮತ್ತು ಜಾನಪದ ಸಂಪರ್ಕ, ಮತ್ತು ಜಾನಪದ ಮಾಧ್ಯಮಗಳನ್ನು 'ಸಮೂಹ ಮಾಧ್ಯಮಗಳು' ಎಂಬುದಾಗಿ ಸಂವಹನ ಪಂಡಿತರು ಕರೆದಿದ್ದಾರೆ. ಸಮೂಹ ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕು ನೆಲೆಗಟ್ಟುಗಳಲ್ಲಿ ಒಂದಾಗಿವೆ. ಜನಾಭಿಪ್ರಾಯ ನಿರೂಪಿಸುವಲ್ಲಿ ಅವುಗಳ ಅತ್ಯಂತ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಜಗತ್ತಿನ ಎಲ್ಲೆಡೆ ಪ್ರಜಾ ಪ್ರಭುತ್ವವನ್ನು ಬೆಳೆಸುವಲ್ಲಿ ಸಮೂಹ ಮಾಧ್ಯಮಗಳು ವಿಶಿಷ್ಟವಾದ ಕೊಡುಗೆಯನ್ನೇ ನೀಡಿವೆ. ಸಮೂಹ ಮಾಧ್ಯಮಗಳು ಸಮಾಜದ ಅಭಿವೃದ್ಧಿಗೆ ಅತ್ಯಂತ ಅವಶ್ಯಕ. ಸಮೂಹ ಮಾಧ್ಯಮಗಳಿಲ್ಲದ ಸಮಾಜದಲ್ಲಿ ಪ್ರಜಾ ಪ್ರಭುತ್ವ ಅರ್ಥರಹಿತವಾಗುತ್ತದೆ. ಸರ್ಕಾರದ ವೈಫಲ್ಯತೆ, ಜನವಿರೋಧಿ ಕೃತ್ಯಗಳು, ಜನ ವಿರೋಧಿಶಕ್ತಿಗಳು, ಅಭಿವೃದ್ಧಿ ವಿರೋಧಿ ಶಕ್ತಿಗಳು, ಇವೇ ಮೊದಲಾದವುಗಳನ್ನು ಬಯಲುಗೊಳಿಸಿ ಜನರ ಕೈಗಳನ್ನು ಬಲಪಡಿಸಿ ಜನತಂತ್ರ ಮತ್ತು ರಾಷ್ಟ್ರೀಯ ಹಿತಾ ಶಕ್ತಿಗಳನ್ನು ಕಾಪಾಡುವಲ್ಲಿ ಸಮೂಹ ಮಾಧ್ಯಮಗಳು ಸಮರ್ಥವಾಗಿವೆ. ಭಾರತದಲ್ಲಿ ಸಮೂಹ ಮಾಧ್ಯಮಗಳು ಸರ್ಕಾರ ಮತ್ತು ಖಾಸಗೀ ಮಾಲಿಕತ್ವಕ್ಕೆ ಒಳಪಟ್ಟು ಜನರಿಂದ ದೂರ ಸರಿದಿದೆ. ಸಮೂಹ ಮಾಧ್ಯಮಗಳು ಸಮೂಹ ಮಾಧ್ಯಮಗಳು ಉಳ್ಳವರು, ಉಳ್ಳವರಿಂದಲೇ ಮತ್ತು ಉಳ್ಳವರಿಗೊಸ್ಕರವೇ ಇರುವ ಮಾಧ್ಯಮಗಳಾಗಿವೆ. ಇವು ಜನರಿಂದ, ಜನರಿಗಾಗಿ, ಮತ್ತು ಜನರಿಗೋಸ್ಕರವೇ ಇರುವಂತಹ ಮಾಧ್ಯಮಗಳಾಗಿ ಭಾರತದಲ್ಲಿ ಬೆಳೆಯದಿರುವುದು ಶೋಚನೀಯ ಸಂಗತಿ. ವೃತ್ತ ಪತ್ರಿಕೆಗಳು ಮತ್ತು ಚಲನಚಿತ್ರ ಮಾಧ್ಯಮಗಳು ಸರ್ಕಾರಿ ಮತ್ತು ಖಾಸಗೀ ಒಡೆತನಕ್ಕೆ ಒಳಪಟ್ಟಿದ್ದರೆ ಆಕಾಶವಾಣಿ ಮತ್ತು ದೂರದರ್ಶನಗಳು ಸರ್ಕಾರೀ ಒಡೆತನಕ್ಕೆ ಒಳಪಟ್ಟಿವೆ, ಜಾಹಿರಾತು ಮತ್ತು ಸಾರ್ವಜನಿಕ ಸಂಪರ್ಕ ಮಾಧ್ಯಮಗಳು ಸರ್ಕಾರೀ ಮತ್ತು ಖಾಸಗೀ ಮಾಲಿಕತ್ವಕ್ಕೆ ಒಳಪಟ್ಟಿದೆ. ಭಾರತದಲ್ಲಿ ಜಾನಪದ ಮಾಧ್ಯಮಗಳು ಮಾತ್ರವೇ ವಾಸ್ತವವಾಗಿ ಜನಮಾಧ್ಯಮಗಳಾಗಿವೆ. ದುರದೃಷ್ಟ

ವಶಾತ್, ಈ ಮಾಧ್ಯಮಗಳು ನಗರೀಕರಣ, ಯಾಂತ್ರೀಕರಣ, ಕೈಗಾರಿಕಾಕರಣ, ಆಧುನೀಕರಣ ಮೊದಲಾದವುಗಳಿಗೆ ಬಲಿಪಶುಗಳಾಗುತ್ತಿವೆ. ಸರ್ಕಾರ ಮತ್ತು ಖಾಸಗೀ ಸಂಸ್ಥೆಗಳು ಜಾನಪದ ಮಾಧ್ಯಮಗಳನ್ನು ಪುನರುಜ್ಜೀವನ ಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿಲ್ಲ.

ದಲಿತರ ಮಟ್ಟಿಗೆ ಹೇಳುವುದಾದರೆ ಜಾನಪದ ಮಾಧ್ಯಮಗಳನ್ನು ಹೊರತು ಪಡಿಸಿ ಉಳಿದೆಲ್ಲಾ ಸಮೂಹ ಮಾಧ್ಯಮಗಳು ಯಾವುದೇ ರೀತಿಯಲ್ಲೂ ಉಪಯುಕ್ತ ವಾಗಿಲ್ಲ. ಇವುಗಳು ಭಾರತದ ಕೋಟ್ಯಾನುಕೋಟಿ ದಲಿತರ ವಿಮೋಚನೆಯ ದಾರಿ ದೀಪಗಳಾಗಿ ಕೆಲಸ ನಿರ್ವಹಿಸುತ್ತಿಲ್ಲ. ದಲಿತ ಸಮುದಾಯದ ಶಿಕ್ಷಣ, ಸಂಘಟನೆ, ವಿಮೋಚನೆ ಮತ್ತು ಪ್ರಗತಿಗಳಿಗಾಗಿ ಭಾರತೀಯ ಸಮೂಹ ಮಾಧ್ಯಮಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಇವುಗಳು ಉಳ್ಳವರ ವಕ್ತಾರರಾಗಿ ಮತ್ತು ದಲಿತರ ಪರಮ ಶತ್ರುಗಳಾಗಿ ಈ ದೇಶದಲ್ಲಿ ಕೆಲಸ ನಿರ್ವಹಿಸುತ್ತಿವೆ. ಅಲ್ಲದೆ ಈ ಮಾಧ್ಯಮಗಳು ದಲಿತ ಜಗತ್ತನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಸಾಮಾಜಿಕ ಬದಲಾವಣೆ, ಶೈಕ್ಷಣಿಕ ಪ್ರಗತಿ, ಆರ್ಥಿಕ ಪ್ರಗತಿ, ಜನತಂತ್ರ ರಕ್ಷಣೆ, ರಾಜಕೀಯ ಸುಧಾರಣೆ, ಸಂಸ್ಕೃತಿಕ ಕ್ರಾಂತಿ, ಕೋಮು ಸೌಹಾರ್ದ, ರಾಷ್ಟ್ರೀಯ ಭಾವೈಕ್ಯತೆ ಮೊದಲಾದುವುಗಳು ನಮ್ಮ ಸಮೂಹ ಮಾಧ್ಯಮಗಳ ಪ್ರಧಾನ ಆದ್ಯತೆಗಳಾಗಿಲ್ಲ. ಬದಲಾಗಿ ಜಾಹೀರಾತು, ಮನರಂಜನೆ, ಯೋಜಿತ ಪ್ರಚಾರ, ಲಾಭಗಳಿಕೆ, ಮೊದಲಾದುವುಗಳೇ ಈ ಮಾಧ್ಯಮಗಳ ಪರಮಧ್ಯೇಯಗಳಾಗಿವೆ. ದಲಿತರ ಸರ್ವಾಂಗೀಣ ಅಭಿವೃದ್ಧಿ ಭಾರತೀಯ ಸಮೂಹ ಮಾಧ್ಯಮಗಳ ಕೊನೆಯ ಆದ್ಯತೆ ಯಾಗಿದೆ. ಈ ವಾದವನ್ನು ಪುಷ್ಟೀಕರಿಸುವ ಸಲುವಾಗಿ ನಾನು ಕೆಳಕಂಡ ಮಾಧ್ಯಮ ವಾರು ಉದಾಹರಣೆಗಳನ್ನು ನೀಡಬಯಸುತ್ತೇನೆ.

ದಲಿತರು ಮತ್ತು ಪತ್ರಿಕೆಗಳು :

ಮುದ್ರಣ ಮಾಧ್ಯಮ ಅತ್ಯಂತ ಪುರಾತನವಾದ ಸಮೂಹ ಮಾಧ್ಯಮ. ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು, ಗ್ರಂಥಗಳು ಮತ್ತಿತರ ಪ್ರಕಟನೆಗಳು ಮುದ್ರಣ ಮಾಧ್ಯಮದ ವ್ಯಾಪ್ತಿಗೆ ಒಳಪಡುತ್ತದೆ. ಪತ್ರಿಕೆಗಳು ಸಮಾಜದ ಅಭಿವೃದ್ಧಿಗೆ ಅತ್ಯಂತ ಅವಶ್ಯಕ. ಅಮೇರಿಕಾದ ಮಾಜಿ ಅಧ್ಯಕ್ಷ ಥಾಮಸ್ ಜೆಫರ್‌ಸನ್ ಹಿಂದೊಮ್ಮೆ ಪತ್ರಿಕೆಗಳ ಮಹತ್ವ ಕುರಿತಂತೆ ಹೀಗೆ ಹೇಳಿದ್ದರು: "ಪತ್ರಿಕೆಗಳಿಲ್ಲದ ಸರಕಾರ ಅಥವಾ ಸರಕಾರವಿಲ್ಲದ ಪತ್ರಿಕೆಗಳು ಎರಡರಲ್ಲಿ ನನ್ನ ಆಯ್ಕೆ ಸರ್ಕಾರವಿಲ್ಲದ ಪತ್ರಿಕೆಗಳೇ ಆಗಿವೆ". ಜನರ ಹಿತರಕ್ಷಣೆ ಮಾಡುವಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ವಿಫಲಗೊಂಡಾಗ ಪತ್ರಿಕಾಂಗವು ಜನತೆಯ ವಕೀಲನಂತೆ ಕಾರ್ಯ ನಿರ್ವಹಿಸಿದೆ. ಜನವಿರೋಧಿ ಶಕ್ತಿಗಳ ವಿರುದ್ಧ ಸಂಘಟಿತ

ಸಮರವನ್ನು ಘೋಷಿಸುವಲ್ಲಿ ಪತ್ರಿಕೆಗಳು ಹಿಂದೆ ಬಿದ್ದಿಲ್ಲ. ಬ್ರಿಟೀಷರ ಬಂಧೂಕು ಶಕ್ತಿಯ ವಿರುದ್ಧ ರಾಷ್ಟ್ರ ನಾಯಕರಾದ ಗಾಂಧಿ, ನೆಹರೂ, ತಿಲಕ್, ಆಜಾದ್, ಅಂಬೇಡ್ಕರ್, ಮೊದಲಾದವರು ತಮ್ಮ ಲೇಖನಿ ಶಕ್ತಿಯನ್ನು ಬಳಸಿಕೊಂಡು ಪತ್ರಿಕೋದ್ಯಮದ ಮೂಲಕ ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮೊದಲಾದುವುಗಳನ್ನು ದೊರಕಿಸಿಕೊಟ್ಟಿದ್ದಾರೆ. ಪತ್ರಿಕೋದ್ಯಮವು ಕೇವಲ ಹಣ ಗಳಿಸುವ ಉದ್ಯಮವಾಗಿರದೆ ಜನಸೇವಾ ಸಂಸ್ಥೆಯೂ ಆಗಿದೆ. ವಾಸ್ತವವಾಗಿ ಪತ್ರಿಕೋದ್ಯಮವು ಜನಸೇವೆಗಾಗಿ ವಿಶಾಸಲಾದ ಒಂದು ಪ್ರಧಾನ ವೃತ್ತಿಯಾಗಿದೆ.

ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ (ಎ.ಬಿ.ಸಿ.), 1995 ರ ವರದಿಯ ರೀತ್ಯಾ ಭಾರತದಲ್ಲಿ ಸುಮಾರು 2.8 ಕೋಟಿ ಪ್ರಸಾರವುಳ್ಳ ದಿನಪತ್ರಿಕೆಗಳಿವೆ. ಪ್ರೆಸ್ ಇಂಡಿಯಾ 1993 ರ ಪ್ರಕಾರ ಭಾರತದಲ್ಲಿ 28.09 ಮಿಲಿಯನ್ ಪತ್ರಿಕಾ ಪ್ರಸಾರ ಇವುಗಳಲ್ಲಿ ಭಾಷಾ ಪತ್ರಿಕೆಗಳೇ ಅಧಿಕ ಸಂಖ್ಯೆಯಲ್ಲಿ ಪ್ರಕಟಿಸಲ್ಪಡುತ್ತಿವೆ. ಆಂಗ್ಲ ಭಾಷಾ ಪತ್ರಿಕೆಗಳ ಪ್ರಕಟಣೆಯ ಪ್ರಮಾಣ 3.88 ಮಿಲಿಯನ್‌ಗಳು. ಮಲೆಯಾಳ ಮನೋರಮಾ ಪತ್ರಿಕೆಯು ಅತ್ಯಧಿಕ ಪ್ರಸಾರವುಳ್ಳ ದಿನಪತ್ರಿಕೆಯಾಗಿದೆ. ಟೈಮ್ಸ್ ಆಫ್ ಇಂಡಿಯಾ (ಇಂಗ್ಲಿಷ್) ಪಂಜಾಬ್‌ಕೇಸರಿ (ಹಿಂದಿ) ಗುಜರಾತ್ ಸಮಾಚಾರ್ (ಗುಜರಾತಿ) ಇಂಡಿಯನ್ ಎಕ್ಸ್‌ಪ್ರೆಸ್ (ಇಂಗ್ಲಿಷ್) ಆಜ್ (ಹಿಂದಿ), ಜಾಗರಣ್ (ಹಿಂದಿ), ದಿ ಹಿಂದೂ (ಇಂಗ್ಲಿಷ್) ಮಾತೃಭೂಮಿ (ಮಲಿಯಾಳಿ), ಸಂದೇಶ್ (ಗುಜರಾತಿ), ಆನಂದ್ ಬಜಾರ್ ಪತ್ರಿಕಾ (ಬಂಗಾಲಿ) ಈ ನಾಡು (ತೆಲುಗು) ದಿನತಂತಿ (ತಮಿಳು) ಲೋಕಸತ್ತಾ (ಮರಾಠಿ) ಪ್ರಜಾವಾಣಿ (ಕನ್ನಡ) ಅಜಿತ್ (ಪಂಜಾಬಿ) ಮತ್ತು ಸಮಾಜ್ (ಒರಿಯಾ) ದಿನಪತ್ರಿಕೆಗಳು ನಂತರದ ಸ್ಥಾನ ಪಡೆದಿವೆ. ಭಾರತದಲ್ಲಿ ಪ್ರಕಟಿಸಲ್ಪಡುವ ಪ್ರಮುಖ ನಿಯತಕಾಲಿಕೆಗಳು ಯಾವು ವೆಂದರೆ–ಮಲೆಯಾಲ ಮನೋರಮಾ, (ಮಲೆಯಾಳಿ) ಮಂಗಳಂ (ಮಲೆಯಾಳಿ) ಕುಮುದಂ (ತಮಿಳು), ರೀಡರ್ಸ್‌ಡೈಜೆಸ್ಟ್ (ಇಂಗ್ಲಿಷ್) ಇಂಡಿಯಾ ಟುಡೇ (ಇಂಗ್ಲೀಷ್) ಮನೋಹರ್ ಕಹಾನಿಯಾ (ಹಿಂದಿ) ಚಿತ್ರಲೇಖ (ಗುಜರಾತಿ) ಗೃಹ ಶೋಭಾ (ಹಿಂದಿ) ವನಿತ (ಮಲಿಯಾಳಿ) ರಾಣಿ (ತಮಿಳು) ಸ್ವಾತಿ (ತೆಲುಗು), ಸುಧಾ (ಕನ್ನಡ) ಶ್ರೀ (ಮರಾಠಿ) ಸನಂದ (ಬಂಗಾಲಿ) ಮತ್ತು ಸುಚರಿತ (ಒರಿಯಾ).

ಭಾರತದಲ್ಲಿ 90 ಕೋಟಿಗೂ ಹೆಚ್ಚಿರುವ ಜನಸಂಖ್ಯೆಗೆ ಲಭಿಸುತ್ತಿರುವ ದಿನ ಪತ್ರಿಕೆಗಳ ಪ್ರಸಾರದ ಪ್ರಮಾಣ ಕೇವಲ 2.8 ಕೋಟಿ. ನಿರಕ್ಷರತೆ ಮತ್ತು ಬಡತನಗಳಿಂದಾಗಿ ಪತ್ರಿಕಾ ಮಾಧ್ಯಮವು ಪೂರ್ಣವಾಗಿ ಬೆಳೆಯಲಾಗಲಿಲ್ಲ. ಭಾರತದ ಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿ ದಲಿತರ ಸಮಸ್ಯೆಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಕೆಲಸ ಇಂದಿಗೂ ನಡೆದಿಲ್ಲ. ಎಂದಾದರೊಮ್ಮೆ ದಲಿತರ ಮೇಲಿನ ದೌರ್ಜನ್ಯಗಳ ವರದಿ ಮತ್ತು ದಲಿತರ ಸಭೆ ಸಮಾರಂಭಗಳ ಸಂಕ್ಷಿಪ್ತ ವರದಿ ಪ್ರಕಟನೆ

ಬಿಟ್ಟರೆ ಸಮಗ್ರ ದಲಿತ ಜಗತ್ತಿನಮೇಲೆ ಬೆಳಕು ಚೆಲ್ಲುವಂತಹ ಪತ್ರಿಕಾ ಬರಹಗಳು ನಮಗೆ ಕಾಣಸಿಗುವುದಿಲ್ಲ. ಮೇಲ್ಜಾತಿಯ ಜನರನ್ನು ಓಲೈಸುವುದರಲ್ಲಿ ನಮ್ಮ ಪತ್ರಿಕೆಗಳು ನಿರತವಾಗಿವೆ. ಇವುಗಳು ಪ್ರಧಾನವಾಗಿ ಜಾಹೀರಾತು, ಮನರಂಜನೆ, ಪ್ರಚಾರ, ಯೋಜಿತ ಪ್ರಚಾರ ಮತ್ತು ಲಾಭ ಗಳಿಕೆಯ ಮಾಧ್ಯಮವಾಗಷ್ಟೇ ಬೆಳಗಿವೆ. ದಲಿತರ ನೋವು ನಲಿವುಗಳೊಂದಿಗೆ ಸಮರ್ಪಕವಾಗಿ ಸ್ಪಂಧಿಸುವಲ್ಲಿ ನಮ್ಮ ಪತ್ರಿಕೆಗಳು ಹಿಂದೆ ಬಿದ್ದಿದೆ. ದಲಿತ ಜಗತ್ತು ನಮ್ಮ ಪತ್ರಿಕೆಗಳಿಗೆ ಬೇಡವಾದ ವಿಷಯ ವಾಗಿದೆ. ದಲಿತರ ಜಾಗೃತಿ, ಸಂಘಟನೆ ಮತ್ತು ಹೋರಾಟಗಳಿಗೆ ಪೂರಕವಾದ ಪತ್ರಿಕಾ ಬರಹಗಳು ನಮಗೆ ಸಾಕಷ್ಟು ಪ್ರಮಾಣದಲ್ಲಿ ಲಭಿಸುತ್ತಿಲ್ಲ. ಇದಕ್ಕೆ ಪತ್ರಿಕಾ ಮಾಲಿಕರು ಮತ್ತು ಸಂಪಾದಕರ ಬದ್ಧತೆ ಕೊರತೆಯೇ ಪ್ರಧಾನವಾಗಿದೆ. ಭಾರತದಲ್ಲಿ ಪತ್ರಿಕಾ ಮಾಲಿಕರು, ಮತ್ತು ಸಂಪಾದಕರು ಮತ್ತು ಪತ್ರ ಕರ್ತರುಗಳಲ್ಲಿ ದಲಿತರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು. ಇಡೀ ಇಂಡಿಯಾದಲ್ಲಿ ಹುಡುಕಿದರೆ ಒಂದು ಡಜನ್ ದಲಿತ ಮೂಲದ ಪತ್ರಿಕಾ ಮಾಲಿಕರು ಮತ್ತು ಸಂಪಾದಕರು ಸಿಗುವುದಿಲ್ಲ. ಕಾರ್ಯ ನಿರತ ಪತ್ರಕರ್ತರ ಪೈಕಿ ಬಹು ಸಂಖ್ಯಾತರು ಮೇಲ್ವರ್ಗದವರೇ ಇದ್ದಾರೆ. ಈ ಕಾರಣಗಳಿಂದಾಗಿ ಭಾರತೀಯ ಪತ್ರಿಕೆಗಳು ದಲಿತರನ್ನು ಬಹಳವಾಗಿ ನಿರ್ಲಕ್ಷಿಸಿದೆ.

ಭಾರತದ ಸುಪುತ್ರ, ಮಾನವತೆಯ ಹರಿಕಾರ ಮತ್ತು ಶೋಷಿತರ ಮಹಾನ್ ನಾಯಕ ಡಾ. ಬಿ. ಆರ್. ಅಂಬೇಡ್ಕರ್‌ರವರು ಮೊತ್ತ ಮೊದಲ ಬಾರಿಗೆ ದಲಿತ ಪತ್ರಿಕೋದ್ಯಮವನ್ನು ಈ ರಾಷ್ಟ್ರದಲ್ಲಿ ಪ್ರಾರಂಭಿಸಿದರು. ಅವರು ಮೂಕ ನಾಯಕ, ಬಹಿಷ್ಕೃತ ಭಾರತ, ಸಮತಾ ಮತ್ತು ಜನತಾ ಎಂಬ ನಾಲ್ಕು ಪತ್ರಿಕೆಗಳನ್ನು ಪ್ರಕಟಿಸಿದರು. ಭಾರತೀಯ ಪತ್ರಿಕೆಗಳು ಒಂದು ಸ್ವಾತಂತ್ರ್ಯಗಳಿಕೆಯ ಏಕೈಕ ಗುರಿಯನ್ನು ಹೊಂದಿದ್ದವು. ಭಾರತೀಯ ಸಮಾಜ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಮತ್ತು ದೀನ ದಲಿತರ ಉನ್ನತಿ ಅಂದಿನ ಪತ್ರಿಕೆಗಳ ಪ್ರಧಾನ ಗುರಿಗಳಾಗಿರ ಲಿಲ್ಲ. ವ್ಯವಸ್ಥೆಗೆ ವಿರುದ್ಧವಾದ ಪತ್ರಿಕಾ ಧೋರಣೆ ಅತ್ಯವಶ್ಯ ಎಂಬುದು ಅವರ ನಿಲುವಾಗಿತ್ತು. ಭಾರತೀಯ ಪತ್ರಿಕೆಗಳು ಹಿಂದಿನಿಂದಲೂ ಪ್ರಧಾನವಾಗಿ ಮೇಲ್ಜಾತಿಯ ಶ್ರೀಮಂತರ ಪ್ರಭುತ್ವಕ್ಕೆ ಒಳಪಟ್ಟಿದೆ. ದಲಿತರ ಬದುಕು, ಆಶಯ, ಮತ್ತು ಅಭಿವೃದ್ಧಿಗಳಿಗೆ ನಮ್ಮ ಪತ್ರಿಕೆಗಳು ಪೂರಕವಾಗಿಲ್ಲ.

ಭಾರತೀಯ ಪತ್ರಿಕೋದ್ಯಮವನ್ನು ಅಂಬೇಡ್ಕರ್ ಹೀಗೆ ವಿಶ್ಲೇಷಿಸಿದ್ದಾರೆ. "ಹಿಂದೊಮ್ಮೆ ವೃತ್ತಿಯಾಗಿದ್ದ ಪತ್ರಿಕೋದ್ಯಮವು ಇಂದು ಒಂದು ಉದ್ದಿಮೆಯಾಗಿ ಬೆಳೆದಿದೆ. ಅದಕ್ಕೆ ಮೈಸಾಬೂನು ಉತ್ಪಾದಿಸುವುದನ್ನು ಬಿಟ್ಟು ಬೇರಾವ ನೈತಿಕ ಕೆಲಸಗಳು ಇಲ್ಲವಾಗಿವೆ. ಅದು ತಾನು ಪ್ರಜೆಗಳ ಮಾರ್ಗದರ್ಶಿ ಎಂಬುದನ್ನು ಮರೆತಿದೆ. ವಸ್ತು ನಿಷ್ಠವಾದ ಸುದ್ದಿ ನೀಡಿಕೆ, ಸಮುದಾಯಕ್ಕೆ ಒಳಿತನ್ನುಂಟು ಮಾಡಬಲ್ಲ ಸಾರ್ವಜನಿಕ ನಿರೂಪಣೆ, ತಪ್ಪು ಮಾರ್ಗ ತುಳಿದಿರುವ ವ್ಯಕ್ತಿಗಳನ್ನು ಅವರೆಷ್ಟೇ ದೊಡ್ಡವರಿರಲಿ ಸರಿದಾರಿಗೆ ತರುವುದು ಇವೇ ಮೊದಲಾದುವುಗಳನ್ನು

ಭಾರತೀಯ ಪತ್ರಿಕೋದ್ಯಮ ಪ್ರಧಾನ ಉದ್ದೇಶಗಳೆಂದು ಪರಿಗಣಿಸಿಲ್ಲ. ಒಬ್ಬನನ್ನು ನಾಯಕನೆಂದು ಒಪ್ಪಿಕೊಂಡು ಕುರುಡಾಗಿ ಆದರಿಸುವುದಷ್ಟೇ ಇಂದಿನ ಪತ್ರಿಕೋದ್ಯಮದ ಪ್ರಧಾನ ಕೆಲಸವಾಗಿದೆ. ಸುದ್ದಿಗೆ ಬದಲಾಗಿ ಉದ್ರೇಕ ಕಾರಿ ಬರಹ, ಅರ್ಥಪೂರ್ಣ ಅಭಿಪ್ರಾಯಕ್ಕೆ ಬದಲಾಗಿ ಅನರ್ಥಕಾರಿ ಭಾವನೆ, ಜವಾಬ್ದಾರಿಯುತ ವ್ಯಕ್ತಿಗಳನ್ನು ಮನಒಲಿಸುವುದರ ಬದಲಾಗಿ ಬೇಜವಾಬ್ದಾರಿಯುತ ವ್ಯಕ್ತಿಗಳನ್ನು ಓಲೈಸುವುದು ಇವೇ ಮೊದಲಾದ ಪ್ರವೃತ್ತಿಗಳನ್ನು ಇಂದಿನ ಭಾರತೀಯ ಪತ್ರಿಕೋದ್ಯಮ ವಿಪುಲವಾಗಿ ಪ್ರತಿಬಿಂಬಿಸುತ್ತದೆ. ಸ್ಯಾಟಿಸ್‌ಬರಿ ಅವರು ನಾರ್ತ್‌ಕ್ಲಿಫ್ ಪತ್ರಿಕೋದ್ಯಮವನ್ನು 'ಕಛೇರಿ ಹುಡುಗರು ಕಛೇರಿ ಹುಡುಗರಿಗಾಗಿ ಬರೆಯುವಂತಹ ಪತ್ರಿಕೋದ್ಯಮ' ಎಂದು ವ್ಯಾಖ್ಯಾನಿಸಿರುವಂತೆ ಭಾರತೀಯ ಪತ್ರಿಕೋದ್ಯಮವು ಇಂತಹುದೇ ಮತ್ತು ಇದಕ್ಕಿಂತ ಹೆಚ್ಚಿನದನ್ನು ಒಳಗೊಂಡ ಪತ್ರಿಕೋದ್ಯಮವಾಗಿದೆ. ಇಷ್ಟೇ ಅಲ್ಲದೆ ತಮ್ಮ ನಾಯಕನನ್ನು ವೈಭವೀಕರಿಸುವ ಸಲುವಾಗಿ ಡೊಳ್ಳು ಭಾರಿಸುವ ಹುಡುಗರು ಬರೆದಂತಹ ಪತ್ರಿಕೋದ್ಯಮ ನಮ್ಮದಾಗಿದೆ. ವ್ಯಕ್ತಿ ಪೂಜೆ ಮಾಡುವ ಸಲುವಾಗಿ ರಾಷ್ಟ್ರೀಯ ಹಿತಾ ಶಕ್ತಿಯನ್ನು ಹಿಂದೆಂದಿಗಿಂತಲೂ ಬಲಿಕೊಡಲಾಗಿದೆ. ಕುರುಡಾದ ವ್ಯಕ್ತಿಪೂಜೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಇವುಗಳ ಮಧ್ಯೆಯೂ ಕೆಲವಾರು ಗೌರವಾನ್ವಿತ ವಿನಾಯಿತಿಗಳುಂಟು. ಆದರೆ ಅಂತಹವರ ಸಂಖ್ಯೆ ಬಹಳ ಕಡಿಮೆ ಇದ್ದು ಅವರ ಧ್ವನಿ ಈ ಗದ್ದಲದಲ್ಲಿ ಕೇಳಿಸದಂತಾಗಿದೆ''.

ಶ್ರೀ ಎಂ. ರವಿಕುಮಾರ್ ಅವರು 1986 ರಲ್ಲಿ 'ದಲಿತ ಮತ್ತು ಪತ್ರಿಕೆ' ಎಂಬ ವಿಷಯದ ಮೇಲೆ ನಡೆಸಿರುವ ಅಧ್ಯಯನ ಹೀಗೆ ಹೇಳುತ್ತದೆ: "ನಮ್ಮ ನಾಡಿನ ಪತ್ರಿಕೆಗಳಲ್ಲಿ ದಲಿತರಿಗೆ ಸಂಬಂಧಿಸಿದ ಸುದ್ದಿಗಳನ್ನು ಕೊಡುವುದಕ್ಕೆ ಮೀಸಲಿಟ್ಟಿರುವ ಸ್ಥಳಾವಕಾಶ ಶೇಕಡಾ ಒಂದಕ್ಕಿಂತ ಕಡಿಮೆ. ದಲಿತರ ಅಭಿವೃದ್ಧಿ ಮತ್ತು ಅವರ ವ್ಯಕ್ತಿತ್ವದ ವಿಕಾಸಕ್ಕೆ ಪೂರಕವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ನೀತಿಗಳ ಒಗ್ಗೆ ಪತ್ರಿಕೆಗಳು ಯಾವುದೇ ನಿಲುವನ್ನು ತೆಗೆದುಕೊಳ್ಳದೆ ತಟಸ್ಥ ನೀತಿಯನ್ನು ಅನುಸರಿಸುತ್ತಿವೆ. ಪ್ರಚಲಿತ ಭಾರತದ ಸಾಮಾಜಿಕ ಸಮಸ್ಯೆಯಾದ ಅಸ್ಪೃಶ್ಯತೆಯನ್ನು ನಿವಾರಿಸುವಲ್ಲಿ ಹಾಗೂ ದಲಿತ ಮತ್ತು ಸವರ್ಣೀಯರ ನಡುವೆ ಸಮಾನ ಭಾವ ರೂಪಿಸುವಲ್ಲಿ ಪತ್ರಿಕೆಗಳು ನಿರ್ಣಾಯಕ ಪಾತ್ರ ವಹಿಸುತ್ತಿಲ್ಲ''.

"ವೈಚಾರಿಕತೆ ಇಲ್ಲದ ಶಾಸ್ತ್ರಜ್ಞಾನ ಎಷ್ಟೇ ಶ್ರೇಷ್ಠವಾದುದಾದರೂ ಅದು ಮಾನವರಿಗೆ ಮಾತ್ರ ನಿರುಪಯೋಗಿ''. ಎಂದು. ಡಾ. ಬಿ. ಆರ್. ಅಂಬೇಡ್ಕರ್ ಒಂದು ಕಡೆ ಹೇಳಿದ್ದಾರೆ. ನಮ್ಮ ನಾಡಿನ ಪತ್ರಿಕೆಗಳ ವಿಷಯದಲ್ಲಿ ಈ ಮಾತು ಅಕ್ಷರ ಸಹ ನಿಜ. ನಮ್ಮ ನಾಡಿನ ಖ್ಯಾತ ಲೇಖಕ ದೇವನೂರು ಮಹಾದೇವ ಪತ್ರಿಕೆಗಳ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. "ಒಂದು ಪತ್ರಿಕೆಯು ಗ್ರಾಮಾಂತರದ ಕೊಲೆ, ಸುಲಿಗೆ, ಅತ್ಯಾಚಾರಗಳನ್ನು ಕೇವಲ ಬಹಿರಂಗ ಗೊಳಿಸಿದರೂ ಸಾಕು. ಮುಕ್ಕಾಲು ಭಾಗ ಮುಂದಾಗುವ ಕೊಲೆ, ಸುಲಿಗೆ, ಅತ್ಯಾಚಾರಗಳು ತಂತಾನೆ

ನಿಲ್ಲುವ ಸಾಧ್ಯತೆ ಇದೆ. ಆದರೆ ಅಂಥ ದಲಿತ ಕಾಳಜಿಯುಳ್ಳ ಪತ್ರಿಕೆ ಎಲ್ಲೂ ಕಂಡು ಬರುತ್ತಿಲ್ಲ. ದಲಿತರ ನೋವು, ಅವಮಾನ, ತನ್ನದೇ ಎಂದು ತಳಮಳಿಸುವ ಪತ್ರಿಕೆ ಇಂದು ಬೇಕೇಬೇಕು".

ನಮ್ಮ ಪತ್ರಿಕೆಗಳು ಮಧ್ಯಮ ವರ್ಗ ಮತ್ತು ಉತ್ತಮ ವರ್ಗದವರಿಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿವೆ. ಜಾಹೀರಾತು ನೀಡುವ ಮಂದಿ ಮತ್ತು ಓದುಗರ ಅಭಿರುಚಿಗೆ ತಕ್ಕಂತೆ ಪತ್ರಿಕಾ ಬರಹಗಳನ್ನು ಪ್ರಕಟಿಸಲಾಗುತ್ತಿದೆ. ಕೆಳವರ್ಗದ ಜನರ ಸಮಸ್ಯೆಗಳನ್ನು ನಮ್ಮ ಪತ್ರಿಕೆಗಳು ವಿಮರ್ಶಿಸುತ್ತಿಲ್ಲ. ಆಗೊಮ್ಮೆ ಈಗೊಮ್ಮೆ ಔಪಚಾರಿಕವಾಗಿ ದಲಿತರ ಬಗ್ಗೆ ವರದಿಗಳನ್ನು ಪ್ರಕಟಿಸುವ ಪತ್ರಿಕೆಗಳಿಗೆ ದಲಿತರ ಬಗ್ಗೆ ಕಾಳಜಿಯೇ ಇಲ್ಲ. ಆದ್ದರಿಂದ ದಲಿತರದ್ದೇ ಆದ ಪತ್ರಿಕೆಗಳು ಇಂದು ಹುಟ್ಟಿಕೊಳ್ಳುವುದು ಅನಿವಾರ್ಯವಾಗಿದೆ.

ದಲಿತರು ಮತ್ತು ಚಲನಚಿತ್ರ ರಂಗ :

ಸಿನೆಮಾ ಎರಡನೇ ಅತ್ಯಂತ ಹಳೆಯದಾದ ಸಮೂಹ ಮಾಧ್ಯಮವಾಗಿದೆ. ಭಾರತವು ಇಂದು ಜಗತ್ತಿನಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಚಲನಚಿತ್ರ ಮತ್ತು ಸಾಕ್ಷ್ಯ ಚಿತ್ರಗಳನ್ನು ಉತ್ಪಾದಿಸುವ ರಾಷ್ಟ್ರ ಎಂಬ ಹೆಗ್ಗಳಿಕೆ ಹೊಂದಿದೆ.

ಭಾರತದಲ್ಲಿ ಹಿಂದಿ, ತಮಿಳು, ತೆಲಗು, ಮಲೆಯಾಳಂ, ಬಂಗಾಲಿ, ಮರಾಠಿ, ಗುಜರಾತಿ, ಓರಿಯಾ, ಅಸ್ಸಾಮಿ, ಪಂಜಾಬಿ, ಭೋಜಪುರಿ, ರಾಜಾಸ್ಥಾನಿ ನೇಪಾಳಿ, ಮಣಿಪುರಿ, ಹರ್ಯಾಣವಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಚಲನಚಿತ್ರ ಮತ್ತು ಸಾಕ್ಷ್ಯ ಚಿತ್ರಗಳನ್ನು ತಯಾರಿಸಲಾಗುತ್ತಿದೆ. ಭಾರತದಲ್ಲಿ ಪ್ರತೀ ವರ್ಷ ಸುಮಾರು 800 ಕ್ಕೂ ಹೆಚ್ಚು ಚಲನಚಿತ್ರಗಳನ್ನು ತಯಾರಿಸಲಾಗುತ್ತಿದೆ. ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್ ಸಂಸ್ಥೆಯು ಭಾರತದಲ್ಲಿ 1993 ರಲ್ಲಿ 812 ಚಲನ ಚಿತ್ರಗಳು ತಯಾರಿಸಲ್ಪಟ್ಟವು ಎಂದು ವರದಿ ಮಾಡಿದೆ. ಹಿಂದಿ, ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆಗಳಲ್ಲಿ ಅಧಿಕ ಪ್ರಮಾಣದ ಚಲನಚಿತ್ರಗಳು ತಯಾರಾಗುತ್ತಿವೆ. ಪರಿಮಾಣಾತ್ಮಕವಾಗಿ ಭಾರತೀಯ ಚಲನಚಿತ್ರರಂಗದ ಸಾಧನೆ ಅಪಾರವಾದುದು. ಆದರೆ ಗುಣಾತ್ಮಕವಾಗಿ ಭಾರತೀಯ ಚಲನಚಿತ್ರ ರಂಗ ಬಹಳ ಹಿಂದೆ ಬಿದ್ದಿದೆ. ಭಾರತವು ಜಗತ್ತಿನ ಶ್ರೇಷ್ಠ ನಿರ್ದೇಶಕ, ನಿರ್ಮಾಪಕ ಮತ್ತು ಕಲಾವಿದರನ್ನು ತಯಾರಿಸಿದೆ. ಆದರೆ ಅವರ ಸಂಖ್ಯೆ ಬೆರಳಣಿಕೆಯಷ್ಟು. ಸತ್ಯಜಿತ್ ರೇ, ಶ್ಯಾಂ ಬೆನೆಗಾಲ್, ಮೃಣಾಲ್‌ಸೇನ್, ಗಿರೀಶ್ ಕಾಸರವಳ್ಳಿ, ಗಿರೀಶ್ ಕಾರ್ನಾಡು, ಅಡೂರು ಗೋಪಾಲಕೃಷ್ಣ, ಅರವಿಂದ ಮೊದಲಾದವರು, ಶ್ರೇಷ್ಠ ನಿರ್ದೇಶಕರು. ದಿಲೀಪ್ ಕುಮಾರ್, ಸಂಜೀವ್ ಕುಮಾರ್, ನಾಸಿರುದ್ದೀನ್ ಷಾ, ಓಂ ಪುರಿ, ಸ್ಮಿತಾ ಪಾಟೀಲ್, ಶಬಾನಾ ಅಜ್ಮ, ಮೊದಲಾದವರು ಶ್ರೇಷ್ಠ ನಟನಟಿಯರು.

ಭಾರತದ ದಲಿತ ಜನ ವರ್ಗದ ಸ್ಥಾನಮಾನ, ಸಮಸ್ಯೆಗಳು ಮತ್ತು ಅಭಿವೃದ್ಧಿ ಅವಕಾಶಗಳ ಮೇಲೆ ಬೆಳಕು ಚೆಲ್ಲುವಂತಹ ಚಲನಚಿತ್ರಗಳ ತಯಾರಿಕೆಯ ಸಂಖ್ಯೆ ನಗಣ್ಯವೆಂದೇ ಹೇಳಬಹುದಾಗಿದೆ. ಅಚ್ಯುತ ಕನ್ಯಾ, ಮಂಥನ್, ಚೋಮನದುಡಿ, ದಾಸಿ, ಮೊದಲಾದ ಕೆಲವೇ ಚಿತ್ರಗಳು ದಲಿತರ ಬದುಕಿಗೆ ಸಂಬಂಧಿಸಿದೆ. ಭಾರತದ ಚಲನಚಿತ್ರಗಳು ಬಹುತೇಕ ಮಸಾಲೆ ಚಿತ್ರಗಳೇ ಆಗಿವೆ. ಮನರಂಜನೆ ಮತ್ತು ಲಾಭಗಳಿಗೆ ಭಾರತದ ಚಿತ್ರರಂಗದ ಪರಮ ಧ್ಯೇಯಗಳಾಗಿವೆ. ನಮ್ಮ ಚಿತ್ರಗಳು ಪ್ರಧಾನವಾಗಿ ಲೈಂಗಿಕತೆ, ಪ್ರಣಯ, ಹಿಂಸೆ, ಅಶ್ಲೀಲತೆ ಮೊದಲಾದುವುಗಳನ್ನು ವೈಭವೀಕರಿಸುತ್ತವೆ. ನಮ್ಮ ಚಿತ್ರ ನಿರ್ಮಾಪಕರಿಗೆ ಬಾಕ್ಸ್ ಆಫೀಸು ಅರ್ಥ ಶಾಸ್ತ್ರವೇ ಪ್ರಧಾನ ತಳಹದಿಯಾಗಿದೆ. ನಮ್ಮ ಯುವ ಜನಾಂಗವನ್ನು ದಾರಿ ತಪ್ಪಿಸುವ ಚಿತ್ರಗಳು ಬಹಳಷ್ಟು ಪ್ರಮಾಣದಲ್ಲಿ ತಯಾರಾಗುತ್ತಿವೆ. ಚಲನಚಿತ್ರ ಮಾಧ್ಯಮ ಜನಸೇವಾ ಮಾಧ್ಯಮವಾಗಿ ಖಂಡಿತವಾಗಿಯೂ ಭಾರತದಲ್ಲಿ ಬೆಳೆದಿಲ್ಲ. ದಲಿತರಿಗೂ ಚಲನಚಿತ್ರ ರಂಗಕ್ಕೂ ಯಾವುದೇ ಸಂಬಂಧವಿಲ್ಲ. ದಲಿತರ ಬದುಕಿನ ಸುಧಾರಣೆಗಾಗಿ ನಮ್ಮ ಚಲನಚಿತ್ರ ರಂಗ ಯಾವುದೇ ಕಾಣಿಕೆ ನೀಡಿಲ್ಲ.

ದಲಿತರು ಮತ್ತು ಆಕಾಶವಾಣಿ :

ರೇಡಿಯೋ ಒಂದು ಕರತಲ ವಿಶ್ವವಿದ್ಯಾಲಯದಂತೆ. ರೇಡಿಯೋ ಭಾರತದಂತಹ ಅನಕ್ಷರತೆ ತುಂಬಿರುವ ಅಭಿವೃದ್ಧಿ ಶೀಲ ದೇಶಕ್ಕೆ ಒಂದು ಉಪಯುಕ್ತ ಮಾಧ್ಯಮ. ಅಕ್ಷರಸ್ಥರು—ಅನಕ್ಷರಸ್ಥರು, ಶ್ರೀಮಂತರು—ಬಡವರು, ನಗರವಾಸಿಗಳು—ಗ್ರಾಮೀಣ ವಾಸಿಗಳು ಹೀಗೆ ಎಲ್ಲರನ್ನೂ ಒಟ್ಟಾಗಿ ತಲುಪಬಲ್ಲ ಶಕ್ತಿಶಾಲಿ ಮಾಧ್ಯಮ ವಾಗಿ ರೇಡಿಯೋ ಬೆಳೆದಿದೆ. ಇತರೆ ಸಮೂಹ ಮಾಧ್ಯಮಗಳು ತಲುಪಲಾಗದ ಪ್ರದೇಶ ಮತ್ತು ಜನವರ್ಗಗಳನ್ನು ರೇಡಿಯೋ ಇಂದು ತಲುಪುತ್ತಿದೆ. ಭಾರತೀಯ ಆಕಾಶ ವಾಣಿ ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿರುವ ಸರಕಾರೀ ಮಾಧ್ಯಮವಾಗಿದೆ. 1994 ರ ಅಂಕಿ ಅಂಶಗಳ ಪ್ರಕಾರ ನಮ್ಮ ರಾಷ್ಟ್ರದಲ್ಲಿ ನೂರನಾಲ್ಕು (104) ಪ್ರಾಂತೀಯ ಕೇಂದ್ರಗಳು, 64 ಸ್ಥಳೀಯ ಕೇಂದ್ರಗಳು ಮತ್ತು 30 ವಿವಿಧ ಭಾರತಿ ಕೇಂದ್ರಗಳಿವೆ. ಇಂದು ಆಕಾಶವಾಣಿ 146 ಮಧ್ಯಮ ತರಂಗ, 49 ಅಲ್ಪತರಂಗ, ಮತ್ತು 85 ಎಫ್. ಎಂ. ತರಂಗ ಪ್ರಸಾರ ಕೇಂದ್ರಗಳನ್ನು ಹೊಂದಿದೆ. ಅಂತರ ರಾಷ್ಟ್ರೀಯ, ರಾಷ್ಟ್ರೀಯ, ಪ್ರಾಂತೀಯ ಮತ್ತು ಸ್ಥಳೀಯ ಕಾರ್ಯಕ್ರಮಗಳನ್ನು ಆಕಾಶವಾಣಿ ಪ್ರಸಾರ ಮಾಡುತ್ತದೆ. ಆಕಾಶವಾಣಿ ಶೇಕಡಾ 90ರಷ್ಟು ಭೌಗೋಳಿಕ ಪ್ರದೇಶ ಮತ್ತು ಶೇಕಡಾ 97ರಷ್ಟು ಜನಸಂಖ್ಯೆಗೆ ನಮ್ಮ ರಾಷ್ಟ್ರದಲ್ಲಿ ಲಭ್ಯವಿದೆ. ಇಂದು ಸುಮಾರು 110ಕ್ಕೂ ಹೆಚ್ಚು ಮಿಲಿಯನ್ ರೇಡಿಯೋ ಸೆಟ್ಟುಗಳಿವೆ. ಆಕಾಶವಾಣಿ ಪ್ರತಿ ದಿನ 1530 ಗಂಟೆಗಳ ಅವಧಿಯ ಕಾರ್ಯ ಕ್ರಮಗಳನ್ನು 25 ಭಾಷೆಗಳಲ್ಲಿ ಮತ್ತು 143 ಉಪ ಭಾಷೆಗಳಲ್ಲಿ ಪ್ರಸಾರ ಮಾಡುತ್ತಿವೆ.

ರೇಡಿಯೋ ಮಾಧ್ಯಮವನ್ನು ಪ್ರಧಾನವಾಗಿ ಸಮಾಚಾರ, ಶಿಕ್ಷಣ, ಮನರಂಜನೆ ಮತ್ತು ಜಾಹೀರಾತುಗಳನ್ನು ನೀಡಲು ಬಳಸಲಾಗುತ್ತಿದೆ.

ಆಕಾಶವಾಣಿ ಕೇಂದ್ರ ಸರಕಾರದ ಮಾಲಿಕತ್ವಕ್ಕೆ ಒಳಪಟ್ಟಿರುವ ಸಮೂಹ ಮಾಧ್ಯಮವಾಗಿದೆ. ಇದನ್ನು ಒಂದು 'ಸಂಗೀತ ಪೆಟ್ಟಿಗೆ' ಎಂದು ಕರೆಯಲಾಗುತ್ತಿದೆ. ಈ ಮಾಧ್ಯಮದಲ್ಲಿ ದಲಿತರಿಗೆ ಸಿಕ್ಕಿರುವ ಉದ್ಯೋಗ ಅವಕಾಶಗಳು ಬಹಳ ಕಡಿಮೆ. ಮೊದಲ ದರ್ಜೆ ಮತ್ತು ಎರಡನೆಯ ದರ್ಜೆ ದಲಿತ ಅಧಿಕಾರಿಗಳ ಸಂಖ್ಯೆ ಶೇಕಡಾ ಒಂದಕ್ಕಿಂತಲೂ ಕಡಿಮೆ ಇದೆ. ಆಳುವ ಪಕ್ಷ ಆಕಾಶವಾಣಿಯನ್ನು ಪ್ರಧಾನವಾಗಿ ಯೋಜಿತ ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತದೆ. ಈ ಮಾಧ್ಯಮವನ್ನು ದಲಿತರ ಶಿಕ್ಷಣ, ಸಂಘಟನೆ ಮತ್ತು ಅಭಿವೃದ್ಧಿ ದೇಶಗಳಿಗೆ ಬಳಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಸರಕಾರವಾಗಲೀ ಆಕಾಶವಾಣಿಯ ಅಧಿಕಾರಿ ವರ್ಗವಾಗಲೀ ಮಾಡುತ್ತಿಲ್ಲ. ಚಂದಾ ಸಮಿತಿ ಮತ್ತು ವರ್ಗೀಸ್ ಸಮಿತಿಗಳು ಆಕಾಶವಾಣಿಯನ್ನು ಸರಕಾರದ ಕಪಿ ಮುಷ್ಠಿಯಿಂದ ಬಿಡುಗಡೆಗೊಳಿಸಿ ಅದನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಬೇಕೆಂದು ಬಹಳ ಹಿಂದೆಯೇ ಶಿಫಾರಸು ಮಾಡಿದೆ. ಆಕಾಶವಾಣಿ ದಲಿತರ ನೋವು ನಲಿವುಗಳೊಂದಿಗೆ ಸ್ಪಂದಿಸುತ್ತಿಲ್ಲ. ಇದು ವಾಸ್ತವವಾಗಿ ದಲಿತ ವಿರೋಧಿ ಮಾಧ್ಯಮವಾಗಿಲ್ಲದಿದ್ದರೂ ದಲಿತರ ಪರವಾಗಿಯಂತೂ ಇಲ್ಲ. ಆಕಾಶವಾಣಿ ಯಥಾಸ್ಥಿತಿ ವಾದವನ್ನು ಪೋಷಿಸುವ ಮತ್ತೊಂದು ಸಮೂಹ ಮಾಧ್ಯಮವಾಗಿ ಉಳಿದಿದೆ.

ದಲಿತರು ಮತ್ತು ದೂರದರ್ಶನ

ದೂರದರ್ಶನ ಇಂದು ಪ್ರಬಲವಾದ ದೃಕ್—ಶ್ರವಣ ಮಾಧ್ಯಮವಾಗಿದೆ. ಭಾರತೀಯ ದೂರದರ್ಶನವು ಜಗತ್ತಿನ ಅತೀ ದೊಡ್ಡ ಪ್ರಸಾರ ಸೇವಾ ಸಂಸ್ಥೆಯಾಗಿ ಬೆಳೆದಿದೆ. ಇದು ಸುಮಾರು 700 ಭೂ ಪ್ರಸಾರ ಕೇಂದ್ರಗಳು ಮತ್ತು ಮೂವತ್ತನಾಲ್ಕು ಕಾರ್ಯಕ್ರಮ ಉತ್ಪಾದನಾ ಘಟಕಗಳನ್ನು ಹೊಂದಿದೆ. ಸುಮಾರು 250 ಮಿಲಿಯನ್ ಭಾರತೀಯರು ಇಂದು ದೂರದರ್ಶನ ಸೇವಾ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ದೂರದರ್ಶನವು ವಾರಕ್ಕೆ ಸುಮಾರು 1200 ಘಂಟೆಗಳ ಪ್ರಸಾರ ಸೇವೆಯನ್ನು ವಿವಿಧ ಭಾಷೆಗಳಲ್ಲಿ ವೀಕ್ಷಕರಿಗೆ ಒದಗಿಸುತ್ತಿದೆ. ಮೆಟ್ರೊಚಾನೆಲ್ ಮತ್ತು ಉಪಗ್ರಹ ಸೇವೆಗಳು ದೂರದರ್ಶನ ವೀಕ್ಷಕರ ಸಂಖ್ಯೆಯನ್ನು ಅಧಿಕಗೊಳಿಸಿದೆ. ದೂರದರ್ಶನವು ಇಂದು ಶೇಕಡಾ 85ರಷ್ಟು ಜನಸಂಖ್ಯೆ ಮತ್ತು ಶೇಕಡಾ 67.8ರಷ್ಟು ಭೌಗೋಳಿಕ ಪ್ರದೇಶಕ್ಕೆ ಲಭಿಸುತ್ತಿದೆ. ದೂರದರ್ಶನವು 3 ಹಂತದ ಪ್ರಸಾರ ಸೇವೆ ನೀಡುತ್ತಿದೆ. ಅವುಗಳೆಂದರೆ—ರಾಷ್ಟ್ರೀಯ ಪ್ರಸಾರ, ಪ್ರಾಂತೀಯ ಪ್ರಸಾರ ಮತ್ತು ಸ್ಥಳೀಯ ಪ್ರಸಾರ. ರಾಷ್ಟ್ರೀಯ ಕಾರ್ಯಕ್ರಮವು ಸುದ್ದಿ, ಸಮಕಾಲೀನ ವಿಷಯಗಳು, ವಿಜ್ಞಾನ, ಸಂಗೀತ ನೃತ್ಯ ಚಲನಚಿತ್ರ, ಕೋಮು ಸೌಹಾರ್ದ, ರಾಷ್ಟ್ರೀಯ ಭಾವೈಕ್ಯತೆ, ಮೊದಲಾದ ಕ್ಷೇತ್ರಗಳಿಗೆ ಆದ್ಯತೆ ನೀಡಿದೆ. ಪ್ರಾಂತೀಯ ಕಾರ್ಯ

ಕ್ರಮವು ರಾಜ್ಯದ ರಾಜಧಾನಿಗಳಲ್ಲಿ ತಯಾರಿಸಲ್ಪಡುತ್ತದೆ. ಸ್ಥಳೀಯ ಕಾರ್ಯ ಕ್ರಮವು ವಿಶೇಷವಾಗಿ ಸ್ಥಳೀಯ ವ್ಯಕ್ತಿ, ವಿಚಾರ, ಪರಿಸರ, ಮೊದಲಾದುವುಗಳಿಗೆ ಆದ್ಯತೆ ನೀಡುತ್ತದೆ.

ವಾಸ್ತವವಾಗಿ ದೂರದರ್ಶನವು ಇಂದು ಸಮಾಚಾರ, ಮನರಂಜನೆ, ಜಾಹಿರಾತು ಮತ್ತು ಯೋಜಿತ ಪ್ರಚಾರಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಶೈಕ್ಷಣಿಕ ಕಾರ್ಯಕ್ರಮಗಳ ಸಂಖ್ಯೆ ಬಹಳ ಕಡಿಮೆ. ಸಮಾಜದ ದುರ್ಬಲ ಜನ ವರ್ಗಗಳಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ದೂರದರ್ಶನ ಪ್ರಸಾರ ಮಾಡುತ್ತಿಲ್ಲ. ಹಿಂದುಳಿದ ಪ್ರದೇಶಗಳು ಮತ್ತು ಜನವರ್ಗಗಳಿಗೆ ದೂರದರ್ಶನ ಸೇವೆ ನಿಲುಕುತ್ತಿಲ್ಲ. ಸ್ಥಳೀಯ ಸಂಸ್ಕೃತಿ ಮತ್ತು ಹಿತಾಸಕ್ತಿಗಳಿಗೆ ದೂರದರ್ಶನ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿಲ್ಲ. ದೂರದರ್ಶನದಲ್ಲಿ ಪ್ರಸಾರವಾಗುವ ವಿಷಯಗಳ ಮೂಲಕ ದಲಿತರು ಮತ್ತು ದೂರದರ್ಶನದ ನಡುವಣ ಸಂಬಂಧವನ್ನು ಗುರುತಿಸಬಹುದಾಗಿದೆ. ದೂರದರ್ಶನ ದಲಿತರ ಪಾಲಿಗೆ ಅತೀ ದೂರದಲ್ಲೇ ಉಳಿದಿರುವ ಸಮೂಹ ಮಾಧ್ಯಮ ವಾಗಿದೆ. ದಲಿತರನ್ನು ಕಾಡುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ದೂರದರ್ಶನ ಪ್ರಚಾರ ಮಾಡುತ್ತಿಲ್ಲ. ದೂರದರ್ಶನ ಸೇವಾ ಸಿಬ್ಬಂದಿ ವರ್ಗದಲ್ಲಿ ದಲಿತರ ಪ್ರತಿನಿಧಿಗಳು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ. ದಲಿತರ ವಿಮೋಚನೆಗೆ ದೂರದರ್ಶನದ ಕೊಡುಗೆ ಏನೂ ಇಲ್ಲವೆಂದೇ ಹೇಳಬಹುದು. ದಲಿತರ ಹಿತಾಸಕ್ತಿಗೆ ದೂರದರ್ಶನ ಯಾವುದೇ ಪ್ರಾಧಾನ್ಯತೆ ನೀಡಿಲ್ಲ.

ದಲಿತರು ಮತ್ತು ಜಾಹಿರಾತು

ಭಾರತದಲ್ಲಿ ಜಾಹೀರಾತು ಮಾಧ್ಯಮ ಒಂದು ಪ್ರಬಲ ಉದ್ಯಮವಾಗಿ ಬೆಳೆದಿದೆ. ಪ್ರತೀ ವರ್ಷ ಸುಮಾರು 300 ಕೋಟಿ ರೂ. ಗಳನ್ನು ಜಾಹೀರಾತು ಉದ್ಯಮದಲ್ಲಿ ತೊಡಗಿಸಲಾಗುತ್ತಿದೆ. ಈ ಉದ್ಯಮದಲ್ಲಿ ಸರ್ಕಾರ ಮತ್ತು ಖಾಸಗೀ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡಿವೆ. ವಾಸ್ತವವಾಗಿ ಜಾಹೀರಾತುಗಳು ಜನರಿಗೆ ಸರಕು ಸೇವೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಸಮಾಚಾರ ಸಹಾಯ ನೀಡುವ ಸಮೂಹ ಮಾಧ್ಯಮವಾಗಿದೆ. ಭಾರತದಲ್ಲಿ ಜಾಹೀರಾತು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಜನರಲ್ಲಿ ವಿಪರೀತ ಆಸೆ ಹುಟ್ಟಿಸುವ ಮತ್ತು ಅವುಗಳನ್ನು ಈಡೇರಿಸಿಕೊಳ್ಳದ ಜನರನ್ನು ಹತಾಶರನ್ನಾಗಿಸುವ ಮಾಧ್ಯಮ ವಾಗಿ ಜಾಹೀರಾತು ಎಲ್ಲೆಡೆ ಬೆಳೆದಿದೆ. ಜಾಹೀರಾತು ಅಶ್ಲೀಲತೆಯನ್ನು ಪ್ರತಿ ಬಿಂಬಿಸುತ್ತದೆ. ಈ ಉದ್ಯಮದಲ್ಲಿ ದಲಿತರಿಗೆ ಅವರು ಎಷ್ಟೇ ಪ್ರತಿಭಾವಂತರಾಗಿದ್ದರೂ ಪ್ರವೇಶಾವಕಾಶವಿಲ್ಲ. ಥಳುಕು ಬಳುಕಿನ ಶ್ರೀಮಂತ ಜನರಿಗೆ ಮಾತ್ರ ಜಾಹೀರಾತು ಉದ್ಯಮ ಉದ್ಯೋಗಾವಕಾಶಗಳನ್ನು ನೀಡುತ್ತಿದೆ. ದಲಿತರನ್ನು ಉದ್ದೇಶಪೂರ್ವಕ

ವಾಗಿ ಈ ಉದ್ಯಮ ದೂರವಿರಿಸಿ ನಿಜವಾದ ಅರ್ಥದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುತ್ತಿದೆ. ದಲಿತೋದ್ಧಾರದ ಸಂದೇಶ ಹೊತ್ತಿರುವ ಜಾಹೀರಾತುಗಳು ಎಲ್ಲಿಯೂ ಕಂಡುಬರುವುದಿಲ್ಲ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಪ್ರಮಾಣದಲ್ಲಿ ಸಮಾಜ ಸೇವಾ ಜಾಹೀರಾತುಗಳನ್ನು ನೀಡುತ್ತಿಲ್ಲ. ದಲಿತರನ್ನು ಜಾಗೃತರನ್ನಾಗಿಸುವ ನಿಟ್ಟನಲ್ಲಿ ಜಾಹೀರಾತು ಉದ್ಯಮದ ಕೊಡುಗೆ ಏನೂ ಇಲ್ಲ ವೆಂದೇ ಹೇಳಬಹುದು.

ದಲಿತರು ಮತ್ತು ಸಾರ್ವಜನಿಕ ಸಂಪರ್ಕ

ಸಾರ್ವಜನಿಕ ಸಂಪರ್ಕ ಒಂದು ಸೇವಾ ಕ್ಷೇತ್ರ. ಇದು ಒಂದು ಪ್ರಬಲ ಸಮೂಹ ಮಾಧ್ಯಮವೂ ಹೌದು. ಸಾರ್ವಜನಿಕರು ಹಾಗೂ ಸರ್ಕಾರ ಮತ್ತು ಸಂಘ ಸಂಸ್ಥೆಗಳ ನಡುವೆ ಉತ್ತಮ ಭಾಂದವ್ಯ ನಿರ್ಮಿಸುವುದು ಸಾರ್ವಜನಿಕ ಸಂಪರ್ಕ ಸೇವೆಯ ಪ್ರಧಾನ ಉದ್ದೇಶ. ಭಾರತದಲ್ಲಿ ಸರ್ಕಾರಿ ಮತ್ತು ಖಾಸಗೀ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಂಪರ್ಕ ಕೆಲಸಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಸಂಘ ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಹೆಚ್ಚಿನ ಅಭಿವೃದ್ಧಿ ಸಾಧಿಸಬೇಕಾದರೆ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಬೇಕಾದುದು ಅತ್ಯವಶ್ಯ. ಸಾರ್ವಜನಿಕರ ಮನ ಒಲಿಸಿ ಅವರ ಸಹಾಯ ಮತ್ತು ಸಹಕಾರಗಳ ಮೂಲಕ ಸರಕಾರ ಮತ್ತು ಸಂಘ ಸಂಸ್ಥೆಗಳ ಅಭಿವೃದ್ಧಿಗೆ ಸಹಕರಿಸುವುದು ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಮತ್ತು ಕಾರ್ಯಕರ್ತರ ಹೊಣೆಗಾರಿಕೆಯಾಗಿದೆ. ಈ ಕ್ಷೇತ್ರದಲ್ಲಿ ದಲಿತ ವರ್ಗಕ್ಕೆ ಸಿಕ್ಕಿರುವ ಪ್ರಾಧಾನ್ಯತೆ ಕಡಿಮೆ ಎಂದೇ ಹೇಳಬಹುದು. ಸಾರ್ವಜನಿಕ ಸಂಪರ್ಕ ಚಟುವಟಿಕೆಗಳು ಮದ್ಯಪಾನ, ಮತ್ತು ಮೋಜುಗಳಿಗಷ್ಟೇ ಸೀಮಿತವಾಗಿದೆ. ಹಣವನ್ನು ಪೋಲು ಮಾಡುವ ಮತ್ತು ಜನರನ್ನು ದಿಕ್ಕು ತಪ್ಪಿಸುವ ಸಲುವಾಗಿಯೇ ಸಾರ್ವಜನಿಕ ಸಂಪರ್ಕಮಾಧ್ಯಮವನ್ನು ಬಳಸಿಕೊಳ್ಳ ಲಾಗುತ್ತಿದೆ. ಈ ಮಾಧ್ಯಮ ದಲಿತ ಜಗತ್ತಿನಿಂದ ಬಹುದೂರ ಸರಿದಿದೆ. ಕೇವಲ ಉಳ್ಳವರ ವಲಯಕ್ಕೆ ಸಾರ್ವಜನಿಕ ಸಂಪರ್ಕ ಮಾಧ್ಯಮ ಸೀಮಿತಗೊಂಡಿದೆ.

ದಲಿತರು ಮತ್ತು ಜಾನಪದ ಮಾಧ್ಯಮಗಳು

ಜಾನಪದ ಮಾಧ್ಯಮಗಳು ಸಮಾಜದ ಅಮೂಲ್ಯ ಆಸ್ತಿ. ಪುರಾತನ ಕಾಲ ದಿಂದಲೂ ಇವು ಜನರಿಗೆ ಕಲಿಸುವ ಶಾಲೆಗಳಾಗಿವೆ. ಜನರಿಂದ, ಜನರಿಗಾಗಿ, ಮತ್ತು ಜನರಿಗೋಸ್ಕರವೇ ಜಾನಪದ ಮಾಧ್ಯಮಗಳು ಅಸ್ತಿತ್ವದಲ್ಲಿದೆ. ಸಮೂಹ ಮಾಧ್ಯಮಗಳ ನೆರಳೂ ಸಹ ಬೀಳದಂತಹ ಪ್ರದೇಶ ಮತ್ತು ಜನ ವರ್ಗಗಳಿಗೆ ಜಾನಪದ ಮಾಧ್ಯಮಗಳೇ ಸಮಾಚಾರ, ಶಿಕ್ಷಣ, ಮತ್ತು ಮನರಂಜನೆಗಳನ್ನು ಒದಗಿಸುವ ಮರಳು ಗಾಡಿನ ಓಯಸಿಸ್ ಆಗಿವೆ. ಭಾರತದಲ್ಲಿ ಬಹುತೇಕ ಸಮೂಹ ಮಾಧ್ಯಮಗಳು ನಗರ ವಾಸಿಗಳು, ಮತ್ತು ಉಳ್ಳವರಿಗೆ ಸೀಮಿತವಾಗಿದೆ. ಆದರೆ

ಜಾನಪದ ಮಾಧ್ಯಮಗಳು ವರ್ಗ, ವರ್ಣ, ಜಾತಿ, ಮೊದಲಾದ ವಿಷವರ್ತುಲಗಳಿಂದ ದೂರವೇ ಉಳಿದಿದೆ. ಜಾನಪದ ಮಾಧ್ಯಮಗಳು ದಲಿತ ಜನವರ್ಗಗಳಿಗೆ ಸದಾಕಾಲವೂ ನಿಲುಕುವಮಾಧ್ಯಮಗಳಾಗಿವೆ. ಅನೇಕ ದಲಿತ ಸಾಹಿತಿಗಳು ಮತ್ತು ಕಲಾಕಾರರೂ ಜಾನಪದ ಮಾಧ್ಯಮಗಳೊಂದಿಗೆ ನಿಕಟ ಸಂಪರ್ಕಹೊಂದಿದ್ದಾರೆ. ಜಾನಪದ ನಾಟಕ, ಹಾಡು, ನೃತ್ಯ ಮತ್ತು ಕಲಾ ಪ್ರಕಾರಗಳು ದಲಿತ ಜಗತ್ತಿನ ನೈಜ ಚಿತ್ರಣವನ್ನು ನೀಡುತ್ತವೆ. ಇವು ಪ್ರಧಾನವಾಗಿ ದಲಿತರು ಮತ್ತಿತರ ಕೆಳವರ್ಗದವರಿಂದಲೇ ಪೋಷಿಸಲ್ಪಟ್ಟಿರುವ ಮಾಧ್ಯಮಗಳಾಗಿವೆ. ಇಂದಿಗೂ ನಮ್ಮ ನಾಡು, ಸಂಸ್ಕೃತಿ, ಕಲೆ ಬದುಕು, ಮೊದಲಾದುವುಗಳನ್ನು ಹಸನಾಗಿಸುವಲ್ಲಿ ಜಾನಪದ ಮಾಧ್ಯಮಗಳು ಸದ್ದು ಗದ್ದಲವಿಲ್ಲದ ಕೆಲಸ ಮಾಡುತ್ತಿವೆ.

ಉಪಸಂಹಾರ

ದಲಿತರು ಈ ದೇಶದ ಎಲ್ಲಾ ಸಂಪತ್ತನ್ನು ಉತ್ಪಾದಿಸುವ ಕೆಲಸಗಳಲ್ಲಿ ತೊಡಗಿದ್ದರೂ ಯಾವುದೇ ಸಂಪತ್ತು ಅವರ ಪಾಲಿಗೆ ಲಭಿಸಿಲ್ಲ. ಅವರಲ್ಲಿ ಬಹು ಸಂಖ್ಯಾತರು ಹೊಟ್ಟೆ ಬಟ್ಟೆಗಿಲ್ಲದೆ ಮಲಗಲು ಮನೆಗಳಿಲ್ಲದೆ ಜೀವಿಸಲು ಉದ್ಯೋಗ ವಿಲ್ಲದೆ ಕಡು ಬಡತನದಲ್ಲಿದ್ದಾರೆ. ಅಲ್ಲದೆ, ಹಸಿವು, ಅಸ್ಪೃಶ್ಯತೆಗೆ ಮತ್ತು ಶೋಷಣೆಗೆ ಸಿಲುಕಿ ಸಾಯುತ್ತಿದ್ದಾರೆ. ದಲಿತರು ನಿಜವಾದ ಅರ್ಥದಲ್ಲಿ ಸ್ವತಂತ್ರರಲ್ಲ. ದಲಿತರ ರೋಧನ ನಿಜಕ್ಕೂ ಅರಣ್ಯ ರೋಧನವಾಗಿದೆ. ಪೂರ್ವಗ್ರಹ ಪೀಡಿತ ಭಾರತೀಯ ಸಮೂಹ ಮಾಧ್ಯಮಗಳು ಬಾಯಿ ಇಲ್ಲದ ದಲಿತರಿಗೆ ಧ್ವನಿಯನ್ನು ನೀಡುತ್ತಿಲ್ಲ. ನರಳುತ್ತಿರುವವರಿಗೆ ಯಾವುದೇ ರೀತಿಯ ನೆರವು ನೀಡುತ್ತಿಲ್ಲ. ಯಥಾಸ್ಥಿತಿ ವಾದವನ್ನು ಪೋಷಿಸಿಕೊಂಡು ಹೋಗುವುದೇ ನಮ್ಮ ಸಮೂಹ ಮಾಧ್ಯಮಗಳ ಪರಮಧ್ಯೇಯ ವಾಗಿದೆ. ಉದಾರೀಕರಣ, ಖಾಸಗೀಕರಣ ಮತ್ತು ವಾಣಿಜ್ಯ ಕರಣಗಳು ದಲಿತರ ಪಾಲಿಗ ದೊಡ್ಡ ಶಾಪಗಳಾಗಿವೆ. ಸಮೂಹ ಮಾಧ್ಯಮಗಳು ಈ ಪಿಡುಗುಗಳಿಗೆ ಗುರಿಯಾಗಿ ಸಾಮಾಜಿಕ ಬದ್ಧತೆ ಮತ್ತು ಹೊಣೆಗಾರಿಕೆಗಳನ್ನು ಮರೆತಿವೆ. ದಲಿತರು ಎಚ್ಚೆತ್ತುಕೊಳ್ಳುವುದನ್ನು ನಮ್ಮ ಸಮೂಹ ಮಾಧ್ಯಮಗಳು ಖಂಡಿತಾ ಸಹಿಸುವು ದಿಲ್ಲ. ದಲಿತರ ವಿಷಯದಲ್ಲಿ ನಮ್ಮ ಸಮೂಹ ಮಾಧ್ಯಮಗಳು ಆತ್ಮವಂಚನೆ ಮಾಡಿಕೊಳ್ಳುತ್ತಿವೆ. ದಲಿತರ ಸಮಸ್ಯೆ ಕೇವಲ ಒಂದು ಜನ ವರ್ಗದ ಸಮಸ್ಯೆಯಲ್ಲ. ಬದಲಾಗಿ ಇದನ್ನು ರಾಷ್ಟ್ರೀಯ ಸಮಸ್ಯೆಯನ್ನಾಗಿ ಸಮೂಹ ಮಾಧ್ಯಮಗಳು ಪರಿಗಣಿಸಬೇಕು. ದಲಿತರ ಸರ್ವತೋಮುಖ ಅಭಿವೃದ್ಧಿಯತ್ತ ಸಮೂಹ ಮಾಧ್ಯಮ ಗಳು ನಿಗಾ ವಹಿಸಬೇಕು. ದಲಿತರಿಗೆ ನಿರಂತರ ಸಮಾಚಾರ, ಶಿಕ್ಷಣ ಮತ್ತು ಮಾರ್ಗ ದರ್ಶನಗಳನ್ನು ನೀಡಿ ಅವರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಮತ್ತು ಸಾವಿನಿಂದ ಬದುಕಿನೆಡೆಗೆ ಮುನ್ನಡೆಸಬೇಕು. ಇನ್ನಾದರೂ ನಮ್ಮ ಸಮೂಹ ಮಾಧ್ಯಮಗಳು ತಮ್ಮ ಬೌದ್ಧಿಕ ದಿವಾಳಿತನವನ್ನು ಮೆಟ್ಟಿ ನಿಂತು ದಲಿತರ ಶಿಕ್ಷಣ, ಸಂಘಟನೆ ಮತ್ತು ಪ್ರಗತಿಗಳಿಗೆ ಸಹಕರಿಸಲಿ.

ಕಿ.ಸಂ. ೪೫೨—ಎಂ.ಯು.ಪಿ.ಎಂ.—೪೦೦ + ೨೫ ಪ್ರತಿಗಳು—೨೩–೫–೧೯೯೭

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ .... ಹತ್ತು ರೂಪಾಯಿ
ಇತರರಿಗೆ .... ಹದಿನೈದು ರೂಪಾಯಿ
ಸಂಸ್ಥೆಗಳಿಗೆ .... ಇಪ್ಪತ್ತೈದು ರೂಪಾಯಿ

(ಆಜೀವ ಸದಸ್ಯತ್ವ: ಒಂದು ನೂರು ಐವತ್ತು ರೂಪಾಯಿ)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬